ಶನಿವಾರ, ಏಪ್ರಿಲ್ 3, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 93 | ಪುಟ 24
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಸಣ್ಣ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡ ಹೆಣ್ಣುಮಗಳನ್ನು ನೋಡುವ ಮತ್ತು ಆಕೆಯೊಂದಿಗೆ ವ್ಯವಹರಿಸುವ ನಮ್ಮ ನಡವಳಿಕೆ ಇನ್ನಷ್ಟು ಮಾನವೀಯಗೊಳ್ಳಬೇಕಿದೆ



ಕ್ಯಾಪಿಟಲ್ ಬ್ಯಾರಿಕೇಡ್‌ಗೆ ಕಾರು ಡಿಕ್ಕಿ: ಚಾಲಕ ಹತ್ಯೆ 2
ಯತ್ನಾಳ, ಈಶ್ವರಪ್ಪ ಬಳಿಕ ಮುಂದೆ ಯಾರು?
ಅನುಭವ ಮಂಟಪ — ಕಾವೇರಿ 'ಅನ್ಯಾಯ'ದ ಹಿಂದಿನ ಸತ್ಯ- ಮಿಥ್ಯೆ
ಜಗದೀಶ್ ವಿರುದ್ಧ 'ಎಸ್‌ಐಟಿ' ದೂರು 6
ಇನ್ನಷ್ಟು ಬಂಡಾಯಗಾರರು ಇದ್ದಾರೆಯೇ? 5

ಜಿಮ್, ಈಜುಕೊಳಕ್ಕೆ ಬಾಗಿಲು • 8 ಜಿಲ್ಲೆ – ಚಿತ್ರಮಂದಿರ, ಬಾರ್ ಗ್ರಾಹಕರ ಸಂಖ್ಯೆಗೆ ಮಿತಿ

ಕೋವಿಡ್: 6–9 ತರಗತಿ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಹರಡುವುದನ್ನು ತಡೆಯಲು ಮುಂದಾಗಿರುವ ರಾಜ್ಯ ಸರ್ಕಾರ, 'ವಿದ್ಯಾಗಮ' ಸೇರಿದಂತೆ 6 ರಿಂದ 9ರವರೆಗಿನ ಭೌತಿಕ ತರಗತಿಗಳನ್ನು ಸ್ಥಗಿತಗೊಳಿಸುವ ಕ್ರಮವೂ ಸೇರಿದಂತೆ ಮತ್ತಷ್ಟು ನಿರ್ಬಂಧಗಳನ್ನು ವಿಧಿಸಿ ಶುಕ್ರವಾರ ಪರಿಷ್ಕೃತ ಮಾರ್ಗಸೂಚಿ ಪ್ರಕಟಿಸಿದೆ.


ತಕ್ಷಣದಿಂದ ಜಾರಿಗೆ ಬರುವಂತೆ ಎಲ್ಲ ಜಿಮ್‌ಗಳು, ಈಜುಕೊಳಗಳನ್ನು ಸಂಪೂರ್ಣ ಮುಚ್ಚಲಾಗುವುದು. ರ‍್ಯಾಲಿ, ಮುಷ್ಕರಗಳನ್ನೂ ನಿಷೇಧಿಸಲಾಗಿದೆ ಎಂದು ಮಾರ್ಗಸೂಚಿ ಹೇಳಿದೆ.

ಬಿಬಿಎಂಪಿ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಮೈಸೂರು, ಕಲಬುರ್ಗಿ, ದಕ್ಷಿಣಕನ್ನಡ, ಉಡುಪಿ, ಬೀದರ್ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಸಿನಿಮಾ ಹಾಲ್‌ಗಳಲ್ಲಿ ಶೇ 50ರಷ್ಟು ಪ್ರೇಕ್ಷಕರಿಗೆ ಮಾತ್ರ ಅವಕಾಶ ಕಲ್ಪಿಸಬೇಕು ಎಂದು ತಿಳಿಸಿದೆ.

ಹೊಸ ಮಾರ್ಗಸೂಚಿಗಳನ್ನು ಉಲ್ಲಂಘಿಸಿದರೆ ವಿಪತ್ತು ನಿರ್ವಹಣಾ ಕಾಯ್ದೆ 2005 ಮತ್ತು ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ 2020ರ ಅಡಿ ಕ್ರಮ ಜರುಗಿಸಲಾಗುವುದು. ನಿರ್ಬಂಧಗಳು ಇದೇ 20 ರವರೆಗೆ ಚಾಲ್ತಿಯಲ್ಲಿರುತ್ತವೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಆದೇಶದಲ್ಲಿ ತಿಳಿಸಿದ್ದಾರೆ.

ಕಳೆದ ಒಂದು ತಿಂಗಳ ಅವಧಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಸಾಮಾಜಿಕ, ಧಾರ್ಮಿಕ ಮತ್ತು ಸಾರ್ವಜನಿಕ ಸಭೆ, ಸಮಾರಂಭಗಳಾದ ಮದುವೆ, ರಾಜಕೀಯ ರ‍್ಯಾಲಿಗಳ ಸಂದರ್ಭದಲ್ಲಿ ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳು ಪಾಲನೆಯಾಗದ ಕಾರಣ, ಸೋಂಕಿನ ಪ್ರಸರಣ ಸರಪಳಿ ನಿಗ್ರಹಿಸುವಲ್ಲಿ ರಾಜ್ಯ ಸಾಧಿಸಿದ ಗಮನಾರ್ಹ ಸಾಧನೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಮಾರ್ಗಸೂಚಿ ಪ್ರಮುಖಾಂಶಗಳು



- 10, 11 ಮತ್ತು 12 ನೇ ತರಗತಿಗಳು ಈಗ ಇರುವಂತೆಯೇ ಮುಂದುವರಿಯುತ್ತವೆ. ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಲ್ಲ.
- 10,11 ಮತ್ತು 12 ನೇ ತರಗತಿಗಳನ್ನು ಹೊರತುಪಡಿಸಿ ಉಳಿದ ತರಗತಿಗಳ ವಿದ್ಯಾರ್ಥಿಗಳಿಗೆ (6 ರಿಂದ 9ನೇ ತರಗತಿ) ವಸತಿ ಶಾಲೆ, ಬೋರ್ಡಿಂಗ್ ಹಾಸ್ಟೆಲ್‌ಗಳು ಇರುವುದಿಲ್ಲ.
- ಉನ್ನತ ಶಿಕ್ಷಣ (ಕಾಲೇಜುಗಳು), ವೃತ್ತಿಪರ ಕೋರ್ಸ್‌ಗಳಿಗೆ ಪರೀಕ್ಷೆ ಬರೆಯುವವರು ಮತ್ತು ವೈದ್ಯಕೀಯ ಶಿಕ್ಷಣದ ತರಗತಿಗಳು ಎಂದಿನಂತೆ ನಡೆಯುತ್ತವೆ.
- ಧಾರ್ಮಿಕ ಸ್ಥಳಗಳಲ್ಲಿ ವೈಯಕ್ತಿಕವಾಗಿ ಪ್ರಾರ್ಥನೆ ಮಾಡಲು ಅವಕಾಶವಿದೆ. ಗುಂಪು ಸೇರುವ ಧಾರ್ಮಿಕ ಕಾರ್ಯಕ್ರಮಗಳಿಗೆ ಅವಕಾಶವಿರುವುದಿಲ್ಲ.
- ಅಪಾರ್ಟ್‌ಮೆಂಟ್, ಕಾಂಪ್ಲೆಕ್ಸ್ ಮತ್ತು ಜನ ಸೇರುವ ಸ್ಥಳಗಳಾದ ಜಿಮ್, ಪಾರ್ಟಿ ಹಾಲ್‌ಗಳು, ಕ್ಲಬ್ ಹೌಸ್‌ಗಳು, ಈಜುಕೊಳಗಳನ್ನು ಮುಚ್ಚಲಾಗುವುದು.
- ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ಪ್ರಯಾಣಿಕರ ಸಂಖ್ಯೆಯು ನಿಗದಿಪಡಿಸಿರುವ ಆಸನಗಳ ಮಿತಿಯನ್ನು ಮೀರುವಂತಿಲ್ಲ.
- ಕಚೇರಿಗಳು ಮತ್ತು ಇತರ ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ ಸಾಧ್ಯವಾದಷ್ಟು ಮನೆಯಿಂದಲೇ ಕೆಲಸ ನಿರ್ವಹಿಸುವ ವ್ಯವಸ್ಥೆಯನ್ನು ಮಾಡಬೇಕು.
- ಬಿಬಿಎಂಪಿ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಮೈಸೂರು, ಕಲಬುರ್ಗಿ, ದಕ್ಷಿಣ ಕನ್ನಡ, ಉಡುಪಿ, ಬೀದರ್ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪಬ್, ಬಾರ್, ಕ್ಲಬ್, ರೆಸ್ಟೋರೆಂಟ್‌ಗಳಲ್ಲಿ ಗ್ರಾಹಕರ ಸಂಖ್ಯೆ ಶೇ 50 ಮೀರುವಂತಿಲ್ಲ.
- ಧಾರ್ಮಿಕ ಆಚರಣೆ, ಜಾತ್ರಾ ಮಹೋತ್ಸವ, ಮೇಳಗಳಲ್ಲಿ ಗುಂಪು ಸೇರುವುದು ನಿಷೇಧ.
- ಶಾಪಿಂಗ್‌ಮಾಲ್, ಮುಚ್ಚಿದ ಪ್ರದೇಶಗಳಲ್ಲಿರುವ ಮಾರ್ಕೆಟ್‌ಗಳು ಮತ್ತು ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳಲ್ಲಿ ಶಿಷ್ಟಾಚಾರದನ್ವಯ ಕೋವಿಡ್ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕು.
- ಪಬ್, ಬಾರ್, ಕ್ಲಬ್, ರೆಸ್ಟೋರೆಂಟ್‌ಗಳನ್ನು ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿದರೆ ಕೋವಿಡ್ ಸಾಂಕ್ರಾಮಿಕ ಕೊನೆಗೊಳ್ಳುವವರೆಗೆ ಮುಚ್ಚಲಾಗುವುದು.

ಕೋವಿಡ್ ಅಂಕಿ–ಅಂಶ — ರಾಜ್ಯ
ಆಧಾರ: ಆರೋಗ್ಯ ಇಲಾಖೆ ಕರ್ನಾಟಕ ಸರ್ಕಾರ

ಒಟ್ಟು ಸೋಂಕಿತರು	10,06,229 ▲
ಸಕ್ರಿಯ ಪ್ರಕರಣ	34,219 ▲
ಗುಣಮುಖ	9,59,400 ▲
ಸಾವು	12,591 ▲

ದಿನದ ಏರಿಕೆ

ಹೊಸ ಪ್ರಕರಣ	4,991
ಗುಣಮುಖ	1,631
ಸಾವು	06
ಐಸಿಯುನಲ್ಲಿ ಇರುವವರು	269

ಪ್ರಜಾವಾಣಿ ಗ್ರಾಫಿಕ್ಸ್

ಒಂದೇದಿನ 81,466 ಪ್ರಕರಣ

ನವದೆಹಲಿ: ದೇಶದಾದ್ಯಂತ ಕಳೆದ 24 ಗಂಟೆಗಳಲ್ಲಿ 81,466 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಕಳೆದ ಆರು ತಿಂಗಳಲ್ಲಿ, ಒಂದು ದಿನದಲ್ಲಿ ವರದಿಯಾಗಿರುವ ಗರಿಷ್ಠ ಪ್ರಕರಣಗಳ ಸಂಖ್ಯೆ ಇದಾಗಿದೆ.

ಇದರೊಂದಿಗೆ ದೇಶದ ಕೋವಿಡ್ ಪ್ರಕರಣಗಳ ಸಂಖ್ಯೆ 1,23,03,131ಕ್ಕೆ ಏರಿದಂತಾಗಿದೆ. ಕಳೆದ 24 ಗಂಟೆಗಳಲ್ಲಿ ಮತ್ತೆ 469 ಸೋಂಕಿತರು ಮೃತಪಟ್ಟಿದ್ದು, ಮೃತರ ಒಟ್ಟು ಸಂಖ್ಯೆ 1,63,396ಕ್ಕೆ ಏರಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶನಿವಾರ ತಿಳಿಸಿದೆ.

ಸತತ 23ನೇ ದಿನ ಗರಿಷ್ಠ ಸಂಖ್ಯೆಯಲ್ಲಿ ಹೊಸ ಪ್ರಕರಣಗಳು ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 6,14,696ಕ್ಕೆ ಏರಿದಂತಾಗಿದೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಇನ್ನಷ್ಟು ಸುದ್ದಿಗಳು 3, 6



ಗಂಗಾ ಮೇಳ ಗಂಗಾ ಮೇಳದ ಅಂಗವಾಗಿ ಉತ್ತರ ಪ್ರದೇಶದ ಕಾನ್ಪುರದಲ್ಲಿ ಶುಕ್ರವಾರ ಭಕ್ತರು ಗಂಗಾ ನದಿ ದಡದಲ್ಲಿ ಬಣ್ಣದೋಕುಳಿ ಆಡಿದರು –ಪಿಟಿಐ ಚಿತ್ರ

ಮರಿಸ್ವಾಮಿಗೆ ನೇರ ಅನುದಾನ ಬಿಡುಗಡೆ ಮಾಡಿದ ಬಿಎಸ್‌ವೈ

ಸಚಿವ ಈಶ್ವರಪ್ಪ ಸಿಟ್ಟಿಗೆ ₹65 ಕೋಟಿ ಮೂಲ

ಪ್ರಜಾವಾಣಿ ವಾರ್ತೆ



ಈಶ್ವರಪ್ಪ

ಬೆಂಗಳೂರು: ತಮ್ಮ ಸಂಬಂಧಿಯೇ ಅಧ್ಯಕ್ಷರಾಗಿರುವ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಗೆ 'ತುಂಡು ಗುತ್ತಿಗೆ' ಆಧಾರದಲ್ಲಿ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನೇರವಾಗಿ ₹ 65 ಕೋಟಿ ಅನುದಾನ ಬಿಡುಗಡೆ ಮಾಡಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆದೇಶಿಸಿದ್ದೇ ಸಚಿವ ಕೆ.ಎಸ್. ಈಶ್ವರಪ್ಪ ಅವರ ಸಿಟ್ಟಿನ ಮೂಲ.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷ ಮರಿಸ್ವಾಮಿ ಸಲ್ಲಿಸಿದ ಕೋರಿಕೆಯನ್ನು ಆಧರಿಸಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ₹ 65 ಕೋಟಿ ಅನುದಾನ ಬಿಡುಗಡೆಗೆ ಮುಖ್ಯಮಂತ್ರಿ ಆದೇಶಿಸಿದ್ದರು. ಈಶ್ವರಪ್ಪ ಬಾಕಿ ಇರಿಸಿದ್ದ ಕಡತವನ್ನು ತರಿಸಿಕೊಂಡು ಯಡಿಯೂರಪ್ಪ ಅನುದಾನ ಬಿಡುಗಡೆಗೆ ಆದೇಶ ಹೊರಡಿಸಿರುವುದು ಇಬ್ಬರ ನಡುವಿನ ಸಂಘರ್ಷಕ್ಕೆ ಮೂಲ ಕಾರಣ.

ನಿಯಮಗಳ ಪ್ರಕಾರ, ಕಾಮಗಾರಿಗಳ ಕ್ರಿಯಾ ಯೋಜನೆ ರೂಪಿಸಿ ಜಿಲ್ಲಾ ಪಂಚಾಯಿತಿಯ ಒಪ್ಪಿಗೆ ಪಡೆಯಬೇಕು.

5ನೇ ಪುಟ ನೋಡಿ

ಎರಡು ದಿನಗಳಲ್ಲಿ ಪರಿಹಾರ: ನಳಿನ್

ಮಂಗಳೂರು: 'ಈಶ್ವರಪ್ಪ ನನಗೂ ಪತ್ರ ಬರೆದಿದ್ದಾರೆ. ಅವರೊಂದಿಗೆ ಈಗಾಗಲೇ ಮಾತುಕತೆ ನಡೆಸಲಾಗಿದೆ. ಪಕ್ಷದ ಚೌಕಟ್ಟಿನಲ್ಲಿ ಎರಡು ದಿನದೊಳಗೆ ಸಮಸ್ಯೆಯನ್ನು ನಾನೇ ಪರಿಹಾರ ಮಾಡುತ್ತೇನೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಶುಕ್ರವಾರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಕೆ.ಎಸ್. ಈಶ್ವರಪ್ಪ ಅವರ ವಿಚಾರ ವಿಭಿನ್ನವಾದುದು. ಯತ್ನಾಳ ಅವರಿಗೆ ಈಗಾಗಲೇ ನೋಟಿಸ್ ನೀಡಲಾಗಿದ್ದು, ಅವರು ಉತ್ತರಿಸುತ್ತಾರೆ. ಈಶ್ವರಪ್ಪ ಪತ್ರದಲ್ಲಿ ಉಲ್ಲೇಖಿಸಿರುವುದು ಅನುದಾನದ ಬಗ್ಗೆ. ಈ ಕುರಿತು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಮಾತುಕತೆ ನಡೆಸಿದ್ದಾರೆ' ಎಂದರು.

ನಿವೃತ್ತ ಅಧಿಕಾರಿಯ ಸೇವೆ ವಿಸ್ತರಣೆಗೆ ಆದೇಶ

ಬೆಂಗಳೂರು: ಮಾರ್ಚ್ 31ರಂದು ವಯೋನಿವೃತ್ತಿ ಹೊಂದಿರುವ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಲಯದ ಶಿವಮೊಗ್ಗ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪೀರ್ ಪಾಷ ಅವರ ಸೇವಾ ಅವಧಿಯನ್ನು ಒಂದು ವರ್ಷ ವಿಸ್ತರಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆದೇಶ ಹೊರಡಿಸಿದ್ದಾರೆ. ಸಿಗಂದೂರು ಸೇತುವೆ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಉದ್ದೇಶದಿಂದ ಪೀರ್ ಪಾಷ ಸೇವಾ ಅವಧಿ ವಿಸ್ತರಿಸುವುದು ಅಗತ್ಯ ಎಂದು ಮಾ.29ರಂದು ಯಡಿಯೂರಪ್ಪ ಅವರು ತಮ್ಮ ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ.

5ನೇ ಪುಟ ನೋಡಿ

'ನಳಿನ್, ರವಿ ಮಾತಿನಂತೆ ಅನುದಾನಕ್ಕೆ ತಡೆ'

ಮೈಸೂರು: 'ನಿಯಮ ಉಲ್ಲಂಘಿಸಿ ಮುಖ್ಯಮಂತ್ರಿ ಬಿಡುಗಡೆ ಮಾಡಿದ್ದ ಅನುದಾನವನ್ನು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಸೂಚನೆ ಅನ್ವಯ ತಡೆಹಿಡಿದಿದ್ದೇನೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು. 5

ಒಳ ಪುಟಗಳು



ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ — **ವಚನವಾಣಿ**
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ಅಸ್ಸಾಂ: ಒಂದು ಮತಗಟ್ಟೆಯಲ್ಲಿ ಮರುಮತದಾನಕ್ಕೆ ಆಯೋಗ ಆದೇಶ

ಬಿಜೆಪಿ ಅಭ್ಯರ್ಥಿ ಪತ್ನಿ ಕಾರಿನಲ್ಲಿ ಮತಯಂತ್ರ

ನವದೆಹಲಿ (ಪಿಟಿಐ): ಅಸ್ಸಾಂನ ರತಬಾಡಿ ವಿಧಾನಸಭಾ ಕ್ಷೇತ್ರದ ಮತಗಟ್ಟೆಯೊಂದರ ಚುನಾವಣಾಧಿಕಾರಿಯು ಮತದಾನದ ಬಳಿಕ ಮತಯಂತ್ರವನ್ನು ಬಿಜೆಪಿ ಅಭ್ಯರ್ಥಿಯ ಪತ್ನಿಯ ಕಾರಿನಲ್ಲಿ ಸಾಗಿಸಿದ್ದು ಪತ್ತೆಯಾಗಿದೆ. ಹೀಗಾಗಿ ಈ ಮತಗಟ್ಟೆಯಲ್ಲಿ ಮರುಮತದಾನಕ್ಕೆ ಚುನಾವಣಾ ಆಯೋಗವು ಆದೇಶ ನೀಡಿದೆ.

ಚುನಾವಣಾಧಿಕಾರಿ ಮತ್ತು ಇತರ ಮೂವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ ಎಂದು ಆಯೋಗವು ಹೇಳಿದೆ. ಮತಯಂತ್ರದ ಮೊಹರು ಒಡೆದಿಲ್ಲ. ಹಾಗಿದ್ದರೂ 149ನೇ ಸಂಖ್ಯೆಯ ಮತಗಟ್ಟೆಯಲ್ಲಿ ಮರುಮತದಾನ ನಡೆಸಲು ನಿರ್ಧರಿಸಲಾಗಿದೆ. ಈ ಬಾರಿ ಇನ್ನಷ್ಟು ಎಚ್ಚರ ವಹಿಸಲಾಗುವುದು ಎಂದು ಆಯೋಗವು ತಿಳಿಸಿದೆ. ಮತಯಂತ್ರ ಸಾಗಾಟಕ್ಕೆ ಸಂಬಂಧಿಸಿ ವರದಿ ನೀಡುವಂತೆ ವಿಶೇಷ ವೀಕ್ಷಕರಿಗೆ ಸೂಚಿಸಲಾಗಿದೆ.

ಆಯೋಗ ನೀಡಿದ ಮಾಹಿತಿ: ರತಬಾಡಿ ಕ್ಷೇತ್ರದ 149ನೇ ಮತಗಟ್ಟೆಯಲ್ಲಿ ಮತದಾನದ ಬಳಿಕ ಆರು ಗಂಟೆಗೆ ಚುನಾವಣಾಧಿಕಾರಿ ಮತ್ತು ಇತರ ಮೂವರು ಸಿಬ್ಬಂದಿ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿದ್ದ ವಾಹನದಲ್ಲಿ ಹೊರಟಿದ್ದಾರೆ.

9ನೇ ಪುಟ ನೋಡಿ

ಮತಯಂತ್ರ– ಮರುಚಿಂತನೆ ಅಗತ್ಯ: ಪ್ರಿಯಾಂಕಾ



ಮತಯಂತ್ರ ಬಳಕೆಯ ಬಗ್ಗೆ 'ಗಂಭೀರ ಮರುಚಿಂತನೆ' ನಡೆಸಬೇಕಾದ ಅಗತ್ಯ ಇದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

'ಇಂತಹ ದೂರುಗಳು ಬಂದಾಗ ಆಯೋಗವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಮತಯಂತ್ರ ಬಳಕೆ ಬಗ್ಗೆ ಎಲ್ಲ ರಾಷ್ಟ್ರೀಯ ಪಕ್ಷಗಳು ಗಂಭೀರ ಮರುಮೌಲ್ಯಮಾಪನ ನಡೆಸಬೇಕು' ಎಂದಿದ್ದಾರೆ.

'ಪ್ರತಿ ಬಾರಿ ಚುನಾವಣೆ ನಡೆದಾಗಲೂ ಖಾಸಗಿ ವಾಹನದಲ್ಲಿ ಮತಯಂತ್ರ ಸಿಗುತ್ತದೆ. ಎಲ್ಲ ಪ್ರಕರಣಗಳಲ್ಲಿಯೂ ಒಂದು ವಿಚಾರ ಸಾಮಾನ್ಯವಾಗಿರುವುದು ಆಶ್ಚರ್ಯಕರವೇನೂ ಅಲ್ಲ, ಮತಯಂತ್ರ ಸಿಕ್ಕ ವಾಹನವು ಬಿಜೆಪಿ ಅಭ್ಯರ್ಥಿಯದ್ದು ಅಥವಾ ಅವರ ಸಹವರ್ತಿಗಳದ್ದು ಆಗಿರುತ್ತದೆ' ಎಂದು ಪ್ರಿಯಾಂಕಾ ಹೇಳಿದ್ದಾರೆ.

ಇಂತಹ ವಿಡಿಯೊಗಳು ಬಹಿರಂಗವಾದಾಗ, ಇದೊಂದು ಅಪವಾದವಷ್ಟೇ ಎಂದು ಆಯೋಗ ಹೇಳುತ್ತದೆ. ಬಿಜೆಪಿ ತನ್ನ ಮಾಧ್ಯಮ ಬಲವನ್ನು ಬಳಸಿಕೊಂಡು ವಿಡಿಯೊ ಬಹಿರಂಗ ಮಾಡಿದವರು ಬಾಯಿ ಮುಚ್ಚುವಂತೆ ಮಾಡುತ್ತದೆ.

ಇಂತಹ ಹಲವು ಪ್ರಕರಣಗಳು ವರದಿಯಾಗಿದ್ದರೂ ಈ ಬಗ್ಗೆ ಕೈಗೊಂಡಿರುವ ಕ್ರಮಗಳು ಅತ್ಯಲ್ಪ ಎಂದು ಹೇಳಿದ್ದಾರೆ.

ಸಂತ್ರಸ್ತೆಗೆ ಮೊಬೈಲ್ ಕೊಡಿಸಿದ್ದ ಶಾಸಕ

ಜ್ವರದ ಕಾರಣ ಕೊಟ್ಟು ರಮೇಶ ಗೈರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣದಲ್ಲಿ ಎಸ್‌ಐಟಿ ಅಧಿಕಾರಿಗಳ ಎದುರು ಶುಕ್ರವಾರ ಬೆಳಿಗ್ಗೆ ಹಾಜರಾಗಬೇಕಿದ್ದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅನಾರೋಗ್ಯದ ಕಾರಣ ನೀಡಿ ವಿಚಾರಣೆಗೆ ಗೈರಾದರು.

ಸಂತ್ರಸ್ತೆಯ ವಿಚಾರಣೆ ಮುಂದುವರಿಸಿರುವ ಎಸ್‌ಐಟಿ ಅಧಿಕಾರಿಗಳು ಮತ್ತಷ್ಟು ಮಾಹಿತಿ ಕಲೆ ಹಾಕಿದರು.

ಸಂತ್ರಸ್ತೆ ಹೇಳಿಕೆ ಆಧರಿಸಿ, ಅತ್ಯಾಚಾರ ನಡೆದಿದೆ ಎನ್ನಲಾದ ಸ್ಥಳ ಹಾಗೂ ಸಂತ್ರಸ್ತೆ ವಾಸವಿದ್ದ ಕೊಠಡಿಯಲ್ಲಿ ತನಿಖಾಧಿಕಾರಿ ಎಂ.ಸಿ. ಕವಿತಾ ಗುರುವಾರ ಮಹಜರು ಮಾಡಿದ್ದರು. ಶುಕ್ರವಾರ ಬೆಳಿಗ್ಗೆ ವಿಚಾರಣೆಗೆ ಬರುವಂತೆ ರಮೇಶ ಜಾರಕಿಹೊಳಿ ಹಾಗೂ ಸಂತ್ರಸ್ತೆಗೆ ನೋಟಿಸ್ ನೀಡಿದ್ದರು. ಆರಂಭದಲ್ಲಿ ಇಬ್ಬರಿಂದಲೂ ಪ್ರತ್ಯೇಕವಾಗಿ ಹೇಳಿಕೆ ಪಡೆದು, ನಂತರ ಮುಖಾಮುಖಿ ಹೇಳಿಕೆ ದಾಖಲಿಸಿಕೊಳ್ಳಲು ತನಿಖಾ ತಂಡ ತೀರ್ಮಾನಿಸಿತ್ತು.



ನಿಗದಿತ ಸಮಯಕ್ಕೆ ಆಡುಗೋಡಿಯಲ್ಲಿರುವ ಸಿಸಿಬಿಯ ತಾಂತ್ರಿಕ ವಿಭಾಗದ ಕೊಠಡಿಗೆ ಬಂದಿದ್ದ ಯುವತಿ, ಅಧಿಕಾರಿಗಳ ವಿಚಾರಣೆಗೆ ಹಾಜರಾದರು. ತನಿಖಾ ತಂಡ, ಮೊದಲೇ ಸಿದ್ಧಪಡಿಸಿಕೊಂಡಿದ್ದ ಪ್ರಶ್ನೆಗಳಿಗೆ ಉತ್ತರ ಪಡೆದುಕೊಂಡರು. ರಾತ್ರಿಯವರೆಗೂ ವಿಚಾರಣೆ ನಡೆಯಿತು.

2019ರ ಡಿಸೆಂಬರ್‌ನಿಂದ ಪರಿಚಯ: 'ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿ ಅತ್ಯಾಚಾರ ಎಸಗಿದ್ದ ರಮೇಶ ಜಾರಕಿಹೊಳಿ, ಜೀವ ಬೆದರಿಕೆ ಹಾಕಿದ್ದರು. ಅವರಿಂದಾದ ಅನ್ಯಾಯದ ವಿರುದ್ಧ ಹೋರಾಡುವುದು ಕಷ್ಟವೆಂಬುದು ಗೊತ್ತಾಯಿತು. ಸ್ನೇಹಿತನ ಮೂಲಕ ಸುದ್ದಿವಾಹಿನಿಯ ಹಲವರ ಪರಿಚಯವಾಗಿತ್ತು. ನನಗಾದ ಅನ್ಯಾಯವನ್ನು ಅವರ ಎದುರು ಹೇಳಿಕೊಂಡಿದ್ದೆ' ಎಂದೂ ಯುವತಿ ಹೇಳಿರುವುದಾಗಿ ಗೊತ್ತಾಗಿದೆ.

6 ನೇ ಪುಟ ನೋಡಿ

ಮರಾಠ ಸಮಾಜದವರ ವಿರೋಧ: ವೇದಿಕೆ ಏರದೇ ಹಿಂದಿರುಗಿದ ಖೂಬಾ, ಸಲಗರ

ಸಂಸದ, ಬಿಜೆಪಿ ಅಭ್ಯರ್ಥಿಗೆ ಮುಜುಗರ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಜಿಲ್ಲೆಯ ಮರಾಠ ಸಮಾಜವು ಉಪ ಚುನಾವಣೆಯ ಹಿನ್ನೆಲೆಯಲ್ಲಿ ಚರ್ಚಿಸಲು ಶುಕ್ರವಾರ ಇಲ್ಲಿ ಕರೆದಿದ್ದ ಸಭೆಗೆ ದಿಢೀರ್ ಆಗಿ ಬಂದ ಸಂಸದ ಭಗವಂತ ಖೂಬಾ ಹಾಗೂ ಬಿಜೆಪಿ ಅಭ್ಯರ್ಥಿ ಶರಣು ಸಲಗರ ತೀವ್ರ ಪ್ರತಿರೋಧ ಎದುರಿಸಬೇಕಾಯಿತು.

ಮರಾಠ ಸಮಾಜದವರು ಸಂಸದರ ವಿರುದ್ಧ ಧಿಕ್ಕಾರ ಹಾಗೂ 'ಗೋ ಬ್ಯಾಕ್ ಖೂಬಾ' ಎಂದು ಘೋಷಣೆ ಕೂಗಿದರು. ಅವರು ಸಭೆಯಿಂದ ಹೊರ ಹೋಗುವವರೆಗೂ ಬೊಬ್ಬೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಸಂಸದ ಖೂಬಾ, ಬಿಜೆಪಿ ಅಭ್ಯರ್ಥಿ ಶರಣು ಸಲಗರ ಕೆಲ ಹೊತ್ತು ವೇದಿಕೆ ಮುಂಭಾಗದಲ್ಲಿ ಕುಳಿತು ಕೈಮುಗಿದು ಮನವಿ ಮಾಡಿಕೊಂಡರೂ ಸಭೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಿಲ್ಲ.

'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮರಾಠ ಅಭಿವೃದ್ಧಿ ನಿಗಮ ಸ್ಥಾಪಿಸಿದ್ದರೂ ಅದಕ್ಕೆ ಅಧ್ಯಕ್ಷರ ನೇಮಕ ಮಾಡಿಲ್ಲ. ಮುಖ್ಯಮಂತ್ರಿ ಆದ 24 ಗಂಟೆಯಲ್ಲೇ ಮರಾಠ ಸಮಾಜವನ್ನು 2ಎ ಪ್ರವರ್ಗಕ್ಕೆ ಸೇರ್ಪಡೆ ಮಾಡುತ್ತೇನೆ ಎಂದು ಭರವಸೆ ನೀಡಿದ್ದರು. ಈವರೆಗೆ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ನಿಮ್ಮ ಅಗತ್ಯ ನಮಗಿಲ್ಲ' ಎಂದು ಯುವಕರು ಆಕ್ರೋಶ ವ್ಯಕ್ತಪಡಿಸಿದರು.



ಸಭೆಗೆ ಆಹ್ವಾನ ಇಲ್ಲದೇ ಬಂದಿದ್ದ ಸಂಸದ ಭಗವಂತ ಖೂಬಾ ಹಾಗೂ ಬಿಜೆಪಿ ಅಭ್ಯರ್ಥಿ ಶರಣು ಸಲಗರ ಅವರನ್ನು ಸುತ್ತುವರಿದ ಯುವಕರು ಅವರ ವಿರುದ್ಧ ಧಿಕ್ಕಾರ ಕೂಗಿದರು

ಇವರಿಬ್ಬರೂ ಸುಮಾರು ಅರ್ಧ ಗಂಟೆ ಮೌನವಾಗಿ ನಿಂತರಾದರೂ ಅವರನ್ನು ವೇದಿಕೆಗೆ ಹೋಗಗೊಡಲಿಲ್ಲ. ಘೋಷಣೆ ಕೂಗುವುದು, ಚೀರಾಟ ಹೆಚ್ಚಾಯಿತು. ಗದ್ದಲ ಹೆಚ್ಚಾದ ಕಾರಣ ಸಮಾಜದ ಕೆಲ ಹಿರಿಯರು ಶಾಂತಿ ಕಾಪಾಡುವ ಸಲುವಾಗಿ ಸಂಸದರು ದಯವಿಟ್ಟು ಸಭೆಯಿಂದ ಹೊರ ಹೋಗಬೇಕು ಎಂದು ಮನವಿ ಮಾಡಿಕೊಂಡರು.

ಕೆಲ ಯುವಕರು ಸುತ್ತುವರಿದು ಘೋಷಣೆ ತೀವ್ರಗೊಳಿಸಿದಾಗ ಅಂಗರಕ್ಷಕರು ಹಾಗೂ ಪೊಲೀಸರು ರಕ್ಷಣೆಗೆ ಮುಂದಾದರು. ಪರಿಸ್ಥಿತಿ ಗಂಭೀರ ಸ್ವರೂಪ ಪಡೆಯುತ್ತಿರುವ ಮುನ್ಸೂಚನೆ ದೊರೆಯುತ್ತಲೇ ಸಂಸದ ಹಾಗೂ ಬಿಜೆಪಿ ಅಭ್ಯರ್ಥಿ ಕುರ್ಚಿ ಮೇಲೆ ನಿಂತು ಎಲ್ಲರಿಗೂ ನಮಸ್ಕರಿಸಿ ನಿರ್ಗಮಿಸಿದರು.

ನಂತರ ನಡೆದ ಮರಾಠ ಸಮಾಜದ ಸಭೆಯಲ್ಲಿ ಹಲವು ಮುಖಂಡರು ಮಾತನಾಡಿ, 'ನಮ್ಮ ಸಮುದಾಯದ ಮುಖಂಡರು ಬೇರೆ ಬೇರೆ ಪಕ್ಷಗಳಲ್ಲಿ ಇರಬಹುದು. ನಮಗೆ ಸಮಾಜದ ಹಿತವೇ ಮುಖ್ಯ' ಎಂದು ಪ್ರತಿಪಾದಿಸಿದರು.

ಎನ್.ಸಿ.ಪಿ.ಯಿಂದ ಸ್ಪರ್ಧಿಸಿರುವ ಮಾಜಿ ಶಾಸಕ ಎಂ.ಜಿ.ಮುಳೆ, ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಅನಿಲ ಭೂಸಾರೆ, ಪದ್ಮಾಕರ ಪಾಟೀಲ, ಬಾಬುರಾವ್ ಕಾರಬಾರಿ, ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ದಿಗಂಬರರಾವ್ ಮಾನಕರಿ, ವಕೀಲ ನಾರಾಯಣ ಗಣೇಶ, ಎನ್.ಸಿ.ಪಿ ಜಿಲ್ಲಾ ಘಟಕದ ಅಧ್ಯಕ್ಷ ರಾಮಭಾವು ಜಾಧವ, ಮರಾಠ ಕ್ರಾಂತಿ ಮೋರ್ಚಾದ ಜಿಲ್ಲಾ ಸಂಯೋಜಕ ವೆಂಕಟೇಶ ಮಾಯಿಂದೆ ಅವರು ಪಾಲ್ಗೊಂಡಿದ್ದರು.

ಕ್ಯಾಪಿಟಲ್ ಬ್ಯಾರಿಕೇಡ್‌ಗೆ ಕಾರು ಡಿಕ್ಕಿ: ಚಾಲಕ ಹತ್ಯೆ

ವಾಷಿಂಗ್ಟನ್ (ಎಪಿ): ಬಿಗಿ ಭದ್ರತೆ ಇರುವ ಅಮೆರಿಕದ ಕ್ಯಾಪಿಟಲ್ ಹಿಲ್ ಕಟ್ಟಡ ಹೊರಗಿನ ಬ್ಯಾರಿಕೇಡ್‌ಗಳಿಗೆ ವ್ಯಕ್ತಿಯೊಬ್ಬ ಕಾರು ಡಿಕ್ಕಿ ಹೊಡೆಸಿದ್ದರಿಂದ ಒಬ್ಬ ಪೊಲೀಸ್ ಅಧಿಕಾರಿ ಸಾವಿಗೀಡಾಗಿದ್ದು, ಮತ್ತೊಬ್ಬ ಅಧಿಕಾರಿ ಗಾಯಗೊಂಡಿದ್ದಾರೆ. ಕಾರು ಚಾಲಕನನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ.

ಭದ್ರತಾ ತಪಾಸಣೆ ಕೇಂದ್ರದ ಬಳಿ ಈ ಘಟನೆ ನಡೆದಿದ್ದು, ಕ್ಯಾಪಿಟಲ್ ಹಿಲ್ ಕಟ್ಟಡದ ಪ್ರದೇಶದಲ್ಲಿ ಲಾಕ್‌ಡೌನ್ ಘೋಷಿಸಲಾಯಿತು. ಸಿಬ್ಬಂದಿ ಎಲ್ಲಿಯೂ ಸಂಚರಿಸದಂತೆ ಸಂಪೂರ್ಣ ನಿರ್ಬಂಧ ಹೇರಲಾಗಿದ್ದು, ರಾಷ್ಟ್ರೀಯ ಭದ್ರತಾ ಪಡೆಗಳು ಇಡೀ ಪ್ರದೇಶವನ್ನು ಸುತ್ತುವರಿದಿವೆ.

ಪೊಲೀಸ್ ಅಧಿಕಾರಿಗಳಿಗೆ ಡಿಕ್ಕಿ ಹೊಡೆಸಿದ ನಂತರ ಕಾರಿನಲ್ಲಿದ್ದ ಚಾಲಕ ಕೈಯಲ್ಲಿ ಚಾಕು ರೀತಿಯ ವಸ್ತುವನ್ನು ಹಿಡಿದಿದ್ದ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜನವರಿ 6ರಂದು ಕ್ಯಾಪಿಟಲ್ ಹಿಲ್‌ನಲ್ಲಿ ನಡೆದ ದಾಳಿ ಬಳಿಕ ಈ ಪ್ರದೇಶದಲ್ಲಿ ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಲಾಗಿತ್ತು.

ಡೀಸೆಲ್‌ಗೆ 50 ಪೈಸೆ ರಿಯಾಯಿತಿ; ಸಿಬ್ಬಂದಿಗೆ ಮೂರು ಹೊತ್ತಿನ ಊಟ ಉಚಿತ

ಇಲ್ಲಿದೆ ಮಾದರಿ ಪೆಟ್ರೋಲ್ ಬಂಕ್

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಪ್ರತಿ ಲೀಟರ್‌ಗೆ 50 ಪೈಸೆ ಕಡಿಮೆ ದರ, ಲಾರಿಗಳಿಗೆ ಉಚಿತವಾಗಿ ಗಾಳಿ ತುಂಬಿಸುವ ವ್ಯವಸ್ಥೆ, ಸಿಬ್ಬಂದಿಗೆ ಮೂರು ಹೊತ್ತಿನ ಊಟ...

ಇದು ಬೆಂಗಳೂರು ನಗರದಲ್ಲಿರುವ ಫೆಡರೇಷನ್ ಆಫ್ ಲಾರಿ ಓನರ್ಸ್ ಅಸೋಸಿಯೇಷನ್ಸ್ ನಡೆಸುತ್ತಿರುವ ಪೆಟ್ರೋಲ್ ಬಂಕ್‌ನಲ್ಲಿ ಇರುವ ಸವಲತ್ತು. ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಸಹಭಾಗಿತ್ವದಲ್ಲಿ ಈ ಪೆಟ್ರೋಲ್ ಬಂಕ್ ಅನ್ನು 1996ರಿಂದ ಫೆಡರೇಷನ್ ನಿರ್ವಹಿಸುತ್ತಿದೆ.

ಕಂಠೀರವ ಸ್ಟುಡಿಯೊ ಸಮೀಪದ ರಿಂಗ್ ರಸ್ತೆಯ ಮೇಲ್ಸೇತುವೆಯ ಕೆಳಭಾಗದಲ್ಲಿ ಈ ಬಂಕ್ ಇದೆ. ಯಶವಂತಪುರ ಎಪಿಎಂಸಿ ಸಮೀಪದಲ್ಲೇ ಇರುವ ಕಾರಣ ಬಹುತೇಕ ಲಾರಿಗಳು ಈ ಬಂಕ್‌ನಲ್ಲಿ ಡೀಸೆಲ್ ತುಂಬಿಸಿಕೊಳ್ಳುತ್ತವೆ. ದಿನಕ್ಕೆ 45 ಸಾವಿರದಿಂದ 50 ಸಾವಿರ ಲೀಟರ್ ಡೀಸೆಲ್ ಮಾರಾಟವಾಗುತ್ತದೆ. 7 ಸಾವಿರದಿಂದ 8 ಸಾವಿರ ಲೀಟರ್ ಪೆಟ್ರೋಲ್ ಮಾರಾಟವಾಗುತ್ತದೆ. 10 ಲೀಟರ್‌ಗಿಂತ ಹೆಚ್ಚಿನ ಡೀಸೆಲ್ ತುಂಬಿಸಿಕೊಂಡರೆ ಪ್ರತಿ ಲೀಟರ್‌ಗೆ 50 ಪೈಸೆ ರಿಯಾಯಿತಿ ಸಿಗಲಿದೆ.



ಪೆಟ್ರೋಲ್ ಬಂಕ್‌ನಲ್ಲಿ ಹಾಕಿರುವ ರಿಯಾಯಿತಿ ದರದ ಫಲಕ

ಉಚಿತ ಚಾಲನಾ ಪರವಾನಗಿ

ಲಾರಿ ಚಾಲಕರಿಗೆ ಉಚಿತವಾಗಿ ಚಾಲನಾ ಪರವಾನಗಿಯನ್ನೂ ಫೆಡರೇಷನ್ ನೀಡುತ್ತಿದೆ. ಕಳೆದ ಎರಡು ತಿಂಗಳ ಅವಧಿಯಲ್ಲಿ 400 ಚಾಲಕರು ಇದರ ಉಪಯೋಗ ಪಡೆದುಕೊಂಡಿದ್ದಾರೆ.

'ಲಾರಿಗಳಲ್ಲಿ ಕ್ಲೀನರ್ ಆಗಿ ಕೆಲಸಕ್ಕೆ ಸೇರಿದವರು ಚಾಲಕರಾಗುತ್ತಾರೆ. ಬಹುತೇಕರು ಚಾಲನಾ ಪರವಾನಗಿ ಪಡೆದುಕೊಳ್ಳುವುದಿಲ್ಲ. ಸಣ್ಣಪುಟ್ಟ ಅಪಘಾತವಾದರೂ ಚಾಲಕರು ಸಮಸ್ಯೆಗೆ ಸಿಲುಕುತ್ತಾರೆ. ಅದನ್ನು ತಪ್ಪಿಸಲು ಫೆಡರೇಷನ್‌ನಿಂದಲೇ ಉಚಿತವಾಗಿ ಪರವಾನಗಿ ಕೊಡಿಸುವ ಕೆಲಸವನ್ನು ಆರಂಭಿಸಿದ್ದೇವೆ' ಎಂದು ಚನ್ನಾರೆಡ್ಡಿ ಹೇಳಿದರು.

ಪ್ರಜಾವಾಣಿ ವಿಶೇಷ

'ಒಂದು ಲೀಟರ್ ಡೀಸೆಲ್‌ಗೆ ₹1.85 ಕಮಿಷನ್ ರೂಪದಲ್ಲಿ ಫೆಡರೇಷನ್‌ಗೆ ಬಿಪಿಸಿಎಲ್ ನೀಡುತ್ತದೆ. ಅದರಲ್ಲಿ 50 ಪೈಸೆ ರಿಯಾಯಿತಿಯನ್ನು ಗ್ರಾಹಕರಿಗೆ ನೀಡಲಾಗುತ್ತದೆ. ಉಳಿದ ₹1.35ರಲ್ಲಿ ಬಂಕ್ ನಿರ್ವಹಣೆ ಮಾಡಲಾಗುತ್ತದೆ. ರಿಯಾಯಿತಿ ಸೌಲಭ್ಯ ಪಡೆದುಕೊಳ್ಳಲು ಪ್ರತ್ಯೇಕ ಕೌಂಟರ್ ತೆರೆಯಲಾಗಿದೆ' ಎಂದು ಫೆಡರೇಷನ್ ಅಧ್ಯಕ್ಷ ಬಿ. ಚನ್ನಾರೆಡ್ಡಿ ತಿಳಿಸಿದರು.

ಬಂಕ್‌ನಲ್ಲಿ 50 ನೌಕರರಿದ್ದು, ಅವರಿಗೆ ಕಾರ್ಮಿಕ ಇಲಾಖೆ ಮಾರ್ಗಸೂಚಿಗಳ ಪ್ರಕಾರ ವೇತನ, ಪಿಎಫ್ ಸೌಲಭ್ಯವನ್ನು ಫೆಡರೇಷನ್ ನೀಡುತ್ತಿದೆ. ಕರ್ತವ್ಯದಲ್ಲಿ ಇರುವ ಸಿಬ್ಬಂದಿಗೆ ಮೂರು ಹೊತ್ತಿನ ಊಟ ಮತ್ತು ಉಪಾಹಾರದ ವ್ಯವಸ್ಥೆಯನ್ನು ಉಚಿತವಾಗಿ ಮಾಡಲಾಗಿದೆ. ಸುಸಜ್ಜಿತ ಶೌಚಾಲಯ ಮತ್ತು ಸ್ನಾನಗೃಹಗಳನ್ನೂ ಫೆಡರೇಷನ್ ನಿರ್ಮಿಸಿದೆ. ಈ ಎಲ್ಲ ಸವಲತ್ತುಗಳನ್ನು ಕಲ್ಪಿಸಿರುವ ಕಾರಣಕ್ಕೆ ನಿರ್ವಹಣೆಯಲ್ಲಿ ಬೆಂಗಳೂರಿನ ನಂಬರ್- 1 ಬಂಕ್ ಎಂಬ ಪ್ರಮಾಣ ಪತ್ರವನ್ನೂ ಬಿಪಿಸಿಎಲ್ ನೀಡಿದೆ.

ಉಚಿತ ನೀರು ಮತ್ತು ಗಾಳಿ: ಬಂಕ್‌ಗಳಿಗೆ ಬರುವ ಲಾರಿ ಚಕ್ರಗಳಿಗೆ ಉಚಿತವಾಗಿ ಗಾಳಿ ತುಂಬಿಸಿ ಕೊಳ್ಳುವ ವ್ಯವಸ್ಥೆ ಇದೆ. ನೀರು ಶುದ್ಧೀಕರಣ ಘಟಕವನ್ನೂ ಸ್ಥಾಪಿಸಲಾಗಿದ್ದು, ದೂರದ ಊರುಗಳಿಗೆ ಹೋಗುವ ಲಾರಿಗಳ ಚಾಲಕರು ಬೇಕಾದಷ್ಟು ಕ್ಯಾನ್‌ಗಳ ನೀರನ್ನು ತುಂಬಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಚನ್ನಾರೆಡ್ಡಿ ಹೇಳಿದರು.

'ಪೆಟ್ರೋಲ್ ಬಂಕ್‌ಗಳ ಸಿಬ್ಬಂದಿಗೆ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಅನುಭವ ಆಗಬೇಕು ಎಂಬ ಕಾರಣಕ್ಕೆ ಎಲ್ಲ ರೀತಿಯ ಸೌಕರ್ಯ ಕಲ್ಪಿಸಲಾಗಿದೆ. ಫೆಡರೇಷನ್‌ಗೆ ಈ ಬಂಕ್‌ನಿಂದ ಲಾಭ ಗಳಿಸಬೇಕು ಎಂಬ ಉದ್ದೇಶ ಇಲ್ಲ. ಹೀಗಾಗಿ, ಕಮಿಷನ್ ಹಣವನ್ನು ಬಂಕ್ ಸಿಬ್ಬಂದಿಗೆ ಮತ್ತು ಲಾರಿ ಮಾಲೀಕರ ಕಲ್ಯಾಣಕ್ಕೆ ವಿನಿಯೋಗಿಸಲಾಗುತ್ತಿದೆ' ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

14.84 ಕೋಟಿ ಮಾನವ ದಿನ ಸೃಷ್ಟಿ: ಕೆ.ಎಸ್. ಈಶ್ವರಪ್ಪ

ಮೈಸೂರು: ರಾಜ್ಯದಲ್ಲಿ 2020–21ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ (ನರೇಗಾ) 14.84 ಕೋಟಿ ಮಾನವ ದಿನಗಳನ್ನು ಸೃಜಿಸಲಾಗಿದ್ದು, ಒಟ್ಟು ₹ 3,997 ಕೋಟಿ ಮೊತ್ತವನ್ನು ಕೂಲಿಯಾಗಿ ಪಾವತಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ತಿಳಿಸಿದರು.

ವರ್ಷದ ಪ್ರಾರಂಭದಲ್ಲಿ ನೀಡಲಾಗಿದ್ದ 13 ಕೋಟಿ ಮಾನವ ದಿನಗಳ ಸೃಜನೆ ಗುರಿಯನ್ನು ಕೇಂದ್ರ ಸರ್ಕಾರವು 14.65 ಕೋಟಿಗೆ ಪರಿಷ್ಕರಿಸಿದ ಕಾರಣ ರಾಜ್ಯಕ್ಕೆ ಈ ಯೋಜನೆಯಡಿ ₹ 800 ಕೋಟಿ ಅನುದಾನ ಹೆಚ್ಚುವರಿಯಾಗಿ ಲಭ್ಯ ವಾಗಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'7.08 ಲಕ್ಷ ಹೊಸ ಜಾಬ್ ಕಾರ್ಡ್‌ಗಳನ್ನು ನೀಡುವ ಮೂಲಕ 16.85 ಲಕ್ಷ ಜನರನ್ನು ಯೋಜನೆಗೆ ಸೇರಿಸಲಾಗಿದೆ. 30.19 ಲಕ್ಷ ಕುಟುಂಬಗಳ 56.83 ಲಕ್ಷ ಜನರಿಗೆ ಉದ್ಯೋಗ ನೀಡಲಾಗಿದೆ. 2.40 ಲಕ್ಷ ಕುಟುಂಬಗಳು 100 ದಿನಗಳ ಉದ್ಯೋಗ ಪೂರೈಸಿವೆ' ಎಂದು ವಿವರಿಸಿದರು.



ನರೇಗಾ ಕೂಲಿ ಹೆಚ್ಚಳ: ನರೇಗಾ ಕೆಲಸಕ್ಕೆ ದಿನವೊಂದಕ್ಕೆ ನೀಡುತ್ತಿದ್ದ ಕೂಲಿಯನ್ನು ₹275 ರಿಂದ ₹ 289ಕ್ಕೆ ಹೆಚ್ಚಿಸಲಾಗಿದೆ. ಇದು ರಾಜ್ಯದಾದ್ಯಂತ ಏ.1 ರಿಂದ ಜಾರಿಗೆ ಬಂದಿದ್ದು, ಇದರ ಜತೆ ಕೂಲಿಕಾರರಿಗೆ ಪ್ರತಿದಿನ ಸಲಕರಣೆ ವೆಚ್ಚವಾಗಿ ₹ 10 ನೀಡಲಾಗುತ್ತದೆ ಎಂದರು.

ಏ.5ಕ್ಕೆ 'ಮಿಸೆಸ್ ಇಂಡಿಯಾ ಕರ್ನಾಟಕ' ಆಡಿಷನ್

ಬೆಂಗಳೂರು:'ಮಿಸೆಸ್ ಇಂಡಿಯಾ ಕರ್ನಾಟಕ' ಸೌಂದರ್ಯ ಸ್ಪರ್ಧೆಯ ಆಡಿಷನ್ ಇದೇ 5ರಂದು ನಗರದ ಸ್ಯಾಂಕಿ ರಸ್ತೆಯಲ್ಲಿರುವ ಟುಲಿಪ್ಸ್ ಇನ್ ಹೋಟೆಲ್‌ನಲ್ಲಿ ನಡೆಯಲಿದೆ.

ವಿವಾಹಿತರು, ವಿಚ್ಛೇದಿತರು, ಪ್ರತ್ಯೇಕಗೊಂಡವರು, ವಿಧವೆಯರು ಆಡಿಷನ್‌ನಲ್ಲಿ ಭಾಗವಹಿಸಬಹುದು. ಆಸಕ್ತರು ನೋಂದಣಿಗೆ www.mrsindiakarnataka.com ಇಲ್ಲಿ ಹೆಸರು ನೋಂದಾಯಿಸಬಹುದು. ಅಥವಾ 9611455866ಕ್ಕೆ ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

'ಯತ್ನಾಳ ಜೊತೆ ಈಶ್ವರಪ್ಪ ಹೋಲಿಕೆ ಬೇಡ'

ಮಸ್ಕಿ (ರಾಯಚೂರು): 'ಈಶ್ವರಪ್ಪ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಪಕ್ಷ ಕಟ್ಟುವುದರಲ್ಲಿ ಬಹಳ ಮಹತ್ವದ ಪಾತ್ರ ವಹಿಸಿದವರು. ಅವರನ್ನು ಬಸನಗೌಡ ಪಾಟೀಲ ಯತ್ನಾಳ ಅವರ ಜೊತೆ ಹೋಲಿಕೆ ಮಾಡುವುದು ಸರಿಯಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಹೇಳಿದರು.

ಶುಕ್ರವಾರ ಮಸ್ಕಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಶ್ವರಪ್ಪ ಭಿನ್ನ ನಡೆ. ಯತ್ನಾಳ ಅವರದು ಇನ್ನೂ ವಿಭಿನ್ನ ನಡೆ' ಎಂದರು.

ಏ.8ರಿಂದ ಅರುಣ್ ಸಿಂಗ್ ರಾಜ್ಯ ಪ್ರವಾಸ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಷ್ಟ್ರೀಯ ಪ್ರಧಾನಿ ಕಾರ್ಯದರ್ಶಿ ಮತ್ತು ಕರ್ನಾಟಕದ ಉಸ್ತುವಾರಿ ಅರುಣ್ ಸಿಂಗ್ ಅವರು ಏಪ್ರಿಲ್ 8ರಂದು ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ.

ಏಪ್ರಿಲ್ 8ರಿಂದ 10ರವರೆಗೆ ಅರುಣ್ ಸಿಂಗ್ ರಾಜ್ಯ ಪ್ರವಾಸ ಕೈಗೊಳ್ಳಲಿದ್ದಾರೆ. ಉಪಚುನಾವಣೆ ಪ್ರಚಾರ ಕೈಗೊಳ್ಳುವ ಉದ್ದೇಶದಿಂದ ಈ ಪ್ರವಾಸ ಕೈಗೊಂಡಿದ್ದರೂ ಸಚಿವ ಕೆ.ಎಸ್. ಈಶ್ವರಪ್ಪ ಅವರು ರಾಜ್ಯಪಾಲರಿಗೆ ಬರೆದಿರುವ ಪತ್ರದ ಕುರಿತು ಹಿರಿಯ ಮುಖಂಡರೊಂದಿಗೆ ಪ್ರಮುಖವಾಗಿ ಚರ್ಚಿಸುವ ಸಾಧ್ಯತೆ ಇದೆ.


ಅರುಣ್ ಸಿಂಗ್

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಸಚಿವ ಕೆ.ಎಸ್. ಈಶ್ವರಪ್ಪ ಅವರ ಜತೆ ಸಭೆ ನಡೆಸಿ ಸದ್ಯ ಸೃಷ್ಟಿಯಾಗಿರುವ ಬಿಕ್ಕಟ್ಟನ್ನು ಬಗೆಹರಿಸಲಿದ್ದಾರೆ. ಯಡಿಯೂರಪ್ಪ ಅವರ ನಿಷ್ಠಾವಂತ ಬೆಂಬಲಿಗರು ಆರಂಭಿಸಿರುವ ಸಹಿ ಸಂಗ್ರಹ ಸೇರಿದಂತೆ ಎಲ್ಲ ವಿವಾದಗಳಿಗೆ ಅರುಣ್ ಸಿಂಗ್ ಅಂತ್ಯ ಹಾಡಲಿದ್ದಾರೆ ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ.


ವಿದ್ಯಾರ್ಥಿಗಳನ್ನು ಪ್ರಕಾಶನಾಥ ಸ್ವಾಮೀಜಿ ಸನ್ಮಾನಿಸಿದರು

ವಿಟಿಯು ರ‍್ಯಾಂಕ್ ವಿಜೇತರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ದೇಶದ ಅಭಿವೃದ್ಧಿಯ ಗತಿ ತಂತ್ರಜ್ಞಾನದ ಮೇಲೆ ಅವಲಂಬಿತವಾಗಿರುತ್ತದೆ' ಎಂದು ಬಾಲಗಂಗಾಧರನಾಥ ಸ್ವಾಮಿ ಸಮೂಹ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ ಹೇಳಿದರು.

ಕೆಂಗೇರಿ ಬಳಿಯ ಎಸ್‌ಜೆಬಿಐಟಿ ಕಾಲೇಜಿನಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 2019-20ನೇ ಸಾಲಿನ ಪರೀಕ್ಷೆಯಲ್ಲಿ ಚಿನ್ನದ ಪದಕ ಹಾಗೂ ರ‍್ಯಾಂಕ್ ಗಳಿಸಿದ ಸಂಸ್ಥೆಯ ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ಸನ್ಮಾನಿಸಿ ಅವರು ಮಾತನಾಡಿದರು.

'ದೇಶದ ಬೆಳವಣಿಗೆಯಲ್ಲಿ ತಂತ್ರಜ್ಞಾನದ ಪಾತ್ರ ಗಮನಾರ್ಹ. ಹಲವಾರು ಸಣ್ಣ ರಾಷ್ಟ್ರಗಳು ತಂತ್ರಜ್ಞಾನ ಕ್ಷೇತ್ರದಲ್ಲಿ ಪಾರಮ್ಯ ಹೊಂದುವ ಮೂಲಕ ವಿಶ್ವದ ಸೂಪರ್ ಪವರ್ ದೇಶಗಳಾಗಿ ರೂಪುಗೊಂಡಿವೆ. ಈ ನಿಟ್ಟಿನಲ್ಲಿ ಎಸ್.ಜೆ.ಬಿ. ಶಿಕ್ಷಣ ಸಂಸ್ಥೆಯು ಅಂತರರಾಷ್ಟ್ರೀಯ ಗುಣಮಟ್ಟದ ಶಿಕ್ಷಣ ಒದಗಿಸಲು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಬದಲಾಗುತ್ತಿರುವ ಜಾಗತಿಕ ಬೇಡಿಕೆಗಳಿಗೆ ಅನುಗುಣವಾಗಿ ಶಿಕ್ಷಣ ನೀಡಲು ಸಜ್ಜುಗೊಂಡಿದೆ' ಎಂದು ತಿಳಿಸಿದರು.

ಎಸ್‌ಜೆಬಿಐಟಿ ಕಾಲೇಜಿನ ಬಿ.ಇ ವಿಭಾಗದಲ್ಲಿ 3ನೇ ರ‍್ಯಾಂಕ್ ಗಳಿಸಿದ ಆಶಾ ಆರ್., 4ನೇ ರ‍್ಯಾಂಕ್ ಗಳಿಸಿದ ಸುಕೃತ ಸಿ. ಬಸಪ್ಪ, 10ನೇ ರ‍್ಯಾಂಕ್ ಪಡೆದ ಶರ್ಮಿಳಾ ಕೆ.ಯು. ಹಾಗೂ 9ನೇ ರ‍್ಯಾಂಕ್ ಹಂಚಿಕೊಂಡ ಅಪರ್ಣಾ ಭಟ್ ಮತ್ತು ಕೃಪಾ ಬಿ.ಆರ್. ಅವರನ್ನು ಸನ್ಮಾನಿಸಲಾಯಿತು.

ಎಂ.ಟೆಕ್ ವಿಭಾಗದಲ್ಲಿ ವರ್ಷಾ ಎಸ್. ಗೌಡ ಮತ್ತು ಜಿ.ಎಸ್.ಮಾಣಿಕ್ಯ ಕ್ರಮವಾಗಿ 1ನೇ ರ‍್ಯಾಂಕ್ ಹಾಗೂ 10ನೇ ರ‍್ಯಾಂಕ್ ಪಡೆದಿದ್ದರೆ ಅಮೃತಾ ಜೆ.ಎನ್ ಹಾಗೂ ಲೇಖನಾ 5ನೇ ಸ್ಥಾನ ಪಡೆದಿದ್ದು, ಅವರನ್ನು ಸನ್ಮಾನಿಸಲಾಯಿತು.

ದಮ್ಮನಕಟ್ಟೆ ಸಫಾರಿ: ಪ್ರವೇಶ ದರ ಹೆಚ್ಚಳ

ಎಚ್.ಡಿ.ಕೋಟೆ: ನಾಗರಹೊಳೆ ರಾಷ್ಟ್ರೀಯ ಉದ್ಯಾನದ ದಮ್ಮನಕಟ್ಟೆ-(ಕಾಕನಕೋಟೆ) ಸಫಾರಿಯ ಪ್ರವೇಶ ದರದಲ್ಲಿ ₹100 ಹೆಚ್ಚಳವಾಗಿದೆ.

ಏ.1ರಿಂದಲೇ ಹೊಸ ದರ ಜಾರಿಗೆ ಬಂದಿದೆ. ರಜಾ ದಿನಗಳಲ್ಲಿ ₹ 450 (ಒಂದೂವರೆ ಗಂಟೆ) ಹಾಗೂ ಇತರ ದಿನಗಳಲ್ಲಿ ₹ 600 (ಮೂರು ಗಂಟೆಗೆ) ದರ ನಿಗದಿ ಮಾಡಲಾಗಿದೆ.

ಛಾಯಾಚಿತ್ರ ತೆಗೆಯುವವರಿಗೆ ಲೆನ್ಸ್ ಆಧಾರದಲ್ಲಿ ದರ ನಿಗದಿಪಡಿಸಲಾಗಿದೆ. ಡಿಎಸ್‌ಎಲ್‌ಆರ್ ಕ್ಯಾಮೆರಾ 70 ಎಂಎಂಗೆ ₹ 250, 70 ಎಂಎಂನಿಂದ 500 ಎಂಎಂವರೆಗೆ ₹750 ಹಾಗೂ 500 ಎಂಎಂ ಮೇಲ್ಪಟ್ಟ ಲೆನ್ಸ್‌ಗಳಿಗೆ ₹ 1,500 ದರವನ್ನು ನಿಗದಿಪಡಿಸಲಾಗಿದೆ.

ಲೆನ್ಸ್ ಆಧಾರದಲ್ಲಿ ದರ ನಿಗದಿ ಮಾಡಿರುವುದಕ್ಕೆ ವನ್ಯಜೀವಿ ಛಾಯಾಗ್ರಾಹಕರಿಂದ ವಿರೋಧ ವ್ಯಕ್ತವಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ನಾಗರಹೊಳೆ ರಾಷ್ಟ್ರೀಯ ಉದ್ಯಾನದ ನಿರ್ದೇಶಕ ಮಹೇಶ್‌ಕುಮಾರ್, 'ವಾಹನ ಚಾಲಕರ ವೇತನ, ವಾಹನಗಳ ನಿರ್ವಹಣೆ ಮತ್ತು ಅರಣ್ಯ ವ್ಯಾಪ್ತಿಯ ರಸ್ತೆಗಳ ನಿರ್ವಹಣೆ ವೆಚ್ಚ ಹೆಚ್ಚಾಗಿರುವುದರಿಂದ ಅನಿವಾರ್ಯವಾಗಿ ದರ ಹೆಚ್ಚಿಸಲಾಗಿದೆ' ಎಂದು ಅವರು ತಿಳಿಸಿದರು.

'ಬದಲಾದ ಕಾಲಘಟ್ಟದಲ್ಲಿ ಅನುವಾದ ಕ್ಷೇತ್ರ ವಿಸ್ತಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಕಾಲಘಟ್ಟದಲ್ಲಿ ಅನುವಾದ ಕ್ಷೇತ್ರವು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆ. ಹಾಗಾಗಿ, ಈ ಕ್ಷೇತ್ರದಲ್ಲಿ ಕೌಶಲ ವೃದ್ಧಿಸಿಕೊಂಡಲ್ಲಿ ಉತ್ತಮ ಅವಕಾಶಗಳಿವೆ' ಎಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ್ ಭಟ್ ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನವು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕನ್ನಡ ಅನುವಾದ ಕಮ್ಮಟಕ್ಕೆ ಚಾಲನೆ ನೀಡಿ ಮಾತನಾಡಿದರು.

'ಕನ್ನಡದ ಪ್ರಮುಖ ಕೃತಿಗಳನ್ನು ಬೇರೆ ಭಾಷೆಗಳಿಗೆ ಹಾಗೂ ಅನ್ಯ ಭಾಷೆಗಳ ಕೃತಿಗಳನ್ನು ಕನ್ನಡಕ್ಕೆ ತರುವ ಕೆಲಸಗಳು ಹೆಚ್ಚಾಗಿ ನಡೆಯುತ್ತಿದೆ. ಹೀಗಾಗಿ, ಅನುವಾದಕರಿಗೆ ಬೇಡಿಕೆ ಹೆಚ್ಚುತ್ತಿದೆ. ಅನುವಾದ ಮಾಡುವಾಗ ಮೂಲ ಕೃತಿಗೆ ಚ್ಯುತಿ ಬರದಂತೆ ಎಚ್ಚರ ವಹಿಸಬೇಕಾಗುತ್ತದೆ. ಹೀಗಾಗಿ, ಭಾಷೆಗಳ ಮೇಲೆ ಹಿಡಿತ ಇರುವ ಜತೆಗೆ ಅರ್ಥ ವ್ಯತ್ಯಾಸವಾಗದಂತೆ ನೋಡಿಕೊಳ್ಳಬೇಕು. ಆದ್ದರಿಂದ ಅನುವಾದಕರಾಗುವವರು ಬರವಣಿಗೆಯ ಕೌಶಲ ವೃದ್ಧಿಸಿಕೊಳ್ಳಬೇಕು. ಭಾಷೆಯ ಮೇಲೆ ಅಭಿಮಾನವಿದ್ದಾಗ ಮಾತ್ರ ಭಾಷಾಂತರ ಸಾಧ್ಯ. ಅನುವಾದ ಕ್ಷೇತ್ರದಲ್ಲಿ ವಿಪುಲ ಉದ್ಯೋಗಾವಕಾಶಗಳಿವೆ. ನಮ್ಮ ಪ್ರಾಧಿಕಾರದಿಂದ ಕೂಡ ಅನುವಾದಕರ ಗುಂಪನ್ನು ಸಿದ್ಧಪಡಿಸಲಾಗುತ್ತಿದೆ' ಎಂದು ಹೇಳಿದರು.

ಪ್ರತಿಷ್ಠಾನದ ಅಧ್ಯಕ್ಷ ಆರ್. ಲಕ್ಷ್ಮೀನಾರಾಯಣ ಮಾತನಾಡಿ, 'ಇದೇ ಮೊದಲ ಬಾರಿಗೆ ಅನುವಾದಕ್ಕೆ ಸಂಬಂಧಿಸಿದ ಕಮ್ಮಟವನ್ನು ಆಯೋಜಿಸಲಾಗುತ್ತಿದೆ. ಹಲವಾರು ಕಾರ್ಯಕ್ಷೇತ್ರಗಳಲ್ಲಿ ಅನುವಾದ ಪ್ರಕ್ರಿಯೆ ಪ್ರಾಮುಖ್ಯತೆ ಪಡೆದುಕೊಂಡಿದೆ. ಹಾಗಾಗಿ, ಯುವಜನತೆಯನ್ನು ಈ ಕ್ಷೇತ್ರದೆಡೆ ಕರೆತರುವ ಕೆಲಸವಾಗಬೇಕಿದೆ. ಅದೇ ರೀತಿ, ಇಲ್ಲಿನ ಸಾಹಿತ್ಯ ಕೃತಿಗಳನ್ನು ಬೇರೆ ಬೇರೆ ಭಾಷೆಗೆ ಪರಿಚಯಿಸಲು ಅನುವಾದ ಸಹಾಯಕ' ಎಂದು ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಪ್ರೊ. ಅಬ್ದುಲ್ ರಹಮಾನ್ ಪಾಷಾ, 'ಅನುವಾದಕರಿಗೆ ಭಾಷೆಯ ಮೇಲೆ ಹಿಡಿತ ಇರುವ ಜತೆಗೆ ಬರವಣಿಗೆ ಕೌಶಲ ಅಗತ್ಯ. ಸದ್ಯದ ಪರಿಸ್ಥಿತಿಯಲ್ಲಿ ಕೌಶಲ ಹೆಚ್ಚಿಸುವ ಕೆಲಸ ನಡೆಯಬೇಕು. ಈ ನಿಟ್ಟಿನಲ್ಲಿ ಮೂರು ದಿನಗಳ ಕಮ್ಮಟ ಹಮ್ಮಿಕೊಳ್ಳಲಾಗಿದೆ' ಎಂದು ವಿವರಿಸಿದರು.

ಮಾದಕ ವಸ್ತು ಪರೀಕ್ಷೆಗೆ ಪ್ರತ್ಯೇಕ ಪ್ರಯೋಗಾಲಯ ತೆರೆಯಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತುಗಳು ಮತ್ತು ನಿಷೇಧಿತ ಪದಾರ್ಥಗಳ ಪರೀಕ್ಷೆಗೆ ಪ್ರತ್ಯೇಕ ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ತೆರೆಯುವಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿರುವ ಹೈಕೋರ್ಟ್, ಎಲ್ಲ ಪೊಲೀಸ್ ಠಾಣೆಗಳಿಗೆ ಫೀಲ್ಡ್ ಟೆಸ್ಟ್ ಕಿಟ್ ನೀಡುವ ಸಂಬಂಧ ಗೃಹ ಇಲಾಖೆಯ ಮನವೊಲಿಸುವಂತೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ (ಎಸ್‌ಪಿಪಿ) ನಿರ್ದೇಶನ ನೀಡಿತು.

ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ(ಎನ್‌ಡಿಪಿಎಸ್) ಅಡಿಯಲ್ಲಿ ದಾಖಲಾಗಿದ್ದ ಪ್ರಕರಣದ ಆರೋಪಿ ಅರ್ಜುನ್ ದೀಪಕ್ ಮೆಹ್ತಾ ಸಲ್ಲಿಸಿದ್ದ ಜಾಮೀನು ಅರ್ಜಿ ವಜಾಗೊಳಿಸಿದ ಪೀಠ, ಈ ಆದೇಶ ಹೊರಡಿಸಿತು.

'ಅರ್ಜಿದಾರರ ವಿರುದ್ಧ ಪ್ರಕರಣ ದಾಖಲಿಸಿರುವ ಜೀವನ್‌ಬಿಮಾನಗರ ಪೊಲೀಸ್ ಠಾಣೆ ಪೊಲೀಸರು ನಿಷೇಧಿತ ವಸ್ತು ದೊರೆತಾಗ ಫೀಲ್ಡ್ ಟೆಸ್ಟ್ ನಡೆಸಿಲ್ಲ. ಎನ್‌ಸಿಬಿ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವಶಪಡಿಸಿಕೊಂಡ ವಸ್ತುಗಳನ್ನು 72 ಗಂಟೆಗಳಲ್ಲಿ ರಾಸಾಯನಿಕ ವಿಶ್ಲೇಷಣೆಗೆ ಕಳಹಿಸ ಬೇಕು ಮತ್ತು 15 ದಿನಗಳಲ್ಲಿ ವರದಿ ಪಡೆಯಬೇಕು. ಈ ಪ್ರಕರಣದಲ್ಲಿ ವರದಿ ಪಡೆದಿಲ್ಲ' ಎಂದು ಅರ್ಜಿದಾರರ ಪರ ವಕೀಲರು ವಾದಿಸಿದರು.



'ನಿಷೇಧಿತ ವಸ್ತುಗಳು ವಾಣಿಜ್ಯ ಪ್ರಮಾಣಕ್ಕಿಂತ ಹೆಚ್ಚಿಗೆ ಸಂಗ್ರಹವಾಗಿದೆ. ತನಿಖೆ ಇನ್ನೂ ಪ್ರಗತಿಯಲ್ಲಿದೆ. ಈ ಸಂದರ್ಭದಲ್ಲಿ ಜಾಮೀನು ನೀಡಲು ಆಗುವುದಿಲ್ಲ' ಎಂದು ಪೀಠ ಹೇಳಿತು.

'ಇಡೀ ರಾಜ್ಯದಲ್ಲಿ ಒಂದೇ ಒಂದು ವಿಧಿ ವಿಜ್ಞಾನ ಪ್ರಯೋಗಾಲಯ ಇರುವ ಕಾರಣ 15 ದಿನಗಳಲ್ಲಿ ವರದಿ ಪಡೆಯಲು ಆಗುತ್ತಿಲ್ಲ. ಮಾದಕ ವಸ್ತುಗಳ ಪರೀಕ್ಷೆಗಾಗಿಯೇ ಪ್ರತ್ಯೇಕ ಪ್ರಯೋಗಾಲಯ ತೆರೆಯುವ ಸಂಬಂಧ ಗೃಹ ಇಲಾಖೆಯ ಮನವೊಲಿಸಲು ಪ್ರಯತ್ನ ಮಾಡಬೇಕು' ಎಂದು ಪೀಠ ಎಸ್‌ಪಿಪಿಗೆ ತಿಳಿಸಿತು.

ಆದೇಶದ ಪ್ರತಿಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ರವಾನಿಸುವಂತೆ ನಿರ್ದೇಶನ ನೀಡಿತು.

ಕೋವಿಡ್: ಚಿಕಿತ್ಸೆಗಾಗಿ ಕೊರೊನಾ ಸೋಂಕಿತರು ಅಲೆದಾಟ • ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆ

ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆ ಸಮಸ್ಯೆ ಉಲ್ಬಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಹಾಗೂ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾತಿ ಹೆಚ್ಚಳವಾದ ಪರಿಣಾಮ ನಿಗದಿತ ಕೆಲ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆ ಸಮಸ್ಯೆ ತಲೆದೋರಿದೆ. ಇದರಿಂದಾಗಿ ಕೋವಿಡ್ ಪೀಡಿತರು ಆಸ್ಪತ್ರೆಗಳಿಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ಮತ್ತೆ ನಿರ್ಮಾಣವಾಗಿದೆ.

ಕಳೆದ ವರ್ಷ ಮಾ.8ರಂದು ಮೊದಲ ಪ್ರಕರಣ ವರದಿಯಾದ ಬಳಿಕ ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ, ಕೆ.ಸಿ. ಜನರಲ್ ಆಸ್ಪತ್ರೆ ಸೇರಿದಂತೆ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ನಿಗದಿಪಡಿಸಲಾಗಿತ್ತು. ಬಳಿಕ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿದ್ದಂತೆ ವಿಕ್ಟೋರಿಯಾ ಹಾಗೂ ಬೌರಿಂಗ್ ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗಿತ್ತು. ಜುಲೈ ಮೊದಲ ವಾರದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಏರಿಕೆಯತ್ತ ಮುಖಮಾಡಿದ್ದರಿಂದ ಕೋವಿಡ್ ಚಿಕಿತ್ಸೆಗೆ ಗುರುತಿಸಲಾದ ಸರ್ಕಾರಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಬಹುತೇಕ ಹಾಸಿಗೆಗಳು ಭರ್ತಿಯಾಗಿ, ರೋಗಿಗಳು ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಆ ವೇಳೆ ಸರ್ಕಾರವು ಖಾಸಗಿ ಆಸ್ಪತ್ರೆಗಳಿಗೆ ದರ ನಿಗದಿಪಡಿಸಿ, ಶೇ 50 ರಷ್ಟು ಹಾಸಿಗೆಗಳನ್ನು ಶಿಫಾರಸು ಮಾಡುವ ರೋಗಿಗಳಿಗೆ ಮೀಸಲಿಡುವಂತೆ ಆದೇಶ ಹೊರಡಿಸಿತ್ತು. ನಗರದಲ್ಲಿ 73 ಆಸ್ಪತ್ರೆಗಳಿಂದ 5 ಸಾವಿರಕ್ಕೂ ಅಧಿಕ ಹಾಸಿಗೆಗಳನ್ನು ಗುರುತಿಸಲಾಗಿತ್ತು.

> ಖಾಸಗಿ ಆಸ್ಪತ್ರೆಗಳಲ್ಲಿ ಅವಶ್ಯಕ್ಕನುಗುಣವಾಗಿ ಸರ್ಕಾರದ ನಿರ್ದೇಶನದಂತೆ ಹಾಸಿಗೆಗಳನ್ನು ಹಂತ ಹಂತವಾಗಿ ಹೆಚ್ಚಿಸಲಾಗುವುದು
> **ಗೌರವ್ ಗುಪ್ತ,** ಬಿಬಿಎಂಪಿ ಮುಖ್ಯ ಆಯುಕ್ತ

> ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹಾಸಿಗೆಗಳ ವಿವರ, ಇತರ ಮಾಹಿತಿಯನ್ನು ಬಿಬಿಎಂಪಿ ಪೋರ್ಟಲ್‌ನಲ್ಲಿ ಒದಗಿಸುವ ಕಾರ್ಯವನ್ನು ಪುನರಾರಂಭಿಸಲಾಗುವುದು
> **ರಾಕೇಶ್ ಸಿಂಗ್,** ಬಿಬಿಎಂಪಿ ಆಡಳಿತಾಧಿಕಾರಿ

ಪ್ರಕರಣಗಳ ಸಂಖ್ಯೆ ವರ್ಷಾಂತ್ಯಕ್ಕೆ ಇಳಿಕೆ ಕಂಡಿದ್ದರಿಂದ ಖಾಸಗಿ ಆಸ್ಪತ್ರೆಗಳಿಗೆ ಸೋಂಕಿತರನ್ನು ಶಿಫಾರಸು ಮಾಡುವುದನ್ನು ಕೈಬಿಡಲಾಗಿದೆ. ಇದರಿಂದಾಗಿ ಈಗ ಸರ್ಕಾರಿ ಆಸ್ಪತ್ರೆಗಳಲ್ಲಿ ಪುನಃ ಹಾಸಿಗೆಗಳ ಸಮಸ್ಯೆ ತಲೆದೋರಿದೆ. ಬಿಬಿಎಂಪಿಯು ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರಿಗೆ ಶೇ 10ರಷ್ಟು ಹಾಸಿಗೆಗಳನ್ನು ಮೀಸಲಿಡಬೇಕು ಎಂದು ಈಗಾಗಲೇ ಸೂಚಿಸಿದೆ. ಆದರೆ, ಶಿಫಾರಸು ಪ್ರಕ್ರಿಯೆ ಪ್ರಾರಂಭವಾಗಿಲ್ಲ. ಇದರಿಂದಾಗಿ ಚಿಕಿತ್ಸೆಗಾಗಿ ರೋಗಿಗಳು ಆಸ್ಪತ್ರೆಗಳನ್ನು ವಿಚಾರಿಸಲಾರಂಭಿಸಿದ್ದಾರೆ.

589 ಹಾಸಿಗೆ ಭರ್ತಿ: ನಗರದಲ್ಲಿ ಕೋವಿಡ್ ಪ್ರಕರಣಗಳು ಏರುಗತಿ ಪಡೆದಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 24,600ಕ್ಕೆ ತಲುಪಿದೆ. ಇವರಲ್ಲಿ 130 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ. ಸೋಂಕಿತರಲ್ಲಿ ಬಹುತೇಕರು ಮನೆ ಆರೈಕೆಗೆ ಒಳಗಾದರೂ, ಶೇ 19ರಷ್ಟು ಮಂದಿಯು ಸಮಸ್ಯೆ ಉಲ್ಬಣಗೊಂಡ ಕಾರಣ ಆಸ್ಪತ್ರೆಗಳ ಕಡೆಗೆ ಮುಖ ಮಾಡಲಾರಂಭಿಸಿದ್ದಾರೆ. ಸದ್ಯ ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಕೆ.ಸಿ. ಜನರಲ್, ಜಯನಗರ ಸಾರ್ವಜನಿಕ ಆಸ್ಪತ್ರೆ ಸೇರಿದಂತೆ 14 ಆಸ್ಪತ್ರೆಗಳಲ್ಲಿ 825 ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಮೀಸಲಿರಿಸಲಾಗಿದೆ. ಅವುಗಳಲ್ಲಿ 589 ಹಾಸಿಗೆಗಳು ಭರ್ತಿಯಾಗಿದ್ದು, 263 ಹಾಸಿಗೆಗಳು ಖಾಲಿಯಿವೆ. 67 ಐಸಿಯು ಹಾಸಿಗೆಗಳಲ್ಲಿ 39 ಹಾಸಿಗೆಗಳು ಹಂಚಿಕೆಯಾಗಿವೆ.

ವೈದ್ಯಕೀಯ ಶಿಕ್ಷಣ ಇಲಾಖೆಯಡಿ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಯನ್ನು ಗುರುತಿಸಲಾಗಿದೆ. ಈ ಆಸ್ಪತ್ರೆಗಳಿಂದ ಒಟ್ಟು 325 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಅವುಗಳಲ್ಲಿ 48 ಹಾಸಿಗೆಗಳು ಮಾತ್ರ ಖಾಲಿಯಿವೆ. ಅದೇ ರೀತಿ, ಹಜ್ ಭವನ ಮತ್ತು ಎಚ್‌ಎಎಲ್ ಕೋವಿಡ್ ಆರೈಕೆ ಕೇಂದ್ರಗಳಲ್ಲಿ 378 ಹಾಸಿಗೆಗಳನ್ನು ಸಿದ್ಧಪಡಿಸಲಾಗಿದ್ದು, 170 ಹಾಸಿಗೆಗಳು ಖಾಲಿಯಿವೆ. ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ಸಾರಿ ಕೇಂದ್ರ (ತೀವ್ರ ಉಸಿರಾಟದ ಸಮಸ್ಯೆ) ನಿರ್ಮಿಸಿ, 150 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಅಲ್ಲಿ ಒಂದು ವಾರದಿಂದ ಪ್ರತಿನಿತ್ಯ ಸರಾಸರಿ 30ರಿಂದ 40 ಮಂದಿಯನ್ನು ದಾಖಲಿಸಿಕೊಳ್ಳಲಾಗುತ್ತಿದೆ.

ಕೋವಿಡ್ ಚಿಕಿತ್ಸೆಗೆ ಮೀಸಲಿಟ್ಟ ಹಾಸಿಗೆಗಳ ವಿವರ

ಆಸ್ಪತ್ರೆಗಳು	ಒಟ್ಟು ಹಾಸಿಗೆಗಳು	ದಾಖಲಾಗಿರುವವರು	ಖಾಲಿ ಇರುವ ಹಾಸಿಗೆ
ಇಎಸ್‌ಐ ಆಸ್ಪತ್ರೆ ಪೀಣ್ಯ	10	03	07
ಇಎಸ್‌ಐ ಆಸ್ಪತ್ರೆ ಇಂದಿರಾನಗರ	75	70	05
ಇಎಸ್‌ಐ ಆಸ್ಪತ್ರೆ ರಾಜಾಜಿನಗರ	90	90	00
ಆನೇಕಲ್ ಸರ್ಕಾರಿ ಆಸ್ಪತ್ರೆ	45	00	45
ಜಯನಗರ ಸಾರ್ವಜನಿಕ ಆಸ್ಪತ್ರೆ	75	74	01
ಕೆ.ಆರ್. ಪುರ ಸಾರ್ವಜನಿಕ ಆಸ್ಪತ್ರೆ	27	18	09
ಯಲಹಂಕ ಸಾರ್ವಜನಿಕ ಆಸ್ಪತ್ರೆ	33	30	03
ಎಚ್‌ಎಸ್‌ಐಎಸ್ ಘೋಶ್ ಆಸ್ಪತ್ರೆ	40	18	22
ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ	151	101	50
ದೇವನಹಳ್ಳಿ ತಾಲ್ಲೂಕು ಆಸ್ಪತ್ರೆ	52	13	39
ಹೊಸಕೋಟೆ ತಾಲ್ಲೂಕು ಆಸ್ಪತ್ರೆ	30	26	04
ನೆಲಮಂಗಲ ತಾಲ್ಲೂಕು ಆಸ್ಪತ್ರೆ	33	07	26
ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ	160	114	46
ವಿಕ್ಟೋರಿಯಾ ಆಸ್ಪತ್ರೆ	165	163	02
ಹಜ್ ಭವನ (ಕೋವಿಡ್ ಆರೈಕೆ ಕೇಂದ್ರ)	200	120	80
ಎಚ್‌ಎಎಲ್ (ಕೋವಿಡ್ ಆರೈಕೆ ಕೇಂದ್ರ)	178	88	90


‘ರೋಗಿಗಳಿಗೆ ಚಿಕಿತ್ಸೆ ನೀಡಲು ಸಿದ್ಧ’


‘ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಕಾರಣ ಚಿಕಿತ್ಸೆಗೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲು ಸರ್ಕಾರ ಸೂಚಿಸಿದೆ. ಮೊದಲು ವೈದ್ಯಕೀಯ ಕಾಲೇಜುಗಳಲ್ಲಿ ವ್ಯವಸ್ಥೆ ಮಾಡಲಾಗುತ್ತದೆ. ಅಲ್ಲಿ ಕೂಡ ಹಾಸಿಗೆ ಭರ್ತಿಯಾದಲ್ಲಿ 200ಕ್ಕೂ ಅಧಿಕ ಹಾಸಿಗೆ ಒಳಗೊಂಡಿರುವ ಆಸ್ಪತ್ರೆಗಳನ್ನು ಗುರುತಿಸಿ, ಸೇವೆ ನೀಡಲಾಗುತ್ತದೆ. ಈ ಹಿಂದೆ ಕೋವಿಡ್ ಪ್ರಕರಣಗಳು ಏರಿಕೆ ಕಂಡಾಗ ಸರ್ಕಾರ ಶಿಫಾರಸು ಮಾಡಿದ ರೋಗಿಗಳಿಗೆ ಚಿಕಿತ್ಸೆ ಒದಗಿಸಲಾಗಿತ್ತು. ಈಗ ಕೂಡ ಚಿಕಿತ್ಸೆ ಒದಗಿಸಲು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದೇವೆ’ ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ವಿವರಿಸಿದರು.

‘ಆಸ್ಪತ್ರೆಗೆ ದಾಖಲಾಗುವ ಕೋವಿಡ್ ಪೀಡಿತರ ಸಂಖ್ಯೆ ಹೆಚ್ಚಳವಾಗುತ್ತಿದೆ. ಆಸ್ಪತ್ರೆಯಲ್ಲಿಯೇ ಅಗತ್ಯ ಊಟ–ತಿಂಡಿಯನ್ನು ಸೋಂಕಿತರಿಗೆ ನೀಡಲಾಗುತ್ತಿದೆ. ಮನೆಯ ಆಹಾರ ಇಚ್ಛಿಸಿದಲ್ಲಿ ಕುಟುಂಬದ ಸದಸ್ಯರು ಪಿಪಿಇ ಕಿಟ್ ಧರಿಸಿ, ವಾರ್ಡ್‌ಗಳಿಗೆ ಹೋಗಬೇಕಾಗುತ್ತದೆ’ ಎಂದು ಬೆಂಗಳೂರು ನಗರ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಅನ್ಸರ್ ಅಹಮದ್ ತಿಳಿಸಿದರು.

‘ಚಿಕಿತ್ಸೆ ಸರ್ಕಾರದ ಆದ್ಯತೆಯಾಗಲಿ’

‘ಕಳೆದ ವರ್ಷ ಕೋವಿಡ್ ಕಾಯಿಲೆ ಕಾಣಿಸಿಕೊಂಡ ಬಳಿಕ ಚಿಕಿತ್ಸೆಗಾಗಿ ಹಲವರು ಆಸ್ಪತ್ರೆಗಳಿಂದ ಆಸ್ಪತ್ರೆಗೆ ಅಲೆದಾಟ ನಡೆಸಿ, ಸಮಸ್ಯೆ ಎದುರಿಸಿದ್ದರು. ಈ ಕಾಯಿಲೆಯ ಬಗ್ಗೆ ಈಗಾಗಲೇ ಹಲವು ಪಾಠಗಳನ್ನು ಕಲಿಯಬೇಕಾಗಿತ್ತು. ಆದರೆ, ಸರ್ಕಾರವು ಕೋವಿಡ್ ಎರಡನೇ ಅಲೆ ತಡೆಯುವ ಬಗ್ಗೆ ಗಮನ ನೀಡಿದಂತೆ ಕಾಣುತ್ತಿಲ್ಲ. ಕೋವಿಡ್ ಪ್ರಕರಣಗಳು ಏರಿಕೆ ಕಾಣುತ್ತಿರುವುದರಿಂದ ಈಗ ಸೋಂಕಿತರಿಗೆ ಹಾಸಿಗೆಗಳ ಸಮಸ್ಯೆ ಉಂಟಾಗಿದೆ. ಕೆಲ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆಯಿಂದ ಸೂಕ್ತ ಚಿಕಿತ್ಸೆ ದೊರೆಯುತ್ತಿಲ್ಲ. ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸು ಮಾಡುವ ವ್ಯವಸ್ಥೆ ಕೂಡ ಇಲ್ಲ. ಎಲ್ಲ ಕೈಮೀರಿ ಹೋದಮೇಲೆ ಲಾಕ್‌ಡೌನ್ ಮಾಡುವ ಬದಲು, ಅನುಭವದ ಆಧಾರದ ಮೇಲೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ವಿಮಲಾ ಕೆ.ಎಸ್. ಒತ್ತಾಯಿಸಿದರು.





ಅಪಾರ್ಟ್‌ಮೆಂಟ್ ತಲುಪಿದ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಲ ಖಾಸಗಿ ಆಸ್ಪತ್ರೆಗಳು ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿಯೇ ತಾತ್ಕಾಲಿಕ ಆರೋಗ್ಯ ಉಪ ಕೇಂದ್ರಗಳನ್ನು ನಿರ್ಮಿಸಿ, ಹಿರಿಯ ನಾಗರಿಕರು ಸೇರಿದಂತೆ ಫಲಾನುಭವಿಗಳಿಗೆ ಲಸಿಕೆ ವಿತರಿಸಲಾರಂಭಿಸಿವೆ.

ಕೋವಿಡ್ ಪ್ರಕರಣಗಳು ಏರಿಕೆ ಕಾಣುತ್ತಿರುವ ಕಾರಣ ಲಸಿಕೆ ವಿತರಣೆ ಹೆಚ್ಚಿಸಲು ನಿರ್ಧರಿಸಿದ ಸರ್ಕಾರ, ವೃದ್ಧಾಶ್ರಮಗಳು, ಅಪಾರ್ಟ್‌ಮೆಂಟ್ ಸಮುಚ್ಚಯ ಸೇರಿದಂತೆ ವಿವಿಧೆಡೆ ಲಸಿಕೆ ವಿತರಣೆಗೆ ಅವಕಾಶ ನೀಡುವಂತೆ ಕೇಂದ್ರ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರಿಗೆ ಮನವಿ ಸಲ್ಲಿಸಿತ್ತು. ಆದರೆ, ಈ ಮನವಿ ತಿರಸ್ಕರಿಸಿ, ಆರೋಗ್ಯ ಉಪ ಕೇಂದ್ರಗಳಲ್ಲಿ ಲಸಿಕೆ ವಿತರಣೆಗೆ ಅವಕಾಶ ನೀಡಲಾಗಿತ್ತು. ಅದರ ಅನುಸಾರ ಈಗ ಖಾಸಗಿ ಆಸ್ಪತ್ರೆಗಳು ಆರೋಗ್ಯ ಉಪ ಕೇಂದ್ರಗಳನ್ನು ನಿರ್ಮಿಸಿ, ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಿಕೊಳ್ಳುತ್ತಿವೆ. ಜೆ.ಪಿ.ನಗರದಲ್ಲಿರುವ ಬ್ರಿಗೇಡ್ ಮಿಲೇನಿಯಮ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಬ್ಲಾಸಮ್ಸ್ ಆಸ್ಪತ್ರೆಯು ನಿರ್ಮಿಸಿದ ಆರೋಗ್ಯ ಉಪ ಕೇಂದ್ರದಲ್ಲಿ ಶುಕ್ರವಾರ ಲಸಿಕೆ ವಿತರಣೆ ನಡೆಯಿತು. ಅಲ್ಲಿ 140 ಮಂದಿ ಲಸಿಕೆ ಪಡೆದುಕೊಂಡರು.

ಕೇಂದ್ರ ಸರ್ಕಾರದ ನಿಯಮದ ಪ್ರಕಾರ ಖಾಸಗಿ ಆಸ್ಪತ್ರೆಗಳು ಪ್ರತಿ ಡೋಸ್‌ಗೆ ₹ 250 ಮಾತ್ರ ಪಡೆಯಬೇಕು. ಹೆಚ್ಚುವರಿ ಶುಲ್ಕ ವಿಧಿಸುವಂತಿಲ್ಲ. ಇದನ್ನು ಖಾಸಗಿ ಆಸ್ಪತ್ರೆಗಳು ಸ್ವಾಗತಿಸಿವೆ.

‘ಕೋವಿಡ್ ಲಸಿಕೆ ವಿತರಣೆ ಸಂಬಂಧ 29 ಅಪಾರ್ಟ್‌ಮೆಂಟ್ ಸಮುಚ್ಚಯದಿಂದ ಮನವಿಗಳು ಬಂದಿವೆ. ಆ ಸ್ಥಳಗಳನ್ನು ಆರೋಗ್ಯ ಉಪ ಕೇಂದ್ರಗಳು ಎಂದು ಬಿಬಿಎಂಪಿ ಪರಿಗಣಿಸಿ, ಅನುಮತಿ ನೀಡಬೇಕಿದೆ. ಮಾ.31ರಂದು ಬಿಬಿಎಂಪಿ ಆಯುಕ್ತರು ಈ ಬಗ್ಗೆ ಸಭೆ ನಡೆಸಿದ್ದಾರೆ. ನಾವು ಅಪಾರ್ಟ್ ಸಮುಚ್ಚಯದ ಮಾಹಿತಿ, ಅಲ್ಲಿನ ನಿವಾಸಿಗಳ ವಿವರ, ಲಸಿಕೆ ವಿತರಣೆ ಸೇರಿದಂತೆ ವಿವಿಧ ಮಾಹಿತಿಗಳನ್ನು ಪಾಲಿಕೆಗೆ ಒದಗಿಸಬೇಕಿದೆ’ ಎಂದು ಅಪೋಲೊ ಆಸ್ಪತ್ರೆಗಳ ಶಾಖೆಯೊಂದರ ವ್ಯವಸ್ಥಾಪಕರು ತಿಳಿಸಿದರು.

ಬ್ರಿಗೇಡ್ ಮಿಲೇನಿಯಮ್ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿ ಗಾಯತ್ರಿ ಗೋಪಾಲಕೃಷ್ಣನ್, ‘ಖಾಸಗಿ ಆಸ್ಪತ್ರೆಗಳ ಜತೆಗೆ ಒಪ್ಪಂದ ಮಾಡಿಕೊಂಡು ಲಸಿಕೆ ಪಡೆಯಲು ಬಿಬಿಎಂಪಿ ಅವಕಾಶ ನೀಡಿದೆ. ಬೊಮ್ಮನಹಳ್ಳಿ ಆರೋಗ್ಯಾಧಿಕಾರಿಯನ್ನು ಸಂಪರ್ಕಿಸಿ, ಬ್ಲಾಸಮ್ಸ್ ಆಸ್ಪತ್ರೆಯ ನೆರವಿನಿಂದ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿಯೇ ಲಸಿಕೆ ಪಡೆದುಕೊಂಡಿದ್ದೇವೆ’ ಎಂದು ತಿಳಿಸಿದರು.

1.26 ಲಕ್ಷ ಮಂದಿಗೆ ಲಸಿಕೆ

ರಾಜ್ಯದಲ್ಲಿ ಶುಕ್ರವಾರ 45 ರಿಂದ 60 ವರ್ಷದೊಳಗಿನ 68,100 ಮಂದಿ ಸೇರಿದಂತೆ 1.26 ಲಕ್ಷ ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ. 3,841 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ನಡೆದಿದೆ. ರಾಜ್ಯದಲ್ಲಿ ಈವರೆಗೆ 40.73 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 5.65 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 3.46 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ.

60 ವರ್ಷ ಮೇಲ್ಪಟ್ಟವರಲ್ಲಿ ಲಸಿಕೆ ಹಾಕಿಸಿಕೊಂಡವರ ಸಂಖ್ಯೆ 20.65 ಲಕ್ಷ ತಲುಪಿದೆ. ಅವರಲ್ಲಿ 6,626 ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. ಮುಂಚೂಣಿ ಕೋವಿಡ್ ಯೋಧರಲ್ಲಿ 2.41 ಲಕ್ಷ ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ.

ಕೋವಿಡ್ ವಾರ್ ರೂಂ ಪ್ರಕ್ರಿಯೆ ಪರಿಶೀಲಿಸಿದ ಮುಖ್ಯ ಆಯುಕ್ತ

ಸಂಪರ್ಕ ಪತ್ತೆ ಪ್ರಕ್ರಿಯೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುತ್ತಿದ್ದು, ಸೋಂಕಿತರ ಸಂಪರ್ಕ ಪತ್ತೆ ಕಾರ್ಯವನ್ನು ಇನ್ನಷ್ಟು ಸದೃಢ ಮತ್ತು ಚುರುಕುಗೊಳಿಸಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಹಲಸೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ‘ಪಾಲಿಕೆ ವ್ಯಾಪ್ತಿಯಲ್ಲಿ 60,000 ಕೋವಿಡ್ ಪರೀಕ್ಷೆಗಳನ್ನು ಮಾಡಲಾಗುತ್ತಿದ್ದು, ಅದನ್ನು ಮತ್ತಷ್ಟು ಹೆಚ್ಚಳ ಮಾಡಲು ಕ್ರಮ ವಹಿಸಲಾಗುವುದು’ ಎಂದರು.

‘ಸೋಂಕು ಹೆಚ್ಚಳವಾಗುತ್ತಿರುವ ಪ್ರದೇಶದಲ್ಲಿ ಹೆಚ್ಚು ಪರೀಕ್ಷೆಗಳನ್ನು ಮಾಡಬೇಕು’ ಎಂದು ಹೇಳಿದರು.

ನಿತ್ಯ 35 ಸಾವಿರ ಲಸಿಕೆ: ‘ನಗರದಲ್ಲಿ ಪ್ರತಿನಿತ್ಯ ಸುಮಾರು 35,000 ಮಂದಿ ಲಸಿಕೆ ಪಡೆಯುತ್ತಿದ್ದಾರೆ. ಅದನ್ನು ಮತ್ತಷ್ಟು ಹೆಚ್ಚಳ ಮಾಡಲು ಕ್ರಮವಹಿಸಲಾಗುತ್ತಿದೆ’ ಎಂದರು.

‘ಅಪಾರ್ಟ್‌ಮೆಂಟ್‌ಗಳಲ್ಲಿರುವ, ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಎಲ್ಲರೂ ಲಸಿಕೆ ತೆಗೆದುಕೊಳ್ಳಬೇಕು’ ಎಂದರು.


ಹಲಸೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಗೌರವ್ ಗುಪ್ತ, ಅಧಿಕಾರಿಗಳಿಂದ ಮಾಹಿತಿ ಪಡೆದರು

ಪೂರ್ವ ವಲಯ ವಾರ್ ರೂಂಗೆ ಭೇಟಿ: ಪೂರ್ವ ವಲಯ ವ್ಯಾಪ್ತಿಗೆ ಸಂಬಂಧಿಸಿದಂತೆ ವಾರ್ ರೂಂಗೆ ಭೇಟಿ ನೀಡಿದ ಗೌರವ್ ಗುಪ್ತ, ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿರುವವರಿಗೆ ಕರೆ ಮಾಡಿ ಆರೋಗ್ಯ ವಿಚಾರಿಸಿಕೊಳ್ಳುವ ಪ್ರಕ್ರಿಯೆಯ ಪರಿಶೀಲನೆ ನಡೆಸಿದರು.

‘ಮನೆಗಳಲ್ಲಿಯೇ ಪ್ರತ್ಯೇಕವಾಗಿದ್ದುಕೊಂಡು ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ನಿತ್ಯ ಕರೆ ಮಾಡಿ ಅವರ ಆರೋಗ್ಯ ವಿಚಾರಿಸಿಕೊಳ್ಳಬೇಕು’ ಎಂದು ಸಿಬ್ಬಂದಿಗೆ ಸೂಚನೆ ನೀಡಿದರು.

ಇದೇ ವೇಳೆ, ಗೌರವ್ ಗುಪ್ತ ಅವರು ಕೋವಿಡ್ ಎರಡನೇ ಡೋಸ್ ಲಸಿಕೆ ಪಡೆದರು.

ವಿಶೇಷ ಆಯುಕ್ತ (ಆರೋಗ್ಯ) ರಾಜೇಂದ್ರ ಚೋಳನ್, ಜಂಟಿ ಆಯುಕ್ತರಾದ ಪಲ್ಲವಿ, ಮುಖ್ಯ ಆರೋಗ್ಯ ಅಧಿಕಾರಿ ಡಾ. ವಿಜೇಂದ್ರ, ವಲಯ ಆರೋಗ್ಯಾಧಿಕಾರಿ ಡಾ. ಸಿದ್ದಪ್ಪಾಜಿ ಇತರರು ಇದ್ದರು.

ಭೌತಿಕ ತರಗತಿ ಸ್ಥಗಿತ: ಖಾಸಗಿ ಶಾಲೆಗಳ ಅಸಮಾಧಾನ

ಬೆಂಗಳೂರು: 6ನೇ ತರಗತಿಯಿಂದ 9ರವರೆಗೆ ಭೌತಿಕ ತರಗತಿ ಸ್ಥಗಿತಗೊಳಿಸಿರುವ ರಾಜ್ಯ ಸರ್ಕಾರದ ನಿರ್ಧಾರದ ವಿರುದ್ಧ ಖಾಸಗಿ ಅನುದಾನರಹಿತ ಶಾಲೆಗಳ ಒಕ್ಕೂಟ ವಿರೋಧ ವ್ಯಕ್ತಪಡಿಸಿದೆ. ಪರೀಕ್ಷೆ ನಡೆಸಲಾದರೂ ಅವಕಾಶ ಕೊಡಿ ಎಂದು ಅದು ಕೋರಿದೆ.

‘ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಅತ್ಯಂತ ಸುರಕ್ಷಿತ ರೀತಿಯಲ್ಲಿ ಬೋಧನಾ ಕಾರ್ಯ ನಡೆಯುತ್ತಿದೆ. ಶಾಲೆಗಳಲ್ಲಿ ಸೋಂಕು ತೀವ್ರವಾಗಿ ಹರಡಿಲ್ಲ. ಈ ಸಂದರ್ಭದಲ್ಲಿ ಭೌತಿಕ ತರಗತಿ ಸ್ಥಗಿತಗೊಳಿಸಿರುವುದು ಸರಿಯಲ್ಲ’ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಹೇಳಿದ್ದಾರೆ. ‘ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಜೂನ್‌ನಿಂದಲೇ ಆನ್‌ಲೈನ್ ಬೋಧನೆ ಪ್ರಾರಂಭವಾಗಿದೆ. ಶೈಕ್ಷಣಿಕ ವರ್ಷದ ಪಠ್ಯಕ್ರಮ ಕೂಡ ಮುಗಿದಿದೆ. ಹಲವು ಶಾಲೆಗಳಲ್ಲಿ ಪುನರಾವರ್ತನೆ ಕಾರ್ಯವೂ ಮುಕ್ತಾಯಗೊಂಡಿದೆ. ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಭೌತಿಕ ಪರೀಕ್ಷೆ ನಡೆಸುವುದಕ್ಕಾದರೂ ಸರ್ಕಾರ ಅನುಮತಿ ನೀಡಬೇಕು’ ಎಂದು ಕೋರಿದ್ದಾರೆ.

‘ಕಳೆದ ವರ್ಷವೂ ಪರೀಕ್ಷೆ ಇಲ್ಲ. ಪರೀಕ್ಷೆ ಪ್ರಕ್ರಿಯೆ ಇನ್ನೇನು ಪ್ರಾರಂಭ ಮಾಡಬೇಕು ಎಂಬ ಹಂತದಲ್ಲಿ ತರಗತಿಗಳನ್ನು ಏಕಾಏಕಿ ಸ್ಥಗಿತಗೊಳಿಸಲಾಗಿದೆ. ಮಕ್ಕಳ ಮೌಲ್ಯಮಾಪನ ಪ್ರಕ್ರಿಯೆ ಸರಿಯಾಗಿ ಆಗದಿದ್ದರೆ ಶೈಕ್ಷಣಿಕ ಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದೇ ಕಾರ್ಖಾನೆಯ 10 ಜನರಿಗೆ ಸೋಂಕು

ಬೆಂಗಳೂರು: ದಾಸರಹಳ್ಳಿಯ ಪೀಣ್ಯ ಕೈಗಾರಿಕಾ ಪ್ರದೇಶದ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ 10 ಕಾರ್ಮಿಕರಿಗೆ ಶುಕ್ರವಾರ ಕೊರೊನಾ ಸೋಂಕು ದೃಢಪಟ್ಟಿದ್ದು, ಈ ಕಾರ್ಖಾನೆಯನ್ನು ಕ್ಲಸ್ಟರ್ ಎಂದು ಘೋಷಿಸಲಾಗಿದೆ.

ಈ ಕಾರ್ಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಲ್ಲ 250 ಕಾರ್ಮಿಕರನ್ನು ಕೊರೊನಾ ಸೋಂಕು ಪರೀಕ್ಷೆಗೆ ಒಳಪಡಿಸಲಾಗಿದೆ. ಸೋಂಕಿತರ ಸಂಪರ್ಕ ಪತ್ತೆ ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ ಎಂದು ಪಾಲಿಕೆಯ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

20 ಸಾವಿರ ಜನರಿಗೆ ಲಸಿಕೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ಶುಕ್ರವಾರ ಒಟ್ಟು 20,515 ಜನ ಲಸಿಕೆ ಪಡೆದುಕೊಂಡಿದ್ದು, ಈವರೆಗೆ ಒಟ್ಟು 7.63 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಂತಾಗಿದೆ. 45 ವರ್ಷ ಮೇಲ್ಪಟ್ಟವರಿಗೆ ಏ.1ರಿಂದ ಕೋವಿಡ್ ಲಸಿಕೆ ನೀಡಲಾಗುತ್ತಿದ್ದು, ಎರಡು ದಿನಗಳಲ್ಲಿ 35 ಸಾವಿರ ಜನ ಲಸಿಕೆ ಹಾಕಿಸಿಕೊಂಡಿದ್ದಾರೆ ಎಂದು ಬಿಬಿಎಂಪಿ ಹೇಳಿದೆ.

ವಸತಿ ಸಮುಚ್ಚಯಗಳಿಗೆ ಸ್ಪಷ್ಟ ಮಾರ್ಗಸೂಚಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ವಸತಿ ಸಮುಚ್ಚಯಗಳಲ್ಲಿ ಕೊರೊನಾ ಸೋಂಕು ತಡೆಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟವಾದ ಮಾರ್ಗಸೂಚಿ ನೀಡಬೇಕು. ಈ ಹಿಂದೆ ಮಾರ್ಗಸೂಚಿ ನೀಡಿದ ಮಾದರಿಯಲ್ಲೇ ಹೊಸ ಮಾರ್ಗಸೂಚಿಗಳನ್ನು ನೀಡಿದರೆ ನಿಯಮ ಪಾಲನೆಗೆ ಸಹಾಯವಾಗಲಿದೆ’ ಎಂದು ನಿವಾಸಿಗಳು ಕೋರಿದರು. ನಗರದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಸದಸ್ಯರ ಜೊತೆ ಶುಕ್ರವಾರ ವರ್ಚುವಲ್ ರೂಪದಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸಭೆ ನಡೆಸಿದ ವೇಳೆ, ‘ಅಪಾರ್ಟ್‌ಮೆಂಟ್‌ಗಳಲ್ಲಿ ಕ್ಲಸ್ಟರ್ ಮಾದರಿ ಅನುಸರಣೆ, ಯಾರೆಲ್ಲ ಕ್ವಾರಂಟೈನ್‌ಗೆ ಒಳಗಾಗಬೇಕು ಹಾಗೂ ಹೊಸ ಮಾರ್ಗಸೂಚಿ ಏನಿದೆ ಎನ್ನುವ ಬಗ್ಗೆ ಸ್ಪಷ್ಟ ಮಾಹಿತಿ ನೀಡಬೇಕು’ ಎಂದು ಮನವಿ ಮಾಡಿದರು. ‘ಈ ಬಗ್ಗೆ ಸ್ಪಷ್ಟ ಮಾರ್ಗಸೂಚಿಗಳನ್ನು ಶೀಘ್ರದಲ್ಲಿಯೇ ಹೊರಡಿಸಲಾಗುವುದು’ ಎಂದು ಗೌರವ್ ಗುಪ್ತ ಹೇಳಿದರು.

ನಿಯಮ ಪಾಲಿಸುತ್ತಿಲ್ಲ: ‘ಕೊರೊನಾ ಸೋಂಕು ದೃಢಪಟ್ಟವರ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕದಲ್ಲಿ ಇರುವವರು ಹೋಂ ಐಸೋಲೇಷನ್ ನಿಯಮ ಸರಿಯಾಗಿ ಪಾಲಿಸುತ್ತಿಲ್ಲ’ ಎಂದು ನಿವಾಸಿ ವಿದ್ಯಾ ಆರೋಪಿಸಿದರು.

‘ಸೋಂಕಿತರ ಸಂಪರ್ಕದಲ್ಲಿ ಇರುವವರು ಏಳು ದಿನ ಮನೆಯಲ್ಲಿಯೇ ಪ್ರತ್ಯೇಕವಾಗಿರಬೇಕು. ಆದರೆ, ಕೆಲವರು ಮೂರು ಅಥವಾ ನಾಲ್ಕು ದಿನಕ್ಕೆ ಪರೀಕ್ಷೆ ಮಾಡಿಸಿಕೊಂಡು ನೆಗೆಟಿವ್ ಇದೆ ಎಂದು ಹೇಳುತ್ತಿದ್ದಾರೆ’ ಎಂದೂ ದೂರಿದರು.

‘ಇಂತಹ ಪ್ರಕರಣಗಳ ಬಗ್ಗೆ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಾಹಿತಿ ನೀಡಿದರೆ ಅವರು ಕ್ರಮ ತೆಗೆದುಕೊಳ್ಳುತ್ತಾರೆ’ ಎಂದು ಪಾಲಿಕೆಯ ಮುಖ್ಯ ಆರೋಗ್ಯಾಧಿಕಾರಿ ಡಾ. ಬಿ.ಕೆ. ವಿಜಯೇಂದ್ರ ಪ್ರತಿಕ್ರಿಯಿಸಿದರು.

ಹೊರಗಿನವರಿಗೆ ಪರೀಕ್ಷೆ ಕಡ್ಡಾಯ

‘ನಗರದಲ್ಲಿ ಎರಡನೇ ಅಲೆ ಹೆಚ್ಚಾಗುತ್ತಿರುವ ಕಾರಣ ಕೊರೊನಾ ಸೋಂಕಿನ ಲಕ್ಷಣ ಇರುವವರು, ವಿದೇಶ ಮತ್ತು ಹೊರ ರಾಜ್ಯದಿಂದ ನಗರಕ್ಕೆ ಬರುವವರನ್ನು ಕಡ್ಡಾಯವಾಗಿ ಕೊರೊನಾ ಸೋಂಕು ಪರೀಕ್ಷೆಗೆ ಒಳಪಡಿಸಲು ಸೂಚನೆ ನೀಡಲಾಗಿದೆ. ಜನರು ಸಾಧ್ಯವಾದಷ್ಟು ಪ್ರವಾಸಗಳನ್ನು ಮುಂದೂಡಬೇಕು’ ಎಂದು ಮುಖ್ಯ ಆಯುಕ್ತರು ಹೇಳಿದರು.

ಹೋಟೆಲ್‌ಗಳಲ್ಲಿ ಶೇ 50ರಷ್ಟು ಆಸನ

ಬೆಂಗಳೂರು: ‘ಕೋವಿಡ್ ವ್ಯಾಪಕವಾಗಿ ಹರಡುತ್ತಿರುವುದರಿಂದ ಸರ್ಕಾರದ ಸೂಚನೆಯಂತೆ ಹೋಟೆಲ್‌ಗಳಲ್ಲಿ ಗ್ರಾಹಕರಿಗೆ ಶೇ 50ರಷ್ಟು ಮಾತ್ರ ಆಸನ ವ್ಯವಸ್ಥೆ ಇರಲಿದೆ’ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದ್ದಾರೆ.

‘ಕೋವಿಡ್ ಪರಿಸ್ಥಿತಿಯಿಂದ ಎಚ್ಚೆತ್ತು, ಒಂದು ವಾರದಿಂದಲೇ ಹೋಟೆಲ್‌ಗಳಲ್ಲಿ ಆಸನ ವ್ಯವಸ್ಥೆಯನ್ನು ಕಡಿಮೆ ಮಾಡಲಾಗಿದೆ. ಮಾಸ್ಕ್ ಧರಿಸುವುದು, ಸ್ಯಾನಿಟೈಸರ್ ಬಳಕೆ, ಅಂತರ ಕಾಯ್ದುಕೊಳ್ಳುವುದೂ ಸೇರಿದಂತೆ ಎಲ್ಲ ನಿಯಮಗಳನ್ನು ಪಾಲಿಸಲಾಗುತ್ತಿದೆ.’

‘ಇನ್ನು ಮುಂದೆ ಹೋಟೆಲ್‌ಗಳಲ್ಲಿ ಕಡಿಮೆ ಸಮಯ ಕುಳಿತು, ಉಳಿದ ಗ್ರಾಹಕರಿಗೂ ಅನುವು ಮಾಡಿಕೊಡಬೇಕು. ಸಾಧ್ಯವಾದಷ್ಟು ಹೋಟೆಲ್‌ಗಳಿಂದ ಪಾರ್ಸೆಲ್ ತೆಗೆದುಕೊಂಡು ಹೋಗುವುದು ಉತ್ತಮ. ಇದಕ್ಕೆ ಗ್ರಾಹಕರು ಸಹಕರಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಘೋಷಣೆ

‘ಜಿಲ್ಲೆಗಳಲ್ಲೂ ವಿಧಿ ವಿಜ್ಞಾನ ಪ್ರಯೋಗಾಲಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಸೈಬರ್ ಅಪರಾಧಗಳ ನಿಯಂತ್ರಣಕ್ಕೆ ಹೆಚ್ಚಿನ ಗಮನ ನೀಡಲಾಗಿದೆ. ರಾಜ್ಯದ ಪ್ರತಿ ಜಿಲ್ಲೆಯಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯ ಸ್ಥಾಪಿಸಲಾಗುವುದು’ ಎಂದು ಗೃಹಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಜ್ಯ ಪೊಲೀಸ್ ಇಲಾಖೆಯು ಕೋರಮಂಗಲದ ಕೆಎಸ್‌ಆರ್‌ಪಿ ಕವಾಯತು ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಹಾಗೂ ಮುಖ್ಯಮಂತ್ರಿ ಪದಕ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬ್ಯಾಂಕುಗಳಲ್ಲಿ ನಡೆಯುವ ವಂಚನೆಗಳನ್ನು ಆರ್‌ಬಿಐ ನೆರವಿನಿಂದ ಪತ್ತೆ ಮಾಡಿದ್ದೇವೆ. ಇತ್ತೀಚಿನ ವರ್ಷಗಳಲ್ಲಿ ರಾಜ್ಯದಲ್ಲಿದ್ದ ಮಾದಕ ವಸ್ತುಗಳ ಮಾರಾಟ ಜಾಲಗಳನ್ನು ಪತ್ತೆ ಹಚ್ಚಿ, ಡ್ರಗ್ಸ್ ವಿರುದ್ಧ ಸಮರ ಸಾರಿದ್ದೇವೆ. ರಾಜ್ಯ ಪೊಲೀಸರು ಹಲವಾರು ಪ್ರಕರಣಗಳಲ್ಲಿ ತಮ್ಮ ಕಾರ್ಯಗಳಿಂದ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಸಂಕೀರ್ಣ ಪ್ರಕರಣಗಳನ್ನು ಬಗೆಹರಿಸಿದ್ದಾರೆ’ ಎಂದು ಹೇಳಿದರು.

‘ಮಹಿಳೆಯರು ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಳ್ಳಬೇಕು. ಇದಕ್ಕಾಗಿ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ (ಕೆಎಸ್‌ಆರ್‌ಪಿ) ವತಿಯಿಂದ ಕಾಲೇಜು ವಿದ್ಯಾರ್ಥಿನಿಯರಿಗೆ ‘ಸೆಲ್ಫ್ ಡಿಫೆನ್ಸ್’ (ಸ್ವಯಂ ರಕ್ಷಣೆ) ತರಬೇತಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

‘ಅತ್ಯಂತ ಸಂಕೀರ್ಣ ಅಪರಾಧ ಪ್ರಕರಣಗಳ ತನಿಖೆ ವೇಳೆ ಹಲವರಿಂದ ಅಡೆತಡೆಗಳು ಬರುತ್ತವೆ. ಅವುಗಳನ್ನು ಮೆಟ್ಟಿನಿಂತು, ಪೊಲೀಸರು ನ್ಯಾಯ ಸಮ್ಮತವಾದ ತನಿಖೆ ಮೂಲಕ ಟೀಕೆ ಟಿಪ್ಪಣಿಗಳಿಗೆ ಉತ್ತರಿಸಬೇಕು’ ಎಂದರು.

ಕರ್ತವ್ಯದಲ್ಲಿ ಉತ್ತಮ ಸಾಧನೆಗೈದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಮುಖ್ಯಮಂತ್ರಿ ಪದಕ ಪ್ರದಾನ ಮಾಡಲಾಯಿತು.



ಮುಖ್ಯಮಂತ್ರಿ ಪದಕ ಸ್ವೀಕರಿಸಿದ ಸಂಭ್ರಮದಲ್ಲಿ ಮಹಿಳಾ ಪೊಲೀಸರು –ಪ್ರಜಾವಾಣಿ ಚಿತ್ರ

ಪೊಲೀಸರಿಗೆ 10,034 ವಸತಿ ಗೃಹ ನಿರ್ಮಾಣ

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ,‘ಪೊಲೀಸರ ಕ್ಷೇಮಾಭಿವೃದ್ಧಿ ಹಾಗೂ ಆಧುನೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ₹2 ಸಾವಿರ ಕೋಟಿ ವೆಚ್ಚದಲ್ಲಿ ಸುಸಜ್ಜಿತವಾದ 10,034 ವಸತಿ ಗೃಹಗಳನ್ನು ನಿರ್ಮಿಸಲಾಗುವುದು’ ಎಂದರು.

‘ಆರೋಗ್ಯ ಭಾಗ್ಯ’ ಯೋಜನೆಯಡಿ ಆರೋಗ್ಯ ಸೇವೆ ಪಡೆದಿದ್ದ ಪೊಲೀಸರ ₹110 ಕೋಟಿಯಷ್ಟು ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸಿದೆ. ಸ್ವಂತ ಕಟ್ಟಡವಿಲ್ಲದ ನೂರು ಠಾಣೆಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ₹200 ಕೋಟಿ ನೀಡಲಾಗುವುದು. ಕೊಡಗು, ಹಾವೇರಿಯಲ್ಲಿ ನೂತನ ಜಿಲ್ಲಾ ಪೊಲೀಸ್ ಸಂಕೀರ್ಣಗಳನ್ನು ನಿರ್ಮಾಣ ಮಾಡಲಾಗುವುದು’ ಎಂದರು.

‘ಎಸ್‌ಐಟಿ ತನಿಖೆ ಬಗ್ಗೆ ಟೀಕೆ ಬೇಡ’

‘ಸಿ.ಡಿ ಪ್ರಕರಣದಲ್ಲಿ ಎಸ್‌ಐಟಿ ಸ್ವತಂತ್ರವಾಗಿ ತನಿಖೆ ಮಾಡುತ್ತಿದ್ದು, ತಂಡದಲ್ಲಿ ಜವಾಬ್ದಾರಿಯುತ ಅಧಿಕಾರಿಗಳಿದ್ದಾರೆ. ಎಸ್‌ಐಟಿ ತನಿಖೆ ಬಗ್ಗೆ ಟೀಕೆ–ಟಿಪ್ಪಣಿಗಳ ಅಗತ್ಯವಿಲ್ಲ’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ತಿಳಿಸಿದರು. ‘ತನಿಖೆ ಮುಗಿದ ಬಳಿಕ ಟೀಕೆ ಮಾಡಲಿ. ಎಸ್‌ಐಟಿ ಅಧಿಕಾರಿಗಳು ಕಾನೂನಾತ್ಮಕವಾಗಿ ಕೆಲಸ ಮಾಡುತ್ತಿದ್ದಾರೆ. ಅದರ ಮಾಹಿತಿಯನ್ನು ಹೇಳುವ ಅಗತ್ಯವಿಲ್ಲ. ತನಿಖೆಯಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ’ ಎಂದರು.

ಎಸಿಬಿ ಎಸ್‌ಪಿ ದಿಢೀರ್ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳ ವಿರುದ್ಧದ ಹಲವು ಪ್ರಕರಣಗಳ ತನಿಖೆಯ ನೇತೃತ್ವ ವಹಿಸಿದ್ದ ಭ್ರಷ್ಟಾಚಾರ ನಿಗ್ರಹ ದಳದ(ಎಸಿಬಿ) ಬೆಂಗಳೂರು ನಗರ ಘಟಕದ ಎಸ್‌ಪಿ ಕುಲದೀಪ್ ಕುಮಾರ್ ಆರ್. ಜೈನ್ ಅವರನ್ನು ದಿಢೀರ್ ವರ್ಗಾವಣೆಗೊಳಿಸಿ ಗುರುವಾರ ಆದೇಶ ಹೊರಡಿಸಲಾಗಿದೆ. ಅವರಿಗೆ ಯಾವುದೇ ಹುದ್ದೆ ತೋರಿಸಿಲ್ಲ.

ಮೂರು ವರ್ಷಗಳ ಅವಧಿಗೆ ನಿಯೋಜನೆ ಮೇಲೆ ಬಂದಿರುವ ಕೇರಳ ವೃಂದದ 2011ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಯತೀಶ್ ಚಂದ್ರ ಜಿ.ಎಚ್. ಅವರನ್ನು ಕುಲದೀಪ್ ಕುಮಾರ್ ಜೈನ್ ಅವರ ಸ್ಥಾನಕ್ಕೆ ನೇಮಿಸಲಾಗಿದೆ. ಯತೀಶ್ ಚಂದ್ರ ದಾವಣಗೆರೆಯವರು. ಅವರ ಕೋರಿಕೆಯಂತೆ ಮೂರು ವರ್ಷಗಳ ಅವಧಿಗೆ ಅಂತರ ರಾಜ್ಯ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸಲು ಕೇಂದ್ರ ಸರ್ಕಾರ ಇತ್ತೀಚೆಗೆ ಒಪ್ಪಿಗೆ ನೀಡಿತ್ತು.

ಕೇರಳ ಸಶಸ್ತ್ರ ಪೊಲೀಸ್ ಪಡೆಯಲ್ಲಿ ಕರ್ತವ್ಯದಲ್ಲಿದ್ದ ಯತೀಶ್ ಚಂದ್ರ ಅವರನ್ನು ನಿಯೋಜನೆ ಮೇಲೆ ರಾಜ್ಯಕ್ಕೆ ಬರಲು ಸೇವೆಯಿಂದ ಬಿಡುಗಡೆ ಮಾಡಲಾಗಿತ್ತು. ರಾಜ್ಯ ಗೃಹ ಇಲಾಖೆಗೆ ಬಂದು ವರದಿ ಮಾಡಿಕೊಂಡಿದ್ದ ಅವರಿಗೆ ಎಸಿಬಿ ಎಸ್‌ಪಿ ಹುದ್ದೆ ನೀಡಲಾಗಿದೆ.

ಎಂಟು ತಿಂಗಳಲ್ಲೇ ವರ್ಗಾವಣೆ: 2011ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಕುಲದೀಪ್ ಕುಮಾರ್ ಜೈನ್ ಅವರನ್ನು ಎಂಟು ತಿಂಗಳ ಹಿಂದಷ್ಟೇ ಎಸಿಬಿ ಎಸ್‌ಪಿ ಹುದ್ದೆಗೆ ವರ್ಗಾವಣೆ ಮಾಡಲಾಗಿತ್ತು. ಸದ್ಯ ಎಸಿಬಿ ಬೆಂಗಳೂರು ನಗರ ಘಟಕದ ನೇತೃತ್ವ ವಹಿಸಿದ್ದ ಅವರು, ಹಲವು ಪ್ರಮುಖ ಪ್ರಕರಣಗಳ ತನಿಖೆಯ ಉಸ್ತುವಾರಿ ಹೊಂದಿದ್ದರು.

ಎರಡು ತಿಂಗಳಿನಿಂದ ಈಚೆಗೆ ಕುಲದೀಪ್ ಕುಮಾರ್ ನೇತೃತ್ವದಲ್ಲಿ ಎಸಿಬಿ ಹಲವು ಕಾರ್ಯಾಚರಣೆಗಳನ್ನು ನಡೆಸಿತ್ತು. ಬಿಬಿಎಂಪಿ ನಗರ ಯೋಜನಾ ವಿಭಾಗದ ಅಧಿಕಾರಿ ನಕಲಿ ಪ್ರಮಾಣಪತ್ರಗಳನ್ನು ವಿತರಣೆ ಮಾಡುತ್ತಿದ್ದುದು, ಬೆಂಗಳೂರು ಮಹಾನಗರ ಕಾರ್ಯಪಡೆ ಇನ್‌ಸ್ಪೆಕ್ಟರ್ ಬಿಲ್ಡರ್‌ಗಳನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದುದು ಸೇರಿದಂತೆ ದೊಡ್ಡ ಪ್ರಕರಣಗಳನ್ನು ಪತ್ತೆಹಚ್ಚುವ ಕಾರ್ಯಾಚರಣೆಗಳ ಮುಂಚೂಣಿಯಲ್ಲಿ ಕುಲದೀಪ್ ಕಾರ್ಯನಿರ್ವಹಿಸಿದ್ದರು.

ನಾರಾಯಣ್‌ಗೂ ಹುದ್ದೆಯಿಲ್ಲ

ನಗರದ ಪೂರ್ವ ಸಂಚಾರ ವಿಭಾಗದ ಡಿಸಿಪಿ ಹುದ್ದೆಯಲ್ಲಿರುವ ರಾಜ್ಯ ಪೊಲೀಸ್ ಸೇವೆಯ ಹಿರಿಯ ಅಧಿಕಾರಿ ಎಂ. ನಾರಾಯಣ್ ಅವರ ಸ್ಥಾನಕ್ಕೆ ಶಿವಮೊಗ್ಗ ಎಸ್‌ಪಿ ಕೆ.ಎಂ. ಶಾಂತರಾಜು ಅವರನ್ನು ವರ್ಗಾವಣೆ ಮಾಡಲಾಗಿದೆ. ನಾರಾಯಣ್ ಅವರಿಗೂ ಯಾವುದೇ ಹುದ್ದೆ ತೋರಿಸಿಲ್ಲ.

ಕಾರು ಮನೆಯಲ್ಲಿದ್ದರೂ ಫಾಸ್ಟ್ಯಾಗ್‌ನಲ್ಲಿ ಹಣ ಕಡಿತ

ದಾವಣಗೆರೆ: ಕಾರು ಮನೆಯಲ್ಲೇ ನಿಂತಿದ್ದರೂ ಫಾಸ್ಟ್ಯಾಗ್‌ನಿಂದ ಹಣ ಕಡಿತವಾಗಿದ್ದು, ಈ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಸಿಇಎನ್ ಠಾಣೆಗೆ ದೂರು ನೀಡಲಾಗಿದೆ ಎಂದು ವಕೀಲ ಎಸ್. ಪರಮೇಶ್ ಹೇಳಿದರು.

‘ಇನೋವಾ ಕಾರು ಮಾರ್ಚ್ 31ರ ರಾತ್ರಿ ನನ್ನ ಮನೆಯ ಕಾಂಪೌಂಡ್ ಒಳಗಡೆಯೇ ಇದೆ. ಆದರೆ ಹೆಬ್ಬಾಳ್ ಟೋಲ್‌ನಲ್ಲಿ ₹ 60, ಕುಲಮನಹಳ್ಳಿ ಟೋಲ್‌ನಲ್ಲಿ ₹ 15, ನವಯುಗ ಟೋಲ್‌ನಲ್ಲಿ ₹ 20 ಕಡಿತವಾಗಿದೆ. ಅಲ್ಲದೇ ಗುಯಿಲಾಳು ಟೋಲ್‌ನಲ್ಲಿ ₹ 70 ಹಾಗೂ ಕರ್ಜೀವನ ಟೋಲ್ ಪ್ಲಾಜಾದಲ್ಲಿ ₹ 85 ಕಡಿತವಾಗಿದೆ’ ಎಂದು ಆರೋಪಿಸಿದರು.

‘ಇದೇ ರೀತಿ ಮಾರ್ಚ್ 19 ಹಾಗೂ ಮಾರ್ಚ್ 23ರಂದು ಒಟ್ಟು 7 ಬಾರಿ ಹಣ ಕಡಿತಗೊಂಡಿದ್ದು, ಇದೊಂದು ವೈಟ್ ಕಾಲರ್ ಅಪರಾಧವಾಗಿದೆ. ವಿನಾಕಾರಣ ಹಣ ಕಡಿತಗೊಂಡಿರುವುದರ ಬಗ್ಗೆ ಕೋರ್ಟ್‌ನಲ್ಲಿ ಖಾಸಗಿ ದೂರು (ಪಿಸಿಆರ್) ಹಾಗೂ ಗ್ರಾಹಕ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿ ₹ 5 ಲಕ್ಷದವರೆಗೂ ಪರಿಹಾರ ಕೇಳಲಾಗುವುದು’ ಎಂದು ಎಚ್ಚರಿಸಿದರು.

Finance

NRI'S INVESTMENT And Finance Available On Low Interest Against, Properties, Land&Building,Sites, Flats, (Also)Business, Companies Call: 7411265189

Business to Business

Construction And Maintenance

CONSTRUCTION OF YOUR Dream House/ Villa- Renovation, Extension Floor Work etc with good Materials- 9353082981.

JOB OPPORTUNITIES

Engg/ Production Technical

CALIBRE UPS, Inverters & Batteries Near Yeshwanthpur Requires Male PUC/ITI/DIPLOMA Pass or Fail for Electrical/Electronics Technicians Post. Male/Female Office Assistant With Good Communication Contact-9845034531

Hospital & Medical Jobs

WANTED DUTY DOCTOR, NURSING STAFF. Contact: 9900520357/ 9844032989 CHAITANYA HOSPITAL No.80/117, P&T Colony, R.T.Nagar, Bangalore-32

Teachers/ Professors

LADY TEACHERS wanted for CBZ, Maths, English/ Social, Computer science. Contact in person with certificates. Camlin Middle/High school, 6th C main 4th cross, Hampinagar B'lore

PUBLIC NOTICE

PUBLIC NOTICE

My Client **M/s. S.S.K.SANGHA, No.2, S.S.K. Bhavan, Kashi Visveshwara Temple Street, Bangalore – 560 053,** intends to purchase below mentioned Schedule Property from ITS ABSOLUTE OWNER **SRI K.V. BHANU DAS, S/O. Late Kabadi Venkusa.**

If any person/s, Institution, Bank, Firm, etc., have got any objections for proposed purchase or having any right, claim, share, title and interest in the Schedule Property they may lodge their objections/ claims with the undersigned along with supporting documents within 15 days from this publication. If any objections/claims received thereafter will not be binding on or entertained by my Client and my Client will proceed to purchase the below mentioned Schedule Properties as if, there are no claims/objections.

“SCHEDULE PROPERTY”

ITEM NO. 1,
IMMOVABLE PROPERTY HAVING MUNICIPAL No.30, (formerly portion of old Municipal No. 30) PID No.31-3-30, situated at 1st Cross Road, ‘A’ Street, K.P. Agrahara, (Magadi Road), Bangalore, in Ward No.31 of Binnypet Sub-Division, having old building, on the site measuring East to West 30 Feet and North to South 70 Feet and bounded on as under:
EAST BY : Private Property
WEST BY : Property No.30/1
NORTH BY : Hospital Road
SOUTH BY : 18 Feet Road

ITEM NO. 2,
IMMOVABLE PROPERTY HAVING MUNICIPAL No.30/1, (formerly portion of Old Municipal No.30), PID No.31-3-30/1, situated at 1st Cross Road, ‘A’ Street, K.P. Agrahara, (Magadi Road), Bangalore, in Ward No.31 of Binnypet Sub-Division, having old and dilapidated building, on the site measuring East to West 20 Feet and North to South 70 Feet and bounded on as under:
EAST BY : Property No.30
WEST BY : 18 Feet Road
NORTH BY : Hospital Road
SOUTH BY : 18 Feet Road

Note: The combined measurement of the same is East to West 50 Feet and North to South 70 Feet

M.H. SOMANATH, Advocate, No.122, First Floor, Mahesh Market, Balepet, Bangalore - 560 053
Phone: 080 42150060
Cell: 9845066737

MORE Classifieds IN SUPPLEMENT

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology- 9880916988

Water Proofing

WE_FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

PROPERTY
To Place your Classified Ads Contact:
9880856233

REAL ESTATE BUYING

House

J P Nagar

WANTED 30X40 old house at JP nagar 1st, 2nd 3rd phase brokers excuse immediate settlement 9844270806

Sites

Arkavathy Layout

BDA SITES WANTED ARKAVATHI (1-22 Blocks), Kempegowda, Any BDA Layout. Genuine Customers Contact: SAPTHAGIRI. 9900268073, 9448068073.

PERSONAL

Change of Name

I, PRABHA residing No.25, 1st Cross, Temple Street, Jeevanahalli, Coxtown, Bengaluru-560005 have changed my name to VENKATARAMAN PRABHA vide affidavit dated 01/04/2021 sworn before notary K.C.Gowthami, Bengaluru.

I, BASAVARAJ Sinnur, aged about 52 years, S/o. Mr. Dasharath Gowda Sinnur, R/at No. 6, 'Ashirvad', 4th Cross, 3rd Stage, BEML Layout, R.R. Nagar, Bangalore-560098, have changed our daughter's name from NAMRATHA SINNUR to NAMRATHA B SINNUR vide affidavit dated 31-03-2021 sworn before notary Ambreshappa, Bengaluru

I, VENKATESHAPPA S/o. Late. Subbanna R/o. Bellikere (Vil), Muthsandra Post, (VIA) Varthur, Bengaluru- 560087 Have Changed My Name to B.S. VENKATACHALAIAH Vide Affidavit Dated: 13.03.2021 Before Notary S.N.Madhu, Bangalore-85.

BUSINESS

Business Offers

General

GOLDEN INVESTMENT Opportunity; Invest Rs.1-Lacs in our Water & Food products business & get Rs.365/- for 365 days. (Including your Principle+ Profit Share). Returns paid on daily basis from the next day of investment. Interested parties Call; 9739979946.

Agents Wanted

WANTED PROMOTERS Dealers Marketing Staff for Unique Healthy Consumer Products Contact: 9448041257

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ಮೊಬೈಲ್, ಇ–ಮೇಲ್ ಮೂಲಕ ಸಂಪರ್ಕಿಸಿ ವಂಚನೆ • ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್

ನಕಲಿ 'ಪರಿಶೀಲನಾ ಪ್ರಮಾಣ ಪತ್ರ' ಜಾಲ!

• ಸಂತೋಷ ಜಿಗಳಿಕೊಪ್ಪ

ಮುಖ್ಯಾಂಶಗಳು

- ಕೆಲಸ ಹುಡುಕುತ್ತಿರುವವರೇ ಗುರಿ
- ಹಣಕ್ಕೆ ನಕಲಿ ಪ್ರಮಾಣ ಪತ್ರ ಮಾರಾಟ
- ದೂರು ನೀಡಲು ಪೊಲೀಸರ ಮನವಿ

ಬೆಂಗಳೂರು: ಉದ್ಯೋಗಾಕಾಂಕ್ಷಿಗಳನ್ನು ಸಂಪರ್ಕಿಸಿ ಪೊಲೀಸ್ ನಕಲಿ 'ಪರಿಶೀಲನಾ ಪ್ರಮಾಣ ಪತ್ರ' ಮಾರಾಟ ಮಾಡುತ್ತಿರುವ ಜಾಲ ಸಕ್ರಿಯವಾಗಿದ್ದು, ಜಾಲದ ಕೃತ್ಯದಿಂದಾಗಿ ಹಲವು ಉದ್ಯೋಗಾಕಾಂಕ್ಷಿಗಳು ವಂಚನೆಗೀಡಾಗುತ್ತಿದ್ದಾರೆ.

ಜಾಲದ ಬಗ್ಗೆ ನಗರದ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಯೊಂದಕ್ಕೆ ದೂರು ನೀಡಿರುವ ಉದ್ಯೋಗಾಕಾಂಕ್ಷಿ, 'ಕೆಲಸ ಕೊಡಿಸುವುದಾಗಿ ಹೇಳಿ ನಂಬಿಸಿ ಹಣ ಪಡೆದಿದ್ದ ಆರೋಪಿ, ಪೊಲೀಸ್ ನಕಲಿ ಪರಿಶೀಲನಾ ಪ್ರಮಾಣ ಪತ್ರ ನೀಡಿ ವಂಚಿಸಿದ್ದಾನೆ' ಎಂದಿದ್ದಾರೆ. ನಕಲಿ ಪ್ರಮಾಣ ಪತ್ರವನ್ನೂ ದೂರಿನ ಜೊತೆ ಲಗತ್ತಿಸಿದ್ದಾರೆ.

ದೂರಿನಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ.

ಕೆಲಸದ ಆಮಿಷವೊಡ್ಡುವ ಜಾಲ: 'ಕೆಲಸಕ್ಕಾಗಿ ಹುಡುಕಾಟ ನಡೆಸುತ್ತಿದ್ದ ಉದ್ಯೋಗಾಕಾಂಕ್ಷಿ, ನೌಕರಿ ಡಾಟ್ ಕಾಮ್ ಜಾಲತಾಣದಲ್ಲಿ ರಿಸ್ಯುಮೆ ಅಪ್‌ಲೋಡ್ ಮಾಡಿದ್ದರು. ಅದರ ಮಾಹಿತಿ ತಿಳಿದುಕೊಂಡಿದ್ದ ಆರೋಪಿ, ಆಕಾಂಕ್ಷಿ ಮೊಬೈಲ್ ನಂಬರ್‌ಗೆ ಕರೆ ಮಾಡಿ ಕೆಲಸ ಕೊಡಿಸುವ ಆಮಿಷವೊಡ್ಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಾಫ್ಟ್‌ವೇರ್ ಕಂಪನಿಯೊಂದರ ನೇಮಕಾತಿ ಆದೇಶ ಕಳುಹಿಸಿದ್ದ ಆರೋಪಿ, ಕೆಲಸಕ್ಕೆ ಸೇರಬೇಕಾದರೆ ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ ಬೇಕೆಂದು ಹೇಳಿದ್ದ. ಹಣ ಕೊಟ್ಟರೆ, ತಾನೇ ಪ್ರಮಾಣ ಪತ್ರ ಮಾಡಿಸಿಕೊಡುವುದಾಗಿಯೂ ನಂಬಿಸಿದ್ದ.'

'ಆಕಾಂಕ್ಷಿಯಿಂದ ₹ 3,400 ಪಡೆದಿದ್ದ ಆರೋಪಿ, ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರವೊಂದನ್ನು ಕಳುಹಿಸಿದ್ದ. ಅದನ್ನು ಪಡೆದಿದ್ದ ಆಕಾಂಕ್ಷಿಯು ಪರಿಚಯಸ್ಥರಿಗೆ ತೋರಿಸಿದ್ದರು. ಮೇಲ್ನೋಟಕ್ಕೆ ಪ್ರಮಾಣ ಪತ್ರ ನಕಲಿ ಎಂಬುದು ಗೊತ್ತಾಗಿತ್ತು. ಆ ಬಗ್ಗೆ ವಿಚಾರಿಸುವಷ್ಟರಲ್ಲೇ ಆರೋಪಿ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾನೆ' ಎಂದೂ ಮೂಲಗಳು ಹೇಳಿವೆ.

'ಕೆಲ ಖಾಸಗಿ ಕಂಪನಿಗಳಲ್ಲಿ ಕೆಲಸ ಪಡೆದುಕೊಳ್ಳಲು ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ ಕಡ್ಡಾಯಗೊಳಿಸಲಾಗಿದೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಆರೋಪಿಗಳು, ಕೆಲಸ ಹುಡುಕುತ್ತಿರುವವರನ್ನೇ ಗುರಿಯಾಗಿಸಿಕೊಂಡು ಕೃತ್ಯ ಎಸಗುತ್ತಿದ್ದಾರೆ. ಪೊಲೀಸ್ ಮುದ್ರೆ ಹಾಗೂ ದಾಖಲೆಗಳನ್ನು ನಕಲಿಯಾಗಿ ಸೃಷ್ಟಿಸುತ್ತಿದ್ದಾರೆ. ಆರೋಪಿಗಳು ಹಲವರಿಗೆ ವಂಚಿಸಿರುವ ಮಾಹಿತಿ ಇದೆ. ಯಾರಾದರೂ ವಂಚನೆಗೀಡಾಗಿದ್ದರೆ, ಸಮೀಪದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಬಹುದು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಎಸಿಪಿ ಹೆಸರಿನಲ್ಲಿ ಸಹಿ'

'ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಈ ಹಿಂದೆ ಕೆಲಸ ಮಾಡಿದ್ದ ಸಹಾಯಕ ಪೊಲೀಸ್ ಕಮಿಷನರ್ (ಎಸಿಪಿ) ಹೆಸರು ಬಳಸಿಕೊಂಡು ನಕಲಿ ಪರಿಶೀಲನಾ ಪ್ರಮಾಣ ಪತ್ರ ಸೃಷ್ಟಿಸಲಾಗಿದೆ. ಪತ್ರ ನೋಡಿ ಅನುಮಾನಗೊಂಡಿದ್ದ ಉದ್ಯೋಗಾಕಾಂಕ್ಷಿ ದೂರು ನೀಡಿದ್ದಾರೆ' ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ 'ಪ್ರಜಾವಾಣಿ'ಗೆ ತಿಳಿಸಿದರು.

'ಪೊಲೀಸ್ ಪ್ರಮಾಣ ಪತ್ರದ ಹೆಸರಿನಲ್ಲಿ ವಂಚನೆ ಮಾಡುತ್ತಿರುವುದು ಗಂಭೀರ ಪ್ರಕರಣ. ಫೋಟೊಶಾಪ್ ಸಾಫ್ಟ್‌ವೇರ್‌ನಲ್ಲಿ ಪತ್ರ ಸಿದ್ಧಪಡಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆರೋಪಿ ತಲೆಮರೆಸಿಕೊಂಡಿದ್ದು, ಆತ ಸಿಕ್ಕ ಬಳಿಕವೇ ಮತ್ತಷ್ಟು ಮಾಹಿತಿ ಸಿಗಬೇಕು' ಎಂದೂ ಹೇಳಿದರು.

ಅಪರಾಧ ಸುದ್ದಿ

ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಶುಕ್ರವಾರ ಬೆಂಕಿ ಅವಘಡ ಸಂಭವಿಸಿದ್ದು, ಕಿರು ಅರಣ್ಯದಲ್ಲಿರುವ ಮರಗಳು ಸುಟ್ಟುಹೋಗಿವೆ.

ಸೂಕ್ಷ್ಮ ಜೀವ ವಿಜ್ಞಾನ ವಿಭಾಗ ಕಟ್ಟಡದ ಹಿಂಭಾಗದ ಅರಣ್ಯದಲ್ಲಿ ಬೆಳಿಗ್ಗೆ 9ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿ ನಂದಿಸಲು ವಿ.ವಿ ಸಿಬ್ಬಂದಿ ಯತ್ನಿಸಿದ್ದರು. ಆದರೆ, ಬೆಂಕಿ ನಿಯಂತ್ರಣಕ್ಕೆ ಬಂದಿರಲಿಲ್ಲ.

ನಿಮಿಷ ಕಳೆದಂತೆ ಬೆಂಕಿ ಕೆನ್ನಾಲಗೆ ಹೆಚ್ಚಾಗಿತ್ತು. ಗಾಂಧಿ ಭವನ, ಕಲ್ಯಾಣ ಮಂಟಪ ಹಿಂಭಾಗ, ಪರಿಸರ ಭವನದ ಬಳಿಯೂ ಬೆಂಕಿ ಆವರಿಸಿತ್ತು. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ 25 ಸಿಬ್ಬಂದಿ, ಬೆಂಕಿ ನಂದಿಸಲು ಆರು ಗಂಟೆ ಕಾರ್ಯಾಚರಣೆ ನಡೆಸಿದರು. ನಂತರವೇ ಬೆಂಕಿ ಹತೋಟಿಗೆ ಬಂದಿದೆ.

'ಶುಕ್ರವಾರ ರಜೆ ಇದ್ದಿದ್ದರಿಂದ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಓಡಾಟವಿರಲಿಲ್ಲ. ಹೀಗಾಗಿ, ಯಾವುದೇ ಪ್ರಾಣಹಾನಿಯಂಥ ಘಟನೆಗಳು ವರದಿಯಾಗಿಲ್ಲ' ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಹೇಳಿದರು.

'ಬೆಂಕಿ ಹೊತ್ತಿಕೊಳ್ಳಲು ನಿಖರ ಕಾರಣ ಗೊತ್ತಾಗಿಲ್ಲ. ಯಾರೋ ಕಿಡಿಗೇಡಿಗಳು ಇದರ ಹಿಂದಿರುವ ಅನುಮಾನವಿದೆ' ಎಂದೂ ಅವರು ಹೇಳಿದರು.

ಭಕ್ತರಿಗೆ ಆನ್‌ಲೈನ್ ವ್ಯವಸ್ಥೆ: ಪ್ರಾರ್ಥನೆಯಲ್ಲಿ ಭಾಗವಹಿಸಲು ಮಕ್ಕಳು, ವೃದ್ಧರಿಗೆ ಅವಕಾಶ ಇರಲಿಲ್ಲ

ಗುಡ್ ಫ್ರೈಡೇ ಆಚರಣೆ: ನಿಯಮ ಪಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೇಸುಕ್ರಿಸ್ತ ಶಿಲುಬೇರಿದ 'ಗುಡ್ ಫ್ರೈಡೇ' ದಿನವನ್ನು ನಗರದ ಚರ್ಚ್‌ಗಳಲ್ಲಿ ಶುಕ್ರವಾರ ಆಚರಿಸಲಾಯಿತು. ಕೋವಿಡ್ ಇರುವುದರಿಂದ ಚರ್ಚ್‌ಗಳಲ್ಲಿ ಎಲ್ಲ ರೀತಿಯ ಕೋವಿಡ್ ಸುರಕ್ಷತಾ ನಿಯಮಗಳ ಪಾಲನೆ ಕಡ್ಡಾಯವಾಗಿತ್ತು.

ಚರ್ಚ್‌ಗಳಲ್ಲಿ ಪ್ರಾರ್ಥನೆಗೆ ಹಾಜರಾಗುವವರಿಗೆ ಮಾಸ್ಕ್ ಧರಿಸುವುದು ಹಾಗೂ ಅಂತರ ಕಾಯ್ದುಕೊಳ್ಳಲು ಸೂಚಿಸಲಾಗಿತ್ತು. ಕೋವಿಡ್‌ನ ಹಿಂದಿನ ನಿಯಮದಂತೆ ಮಕ್ಕಳು ಹಾಗೂ ವೃದ್ಧರಿಗೆ ಪ್ರಾರ್ಥನೆಯಲ್ಲಿ ಭಾಗವಹಿಸಲು ಅವಕಾಶ ಇರಲಿಲ್ಲ. ಇವರಿಗಾಗಿ ಕೆಲವು ಚರ್ಚ್‌ಗಳಲ್ಲಿ ಆನ್‌ಲೈನ್ ವ್ಯವಸ್ಥೆಯೂ ಇತ್ತು.

ಶುಕ್ರವಾರ ಬೆಳಿಗ್ಗೆ 7.30ರಿಂದಲೇ ಆಚರಣೆಗಳು ಆರಂಭಗೊಂಡವು. ಎಂ.ಜಿ.ರಸ್ತೆಯ ಈಸ್ಟ್ ಪರೇಡ್ ಮಲಯಾಳಂ ಚರ್ಚ್‌ನಲ್ಲಿ 150 ಮಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿತ್ತು.

'ಕೋವಿಡ್ ಪರಿಸ್ಥಿತಿ ಇರುವ ಕಾರಣಕ್ಕೆ ಈ ಬಾರಿ ಆನ್‌ಲೈನ್ ಮೂಲಕವೇ ಗುಡ್‌ಫ್ರೈಡೇ ಕಾರ್ಯಕ್ರಮದಲ್ಲಿ ಭಾಗವಹಿಸಲು ಭಕ್ತರಿಗೆ ತಿಳಿಸಿದ್ದೆವು' ಎಂದು ಚರ್ಚ್‌ನ ಕಾರ್ಯದರ್ಶಿ ಫ್ರೇಮನ್ ಡಿ.ನೀನನ್ ತಿಳಿಸಿದರು.

ಚಾಮರಾಜಪೇಟೆಯ ಸೇಂಟ್ ಲೂಕ್ಸ್ ಚರ್ಚ್‌ನಲ್ಲೂ ಗುಡ್‌ಫ್ರೈಡೇ ಆಚರಣೆ ನಡೆಯಿತು. ಇಲ್ಲಿ ಭೌತಿಕವಾಗಿ ಕೆಲವೇ ಮಂದಿ ಭಕ್ತರಿಗೆ ಅವಕಾಶ ನೀಡಲಾಗಿತ್ತು. ಚರ್ಚ್‌ನ ವೆಬ್‌ಸೈಟ್, ಯೂಟ್ಯೂಬ್, ಫೇಸ್‌ಬುಕ್ ಹಾಗೂ ಟ್ವಿಟರ್‌ಗಳಲ್ಲಿ ಕಾರ್ಯಕ್ರಮದ ನೇರಪ್ರಸಾರ ವ್ಯವಸ್ಥೆ ಮಾಡಲಾಗಿತ್ತು. ಭಕ್ತರು ಮನೆಗಳಿಂದಲೇ ಆಚರಣೆಯಲ್ಲಿ ಪಾಲ್ಗೊಂಡರು.

'ಆಚರಣೆಗೆ ಕೇವಲ 200 ಮಂದಿಗೆ ಅವಕಾಶ ನೀಡಲಾಗಿತ್ತು. ಭಾನುವಾರದ ಈಸ್ಟರ್‌ನಲ್ಲಿ ಮೊದಲ ಸೇವೆಯಲ್ಲಿ ನಾಟಕ ಪ್ರದರ್ಶನಗೊಳ್ಳಲಿದೆ. ಇವೆಲ್ಲದರ ನೇರಪ್ರಸಾರ ವ್ಯವಸ್ಥೆ ಮಾಡಲಾಗಿದೆ' ಎಂದು ಎಂ.ಜಿ.ರಸ್ತೆಯ ಸೇಂಟ್ ಮಾರ್ಕ್ಸ್ ಕ್ಯಾಥೆಡ್ರಲ್ ಚರ್ಚ್‌ನ ರೆವರೆಂಡ್ ವಿನ್ಸೆಂಟ್ ವಿನೋದ್ ಕುಮಾರ್ ಮಾಹಿತಿ ನೀಡಿದರು.

'ಆಚರಣೆ ವೇಳೆ ಪ್ರತಿಮೆಗಳನ್ನು ಮುಟ್ಟಲು ಅಥವಾ ಚುಂಬಿಸಲು ಅನುಮತಿ ನೀಡಿಲ್ಲ. ಪ್ರತಿ ವರ್ಷ ಯೇಸು ಶಿಲುಬೆಯನ್ನು ಹೊತ್ತ ನಡಿಗೆಯನ್ನು ಸಾಂಕೇತಿಕವಾಗಿ ಚರ್ಚ್‌ನ ಹೊರಗೆ ನಡೆಸಲಾಗುತ್ತಿತ್ತು. ಆದರೆ, ಈ ಬಾರಿ ಚರ್ಚ್ ಒಳಭಾಗದಲ್ಲೇ ಹಮ್ಮಿಕೊಳ್ಳಲಾಗಿತ್ತು' ಎಂದು ಪಾದ್ರಿಯೊಬ್ಬರು ತಿಳಿಸಿದರು.

ಚರ್ಚ್‌ಗಳಲ್ಲಿ ಭಕ್ತರು ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರು. ಸೂಚನೆಯಂತೆ ಭೌತಿಕವಾಗಿ ಬದಲಾಗಿ ಆನ್‌ಲೈನ್ ಸೇವೆಗಳಲ್ಲಿ ಹಾಜರಾದರು. ಚರ್ಚ್‌ನ ಆವರಣಗಳಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳೆಲ್ಲವೂ ಈ ಬಾರಿ ಚರ್ಚ್‌ನ ಒಳಭಾಗದಲ್ಲಿ ಸರಳವಾಗಿ ನಡೆದವು. ಚರ್ಚ್‌ಗಳಲ್ಲಿ ಭಾನುವಾರ ನಡೆಯಲಿರುವ ಈಸ್ಟರ್ ವೇಳೆಯೂ ಭಕ್ತರಿಗೆ ನೇರಪ್ರಸಾರ ವ್ಯವಸ್ಥೆ ಮಾಡಲಾಗಿದೆ.



ಹಲಸೂರಿನ ಅವರ್ ಲೇಡಿ ಆಫ್ ಲೂರ್ಡ್ಸ್ ಚರ್ಚ್‌ನ ಆವರಣದಲ್ಲಿ ವೇಷಧಾರಿಗಳು ಯೇಸುಕ್ರಿಸ್ತನ ಶಿಲುಬೇರಿಸುವಿಕೆಯ ಸನ್ನಿವೇಶವನ್ನು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಕಾನ್‌ಸ್ಟೆಬಲ್ ಆಗಲು ಹೊರಟಿದ್ದವ ಜೈಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿ ದೈಹಿಕ ಪರೀಕ್ಷೆಗೆ ನಕಲಿ ಅಭ್ಯರ್ಥಿಯನ್ನು ಕಳುಹಿಸಿದ್ದ ಅಸಲಿ ಅಭ್ಯರ್ಥಿ ಯಾಸೀನ್ ಅಬ್ದುಲ್ ಕರಿಸಾಬ್ (25) ಅವರನ್ನು ಆಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.


'ಅಥಣಿ ತಾಲ್ಲೂಕಿನ ಸಪ್ತಸಾಗರ ಗ್ರಾಮದ ಯಾಸೀನ್, ತಮ್ಮ ಸ್ನೇಹಿತ ಸಚಿನ್ ಗುಗ್ಗರೆ ಅವರನ್ನು 2020ರ ನವೆಂಬರ್ 19ರಂದು ದೈಹಿಕ ಪರೀಕ್ಷೆಗೆ ಕಳುಹಿಸಿದ್ದರು. ಸಚಿನ್ ಪರೀಕ್ಷೆಯಲ್ಲಿ ಉತ್ತೀರ್ಣವಾಗಿದ್ದರು. ಕಾನ್‌ಸ್ಟೆಬಲ್ ಹುದ್ದೆಗೆ ಯಾಸೀನ್ ಅರ್ಹತೆ ಗಿಟ್ಟಿಸಿಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾನ್‌ಸ್ಟೆಬಲ್ ಹುದ್ದೆಗೆ ಅರ್ಹತೆ ಪಡೆದವರ ದಾಖಲೆಗಳ ಪರಿಶೀಲನೆ ಇತ್ತೀಚೆಗೆ ನಡೆದಿತ್ತು. ಅದೇ ಸಂದರ್ಭದಲ್ಲಿ ಅಭ್ಯರ್ಥಿ ಯಾಸೀನ್ ಮೇಲೆ ಅಧಿಕಾರಿಗಳಿಗೆ ಅನುಮಾನ ಬಂದಿತ್ತು. ಲಿಖಿತ ಹಾಗೂ ದೈಹಿಕ ಪರೀಕ್ಷೆ ವಿಡಿಯೊಗಳನ್ನು ಪರಿಶೀಲಿಸಿದಾಗ ನಕಲಿ ಅಭ್ಯರ್ಥಿ ಅಕ್ರಮ ಬಯಲಾಯಿತು' ಎಂದೂ ತಿಳಿಸಿವೆ.

'ಆರೋಪಿ ಯಾಸೀನ್ ನ್ಯಾಯಾಂಗ ಬಂಧನದಲ್ಲಿದ್ದಾರೆ. ನಕಲಿ ಅಭ್ಯರ್ಥಿ ಸಚಿನ್ ತಲೆಮರೆಸಿಕೊಂಡಿದ್ದಾರೆ' ಎಂದೂ ಹೇಳಿವೆ.

ನಗರದಲ್ಲಿ ಇಂದು

'ಬೆಂಗಳೂರಿನ ನಿರೀಕ್ಷೆಗಳು ಮತ್ತು ಬಿಬಿಎಂಪಿ ಬಜೆಟ್ ಭರವಸೆಗಳು' ಕುರಿತು ಸಂವಾದ: ಚಾಲನೆ– ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಘಟಕದ ಅಧ್ಯಕ್ಷ ಎಂ.ವೆಂಕಟಸ್ವಾಮಿ, ಮಾತನಾಡುವವರು– ಸಾಯಿ ಪ್ರಕಾಶ್, ವೈ.ಮರಿಸ್ವಾಮಿ, ಎಂ.ಲಗುಮಯ್ಯ, ಅಧ್ಯಕ್ಷತೆ– ಪಿಳ್ಳರಾಜು ಬೋಸಪ್ಪ, ಅತಿಥಿಗಳು– ಅಬ್ದುಲ್ ವಾಜಿದ್, ಮಂಜುಳಾ ನಾರಾಯಣಸ್ವಾಮಿ, ಆರ್.ಜಿ.ಮೋಹನ್, ಆಯೋಜನೆ–ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಸ್ಥಳ–ಮರಾಠ ಮಹಾಮಂಡಳ ಸಭಾಂಗಣ (ಕುಟೀರ), ಗಾಂಧಿನಗರ, ಬೆಳಿಗ್ಗೆ 11.30



ಎಂ.ವೆಂಕಟಸ್ವಾಮಿ

'ವಿಶ್ವ ಆರೋಗ್ಯ ದಿನ'ದ ಅಂಗವಾಗಿ ಕೋವಿಡ್ ಎರಡನೇ ಅಲೆ, ಲಸಿಕೆ ಕುರಿತು 'ಕಲೆಕ್ಟಿವ್ ವೆಲ್ ಬೀಯಿಂಗ್' ವಿಚಾರ ಸಂಕಿರಣ: ಅಧ್ಯಕ್ಷತೆ– ಶ್ವಾಸಕೋಶಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಸತ್ಯನಾರಾಯಣ ಮೈಸೂರು, ಮಾತನಾಡುವವರು– ಬೆಂಗಳೂರು ಅಪಾರ್ಟ್‌ಮೆಂಟ್ಸ್ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ವಿಕ್ರಮ್ ರೈ, 'ಐ ಚೇಂಜ್ ಇಂದಿರಾನಗರ'ದ ಕೋವಿಡ್ ಉಸ್ತುವಾರಿ ಸತೀಶ್ ರಾವ್, ಮಣಿಪಾಲ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈ.ಲಿ.ನ ಪ್ರಾದೇಶಿಕ ಮುಖ್ಯ ಕಾರ್ಯಾಚರಣೆ ಅಧಿಕಾರಿ ದೀಪಕ್ ವೇಣುಗೋಪಾಲನ್, ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ ಆಸ್ಪತ್ರೆಯ ನಿರ್ದೇಶಕ ಮನೀಶ್ ರೈ ಹಾಗೂ ವೈಟ್‌ಫೀಲ್ಡ್ ಮಣಿಪಾಲ ಆಸ್ಪತ್ರೆಯ ನಿರ್ದೇಶಕ ಅರ್ನಬ್ ಮೊಂಡಾಲ್, ಆಯೋಜನೆ– ಮಣಿಪಾಲ್ ಆಸ್ಪತ್ರೆ, ಸಹಯೋಗ– ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಸ್ಥಳ–ಸ್ಟರ್ಲಿಂಗ್ಸ್ ಮ್ಯಾಕ್ ಹೋಟೆಲ್, ಹಳೆಯ ವಿಮಾನ ನಿಲ್ದಾಣ ರಸ್ತೆ, ಮಧ್ಯಾಹ್ನ 3.30 (ಜೂಮ್ ಮೂಲಕ ಭಾಗವಹಿಸಲು ಐಡಿ–9953918 9243 ಹಾಗೂ ಪಾಸ್‌ಕೋಡ್: Health@123 ಅನ್ನು ಬಳಸಬಹುದು)

'ಮಹಾನ್ ಹುತಾತ್ಮ' ಕಿರುಚಿತ್ರ ಪ್ರದರ್ಶನ: ನಿರ್ದೇಶಕ–ಸಾಗರ್ ಪುರಾಣಿಕ್, ಆಯೋಜನೆ–ಪುರಾಣಿಕ್ ಪ್ರೊಡಕ್ಷನ್ಸ್, ದ್ರೋಣ ಎಜು, ಸ್ಥಳ–ಕಲಾವಿದರ ಸಂಘದ ಭವನ, ಚಾಮರಾಜಪೇಟೆ, ಸಂಜೆ 5.30

ಇಂದಿನಿಂದ 'ಬಿಲೀಫ್' ಸರಣಿ

ಬೆಂಗಳೂರು: ಬಿಬಿಎಂಪಿಯ ಪ್ರತಿ ವಿಷಯವನ್ನು ನಗರದ ನಾಗರಿಕರಿಗೆ ತಿಳಿಯಪಡಿಸುವ ಉದ್ದೇಶದಿಂದ ಬೆಂಗಳೂರು ನವನಿರ್ಮಾಣ ಪಕ್ಷವು (ಬಿಎನ್‌ಪಿ) 'ಬಿಲೀಫ್' ಎಂಬ ಜ್ಞಾನ ಸರಣಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಏ.3ರಿಂದ 25ರವರೆಗೆ ಪ್ರತಿ ಶನಿವಾರ ಮತ್ತು ಭಾನುವಾರ ಸಂಜೆ 6ರಿಂದ 7.30ರವರೆಗೆ ಕಾರ್ಯಕ್ರಮ ನಡೆಯಲಿದೆ. ಸರಣಿಯಲ್ಲಿ ಬಿಬಿಎಂಪಿಯ ಪ್ರತಿ ವಿಷಯದ ಕುರಿತು ಒಬ್ಬರು ಮಾಹಿತಿ ನೀಡಲಿದ್ದಾರೆ.

ಏ.3ರ ಸರಣಿ ಮೊದಲ ದಿನದಂದು ನಗರ ಯೋಜನಾ ತಜ್ಞ ನರೇಶ್ ನರಸಿಂಹನ್ ಅವರು 'ನಮ್ಮ ಊರು.. ಬೆಂಗಳೂರು' ಕುರಿತು ಮಾತನಾಡಲಿದ್ದಾರೆ. 4ರಂದು ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದ (ಬಿಐಸಿ) ನಿರ್ದೇಶಕ ವಿ.ರವಿಚಂದರ್ ಅವರು 'ಕಲ್ಪನೆಯ ಬೆಂಗಳೂರು–ಭವಿಷ್ಯದ ನಗರ' ಕುರಿತು ಮಾತನಾಡಲಿದ್ದಾರೆ.

ಆಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಲು https://nammabnp.org/events.php ಮೂಲಕ ನೋಂದಣಿಯಾಗಬಹುದು ಎಂದು ಪ್ರಕಟಣೆ ತಿಳಿಸಿದೆ.

'ಮಾರ್ಗಸೂಚಿ ಎಲ್ಲರಿಗೂ ಅನ್ವಯಿಸಲಿ'



ಬೆಂಗಳೂರು: ಕೋವಿಡ್ ಎರಡನೇ ಅಲೆ ಹರಡುತ್ತಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ಬೇಕಾಬಿಟ್ಟಿಯಾಗಿ ಮಾರ್ಗಸೂಚಿ ರೂಪಿಸಿ, ಜಾರಿಗೊಳಿಸಬಾರದು. ಮಾರ್ಗಸೂಚಿಗಳು ಎಲ್ಲರಿಗೂ ಅನ್ವಯವಾಗಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ತನಗೆ ಬೇಕಾದಾಗ ಮಾರ್ಗಸೂಚಿಗಳನ್ನು ಜಾರಿಗೆ ತರುವುದು, ಬೇಡ ಆದಾಗ ಸಡಿಲಗೊಳಿಸುವ ಕೆಲಸವನ್ನು ಸರ್ಕಾರ ಮಾಡಬಾರದು.

ಕೆಲವರಿಗೆ ಅನುಕೂಲವಾಗುವಂತೆಯೂ ಮಾರ್ಗಸೂಚಿಗಳನ್ನು ರೂಪಿಸಬಾರದು. ಆ ರೀತಿಯ ಪ್ರಯತ್ನ ಮಾಡಿದರೆ ನಾವು ಹೋರಾಟಕ್ಕೆ ಇಳಿಯುತ್ತೇವೆ' ಎಂದರು.

ಮುಖ್ಯಮಂತ್ರಿಗೆ ನಿಷ್ಠರಲ್ಲ: 'ಸಚಿವ ಕೆ.ಎಸ್. ಈಶ್ವರಪ್ಪ ಅವರು ಪಕ್ಷನಿಷ್ಠ ಎಂದು ಹೇಳಿಕೊಂಡಿದ್ದಾರೆ. ಆದರೆ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ತಾವು ಮುಖ್ಯಮಂತ್ರಿಗೆ ನಿಷ್ಠರಾಗಿ ಇಲ್ಲ ಎಂಬುದನ್ನು ಈಶ್ವರಪ್ಪ ಸಾಬೀತು ಮಾಡಿದ್ದಾರೆ' ಎಂದು ಶಿವಕುಮಾರ್ ಟೀಕಿಸಿದರು.

ಚಿತ್ರಾವಳಿ



ಲಯನ್ಸ್ ಕ್ಲಬ್‌ನ 317 ಎಫ್ ಜಿಲ್ಲೆಯ ವತಿಯಿಂದ ಹೆಬ್ಬಾಳ ಮೇಲ್ಸೇತುವೆ ಕೆಳಗೆ ಬಡ ಮಕ್ಕಳಿಗೆ ಉಚಿತವಾಗಿ ಆಹಾರದ ಪೊಟ್ಟಣಗಳನ್ನು ವಿತರಿಸಲಾಯಿತು. ಲಯನ್ಸ್ ಕ್ಲಬ್‌ನ ದೀಪಕ್ ಸುಮನ್, ಸಿಂಧು ಸುಮನ್, ರಾಜು ಚಂದ್ರಶೇಖರ್, ಬರ್ನಾರ್ಡ್ ಚೆಟ್ಟಿ, ನಾಗರಾಜ ಶೆಟ್ಟಿ, ಅನಂತ ಕೃಷ್ಣ ಇದ್ದರು



ಶ್ರೀರಾಮ ದೇವಸ್ಥಾನ ವಿವಿಧೋದ್ದೇಶ ಟ್ರಸ್ಟ್ ಹಾಗೂ ಹಿರಂಡಹಳ್ಳಿ ಗ್ರಾಮಸ್ಥರ ವತಿಯಿಂದ 33 ಅಡಿ ಎತ್ತರದ ಏಕಶಿಲಾ ಆಂಜನೇಯ ಸ್ವಾಮಿ ಮೂರ್ತಿಯನ್ನು ಬೆಂಗಳೂರು ಪೂರ್ವ ತಾಲೂಕು ಹಿರಂಡಹಳ್ಳಿ ಗ್ರಾಮದಲ್ಲಿ ಪ್ರತಿಷ್ಠಾಪಿಸಲಾಗಿದೆ

₹5.50 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಯಲಹಂಕ: ಅಟ್ಟೂರು ವಾರ್ಡ್ ವ್ಯಾಪ್ತಿಯ ಬಡಾವಣೆಗಳಲ್ಲಿ ₹5.50 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಚಾಲನೆ ನೀಡಿದರು.

ಅಟ್ಟೂರು ಸರ್ಕಾರಿ ಶಾಲೆಯ ಆವರಣದಲ್ಲಿ ರಂಗಮಂದಿರ ನಿರ್ಮಾಣ, ದೊಡ್ಡಬೆಟ್ಟಹಳ್ಳಿ ಸರ್ಕಾರಿ ಶಾಲೆಯ ಮುಂಭಾಗದಲ್ಲಿ ಚರಂಡಿ ಹಾಗೂ ರಾಜೀವ್ ಗಾಂಧಿ ನಗರದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಬೆಟ್ಟಹಳ್ಳಿಯಲ್ಲಿ ಸರ್ಕಾರಿ ಶಾಲಾಕಟ್ಟಡದ ಕಾಮಗಾರಿಯನ್ನು ವೀಕ್ಷಿಸಿದ ಅವರು, ಶಾಲೆಗೆ ತಡೆಗೋಡೆ ಮತ್ತು ರಂಗಮಂದಿರ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಪಾಲಿಕೆ ಮಾಜಿ ಸದಸ್ಯ ಎಂ.ಸತೀಶ್, ಬಿಜೆಪಿ ಮುಖಂಡರಾದ ಡಾ.ಶಶಿಕುಮಾರ್, ಎ.ಸಿ.ಮುನಿಕೃಷ್ಣಪ್ಪ, ಹನುಮಯ್ಯ, ವಸಂತಕುಮಾರ್, ಪವನ್ ಕುಮಾರ್, ಮುನಿರಾಜು ಮತ್ತಿತರರು ಉಪಸ್ಥಿತರಿದ್ದರು.



ಅಟ್ಟೂರು ಸರ್ಕಾರಿ ಶಾಲೆಯ ಆವರಣದಲ್ಲಿ ರಂಗಮಂದಿರ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್‌.ಆರ್‌.ವಿಶ್ವನಾಥ್ ಚಾಲನೆ ನೀಡಿದರು

ಕೋಲ್ಕತ್ತ ರೇಸ್

ನಾಟಿ ಆ್ಯಸ್ ಗೆಲ್ಲುವ ನಿರೀಕ್ಷೆ

ದಿ ಮೆಟ್ರೊಪಾಲಿಟನ್ ರೇಸ್ ಶನಿವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾಟಿ ಆ್ಯಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬಿವುಲ್ಫ್ 3, ಪೀಪಲ್ಸ್ ಪ್ರೈಡ್ 1, ಸ್ವಾಗರ್ 4
2ನೇ ರೇಸ್: ಅಟಾಮ್ 2, ಹಾರ್ಬರ್ ಸನ್‌ರೈಸ್ 3, ಕೊರೊನ ಡೆಲ್ ಕೋರ್ಸ 1
3ನೇ ರೇಸ್: ಅಗ್ನಾಸ್ಟಿಕ್ 1, ದಂಡಿ ಸತ್ಯಾಗ್ರಹ 2, ಯುವಿ 3
4ನೇ ರೇಸ್: ಲ್ಯಾಕ್ಮೋಸ್ 2, ಪೊಸ್ಸಿ 5, ಪೋರ್ಟ್ ಆಫ್ ಸ್ಪೈನ್ 3
5ನೇ ರೇಸ್: ನಾಟಿ ಆ್ಯಸ್ 2, ಪ್ರಿನ್ಸ್ ಸತ್ಯುಮಾ 1, ಪರ್ಪೆಚ್ಯುವಲ್ ವಿನ್ನಿಂಗ್ 6
6ನೇ ರೇಸ್: ಈಸ್ಟ್ರನ್ ಕ್ರೌನ್ 3, ಈಸ್ಟ್‌ಸೈಡ್ 2, ಸ್ಕಾರ್ಲೆಟ್ ವಿಚ್ 1
7ನೇ ರೇಸ್: ಡೋತ್ರಾಕಿ 4, ವಾಂಡರಿಂಗ್ ಏಂಜೆಲ್ 3, ರೊಮ್ಯಾಂಟಿಕ್ ಜೇಲ್ 6

ಉತ್ತಮ ಬೆಟ್: ಅಗ್ನಾಸ್ಟಿಕ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಾಳೆವರೆಗೆ 'ಏಷ್ಯಾ ಮದುವೆ ಮೇಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಯುಬಿ ಸಿಟಿ ಬಳಿ ಇರುವ ಜೆ.ಡಬ್ಲ್ಯು ಹೋಟೆಲ್‌ನಲ್ಲಿ ಏ.4ರವರೆಗೆ 'ಏಷ್ಯಾ ಮದುವೆ ಮೇಳ' ಶೀರ್ಷಿಕೆಯಡಿ ವಿವಾಹ ಸಂಭ್ರಮದ ಉಡುಪುಗಳು ಹಾಗೂ ಆಭರಣಗಳ ಪ್ರದರ್ಶನ ನಡೆಯಲಿದೆ.


'ವಧುವಿನ ಆಭರಣಗಳು, ಸಾಂಪ್ರದಾಯಿಕ ಒಡವೆಗಳು, ವಿವಾಹ ಉಡುಗೊರೆಗಳು, ಉಡುಪುಗಳು, ವೈವಿಧ್ಯಮಯ ವಿನ್ಯಾಸದ ಮದುವೆ ಸೀರೆಗಳು, ಮದುವೆಗೆ ಬೇಕಾದ ಎಲ್ಲ ಅತ್ಯುತ್ತಮ ವಿನ್ಯಾಸ ಸಂಗ್ರಹವನ್ನು ಮೇಳ ಒಳಗೊಂಡಿದೆ' ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕ:9845150870

ವಾಟಾಳ್ ನಾಗರಾಜ್ ಅಭಿಪ್ರಾಯ

'ಮುಖ್ಯಮಂತ್ರಿ ಬೆಂಬಲಕ್ಕೆ ಮಠಾಧೀಶರು, ಸಚಿವರು, ಶಾಸಕರು ನಿಲ್ಲಬಾರದು. ಹೊಸ ಆಡಳಿತದ ಅಲೆ ಆರಂಭವಾಗಬೇಕು'

'ಯಡಿಯೂರಪ್ಪ ಕಂಪನಿ ಹೋಗದಿದ್ದರೆ ಒಳಿತಾಗದು'

ಚಿತ್ರದುರ್ಗ: 'ರಾಜ್ಯದ ದಿಕ್ಕೇ ಬದಲಾಗಿದೆ. ಎತ್ತ ಸಾಗುತ್ತಿದೆ ಎಂಬುದೇ ಅರ್ಥವಾಗುತ್ತಿಲ್ಲ. ಭ್ರಷ್ಟರ ಕೂಟವಾಗಿದೆ. ರಾಜ್ಯಕ್ಕೆ ಒಳಿತಾಗಬೇಕಾದರೆ ಮುಖ್ಯಮಂತ್ರಿ ಯಡಿಯೂರಪ್ಪ ಕಂಪನಿ ಹೋಗಬೇಕು' ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ನಾಯಕ ವಾಟಾಳ್ ನಾಗರಾಜ್ ಅಭಿಪ್ರಾಯಟ್ಟರು.



ಇಲ್ಲಿನ ರಾಷ್ಟ್ರನಾಯಕ ಎಸ್.ಎನ್. ಸ್ಮಾರಕಕ್ಕೆ ಶುಕ್ರವಾರ ಭೇಟಿ ನೀಡಿ ಮಾತನಾಡಿದ ಅವರು, 'ರಾಜ್ಯದಲ್ಲಿ ಎಲ್ಲಾ ಅಧಿಕಾರಿಗಳು ಮುಖ್ಯಮಂತ್ರಿ ಗುಲಾಮರಾಗಿದ್ದಾರೆ. ಸರ್ಕಾರವನ್ನು ಪ್ರಶ್ನಿಸುವವರಿಗೆ ಉಳಿಗಾಲವಿಲ್ಲ. ಯಡಿಯೂರಪ್ಪ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದು, ಯಾರ ಮಾತನ್ನೂ ಕೇಳುವುದಿಲ್ಲ' ಎಂದು ದೂರಿದರು.

'ಮಾಧುಸ್ವಾಮಿ ಖಾತೆ ಕಿತ್ತುಕೊಂಡು ಮೂರನೇ ಸ್ಥಾನದ ಖಾತೆ ನೀಡಿ, ಕಡೆಗಣಿಸಿದ್ದಾರೆ. ಗ್ರಾಮೀಣಾಭಿವೃದ್ಧಿ ಖಾತೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬುದಾಗಿ ಸಚಿವ ಕೆ.ಎಸ್. ಈಶ್ವರಪ್ಪ ಮಾಡುತ್ತಿರುವ ವಾದ ಸರಿಯಾಗಿದೆ. ಯಡಿಯೂರಪ್ಪ ಸರ್ಕಾರ ಲಿಮಿಟೆಡ್ ಕಂಪನಿ ಇದ್ದಂತೆ. ಇಲ್ಲಿ ಅರ್ಹರಿಗೆ ಅವಕಾಶ ಸಿಗದು. ಅದಕ್ಕಾಗಿ ಕೆಲವರು ತಿರುಗಿ ಬಿದ್ದಿದ್ದಾರೆ' ಎಂದರು.

'ರಮೇಶ ಜಾರಕಿಹೊಳಿ ಬಂಧಿಸುವ ಕುರಿತು ಪ್ರತಿಕ್ರಿಯಿಸಲಾರೆ. ರಾಜ್ಯದಲ್ಲಿ ತಲ್ಲಣ ಉಂಟು ಮಾಡಿರುವ ಸಿಡಿ ಪ್ರಕರಣ ದೇಶದ ರಾಜಕೀಯ ವಲಯದ ಮೇಲೂ ಪ್ರಭಾವ ಬೀರಿದೆ. ಈ ಸಂಬಂಧ ಉನ್ನತ ಮಟ್ಟದ ಸಮಗ್ರವಾದ ತನಿಖೆ ಆಗಬೇಕು' ಎಂದು ಒತ್ತಾಯಿಸಿದರು.

'ರಾಜ್ಯದಲ್ಲಿ ಪ್ರಾಮಾಣಿಕತೆ ಮಾಯವಾಗುತ್ತಿದೆ. ಪ್ರಸ್ತುತ ರಾಜಕಾರಣ ಹೊಲಸಾಗಿದೆ. ಸಂಪೂರ್ಣ ಹದಗೆಟ್ಟಿದ್ದು, ಮೂರೂ ರಾಜಕೀಯ ಪಕ್ಷಗಳ ಮೇಲೆ ನಂಬಿಕೆ ಇಲ್ಲದಂತಾಗಿದೆ. ಅದಕ್ಕಾಗಿ ಹೊಸದೊಂದು ಶಕ್ತಿ ಉದಯಿಸುವ ಅಗತ್ಯವಿದೆ. ಆದಷ್ಟು ಬೇಗ ವಿಧಾನಸಭಾ ಚುನಾವಣೆ ಬರಬೇಕು. ಪ್ರಾಮಾಣಿಕರು ಚುನಾಯಿತರಾಗಿ ಭ್ರಷ್ಟಾಚಾರರಹಿತ ಸರ್ಕಾರ ಅಧಿಕಾರಕ್ಕೆ ಬರಬೇಕು. ಈ ವಿಚಾರವಾಗಿ ಮತದಾರರು ಉತ್ತಮ ನಿರ್ಧಾರ ಕೈಗೊಳ್ಳಬೇಕು' ಎಂದು ಮನವಿ ಮಾಡಿದರು.

ರಂಗನಿರ್ದೇಶಕ ಸಿ.ಬಸವಲಿಂಗಯ್ಯ ಅಭಿಮತ

'ನಾಟಕವೂ ರಾಜಕಾರಣವಿದ್ದಂತೆ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ : 'ನಾಟಕವೂ ಒಂದು ರಾಜಕಾರಣವಿದ್ದಂತೆ. ಚರಿತ್ರೆ, ಸಂಸ್ಕೃತಿಯನ್ನು ನಾಟಕದಲ್ಲಿ ಅಭಿನಯಿಸಿ ತೋರಿಸುವುದೇ ವಿಶೇಷವಾಗಿದೆ' ಎಂದು ರಂಗನಿರ್ದೇಶಕ ಸಿ.ಬಸವಲಿಂಗಯ್ಯ ಹೇಳಿದರು.

ಉಲ್ಲಾಳು ಸಮೀಪದ ರಾಷ್ಟ್ರಕವಿ ಕುವೆಂಪು ರಸ್ತೆಯ ನಗೆಮನೆಯಲ್ಲಿ ಹಮ್ಮಿಕೊಂಡಿದ್ದ ವಸಂತ ನಾಟಕೋತ್ಸವದಲ್ಲಿ ಮಾತನಾಡಿದ ಅವರು, 'ನಗರೀಕರಣದ ವ್ಯಾಮೋಹದಿಂದ ನಾವು ಹೊರಬಂದು ಪ್ರಕೃತಿಯ ಸವಿಯನ್ನು ಅನುಭವಿಸಿಕೊಂಡು ಬರುವುದೇ ನಾಟಕವಾಗಿದೆ' ಎಂದರು.

ಲೇಖಕ ಆರ್.ಜಿ.ಹಳ್ಳಿನಾಗರಾಜ್, 'ಪ್ರತಿಯೊಂದು ಬಡಾವಣೆಗಳಲ್ಲಿ ನಗೆಮನೆಯಂತಹ ವೇದಿಕೆಗಳನ್ನು ಸೃಷ್ಟಿಸಿ ಕಲಾವಿದರಿಂದ ನಾಟಕ ಪ್ರದರ್ಶಿಸಿದರೆ ಉತ್ತಮವಾಗಿರುತ್ತದೆ. ಈ ದಿನದ ಇಂದೂರಿನ ಮಹಾರಾಣಿ ಅಹಲ್ಯಾಬಾಯಿ ಹೋಳ್ಕರ್ ನಾಟಕವು ಕೋಮು ಸೌಹಾರ್ದ ವಾತಾವರಣದ ಪ್ರಸಂಗವನ್ನು ಪರೋಕ್ಷವಾಗಿ ಬಿಂಬಿಸುತ್ತಿದ್ದು ಇಂದಿನ ರಾಜಕಾರಣಿಗಳಿಗೆ ಬುದ್ಧಿ ಹೇಳುವಂತಿದೆ' ಎಂದು ಹೇಳಿದರು.

ನಗೆ ಮನೆ ಅಧ್ಯಕ್ಷ ಎಸ್.ಮಾದಯ್ಯ ಅವರಿಗೆ ರಂಗಗೌರವ ಅರ್ಪಿಸಿ ಸನ್ಮಾನಿಸಲಾಯಿತು. ರಂಗಕರ್ಮಿ ಸಂಸ್ಥಾಪಕ ಕಾರ್ಯದರ್ಶಿ ಛಾಯಾ ಭಾರ್ಗವಿ ಎಸ್.ಹೆಚ್, ನಾಟಕಕಾರ ಬಿ.ಬಸವರಾಜ್, ಮಾಲತೇಶ್ ಬಡಿಗೇರ, ನಗೆಮನೆ ಗೌರವಾಧ್ಯಕ್ಷ ಎಸ್. ರಾಮದಾಸ್‌ನಾಯಕ್ ಪುಟ್ಟಸ್ವಾಮಿ ಹಾಗೂ ನಗೆಮನೆಯ ಎಲ್ಲ ಸದಸ್ಯರು ಉಪಸ್ಥಿತರಿದ್ದರು.

ಅದಮ್ಯ ರಂಗ ಸಂಸ್ಕೃತಿ ಟ್ರಸ್ಟ್ ಹಾಗೂ ಉಲ್ಲಾಳು ವಾರ್ಡ್ ನಾಗರಿಕರ ವೇದಿಕೆ ಸಹಯೋಗ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.



ನಾಟಕೋತ್ಸವದಲ್ಲಿ ಬೆಂಗಳೂರು ಏಷ್ಯನ್ ಥಿಯೇಟರ್‌ರವರ ಇಂದೂರಿನ ಮಹಾರಾಣಿ ಅಹಲ್ಯಾಬಾಯಿ ಹೋಳ್ಕರ್ ನಾಟಕ ಪ್ರದರ್ಶನಗೊಂಡಿತು

ಶಿವಕುಮಾರ ಸ್ವಾಮೀಜಿ ಜನ್ಮದಿನಾಚರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಅಯೋಧ್ಯಾನಗರ ಶಿವಾಚಾರ ವೈಶ್ಯ ನಗರ್ತಸಂಘದ ಆಶ್ರಯದಲ್ಲಿ ನಗರ್ತಪೇಟೆ ರಸ್ತೆಯಲ್ಲಿರುವ ರಾಮಭಜನಾ ಮಂದಿರದಲ್ಲಿ ಡಾ.ಶಿವಕುಮಾರ ಸ್ವಾಮೀಜಿಯವರ 114ನೇ ಜನ್ಮದಿನವನ್ನು ಆಚರಿಸಲಾಯಿತು.

ಶಿವಕುಮಾರ ಸ್ವಾಮೀಜಿಯವರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿದ ಸಂಘದ ಸದಸ್ಯರು, ಸಿಹಿ ವಿತರಿಸಿದರು.

ನಗರಸಭೆ ಮಾಜಿ ಅಧ್ಯಕ್ಷ ಮು.ಕೃಷ್ಣಮೂರ್ತಿ, 'ಶಿವಕುಮಾರ ಸ್ವಾಮೀಜಿಯವರು ಅನ್ನದಾಸೋಹ ಮತ್ತು ಬಡಮಕ್ಕಳಿಗೆ ಶಿಕ್ಷಣ ನೀಡುವ ಕಾಯಕದಿಂದ ಇಡೀ ರಾಷ್ಟ್ರದಗಮನ ಸೆಳೆದಿದ್ದರು. ಅವರ ಶಿಕ್ಷಣಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ಇಂದು ಸಮಾಜದಲ್ಲಿ ಉನ್ನತ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಪುಟ್ಟರಾಜು, ಸದಸ್ಯ ವೀರಭದ್ರ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷೆ ಹೇಮಲತಾ ಚಿದಾನಂದ ಮತ್ತಿತರರು ಉಪಸ್ಥಿತರಿದ್ದರು.



ಯಲಹಂಕದಲ್ಲಿ ಶಿವಕುಮಾರ ಸ್ವಾಮೀಜಿಯವರ ಜನ್ಮದಿನವನ್ನು ಆಚರಿಸಲಾಯಿತು

ಶ್ರೀಗಳ ಸ್ಮರಣೆ: ಭಾರತ ರತ್ನಕ್ಕೆ ಒತ್ತಾಯ

ನೆಲಮಂಗಲ: ಅಖಿಲ ಭಾರತ ವೀರಶೈವ ಮಹಾಸಭಾ ತಾಲ್ಲೂಕು ಘಟಕದ ವತಿಯಿಂದ ಸಿದ್ದಗಂಗಾ ಮಠದ ಶಿವಕುಮಾರ ಶ್ರೀಗಳ ಜನ್ಮ ದಿನಾಚರಣೆ ಆಚರಿಸಲಾಯಿತು.

ಕೇಂದ್ರ ಘಟಕದ ನಿರ್ದೇಶಕ ಎನ್.ಎಸ್.ನಟರಾಜು ಮಾತನಾಡಿ, 'ಶ್ರೀಗಳಿಗೆ ಮರಣೋತ್ತರ ಭಾರತ ರತ್ನ ನೀಡಬೇಕು' ಎಂದು ಒತ್ತಾಯಿಸಿದರು.

ಮುಖಂಡ ದಯಾಶಂಕರ್, ರಾಜ್ಯ ನಿರ್ದೇಶಕ ಎಂ.ಬಿ.ಮಂಜುನಾಥ್, ಜಿಲ್ಲಾಘಟಕ ಮಹಿಳಾ ಅಧ್ಯಕ್ಷೆ ರಾಜಮ್ಮ, ತಾಲ್ಲೂಕು ಅಧ್ಯಕ್ಷ ಶಾಂತಕುಮಾರ್, ಕೊಟ್ರೇಶ್ ಎನ್.ರಾಜಶೇಖರ್ ಇದ್ದರು.

ಕನ್ನಡ ಸಾಂಸ್ಕೃತಿಕ ರಂಗದಿಂದ ಆಚರಣೆ: ಅಧ್ಯಕ್ಷ ಡಿ.ಸಿದ್ದರಾಜು ಅವರ ನೇತೃತ್ವದಲ್ಲಿ ಟಿ.ಬಿ.ನಿಲ್ದಾಣದ ಆಂಜನೇಯ ದೇಗುಲದಲ್ಲಿ ಶ್ರೀಗಳ ಸ್ಮರಣೆ ಮತ್ತು ಶ್ರೀಗಳ ಕುರಿತಾದ ಕಾವ್ಯ ವಾಚನ ನಡೆಯಿತು. ಕವಿ ಸಿರಾಜ್ ಅಹಮದ್ ಇತರರು ಕಾವ್ಯ ವಾಚನ ಮಾಡಿದರು. ತಾಲ್ಲೂಕಿನಾದ್ಯಂತ ಅಲ್ಲಲ್ಲಿ ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಲಾಯಿತು.

ಪರಮೇಶ್ವರ ನಾಯ್ಕ ಪುತ್ರ, ಸಹೋದರನ ನಡುವೆ ಜಗಳ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಹರಪನಹಳ್ಳಿ ತಾಲ್ಲೂಕಿನ ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಸಂಬಂಧ ಹೂವಿನಹಡಗಲಿ ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ ಅವರ ಪುತ್ರ ಪಿ.ಟಿ. ಭರತ್ ಮತ್ತು ಅವರ ಸಹೋದರ ಶಿವಾಜಿ ನಾಯ್ಕ ನಡುವೆ ಶುಕ್ರವಾರ ಗಲಾಟೆ ನಡೆದಿದೆ.

ಶಿವಾಜಿ ನಾಯ್ಕ ಗಾಯಗೊಂಡಿದ್ದು, ಇಲ್ಲಿನ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಲಕ್ಷ್ಮೀಪುರ ಗ್ರಾಮ ಪಂಚಾಯಿತಿಗೆ ಈಚೆಗೆ ನಡೆದ ಚುನಾವಣೆಯಲ್ಲಿ ಒಂದೇ ವಾರ್ಡ್‌ನಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಪಿ.ಟಿ. ಭರತ್ ಮತ್ತು ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಅವರ ಚಿಕ್ಕಪ್ಪ ಶಿವಾಜಿ ನಾಯ್ಕ ಸ್ಪರ್ಧಿಸಿದ್ದರು. ಚುನಾವಣೆಯಲ್ಲಿ ಭರತ್ ಗೆಲುವು ಸಾಧಿಸಿದ್ದರು. ಚುನಾವಣೆಯಲ್ಲಿನ ಮನಸ್ತಾಪ ಮುಂದುವರಿದಿದ್ದು, ಶುಕ್ರವಾರ ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು, ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ. ಭರತ್ ಹಾಗೂ ಶಿವಾಜಿ ಗುಂಪಿನ ನಡುವೆ ಘರ್ಷಣೆ ನಡೆದಿದೆ.

ಜನ ಸಂಪರ್ಕ ತಗ್ಗಿಸಲು ಮೆಟ್ರೊ ಯೋಚನೆ; ಐದು ತಿಂಗಳಲ್ಲಿ ಹೊಸ ವ್ಯವಸ್ಥೆ ಅಳವಡಿಕೆಗೆ ಚಿಂತನೆ

ಕ್ಯೂಆರ್ ಕೋಡ್ ಟಿಕೆಟ್ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನ ಸಂಪರ್ಕವನ್ನು ಆದಷ್ಟು ತಗ್ಗಿಸುವ ನಿಟ್ಟಿನಲ್ಲಿ ಮೆಟ್ರೊ ರೈಲು ಪ್ರಯಾಣಿಕರಿಗೆ ಟೋಕನ್ ವಿತರಣೆ ಸ್ಥಗಿತಗೊಳಿಸಿರುವ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಈಗ ಪರ್ಯಾಯ ಮಾರ್ಗವೊಂದನ್ನು ಕಂಡುಕೊಂಡಿದೆ.

ಜನಸಂಪರ್ಕವೂ ತಪ್ಪಬೇಕು, ಪ್ರಯಾಣಿಕರಿಗೆ ಹೆಚ್ಚು ತೊಂದರೆಯೂ ಆಗಬಾರದು ಎಂಬ ಉದ್ದೇಶದಿಂದ ಕ್ಯೂಆರ್ ಕೋಡ್ ಆಧಾರಿತ ಟಿಕೆಟ್ ವಿತರಣೆ ವ್ಯವಸ್ಥೆಯನ್ನು ತರಲು ನಿಗಮ ಮುಂದಾಗಿದೆ.

'ಮೆಟ್ರೊ ರೈಲು ಪ್ರಯಾಣದಲ್ಲಿ ಸಂಪೂರ್ಣ ನಗದು ರಹಿತ ವ್ಯವಸ್ಥೆ ತರಲು ಚಿಂತನೆ ನಡೆದಿದೆ. ಈ ನಿಟ್ಟಿನಲ್ಲಿ ಕ್ಯೂಆರ್ ಕೋಡ್ ಆಧಾರಿತ ವ್ಯವಸ್ಥೆ ಉತ್ತಮ ಮಾರ್ಗ. ಈ ವ್ಯವಸ್ಥೆ ಅಳವಡಿಸುವ ಉದ್ದೇಶದಿಂದ ಅರ್ಹ ಕಂಪನಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ' ಎಂದು ನಿಗಮದ ಅಧಿಕಾರಿಯೊಬ್ಬರು ತಿಳಿಸಿದರು.

'ಟೆಂಡರ್ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಐದು ತಿಂಗಳಲ್ಲಿ ಈ ವ್ಯವಸ್ಥೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ' ಎಂದು ಅವರು ತಿಳಿಸಿದರು.

ಹೈದರಾಬಾದ್‌ನಲ್ಲಿ ಕೂಡ ಕ್ಯೂಆರ್ ಕೋಡ್ ವ್ಯವಸ್ಥೆ ಇದ್ದು, ಮೊಬೈಲ್‌ನಲ್ಲೇ ಸ್ಕ್ಯಾನ್ ಮಾಡಿ, ಪ್ರಯಾಣಿಕರು ಸಂಚರಿಸುತ್ತಾರೆ. ನಮ್ಮ ಮೆಟ್ರೊದಲ್ಲಿಯೂ ಇಂತಹ ಪರ್ಯಾಯ ವ್ಯವಸ್ಥೆ ರೂಪಿಸಬೇಕು ಎಂದು ಪ್ರಯಾಣಿಕರು ಒತ್ತಾಯಿಸಿದ್ದರು.

ಟೋಕನ್ ವಿತರಣೆ ಸದ್ಯಕ್ಕಿಲ್ಲ: ನಗರದಲ್ಲಿ ಕೋವಿಡ್ ಎರಡನೇ ಅಲೆ ಕಾಣಿಸಿಕೊಳ್ಳುತ್ತಿದ್ದು, 'ನಮ್ಮ ಮೆಟ್ರೊ'ದಲ್ಲಿ ಸದ್ಯಕ್ಕೆ ಟೋಕನ್ ವಿತರಣೆ ಮಾಡುವ, ಪೂರ್ಣ ಸಾಮರ್ಥ್ಯದೊಂದಿಗೆ (ಎಲ್ಲ ಸೀಟುಗಳ ಭರ್ತಿ) ಸಂಚಾರ ಆರಂಭಿಸುವ ಸಾಧ್ಯತೆ ಮತ್ತೆ ಕ್ಷೀಣಿಸಿದೆ.

ಒಂದೆರಡು ತಿಂಗಳಿನ ಹಿಂದೆ ಸೋಂಕಿನ ಪ್ರಮಾಣ ಕಡಿಮೆಯಾಗಿದ್ದಾಗ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ರೈಲಿನಲ್ಲಿ ಕೆಲವು ನಿರ್ಬಂಧ ತೆರವುಗೊಳಿಸಿ, ಸಂಪೂರ್ಣ ಆಸನಗಳ ಭರ್ತಿಯೊಂದಿಗೆ ಕಾರ್ಯಾಚರಣೆಗೆ ಅನುಮತಿ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಆದರೆ, ಕೇಂದ್ರದ ಆದೇಶ ಬರುವಷ್ಟರಲ್ಲಿ ಮತ್ತೆ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ನಿರ್ಬಂಧ ತೆರವು ಸದ್ಯಕ್ಕೆ ಆಗುವುದಿಲ್ಲ ಎಂದು ನಿಗಮದ ಮೂಲಗಳು ಹೇಳಿವೆ.

'ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಪ್ರಯಾಣಿಕರ ಸಂಖ್ಯೆ ಕಡಿಮೆಯಾಗುತ್ತಿದೆ. ಕೆಲವು ಕಂಪನಿಗಳಲ್ಲಿ ಮತ್ತೆ ಮನೆಯಿಂದಲೇ ಕೆಲಸ ಮಾಡುವ ವ್ಯವಸ್ಥೆ ಪ್ರಾರಂಭವಾಗಿದೆ. ನಿರ್ಬಂಧ ತೆರವಿಗೆ ಪ್ರಸ್ತಾವ ಸಲ್ಲಿಸಿದ್ದು, ಮತ್ತೊಮ್ಮೆ ಮನವಿ ಮಾಡಿಕೊಳ್ಳಲು ನಿರ್ಧರಿಸಿದ್ದೇವೆ. ಆದರೆ, ಪರಿಸ್ಥಿತಿ ನೋಡಿದರೆ ಈಗಿರುವ ವ್ಯವಸ್ಥೆಯೇ ಮುಂದುವರಿಯುವುದು ಬಹುತೇಕ ನಿಶ್ಚಿತ' ಎಂದು ನಿಗಮದ ಅಧಿಕಾರಿಯೊಬ್ಬರು ಹೇಳಿದರು.



ಮೆಟ್ರೊ ರೈಲಿನಲ್ಲಿ ಪ್ರಯಾಣಿಕರು ಮಾಸ್ಕ್ ಧರಿಸುವುದು ಸೇರಿದಂತೆ ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುವುದನ್ನು ಪರಿಶೀಲಿಸಲು ಗೃಹರಕ್ಷಕ ದಳದ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ –ಪ್ರಜಾವಾಣಿ ಚಿತ್ರ

'ನಿತ್ಯ ₹60 ಲಕ್ಷ ವರಮಾನ ಖೋತಾ'

ಈಗ ಮೆಟ್ರೊ ರೈಲಿನಲ್ಲಿ ಒಂದು ಆಸನ ಬಿಟ್ಟು ಕುಳಿತು ಪ್ರಯಾಣಿಸಲು ಮಾತ್ರ ಅವಕಾಶ ಇದೆ. ಇದರಿಂದ ನಿತ್ಯ ಸರಾಸರಿ 1.60 ಲಕ್ಷದಿಂದ 1.70 ಲಕ್ಷ ಜನ ಮಾತ್ರ ಪ್ರಯಾಣಿಸುತ್ತಿದ್ದು, ಸರಾಸರಿ ₹60 ಲಕ್ಷ ವರಮಾನ ಹರಿದು ಬರುತ್ತಿದೆ. ಕೊರೊನಾ ಪೂರ್ವದಲ್ಲಿ ಈ ಪ್ರಮಾಣ ದುಪ್ಪಟ್ಟು ಅಂದರೆ 4 ಲಕ್ಷದವರೆಗೆ ಜನ ಪ್ರಯಾಣಿಸುತ್ತಿದ್ದರು ಹಾಗೂ ₹1.30 ಕೋಟಿವರೆಗೂ ವರಮಾನ ಬರುತ್ತಿತ್ತು.

ಈಗ ನಿಗಮಕ್ಕೆ ನಿತ್ಯ ₹60 ಲಕ್ಷ ಆದಾಯದಲ್ಲಿ ಖೋತಾ ಆಗುತ್ತಿದೆ. ನಿರ್ಬಂಧ ತೆರವುಗೊಳಿಸಿದರೆ, ಕನಿಷ್ಠ ಶೇ 20ರಷ್ಟು ಆದಾಯ ಹೆಚ್ಚಾಗಬಹುದು.

ಸುದ್ದಿ 2 ನಿಮಿಷ

ಲೋಕಾಯುಕ್ತ ವರದಿ ಮೂಲೆಗುಂಪು: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಬೆಂಗಳೂರು: ಲೋಕಾಯುಕ್ತ ವರದಿ ಆಧರಿಸಿ ಕ್ರಮ ಕೈಗೊಳ್ಳಲು ವಿಫಲವಾಗಿರುವ ಕಾರಣ ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿವಿಧ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ಸಾಮಾಜಿಕ ಕಾರ್ಯಕರ್ತ ಸಾಯಿದತ್ತ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ವಿಚಾರಣೆಯನ್ನು ಜೂನ್ 4ಕ್ಕೆ ಮುಂದೂಡಿತು.

'ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 12(1)ರ ಅಡಿಯಲ್ಲಿ ದಾಖಲಾದ 342 ಪ್ರಕರಣಗಳಿಗೆ ಸಂಬಂಧಿಸಿದಂತೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ವರದಿ ಸಲ್ಲಿಸಿದೆ. 932 ಪ್ರಕರಣಗಳು ಸರ್ಕಾರದ ವಿವಿಧ ಪ್ರಾಧಿಕಾರಗಳಿಂದ ಅನುಮತಿ ಅಥವಾ ಒಪ್ಪಿಗೆಗೆ ಕಾದಿವೆ. ವರದಿ ಆಧರಿಸಿ ಕ್ರಮ ಕೈಗೊಳ್ಳಲು ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರಿಗೆ ನಿರ್ದೇಶನ ನೀಡಬೇಕು' ಎಂದು ಅರ್ಜಿಯಲ್ಲಿ ಸಾಯಿದತ್ತ ಕೋರಿದ್ದರು.



'ತಪ್ಪಿತಸ್ಥ ಅಧಿಕಾರಿ ಅಥವಾ ಸಿಬ್ಬಂದಿ ವಿರುದ್ಧ ಕ್ರಮ ಆಗಬೇಕಿದೆ ಎಂದು ಎನಿಸಿದರೆ ಕಾಯ್ದೆಯ ಸೆಕ್ಷನ್ 12ರ ಪ್ರಕಾರ ಲೋಕಾಯುಕ್ತರು ಸರ್ಕಾರಕ್ಕೆ ವರದಿ ಸಲ್ಲಿಸಿ ಶಿಫಾರಸು ಮಾಡುತ್ತಾರೆ. ಅಂತಹ ವರದಿಗಳನ್ನು ಪರಿಶೀಲಿಸಿ ಕ್ರಮ ಕೈಗೊಂಡ ವರದಿಯನ್ನು ಮೂರು ತಿಂಗಳೊಳಗೆ ಲೋಕಾಯುಕ್ತರಿಗೆ ಸರ್ಕಾರ ಸಲ್ಲಿಸಬೇಕು. ಆದರೆ, ವರ್ಷಗಳು ಕಳೆದರೂ ಅಧಿಕಾರಿಗಳು ಈ ವರದಿಗಳನ್ನು ಮೂಲೆಗೆ ಸರಿಸಿದ್ದಾರೆ' ಎಂದು ದೂರಿದ್ದಾರೆ.

ಬೇಸಿಗೆ ಆರಂಭ: ಹಣ್ಣುಗಳ ದರ ದಿಢೀರ್ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆ ಆರಂಭಗೊಂಡಿರುವುದರಿಂದ ಒಂದು ವಾರದಿಂದ ಹಣ್ಣಿನ ದರಗಳು ದಿಢೀರ್ ಏರಿಕೆ ಕಂಡಿವೆ. ಇನ್ನೊಂದು ವಾರದಲ್ಲಿ ಹಣ್ಣಿನ ದರಗಳು ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎನ್ನುತ್ತಾರೆ ವ್ಯಾಪಾರಿಗಳು.

ಬೇಸಿಗೆಯಲ್ಲಿ ಜನರು ಹಣ್ಣುಗಳನ್ನು ಹೆಚ್ಚು ಸೇವಿಸುತ್ತಾರೆ. ಹಣ್ಣಿನ ನೇರ ಸೇವನೆಗಿಂತ ಹಣ್ಣುಗಳಿಂದ ತಯಾರಿಸುವ ಪಾನೀಯ ಸೇವನೆಗೆ ಮಳಿಗೆಗಳ ಎದುರು ಜನರ ದಂಡೇ ಸೇರಿರುತ್ತದೆ.

ಮಧ್ಯಾಹ್ನದ ಸುಡುಬಿಸಿಲಿಗೆ ಆಹಾರದ ಬದಲು ಹಣ್ಣಿನ ಸಲಾಡ್ ಸವಿಯುವವರೂ ಹೆಚ್ಚು. ಇದರಿಂದ ಬೇಸಿಗೆ ಬಂತೆಂದರೆ ಹಣ್ಣಿನ ವ್ಯಾಪಾರ ಗರಿಗೆರದರುತ್ತದೆ. ಬೇಸಿಗೆ ಇರುವ ಸುಮಾರು ನಾಲ್ಕು ತಿಂಗಳವರೆಗೆ ಹಣ್ಣುಗಳಿಗೆ ಬೇಡಿಕೆ ಇರುತ್ತದೆ.

'ಹಬ್ಬಗಳನ್ನು ಹೊರತುಪಡಿಸಿದರೆ, ಹಣ್ಣುಗಳಿಗೆ ಬೇಡಿಕೆ ಬರುವುದು ಬೇಸಿಗೆಯಲ್ಲಿ ಮಾತ್ರ. ಹಬ್ಬದ ನಡುವೆ 2–3 ದಿನ ಮಾತ್ರ ಹಣ್ಣಿನ ವ್ಯಾಪಾರಿಗಳಿಗೆ ಲಾಭ ಸಿಗುತ್ತದೆ. ಹಾಗಾಗಿ, ವರ್ಷದಲ್ಲಿ ಹಣ್ಣಿನ ವ್ಯಾಪಾರಕ್ಕೆ ಬೇಸಿಗೆ ಸೂಕ್ತಕಾಲ' ಎಂದು ಸಿಂಗೇನ ಅಗ್ರಹಾರದ ಎಪಿಎಂಸಿ ಮಾರುಕಟ್ಟೆಯ ಹಣ್ಣಿನ ಸಗಟು ವರ್ತಕ ಸೈಯದ್ ಖಾಜಿಂ ಅಗಾ 'ಪ್ರಜಾವಾಣಿ'ಗೆ ತಿಳಿಸಿದರು.

'ಒಂದು ವಾರದಿಂದ ಹಣ್ಣುಗಳ ದರ ದಿಢೀರ್ ಏರಿದೆ. ಕಲ್ಲಂಗಡಿ, ದಾಳಿಂಬೆ, ಕಿತ್ತಳೆ, ಮೂಸಂಬಿ, ಸಪೋಟ ಬೇಸಿಗೆಯಲ್ಲಿ ಹೆಚ್ಚು ಖರೀದಿಯಾಗುವ ಹಣ್ಣುಗಳು. ಮಾವು ಈಗ ಮಾರುಕಟ್ಟೆ ಪ್ರವೇಶಿಸುತ್ತಿದ್ದು, ವಿವಿಧ ತಳಿಗಳ ಮಾವು ಪ್ರತಿ ಕೆ.ಜಿಗೆ ₹60ರಿಂದ ₹170ರವರೆಗೆ ಮಾರಾಟವಾಗುತ್ತಿದೆ. 10 ದಿನಗಳ ಹಿಂದೆ ಕಲ್ಲಂಗಡಿ ಹಾಗೂ ಪಪ್ಪಾಯ ಸಗಟು ದರ ಪ್ರತಿ ಕೆ.ಜಿಗೆ ₹8 ಇತ್ತು. ಈಗ ಎರಡೂ ಹಣ್ಣುಗಳ ದರ ಹೆಚ್ಚಿದೆ' ಎಂದು ಮಾಹಿತಿ ನೀಡಿದರು.

'ಬೇಸಿಗೆ ಆರಂಭದಲ್ಲೇ ದರ ಹೆಚ್ಚಳ ಕಂಡಿದೆ. ಆದರೆ, ಮಾರುಕಟ್ಟೆಯಲ್ಲಿ ಈಗ ಬೇಡಿಕೆ ಇರುವಷ್ಟು ಹಣ್ಣುಗಳು ಪೂರೈಕೆಯಾಗುತ್ತಿಲ್ಲ. ಇದರಿಂದ ಮುಂದಿನ ಎರಡು ವಾರಗಳಲ್ಲಿ ಹಣ್ಣಿನ ದರಗಳು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ' ಎಂದೂ ಹೇಳಿದರು.



ಜಯಮಹಲ್ ರಸ್ತೆಯಲ್ಲಿರುವ ಹಣ್ಣಿನ ಅಂಗಡಿಯಲ್ಲಿ ಕಲ್ಲಂಗಡಿ ಸವಿಯುತ್ತಿದ್ದ ವ್ಯಕ್ತಿ –ಪ್ರಜಾವಾಣಿ ಚಿತ್ರ

ಹಣ್ಣಿನ ದರ ಪಟ್ಟಿ
(ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ಹಣ್ಣು	ಸಗಟು ದರ	ಹಾಪ್‌ಕಾಮ್ಸ್ ದರ
ಸೇಬು	150	180
ದಾಳಿಂಬೆ	200	245
ದ್ರಾಕ್ಷಿ	100	148
ಕಿತ್ತಳೆ	100	158
ಮೂಸಂಬಿ	70	99
ಸೀಬೆ	50	70
ಮಾವು	70	168
ಏಲಕ್ಕಿ ಬಾಳೆ	40	48
ಸಪೋಟ	40	56
ಪಪ್ಪಾಯ	20	40
ಕಲ್ಲಂಗಡಿ	15	24
ಅನಾನಸ್	25	52

ತರಕಾರಿ ದರಗಳಲ್ಲಿ ಏರಿಳಿತ: ಎರಡು ವಾರದಿಂದ ತರಕಾರಿ ದರಗಳಲ್ಲಿ ಏರಿಳಿತ ಬರುತ್ತಿದ್ದು, ಶುಂಠಿ, ಈರುಳ್ಳಿ, ಟೊಮೆಟೊ, ಆಲೂಗಡ್ಡೆ ಸೇರಿದಂತೆ ಹಲವು ತರಕಾರಿಗಳ ಬೆಲೆ ಕಡಿಮೆಯಾಗಿದೆ. ಬೆಳ್ಳುಳ್ಳಿ, ಬಟಾಣಿ ಹಾಗೂ ಹಸಿ ಮೆಣಸಿನಕಾಯಿ ದುಬಾರಿಯಾಗಿವೆ.

'ಶಿವರಾತ್ರಿ ವೇಳೆ ತರಕಾರಿ ದರಗಳು ಏರಿದ್ದವು. ಮರುದಿನದಿಂದಲೇ ದರಗಳು ಕುಸಿದಿವೆ. ಯುಗಾದಿವರೆಗೆ ತರಕಾರಿ ದರಗಳು ಏರುಪೇರು ಸಾಮಾನ್ಯ' ಎಂದು ತರಕಾರಿ ವ್ಯಾಪಾರಿ ಭಾಸ್ಕರ್ ತಿಳಿಸಿದರು.

ಮಾರ್ಚ್ ಮೊದಲ ವಾರದಲ್ಲಿ ಕೊತ್ತಂಬರಿ ಸೊಪ್ಪಿನ ದರ ಕೆ.ಜಿ.ಗೆ ₹140ರಷ್ಟಿತ್ತು, ಈಗ ₹50ಕ್ಕೆ ಕುಸಿದಿದೆ. ಸದ್ಯ ಎಲ್ಲ ಸೊಪ್ಪಿನ ದರಗಳು ಕಡಿಮೆಯಾಗಿದ್ದು, ಮೆಂತ್ಯ, ದಂಟು, ಸಬ್ಬಕ್ಕಿ, ಪಾಲಕ್ ಹಾಗೂ ಕೊತ್ತಂಬರಿ ಸೊಪ್ಪು ಪ್ರತಿ ಕಟ್ಟಿಗೆ ₹15 ದಾಟಿಲ್ಲ.

ಪ್ರಬಂಧ ಸ್ಪರ್ಧೆಗೆ ನೋಂದಣಿ ಪ್ರಾರಂಭ

ಬೆಂಗಳೂರು: ರಾಷ್ಟ್ರೀಯ ವಿಜ್ಞಾನ ದಿನದ ಪ್ರಯುಕ್ತ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ 'ಎನ್‌ಎಸ್‌ಡಿ 2021 ಬಿಎಲ್‌ಆರ್' ಹೆಸರಿನಲ್ಲಿ ರಾಷ್ಟ್ರೀಯ ಮಟ್ಟದ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆ.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾ ಸಂಸ್ಥೆ, ಉದಯಭಾನು ಕಲಾಸಂಘ ಹಾಗೂ ಸಂಚಿ ಫೌಂಡೇಷನ್ ಒಟ್ಟಾಗಿ ಈ ಸ್ಪರ್ಧೆಯನ್ನು ಹಮ್ಮಿಕೊಂಡಿದೆ. 'ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರದ ಭವಿಷ್ಯ: ಶಿಕ್ಷಣ, ಕೌಶಲ್ಯ ಹಾಗೂ ಕೆಲಸದ ಮೇಲೆ ಪರಿಣಾಮ' ಎಂಬ ವಿಷಯದ ಮೇಲೆ ಈ ಬಾರಿಯ ಸ್ಪರ್ಧೆಯು ಕೇಂದ್ರೀಕೃತವಾಗಿದೆ.

ಕಿರಿಯರ ವಿಭಾಗದಲ್ಲಿ 10,11 ಹಾಗೂ 12ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ. ಹಿರಿಯರ ವಿಭಾಗದಲ್ಲಿ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದು. ಸಾರ್ವಜನಿಕರಿಗೆ ಕೂಡ ಪ್ರತ್ಯೇಕ ವಿಭಾಗದಲ್ಲಿ ಸ್ಪರ್ಧೆ ನಡೆಸಲಾಗುತ್ತಿದೆ. ಪ್ರಥಮ ಬಹುಮಾನ ತಲಾ ₹ 5 ಸಾವಿರ, ದ್ವಿತೀಯ ಬಹುಮಾನ ತಲಾ ₹ 2 ಸಾವಿರ ಹಾಗೂ ತೃತೀಯ ಬಹುಮಾನ ತಲಾ ₹ 1 ಸಾವಿರ ನಿಗದಿಪಡಿಸಲಾಗಿದೆ. ಹೆಸರು ನೋಂದಾಯಿಸಲು ಏ. 25 ಕೊನೆಯ ದಿನವಾಗಿದೆ.

ಹೆಸರು ನೋಂದಣಿ ಹಾಗೂ ವಿವರಕ್ಕೆ: nationalscienceday.in

ಬೋಂಡ ಮಾರಿದ ಸಾರಿಗೆ ನೌಕರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರದ ಭಾಗವಾಗಿ ದಿನಕ್ಕೊಂದು ಬಗೆಯ ಪ್ರತಿಭಟನೆ ನಡೆಸುತ್ತಿರುವ ಸಾರಿಗೆ ಸಂಸ್ಥೆಗಳ ನೌಕರರು, ನಗರದ ಪ್ರಮುಖ ವೃತ್ತ ಮತ್ತು ರಸ್ತೆಗಳಲ್ಲಿ ಶುಕ್ರವಾರ ಬಜ್ಜಿ, ಬೋಂಡ, ವಡೆ, ಕಾಫಿ, ಟೀ ತಯಾರಿಸಿ ಮಾರಾಟ ಮಾಡಿದರು.

ಆರು ದಿನಗಳ ಕಾಲ ವಿಭಿನ್ನ ಚಳವಳಿ ನಡೆಸಲು ನಿರ್ಧರಿಸಿರುವ ನೌಕರರು, ಗುರುವಾರ ಕಪ್ಪುಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸಿದ್ದರು. ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣ, ಶಾಂತಿನಗರ, ಮೈಸೂರು ರಸ್ತೆಯ ಸ್ಯಾಟಿಲೈಟ್ ಬಸ್ ನಿಲ್ದಾಣ, ಕೆಂಗೇರಿ ಬಸ್ ನಿಲ್ದಾಣ, ಡಿಪೋಗಳು, ಪ್ರಾದೇಶಿಕ ಕಾರ್ಯಾಗಾರಗಳು, ಪ್ರಮುಖ ವೃತ್ತಗಳು ಹಾಗೂ ರಸ್ತೆಗಳಲ್ಲಿ ಸಣ್ಣ ಸಣ್ಣ ಕ್ಯಾಂಟೀನ್‌ಗಳನ್ನು ತೆರೆದು ಗಮನ ಸೆಳೆದರು.

ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಬಜ್ಜಿ-ಬೋಂಡಾ ತಯಾರಿಸಿ ಮಾರಾಟ ಮಾಡಿದ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, 'ಸಾಂಕೇತಿಕವಾಗಿ ಸರ್ಕಾರದ ಗಮನ ಸೆಳೆಯಲು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಸರ್ಕಾರ 40 ವರ್ಷಗಳಿಂದ ಸಾರಿಗೆ ನೌಕರರಿಗೆ ಮೋಸ ಮಾಡಿದೆ. ಸಾರಿಗೆ ನೌಕರರನ್ನು ಅರೆ ಹೊಟ್ಟೆ ಜೀವನಕ್ಕೆ ನೂಕಿದೆ. ಈಗಲಾದರೂ ನೌಕರರಿಗೆ ಸೂಕ್ತ ವೇತನ ನೀಡಬೇಕು' ಎಂದು ಆಗ್ರಹಿಸಿದರು.

'ಡಿಸೆಂಬರ್‌ನಲ್ಲಿ ನಡೆಸಿದ ಮುಷ್ಕರದ ವೇಳೆ ಸರ್ಕಾರ ನೀಡಿದ್ದ ಭರವಸೆಯ ಈಡೇರಿಸದೆ ಮಾತು ತಪ್ಪಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮಾತು ಉಳಿಸಿಕೊಳ್ಳಬೇಕು. ಇನ್ನೂ ನಾಲ್ಕು ದಿನ ವಿಭಿನ್ನ ಪ್ರತಿಭಟನೆ ನಡೆಯಲಿದೆ. ಸರ್ಕಾರ ಎಚ್ಚೆತ್ತುಕೊಳ್ಳದಿದ್ದಲ್ಲಿ ಏ.7ರಂದು ಸಾರಿಗೆ ಬಂದ್ ಮಾಡಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು' ಎಂದು ಹೇಳಿದರು.

ಇದೇ 7ರಿಂದ ಬಸ್ ಸಂಚಾರ ಸ್ಥಗಿತ

ಹುಬ್ಬಳ್ಳಿ: 'ಸಾರಿಗೆ ನೌಕರರಿಗೆ ನೀಡಿದ ಭರವಸೆಗಳನ್ನು ಸರ್ಕಾರ ಈಡೇರಿಸದ ಕಾರಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ ಏಪ್ರಿಲ್ 7ರಿಂದ ರಾಜ್ಯದಾದ್ಯಂತ ಬಸ್ ಸಂಚಾರ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಿದೆ' ಎಂದು ಕೂಟದ ಗೌರವಾಧ್ಯಕ್ಷ ಪಿ.ಎಚ್. ನೀರಲಕೇರಿ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಮೂರು ತಿಂಗಳ ಹಿಂದೆ ಮುಷ್ಕರ ನಡೆಸಿದಾಗ ಸರ್ಕಾರ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿತ್ತು. ಈಗಲೂ ಬೇಡಿಕೆ ಈಡೇರಿಸದೇ ಇರುವುದರಿಂದ ಮತ್ತೆ ಮುಷ್ಕರಕ್ಕೆ ಮುಂದಾಗಿದ್ದೇವೆ' ಎಂದರು.

'ಈಗಾಗಲೇ ವಿವಿಧ ರೀತಿಯಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದು, ಏ. 6ರಂದು ನೌಕರರು ಕುಟುಂಬ ಸದಸ್ಯರೊಂದಿಗೆ ಜಿಲ್ಲೆಯ ಪ್ರಮುಖ ವೃತ್ತದಲ್ಲಿ ಉಪವಾಸ ಸತ್ಯಾಗ್ರಹ ನಡೆಸಲಿದ್ದಾರೆ. ಬೇಡಿಕೆ ಈಡೇರುವವರೆಗೂ ಕಾನೂನಿನ ಅಡಿಯಲ್ಲಿಯೇ ಪ್ರತಿಭಟಿಸುತ್ತೇವೆ. ಸಾರ್ವಜನಿಕರಿಗೆ ಅನಾನುಕೂಲವಾಗಲಿ ಎಂಬ ಉದ್ದೇಶವಿಲ್ಲ. ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕೆನ್ನುವುದು ಇದರ ಉದ್ದೇಶ' ಎಂದು ಹೇಳಿದರು.

'ಆರನೇ ವೇತನ ಆಯೋಗ ಮತ್ತು ಪೂರ್ಣ ಪ್ರಮಾಣದಲ್ಲಿ ಅಂತರನಿಗಮ ವರ್ಗಾವಣೆ ಜಾರಿಯಾಗಬೇಕು. ಮೇಲಧಿಕಾರಿಗಳಿಂದ ಆಗುತ್ತಿರುವ ಕಿರುಕುಳ ತಪ್ಪಿಸಬೇಕು. ಕೋವಿಡ್‌ನಿಂದ ಮೃತಪಟ್ಟ ನೌಕರರ ಕುಟುಂಬಕ್ಕೆ ₹ 30 ಲಕ್ಷ ಪರಿಹಾರ ನೀಡಬೇಕು. ಎರಡು ವರ್ಷದ ತರಬೇತಿಯನ್ನು ಒಂದು ವರ್ಷಕ್ಕೆ ಕಡಿತಗೊಳಿಸಬೇಕು' ಎಂದು ಆಗ್ರಹಿಸಿದರು.



ಮೆಜೆಸ್ಟಿಕ್ ನಿಲ್ದಾಣದಲ್ಲಿ ಬಜ್ಜಿ, ಬೋಂಡ ತಯಾರಿಸಿದ ಕೋಡಿಹಳ್ಳಿ ಚಂದ್ರಶೇಖರ್

ಮಾನವ ಸರಪಳಿ

'ವಿಭಿನ್ನ ಚಳವಳಿಯ ಭಾಗವಾಗಿ ನೌಕರರು ಮತ್ತು ಅವರ ಕುಟುಂಬ ಸದಸ್ಯರು ಪ್ರಮುಖ ವೃತ್ತಗಳಲ್ಲಿ ಮಾನವ ಸರಪಳಿ ನಿರ್ಮಿಸಲಿದ್ದಾರೆ' ಎಂದು ನೌಕರರ ಕೂಟ ತಿಳಿಸಿದೆ.

ಏ.4 ರಂದು ಕರಪತ್ರ ಹಂಚಿಕೆ, ಟ್ವಿಟರ್ ಮತ್ತು ಫೇಸ್‌ಬುಕ್ ಅಭಿಯಾನ, ಏ.5ರಂದು ಡಿಪೋಗಳಲ್ಲಿ ಧರಣಿ, ಏ.6ರಂದು ನೌಕರರು ಹಾಗೂ ಕುಟುಂಬದ ಸದಸ್ಯರೊಂದಿಗೆ ಸಾಮೂಹಿಕ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ವಿವರಿಸಿದೆ.



ನಗರದಲ್ಲಿ ಬುಧವಾರ ಪದ ಸಂಸ್ಥೆ ಆಯೋಜಿಸಿದ್ದ ವಸಂತೋತ್ಸವ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಸಿ.ಎಂ. ನರಸಿಂಹಮೂರ್ತಿ, ಹಿಂದುಸ್ತಾನ್ ಗಾಯಕ ರವೀಂದ್ರ ಸೋರಗಾಂವಿ ಮತ್ತು ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಜೋಗಿಲ ಸಿದ್ದರಾಜು ರವರಿಗೆ ಪದ ಗೌರವವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಟಿ.ಎಸ್. ನಾಗಾಭರಣ ರವರು ನೀಡಿ ಗೌರವಿಸಿದರು. ಡಾ.ಕೆ. ಮುರಳೀಧರ, ರಂಗನಿರ್ದೇಶಕ ಮಾಲೂರು ವಿಜಿ, ಚಲನಚಿತ್ರ ನಿರ್ದೇಶಕ ರವೀಂದ್ರನಾಥ್ ಸಿರಿವರ ಮತ್ತು ಪದ ಸಂಸ್ಥೆ ಕಾರ್ಯದರ್ಶಿ ಡಿ.ದೇವರಾಜ್ ಇದ್ದಾರೆ ಪ್ರಜಾವಾಣಿ ಚಿತ್ರ

20 ಎಕರೆ ಹುಲ್ಲುಗಾವಲು ಭಸ್ಮ

ಸೋಮವಾರಪೇಟೆ (ಕೊಡಗು ಜಿಲ್ಲೆ): ತಾಲ್ಲೂಕಿನ ಮೂವತ್ತೊಕ್ಲು, ಗರ್ವಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋಟೆ ಬೆಟ್ಟ ಸರಹದ್ದಿನ ಅರಣ್ಯಕ್ಕೆ ಗುರುವಾರ ಬೆಂಕಿ ಬಿದ್ದಿದ್ದು, ಸುಮಾರು 20 ಎಕರೆ ಹುಲ್ಲುಗಾವಲು ಸುಟ್ಟಿದೆ. ಶುಕ್ರವಾರವೂ ಬೆಂಕಿ ನಂದಿಸಲು ಸಾಧ್ಯವಾಗಿಲ್ಲ.

1,200 ಎಕರೆ ಜಾಗದಲ್ಲಿ ಹುಲ್ಲುಗಾವಲಿದೆ. ಬೆಂಕಿ ತೀವ್ರತೆ ಹೆಚ್ಚಾದರೆ ಪ್ರಾಣಿ, ಪಕ್ಷಿಗಳು ನಾಶವಾಗುವ ಆತಂಕ ಎದುರಾಗಿದೆ. ಇಲಾಖೆ ಸಿಬ್ಬಂದಿ ಗುರುವಾರದಿಂದಲೇ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸುತ್ತಿದ್ದಾರೆ.' ಎಂದು ಮಾದಾಪುರ ವಿಭಾಗದ ಡಿ.ಆರ್.ಎಫ್.ಒ ಜಗದೀಶ್ ಹೇಳಿದರು.



ಮುಂಡರಗಿ ತಾಲ್ಲೂಕಿನ ಕಲಕೇರಿ, ಜಾಲವಾಡಗಿ, ಹಮ್ಮಿಗಿ ಗ್ರಾಮಗಳ ಬಳಿಯ ಕಪ್ಪತಗುಡ್ಡದ ಅರಣ್ಯ ಪ್ರದೇಶದಲ್ಲಿ ಶುಕ್ರವಾರ ಸಂಜೆ ಬೆಂಕಿ ಕಾಣಿಸಿಕೊಂಡಿದ್ದು, ಸುಮಾರು 60ರಿಂದ 70 ಹೆಕ್ಟೇರ್ ಅರಣ್ಯ ಪ್ರದೇಶ ಸುಟ್ಟು ಹೋಗಿದೆ. ಮೂವತ್ತಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಈ ಕುರಿತು ಪ್ರಕರಣ ದಾಖಲಾಗಿದೆ.

'ಈ ಬಾರಿ ಪಠ್ಯಕ್ರಮ ಕಡಿತ ಇಲ್ಲ'

ನವದೆಹಲಿ (ಪಿಟಿಐ): 2021–22ರ ಶೈಕ್ಷಣಿಕ ವರ್ಷದಲ್ಲಿ 9ರಿಂದ 12ನೇ ತರಗತಿಯ ಪಠ್ಯಕ್ರಮವನ್ನು ಕಡಿತಗೊಳಿಸದಿರಲು ಸಿಬಿಎಸ್‌ಇ ನಿರ್ಧರಿಸಿದೆ.

ಕೋವಿಡ್–19 ಬಿಕ್ಕಟ್ಟಿನ ಕಾರಣಕ್ಕೆ ಕಳೆದ ವರ್ಷ 9ರಿಂದ 12ನೇ ತರಗತಿಯವರೆಗಿನ ಪಠ್ಯಕ್ರಮವನ್ನು ಪರಿಷ್ಕರಿಸಿ ಶೇಕಡ 30ರಷ್ಟು ಕಡಿತಗೊಳಿಸಿತ್ತು. ಈ ಪಠ್ಯಕ್ರಮವನ್ನು ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಮೇ ಮತ್ತು ಜೂನ್‌ನಲ್ಲಿ ನಡೆಯುವ ಪರೀಕ್ಷೆಗೆ ಹಾಜರಾಗಲಿದ್ದಾರೆ.

ಕಳೆದ ವರ್ಷ ಕಡಿತಗೊಳಿಸಲಾಗಿದ್ದ ಅಧ್ಯಾಯಗಳು ಮತ್ತು ವಿಷಯಗಳನ್ನು 2021–22ನೇ ಶೈಕ್ಷಣಿಕ ವರ್ಷದ ಪಠ್ಯಕ್ರಮದಲ್ಲಿ ಮತ್ತೆ ಸೇರ್ಪಡೆ ಮಾಡಲಾಗಿದೆ.

ಕಳೆದ ವರ್ಷ ಆನ್‌ಲೈನ್ ಮೂಲಕ ಬೋಧನೆ ಮಾಡಲಾಗಿತ್ತು. ಇದು ಹೊಸ ಕ್ರಮವಾಗಿತ್ತು. ಹೀಗಾಗಿ, ಒಂದು ಬಾರಿ ಮಾತ್ರ ಪಠ್ಯಕ್ರಮದಲ್ಲಿ ಕಡಿತಗೊಳಿಸುವುದಾಗಿ ತಿಳಿಸಿತ್ತು.

ಹಿರಿಯ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅಭಿಮತ

'ಸಿನಿಮಾಗೆ ರಂಗಭೂಮಿಯೇ ತಾಯಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಂಗಭೂಮಿಯು ಎಂತಹುದೇ ಪರಿಸ್ಥಿತಿಯಲ್ಲೂ ನಮ್ಮನ್ನು ಎಚ್ಚರವಾಗಿಡುವಂತಹ ಮಾಧ್ಯಮ. ಇದು ಕೇವಲ ರಂಜನೆಯಲ್ಲ. ಇಲ್ಲಿ ಚಿಂತನೆಗಳಿರುತ್ತವೆ. ರಂಗಭೂಮಿ ಅನೇಕ ಚಳವಳಿಗಳನ್ನು ಹುಟ್ಟುಹಾಕಿದೆ. ಪ್ರತಿಭಟಿಸುವುದನ್ನೂ ಕಲಿಸಿಕೊಟ್ಟಿದೆ. ಚಲನಚಿತ್ರ ಕ್ಷೇತ್ರಕ್ಕೆ ರಂಗಭೂಮಿಯೇ ತಾಯಿ. ಇಲ್ಲಿಂದ ಬಂದ ಅನೇಕರು ಬೆಳ್ಳಿ ಪರದೆಯಲ್ಲಿ ಪ್ರಜ್ವಲಿಸಿದ್ದಾರೆ' ಎಂದು ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಶುಕ್ರವಾರ ಅಭಿಪ್ರಾಯಪಟ್ಟರು.

ರಂಗಚಂದಿರ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಾಣೇಹಳ್ಳಿಯ ಶ್ರೀ ಶಿವಕುಮಾರ ಕಲಾ ಸಂಘದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿರುವ ಶಿವಸಂಚಾರ ನಾಟಕೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಸಿಜಿಕೆ ಅವರು ವಿಕೇಂದ್ರೀಕರಣದಲ್ಲಿ ನಂಬಿಕೆ ಇಟ್ಟಿದ್ದರು. ರಂಗಭೂಮಿಯನ್ನು ಗ್ರಾಮೀಣ ಜಗತ್ತಿಗೆ ಕೊಂಡೊಯ್ದರು. ಮಠದಲ್ಲಿದ್ದ ಸ್ವಾಮೀಜಿಗಳಲ್ಲೂ ನಾಟಕದ ಅಭಿರುಚಿ ಬೆಳೆಸಿದರು. ಶಿವಸಂಚಾರವು ಪ್ರತಿವರ್ಷ ಹಲವು ನಾಟಕಗಳನ್ನು ಆಯೋಜಿಸುತ್ತದೆ. ಈ ಬಾರಿ ಕೋವಿಡ್ ನಡುವೆಯೂ ಹಲವು ಮುನ್ನೆಚ್ಚರಿಕೆಗಳನ್ನು ವಹಿಸಿ ಎರಡು ನಾಟಕಗಳನ್ನು ಪ್ರದರ್ಶಿಸುತ್ತಿದೆ. ವಚನ ಚಳವಳಿಗಳ ಆಶಯದ ಮುಂದುವರಿದ ಭಾಗವಾಗಿ ಶಿವಸಂಚಾರವು ರಾಜ್ಯದಾದ್ಯಂತ ಕೆಲಸ ಮಾಡುತ್ತಿದೆ' ಎಂದರು.

ಕರ್ನಾಟಕ ಲಲಿತಕಲಾ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷ ಎಂ.ಎಸ್.ಮೂರ್ತಿ 'ಸಂಸ ರಂಗಮಂದಿರಕ್ಕೆ ಬಂದಾಗಲೆಲ್ಲಾ ಸಿಜಿಕೆ ನೆನಪಾಗುತ್ತಾರೆ. ಒಬ್ಬ ವ್ಯಕ್ತಿ ಸೃಜಶೀಲ, ಚಲನಶೀಲ ಹಾಗೂ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಸಾಂಸ್ಕೃತಿಕ ವಲಯವನ್ನು ಕಟ್ಟಬಹುದು ಎಂಬುದಕ್ಕೆ ಸಿಜಿಕೆಯವರೇ ಸಾಕ್ಷಿ. ನಾಟಕ ಕ್ಷೇತ್ರದಲ್ಲಿ ಸಾತ್ವಿಕತೆ ಇದೆ. ಎಷ್ಟೇ ವೈಚಾರಿಕ ಭಿನ್ನಾಭಿಪ್ರಾಯಗಳಿದ್ದರೂ ಮನುಷ್ಯ ಮನುಷ್ಯನನ್ನು ಪ್ರೀತಿಸುವ ಗುಣವನ್ನು ನಾಟಕ ರಂಗ ನಮಗೆಲ್ಲ ಕಲಿಸಿಕೊಟ್ಟಿದೆ' ಎಂದರು.



ನಾಗತಿಹಳ್ಳಿ ಚಂದ್ರಶೇಖರ್ (ಬಲದಿಂದ ಎರಡನೆಯವರು) ಭಿತ್ತಿಪತ್ರ ಬಿಡುಗಡೆಗೊಳಿಸುವ ಮೂಲಕ ನಾಟಕೋತ್ಸವಕ್ಕೆ ಚಾಲನೆ ನೀಡಿದರು. (ಎಡದಿಂದ) ರಂಗ ಚಂದಿರ ಟ್ರಸ್ಟ್‌ನ ಸಂಸ್ಥಾಪಕ ಕಾರ್ಯದರ್ಶಿ ಜಿ.ಪಿ.ಒ. ಚಂದ್ರು, ನಾಟಕ ನಿರ್ದೇಶಕ ಮಾಲತೇಶ ಬಡಿಗೇರ, ಎಂ.ಎಸ್.ಮೂರ್ತಿ, ಶ್ರೀನಿವಾಸ ಜಿ. ಕಪ್ಪಣ್ಣ ಮತ್ತು ಕಲಾ ನಿರ್ದೇಶಕ ಶಶಿಧರ ಅಡಪ ಇದ್ದಾರೆ ಪ್ರಜಾವಾಣಿ ಚಿತ್ರ

ಯತ್ನಾಳ, ಈಶ್ವರಪ್ಪ ಬಳಿಕ ಮುಂದೆ ಯಾರು? ● ಬಿಎಸ್‌ವೈ ಕಾರ್ಯವೈಖರಿಗೆ ಅತೃಪ್ತಿ ಇದ್ದರೂ ಬಹಿರಂಗಕ್ಕೆ ಹಿಂದೇಟು

ಇನ್ನಷ್ಟು ಬಂಡಾಯಗಾರರು ಇದ್ದಾರೆಯೇ?

● ಎಸ್.ರವಿಪ್ರಕಾಶ್

ಪ್ರಜಾವಾಣಿ ವಿಶೇಷ

ಬೆಂಗಳೂರು: ವಿಜಯಪುರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಳಿಕ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಸೆಟೆದು ನಿಂತಿದ್ದಾರೆ.

ಮುಂದಿನ ದಿನಗಳಲ್ಲಿ ಇನ್ನು ಎಷ್ಟು ಮಂದಿ ಈ ರೀತಿ ಬಂಡಾಯ ಸಾರಲಿದ್ದಾರೆ ಎಂಬ ಚರ್ಚೆ ಬಿಜೆಪಿಯಲ್ಲಿ ಮುನ್ನೆಲೆಗೆ ಬಂದಿದೆ.

ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಯತ್ನಾಳ ಅವರಿಗೆ ಎಚ್ಚರಿಕೆ ನೀಡಿದ್ದರೂ, ಅವರು ಮಾತನಾಡುವುದನ್ನು ನಿಲ್ಲಿಸಿಲ್ಲ.

'ಸಂಘಟನೆಯ ಬಲ ಇರುವುದರಿಂದಲೇ ನಾನು ಇಲ್ಲಿ ಕುಳಿತು ಮಾತನಾಡಲು ಸಾಧ್ಯ' ಎಂದು ಈಶ್ವರಪ್ಪ ಹೇಳಿದ್ದಾರೆ. ಹಾಗಿದ್ದರೆ ಆ 'ಸಂಘಟನೆ' ಯಾವುದು? ಅರುಣ್ ಸಿಂಗ್ ಸಂಘಟನೆಯ ಭಾಗವಲ್ಲವೇ, ಅವರ ಎಚ್ಚರಿಕೆ ಮಾತುಗಳನ್ನೂ ಉಲ್ಲಂಘಿಸುವಷ್ಟು ಸ್ವಾತಂತ್ರ್ಯವನ್ನು 'ಸಂಘಟನೆ' ಇವರಿಗೆ ನೀಡಿದೆಯೇ ಎಂಬ ವಾದವನ್ನು ಯಡಿಯೂರಪ್ಪ ಬಣ ಮುಂದಿಟ್ಟಿದೆ.

ವಿಧಾನಮಂಡಲ ಅಧಿವೇಶನದ ಸಂದರ್ಭದಲ್ಲಿ ಯಡಿಯೂರಪ್ಪ ನಿವಾಸದಲ್ಲಿ ಬಿಜೆಪಿ ಶಾಸಕರ ಎರಡು ಮಹತ್ವದ ಸಭೆಗಳು ನಡೆದವು. ಇವೆರಡೂ ಸಭೆಗಳ ಮೂಲಕ ತಮ್ಮ ಬಲ ಪ್ರದರ್ಶನದ ಸಂದೇಶ ರವಾನಿಸುವ ಪ್ರಯತ್ನ ನಡೆಯಿತು. ಇದು ರಾಜ್ಯ ಮತ್ತು ಕೇಂದ್ರದಲ್ಲಿ ತಮ್ಮ ಕುರ್ಚಿ ಅಲುಗಾಡಿಸಲು ಯತ್ನಿಸುತ್ತಿರುವ ನಾಯಕರಿಗೆ ನೀಡಿದ ಸಂದೇಶವೆಂದೇ ವ್ಯಾಖ್ಯಾನಿಸಲಾಗುತ್ತಿದೆ.

ಆದರೆ, ಮೈಸೂರಿನ ಸುದ್ದಿಗೋಷ್ಠಿಯಲ್ಲಿ ಯಡಿಯೂರಪ್ಪ ಅವರ ಪಕ್ಷ ನಿಷ್ಠೆಯನ್ನೇ ಪ್ರಶ್ನಿಸಿದ ಈಶ್ವರಪ್ಪ ಮರ್ಮಾಘಾತ ನೀಡಿದ್ದಾರೆ. ಪಕ್ಷ ಬಿಟ್ಟು ಕೆಜೆಪಿ ಸ್ಥಾಪಿಸಿದ್ದು, ಅವರನ್ನು ಮತ್ತೆ ಬಿಜೆಪಿಗೆ ಕರೆ ತರುವಲ್ಲಿ ತಮ್ಮ ಪಾತ್ರ ವಿವರಿಸುವ ಮೂಲಕ ಯಡಿಯೂರಪ್ಪ ಬಣಕ್ಕೆ ತಿರುಗೇಟು ನೀಡಿದ್ದಾರೆ.


ಉಪಚುನಾವಣೆ ಬಳಿಕ ಮುಖ್ಯಮಂತ್ರಿ ಬದಲಾವಣೆ ಆಗಲಿದ್ದಾರೆ ಎಂದು ಯತ್ನಾಳ ಹೇಳಿರುವುದು ಮತ್ತು ಈಶ್ವರಪ್ಪ ಅವರ ಬಂಡಾಯ ಭವಿಷ್ಯದ ರಾಜಕೀಯ ಬೆಳವಣಿಗೆಗಳಿಗೆ ಸೂಚನೆಯೇ, ಇನ್ನಷ್ಟು ಮಂದಿ ಬಂಡಾಯ ಏಳುವರೇ ಎಂಬ ಬಗ್ಗೆ ಪಕ್ಷದ ತಟಸ್ಥ ಶಾಸಕರು ಚರ್ಚಿಸಲು ಆರಂಭಿಸಿದ್ದಾರೆ.

'ನಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೆಲಸ ಆಗಬೇಕು. ಇದರಲ್ಲಿ ಯಡಿಯೂರಪ್ಪ ಕುಟುಂಬದ ಹಸ್ತಕ್ಷೇಪ ಇರಬಾರದು. ಎಲ್ಲರಿಗೂ ಸಮಾನ ಅವಕಾಶ, ಅನುದಾನ ಹಂಚಿಕೆ ಮಾಡಬೇಕು' ಎನ್ನುತ್ತಾರೆ ತಟಸ್ಥ ಶಾಸಕರು.

'ಆಡಳಿತ ವೈಖರಿ ಬಗ್ಗೆ ಪಕ್ಷದ ಸಾಕಷ್ಟು ಶಾಸಕರಲ್ಲಿ ಅಸಮಾಧಾನ ಇದೆ. ಯಡಿಯೂರಪ್ಪ ಬಣದ ಎಲ್ಲ ಶಾಸಕರು ತೃಪ್ತರೆಂದು ಹೇಳಲೂ ಆಗುವುದಿಲ್ಲ. ಹಾಗೆಂದು ಎಲ್ಲರೂ ಯತ್ನಾಳ ಅಥವಾ ಈಶ್ವರಪ್ಪ ಅವರಂತೆ ಬಹಿರಂಗವಾಗಿ ಬಂಡಾಯದ ಬಾವುಟ ಹಾರಿಸುವ ಸ್ಥಿತಿಯಲ್ಲೂ ಇಲ್ಲ. ಯಡಿಯೂರಪ್ಪ ಅವರಿಗೆ ಪರ್ಯಾಯ ನಾಯಕ ಯಾರು? ಯತ್ನಾಳ ಅಥವಾ ಈಶ್ವರಪ್ಪ ಅವರು ಪಕ್ಷವನ್ನು ಗೆಲ್ಲಿಸಿಕೊಂಡು ಬಹುಮತದ ದಡ ಸೇರಿಸುವ ಸಾಮರ್ಥ್ಯ ಹೊಂದಿದ್ದಾರೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ' ಎನ್ನುತ್ತಾರೆ ಅವರು.

ವಿವಿಧ ರಾಜ್ಯಗಳ ಚುನಾವಣೆ ಮುಗಿದ ಬಳಿಕ ಅಮಿತ್ ಶಾ, ಜೆ.ಪಿ.ನಡ್ಡಾ ಮತ್ತು ಅರುಣ್ ಸಿಂಗ್ ಅವರೇ ಇದಕ್ಕೆ ಅಂತಿಮ ತೆರೆ ಎಳೆಯಬೇಕು. ಅವರ ಬಳಿ ಇದಕ್ಕೆ ಯಾವ ಔಷಧ ಇದೆ ಎಂಬುದನ್ನು ಕಾದು ನೋಡಬೇಕು ಎನ್ನುತ್ತಾರೆ ಶಾಸಕರು.

ಆರ್. ಬಾಲಸುಬ್ರಹ್ಮಣ್ಯಂ ನೇಮಕ



ಮೈಸೂರು: ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್‌ನ (ಗ್ರಾಮ್) ಸಂಸ್ಥಾಪಕ ಮತ್ತು ಅಧ್ಯಕ್ಷ ಡಾ.ಆರ್. ಬಾಲಸುಬ್ರಹ್ಮಣ್ಯಂ ಅವರನ್ನು ಕೇಂದ್ರ ಸರ್ಕಾರದ ಸಾಮರ್ಥ್ಯ ಅಭಿವೃದ್ಧಿ ಆಯೋಗದ (ಮಾನವ ಸಂಪನ್ಮೂಲ) ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಭಾರತ ಸರ್ಕಾರದ ಕ್ಯಾಬಿನೆಟ್ ನೇಮಕಾತಿ ಸಮಿತಿಯು ಏ.1 ರಂದು ಈ ಸಂಬಂಧ ಆದೇಶ ಹೊರಡಿಸಿದೆ ಎಂದು ಗ್ರಾಮ್ ಪ್ರಕಟಣೆ ತಿಳಿಸಿದೆ.

ನಾಗರಿಕ ಸೇವಾ ಸಿಬ್ಬಂದಿಯ ಕಾರ್ಯಕ್ಷಮತೆಯನ್ನು ಉತ್ತಮಗೊಳಿಸುವ ಸಲುವಾಗಿ, ನೇಮಕಾತಿ ನಂತರದ ವಿಶೇಷ ತರಬೇತಿಗೆ 'ಮಿಷನ್ ಕರ್ಮಯೋಗಿ' ಯೋಜನೆಯನ್ನು ಸರ್ಕಾರ ಕಳೆದ ವರ್ಷ ಜಾರಿಗೊಳಿಸಿತ್ತು. ಈ ಯೋಜನೆಯಡಿ ಸಾಮರ್ಥ್ಯ ಅಭಿವೃದ್ಧಿ ಆಯೋಗವನ್ನು ರಚಿಸಲಾಗಿದೆ.

ಯಾವ ಸಚಿವರೂ ಪೋಸ್ಟ್ ಮ್ಯಾನ್ ಅಲ್ಲ: ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರಪ್ಪ

'ನಳಿನ್, ರವಿ ಮಾತಿನಂತೆ ಅನುದಾನಕ್ಕೆ ತಡೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ನಿಯಮ ಉಲ್ಲಂಘಿಸಿ ಮುಖ್ಯಮಂತ್ರಿ ಬಿಡುಗಡೆ ಮಾಡಿದ್ದ ಅನುದಾನವನ್ನು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಸೂಚನೆ ಅನ್ವಯ ಅನುದಾನ ತಡೆಹಿಡಿದಿದ್ದೇನೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

'ನಿಯಮ ಉಲ್ಲಂಘಿಸಿ ಅನುದಾನ ಹಂಚಿಕೆ ಮಾಡಿರುವ ಮುಖ್ಯಮಂತ್ರಿ ಕ್ರಮದ ಬಗ್ಗೆ ಪಕ್ಷದ ಮೂವರು ಪ್ರಮುಖರ ಗಮನಕ್ಕೆ ತಂದಿದ್ದೆ. ಅವರು ಮಾತಿನಂತೆ ನಡೆದುಕೊಂಡಿದ್ದೇನೆ' ಎಂದು ಈಶ್ವರಪ್ಪ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ವಿವರಿಸಿದರು.

'ಅನುದಾನ ಹಂಚಿಕೆಯು ಮುಖ್ಯಮಂತ್ರಿಯ ಪರಮಾಧಿಕಾರ ನಿಜ. ಒಂದು ಇಲಾಖೆಗೆ ಹಂಚಿಕೆಯಾದ ಬಳಿಕ ಅದನ್ನು ಬಿಡುಗಡೆ ಮಾಡುವುದು ಆಯಾ ಇಲಾಖೆಯ ಮಂತ್ರಿಯ ಜವಾಬ್ದಾರಿ. ಯಾವುದೇ ಇಲಾಖೆಯ ಸಚಿವರೂ ಪೋಸ್ಟ್‌ಮ್ಯಾನ್ ಅಲ್ಲ' ಎಂದರು.



ಕೆಲ ವಿಚಾರಗಳಲ್ಲಿ ಯಡಿಯೂರಪ್ಪ, ನಾನು ದೂರ ಇದ್ದೇವೆ. ಪಕ್ಷದ ಹಿತದೃಷ್ಟಿಯಿಂದ ಹೊಂದಿಕೊಂಡು ಹೋಗುತ್ತಿದ್ದೇವೆ. ಉಪಚುನಾವಣೆ ಬಳಿಕ ಈ ಸಮಸ್ಯೆ ಬಗೆಹರಿಸುತ್ತಾರೆ
ಕೆ.ಎಸ್.ಈಶ್ವರಪ್ಪ, ಸಚಿವ

'ಇಲಾಖೆಯ ದುಡ್ಡನ್ನು ಕೆಲವು ಶಾಸಕರಿಗೆ ನೀಡಲು ಮುಂದಾಗಿರುವ ಮುಖ್ಯಮಂತ್ರಿ ಕ್ರಮವನ್ನು ಸ್ವಾಗತಿಸುತ್ತೇನೆ. ಅವರು ಯಾರಿಗೆ ಕೊಡಲು ಬಯಸಿದ್ದಾರೋ, ಒಂದು ಪೈಸೆಯೂ ವ್ಯತ್ಯಾಸವಾಗದಂತೆ ಅಷ್ಟೂ ದುಡ್ಡನ್ನು ಅವರಿಗೇ ಕೊಡಲು ವ್ಯವಸ್ಥೆ ಮಾಡುತ್ತೇವೆ. ಆದರೆ ಕಾನೂನಿನ ಪ್ರಕಾರ, ನನ್ನ ಇಲಾಖೆಯ ಮೂಲಕವೇ ಬಿಡುಗಡೆ ಆಗಲಿ' ಎಂದರು.

'ಆಪ್ತರ ಮಾತು ಕೇಳಿರಬಹುದು'

'ಯಡಿಯೂರಪ್ಪ ಕೆಲವರನ್ನು ಬೇಗನೇ ನಂಬುತ್ತಾರೆ. ಅವರು ಕೆಜೆಪಿ ಕಟ್ಟಲು ಮುಂದಾದಾಗ ನಾನು ಬೇಡವೆಂದಿದ್ದೆ. ಆದರೆ, ಅವರದೇ ಆಪ್ತ ವಲಯದ ಕೆಲವರು ಅಂದು ಅವರನ್ನು ದಾರಿ ತಪ್ಪಿಸಿದ್ದರು. ಕೆಲವರ ಮಾತು ಕೇಳಿ ದಾರಿ ತಪ್ಪಿದ್ದಾಗಿ ಯಡಿಯೂರಪ್ಪ ಆ ಬಳಿಕ ನನ್ನಲ್ಲಿ ಹೇಳಿದ್ದರು. ಈಗಲೂ ಅಂಥ ಆಪ್ತರ ಮಾತು ಕೇಳಿಯೇ ನೇರವಾಗಿ ಹಣ ಬಿಡುಗಡೆ ಮಾಡಿರಬಹುದು ಎಂಬುದು ನನ್ನ ಭಾವನೆ' ಎಂದು ಈಶ್ವರಪ್ಪ ಹೇಳಿದರು.

'ಇದು ನನ್ನ ಹಾಗೂ ಮುಖ್ಯಮಂತ್ರಿ ನಡುವಿನ ವೈಯಕ್ತಿಕ ವಿಚಾರವಲ್ಲ. ನನ್ನ ಇಲಾಖೆಗೆ ಸಂಬಂಧಿಸಿದ ಅನುದಾನವನ್ನು ನನ್ನ ಗಮನಕ್ಕೆ ತಾರದೆ ನೇರವಾಗಿ ಶಾಸಕರಿಗೆ ಬಿಡುಗಡೆ ಮಾಡಿದ್ದಕ್ಕಾಗಿಯಷ್ಟೇ ಅಸಮಾಧಾನ ವ್ಯಕ್ತಪಡಿಸಿದ್ದೇನೆ' ಎಂದು ಸ್ಪಷ್ಟಪಡಿಸಿದರು.

'ಮುಖ್ಯಮಂತ್ರಿ ವಿರುದ್ಧ ರಾಜ್ಯಪಾಲರು ಅಥವಾ ಕೇಂದ್ರದ ನಾಯಕರ ಬಳಿ ದೂರು ಕೊಟ್ಟಿಲ್ಲ. ಹಲವು ವರ್ಷ ಗುಜರಾತ್‌ನ ಹಣಕಾಸು ಸಚಿವರಾಗಿದ್ದ, ರಾಜ್ಯಪಾಲ ವಜುಭಾಯಿವಾಲಾ ಅವರ ಸಲಹೆ ಪಡೆದಿದ್ದೇನೆ. ಈ ಬಗ್ಗೆ ಅರುಣ್ ಸಿಂಗ್,ನಳಿನ್ ಕುಮಾರ್ ಕಟೀಲ್, ಸಿ.ಟಿ. ರವಿ ಗಮನಕ್ಕೂ ತಂದಿದ್ದೆ. ನಿಯಮ ಉಲ್ಲಂಘಿಸಿ ಹಂಚಿಕೆಯಾಗಿರುವ ಅನುದಾನವನ್ನು ತಕ್ಷಣವೇ ತಡೆ ಹಿಡಿಯುವಂತೆ ಈ ಮೂವರೂ ನನಗೆ ಸೂಚಿಸಿದ್ದರು. ಅವರ ಮಾತಿನಂತೆ ತಡೆಹಿಡಿದಿದ್ದೇನೆ' ಎಂದರು.

'ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಮರಿಸ್ವಾಮಿ ಮನವಿ ಮೇರೆಗೆ ₹ 65 ಕೋಟಿ ಅನುದಾನವನ್ನು ನೇರವಾಗಿ ಆ ಜಿಲ್ಲಾ ಪಂಚಾಯಿತಿಯೊಂದಕ್ಕೇ ನೀಡಲಾಗಿದೆ. ಇದನ್ನೂ ನಾನು ತಡೆಹಿಡಿದಿದ್ದೆ. ಆದರೆ, ಅದಾದ ನಂತರವೂ ಹಣಕಾಸು ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದು, ಹಣ ಬಿಡುಗಡೆಗೆ ಆದೇಶ ಮಾಡಿದ್ದಾರೆ. ಇಲಾಖೆಗೆ ಬಂದ ಹಣವನ್ನು ಮುಖ್ಯಮಂತ್ರಿಯೇ ಹಂಚಿಕೆ ಮಾಡುವುದಾದರೆ ಸಚಿವರು ಇರುವುದು ಏಕೆ?' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯಾರಿಗೂ ಹೆದರಲ್ಲ: 'ನನ್ನ ಜೀವಮಾನದಲ್ಲಿ ಒಮ್ಮೆಯೂ ರೆಬೆಲ್ ಆಗಿಲ್ಲ. ಆದರೆ, ನ್ಯಾಯವನ್ನು ಎಂದಿಗೂ ಬಿಡುವುದಿಲ್ಲ. ನಾನು ಈಗಲೂ ಪಕ್ಷಕ್ಕೆ ನಿಷ್ಠನಾಗಿಯೇ ಇದ್ದೇನೆ. ನಾನು ರಾಜ್ಯಪಾಲರಿಗೆ ಪತ್ರ ಬರೆದಿರುವುದಕ್ಕೆ ಕೆಲವು ಸಚಿವರು ಹಾಗೂ ಶಾಸಕರು ಪತ್ರಿಕಾಗೋಷ್ಠಿ ಮಾಡಿ ಟೀಕಿಸಿದ್ದು, ನನ್ನ ವಿರುದ್ಧ ಸಹಿ ಸಂಗ್ರಹ ಮಾಡುವುದಾಗಿಯೂ ಹೇಳಿದ್ದಾರೆ. ವಜಾ ಮಾಡುವ ಮತ್ತು ರಾಜೀನಾಮೆಯ ಮಾತುಗಳೂ ಹರಿದಾಡುತ್ತಿವೆ. ಇಂತಹ ಬೆದರಿಕೆಗೆ ನಾನು ಬಗ್ಗುವವನಲ್ಲ' ಎಂದು ತಿರುಗೇಟು ನೀಡಿದರು.

ಪಕ್ಷದ ಅನೇಕ ಸಚಿವರು, ಶಾಸಕರು, ಸಂಸದರು ತಮಗೆ ಕರೆ ಮಾಡಿ, ಬೆಂಬಲ ವ್ಯಕ್ತಪಡಿಸಿದ್ದಾಗಿ ತಿಳಿಸಿದ ಈಶ್ವರಪ್ಪ, 'ನೀವು ಗಟ್ಟಿ ನಿಲುವು ತೆಗೆದುಕೊಂಡಿದ್ದು, ನಿಮ್ಮ ಜತೆ ಇದ್ದೇವೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾಗಿ ಹೇಳಿದರು.

'ಸಚಿವರ ನಡೆ ಖಂಡನಾರ್ಹ'

ಪ್ರಜಾವಾಣಿ ವಾರ್ತೆ

ಗೋಕರ್ಣ: 'ಮುಖ್ಯಮಂತ್ರಿ ಯಡಿಯೂರಪ್ಪ ಅವರ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರಪ್ಪ ಅವರ ನಡೆ ಖಂಡನಾರ್ಹ. ಹಿರಿಯ ಸಚಿವರಾಗಿ ಇಂತಹ ಕ್ರಮ ಕೈಗೊಂಡಿದ್ದು ಎಲ್ಲರಿಗೂ ಮುಜುಗರ ಉಂಟುಮಾಡಿದೆ' ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ ಅಸಮಾಧಾನ ವ್ಯಕ್ತಪಡಿಸಿದರು.

ಗೋಕರ್ಣದ ಗಂಗೆಕೊಳ್ಳದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಇಬ್ಬರೂ ಹಿರಿಯರು, ಒಂದೇ ಜಿಲ್ಲೆಯವರು. ಏನೇ ಸಮಸ್ಯೆ ಇದ್ದರೂ ಬಗೆಹರಿಸಿಕೊಳ್ಳಲು ಹಲವು ದಾರಿಗಳಿದ್ದವು. ಈಗ ಸರ್ಕಾರದ ಗೌರವಕ್ಕೂ ಧಕ್ಕೆ ಉಂಟಾಗಿದೆ. ವಿರೋಧ ಪಕ್ಷದವರಿಗೂ ಟೀಕಿಸಲು ವಿಷಯ ಸಿಕ್ಕಿದ ಹಾಗೆ ಆಗಿದೆ' ಎಂದರು.

'ಬೇರೆ ಬೇರೆ ಇಲಾಖೆಗಳಲ್ಲಿ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿಗಳಿಗೆ ಪರಮೋಚ್ಚ ಅಧಿಕಾರ ಇದೆ. ಇದೇನೂ ಹೊಸತಲ್ಲ. ಸಾಮಾನ್ಯವಾಗಿ ಎಲ್ಲಾ ಮುಖ್ಯಮಂತ್ರಿಯವರೂ ಇಂತಹ ಕ್ರಮ ಕೈಗೊಂಡ ಉದಾಹರಣೆಗಳಿವೆ. ಈಶ್ವರಪ್ಪ ಅವರ ಈ ಕ್ರಮಕ್ಕೆ ನಮ್ಮ ಬೆಂಬಲವಿಲ್ಲ. ಈಶ್ವರಪ್ಪ, ಬಸವರಾಜ ಯತ್ನಾಳ ಇಂಥವರಿಂದ ಸರ್ಕಾರಕ್ಕೆ ಮತ್ತು ಪಕ್ಷಕ್ಕೆ ಹಾನಿಯಾಗುತ್ತಿದೆ' ಎಂದು ಹೇಳಿದರು.

ಸಚಿವ ಈಶ್ವರಪ್ಪ ಸಿಟ್ಟಿಗೆ ₹65 ಕೋಟಿ ಮೂಲ

ಒಂದನೇ ಪುಟದಿಂದ ...

ಆ ಬಳಿಕ ಅದಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅನುಮೋದನೆ ಪಡೆಯಬೇಕು. ಆ ನಂತರವೇ ಅನುದಾನ ಬಿಡುಗಡೆಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ನಡೆಸಬೇಕು.

ಆದರೆ, ಈ ಪ್ರಕರಣದಲ್ಲಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಸಲ್ಲಿಸಿದ್ದ ಕ್ರಿಯಾ ಯೋಜನೆಯನ್ನು ಈಶ್ವರಪ್ಪ ತಡೆ ಹಿಡಿದಿದ್ದರು. ಯಡಿಯೂರಪ್ಪ ಅವರನ್ನು ಭೇಟಿಮಾಡಿ ಈ ವಿಷಯವನ್ನು ತಿಳಿಸಿದ್ದ ಮರಿಸ್ವಾಮಿ, ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿಸಿ, ಅನುದಾನ ಒದಗಿಸುವಂತೆ ಒತ್ತಾಯಿಸಿದ್ದರು.

ತಕ್ಷಣವೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಿ ಕಡತ ತರಿಸಿಕೊಂಡಿದ್ದ ಮುಖ್ಯಮಂತ್ರಿ, ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ್ದರು. ಅನುದಾನ ಬಿಡುಗಡೆ ಮಾಡಿ, ಕಾಮಗಾರಿಗಳಿಗೆ ಮಂಜೂರಾತಿ ಆದೇಶವನ್ನೂ ಹೊರಡಿಸುವಂತೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಆದೇಶಿಸಿದ್ದರು. ಆ ಬಳಿಕ ಸಚಿವರ ಗಮನಕ್ಕೆ ತರುವಂತೆಯೂ ಅಧಿಕೃತ ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದರು.

'ಸಂಬಂಧದ ಕಾರಣಕ್ಕೆ ಅನುದಾನ ನೀಡಿಲ್ಲ'

'ಯಡಿಯೂರಪ್ಪ ಅವರ ಕುಟುಂಬದ ಸಂಬಂಧಿ ಎಂಬ ಕಾರಣಕ್ಕೆ ಅನುದಾನ ನೀಡಿಲ್ಲ. ಬೆಂಗಳೂರು ನಗರ ಜಿಲ್ಲೆಯ ಗ್ರಾಮೀಣ ರಸ್ತೆಗಳ ದುಸ್ಥಿತಿ ಕಂಡು ಮುಖ್ಯಮಂತ್ರಿಯವರು ವಿಶೇಷ ಅನುದಾನ ನೀಡಿದ್ದಾರೆ' ಎಂದು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಮರಿಸ್ವಾಮಿ ಜಿ. ಪ್ರತಿಕ್ರಿಯಿಸಿದರು.

ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ 1,888 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳಿವೆ. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲೂ ವಿಶೇಷ ಅನುದಾನ ಕೋರಲಾಗಿತ್ತು. ಆದರೆ, ಸ್ಪಂದನೆ ದೊರಕಿರಲಿಲ್ಲ. 2021ರ ಜನವರಿ 12ರಂದು ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಕೆಡಿಪಿ ಸಭೆಯಲ್ಲೇ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿತ್ತು ಎಂದರು. 'ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ, ಅನುದಾನ ಬಿಡುಗಡೆ ಮಾಡುವಂತೆ ಈಶ್ವರಪ್ಪ ಅವರನ್ನೂ ಭೇಟಿಮಾಡಿ ಮನವಿ ಮಾಡಿದ್ದೆ. ಅವರಿಂದ ಸ್ಪಂದನೆ ದೊರಕಿರಲಿಲ್ಲ. ನಂತರ ಮುಖ್ಯಮಂತ್ರಿಯವರ ಗಮನಕ್ಕೆ ತಂದಾಗ ಆದೇಶ ಹೊರಡಿಸಿದರು' ಎಂದು ತಿಳಿಸಿದರು.

'ತುಂಡು ಗುತ್ತಿಗೆ'ಗೆ ಒಪ್ಪಿಗೆ: ₹ 65 ಕೋಟಿ ಅನುದಾನದಲ್ಲಿ 1,019 ಕಾಮಗಾರಿಗಳನ್ನು 'ತುಂಡು ಗುತ್ತಿಗೆ' ಆಧಾರದಲ್ಲಿ ಕೈಗೊಳ್ಳಲು ಮುಖ್ಯಮಂತ್ರಿ ಒಪ್ಪಿಗೆ ನೀಡಿದ್ದರು. ಅನುದಾನವನ್ನು ₹ 5 ಲಕ್ಷಕ್ಕಿಂತ ಕಡಿಮೆ ಮೊತ್ತಕ್ಕೆ ವಿಭಜಿಸಿ, ಟೆಂಡರ್ ನಡೆಸದೇ ನೇರವಾಗಿ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ವಹಿಸಲು ಷರತ್ತುಗಳನ್ನು ಸಡಿಲಿಸುವುದಕ್ಕೂ ಯಡಿಯೂರಪ್ಪ ಆದೇಶಿಸಿದ್ದರು.

ಮುಖ್ಯಮಂತ್ರಿ ಆದೇಶದಂತೆ ಕಾಮಗಾರಿಗಳಿಗೆ ಮಂಜೂರಾತಿ ಆದೇಶ ನೀಡಲಾಗಿತ್ತು. ಆ ಬಳಿಕ ವಿವಿಧೆಡೆ ಕಾಮಗಾರಿಗಳಿಗೆ ಚಾಲನೆಯನ್ನೂ ನೀಡಲಾಗಿತ್ತು. ನಂತರ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಪತ್ರವೊಂದನ್ನು ಬರೆದಿರುವ ಈಶ್ವರಪ್ಪ, ₹ 65 ಕೋಟಿ ವೆಚ್ಚದ ರಸ್ತೆ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಡೆ ಹಿಡಿದಿರುವುದಾಗಿ ತಿಳಿಸಿದ್ದಾರೆ ಎಂಬ ಮಾಹಿತಿ ಲಭಿಸಿದೆ.

ಮೈಸೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಈಶ್ವರಪ್ಪ ಅವರು, ಈ ಪ್ರಕರಣದ ಕುರಿತ ಕೆಲವು ಮಾಹಿತಿಗಳನ್ನು ನೀಡಿದ್ದಾರೆ.

'ರಾಜ್ಯದಲ್ಲಿ ಅನೇಕ ಹಿಂದುಳಿದ ಜಿಲ್ಲೆಗಳಿದ್ದರೂ ಆ ಜಿಲ್ಲೆಗೆ ನಯಾಪೈಸೆ ಬಿಡುಗಡೆ ಮಾಡದ ಯಡಿಯೂರಪ್ಪ, ಬೆಂಗಳೂರು ನಗರ ಒಂದೇ ಜಿಲ್ಲೆಗೆ ₹65 ಕೋಟಿ ಕೊಟ್ಟಿರುವುದು ಎಷ್ಟು ಸರಿ' ಎಂದು ಪ್ರಶ್ನಿಸಿರುವ ಈಶ್ವರಪ್ಪ, 'ಅನುಮೋದನೆಗೊಂಡಿರುವ ಬಜೆಟ್ ಅನುದಾನವನ್ನು ಇಲಾಖೆಗೆ ಹಂಚಿಕೆ ಮಾಡಿದ ಮೇಲೆ ಖರ್ಚು ಮಾಡುವುದು ಇಲಾಖೆಯ ಹೊಣೆಗಾರಿಕೆ. ಈ ವಿಷಯದಲ್ಲಿ ಮುಖ್ಯಮಂತ್ರಿ ನಿಯಮ ಮತ್ತು ಪ್ರಕ್ರಿಯೆಯನ್ನು ಉಲ್ಲಂಘಿಸಿದ್ದಾರೆ. ಇದಕ್ಕಾಗಿ ನಾನು ಪ್ರಶ್ನಿಸಿದ್ದೇನೆಯೇ ವಿನಃ ಬಂಡಾಯ ಎದ್ದಿಲ್ಲ' ಎಂದರು.

ನಿವೃತ್ತ ಅಧಿಕಾರಿಯ ಸೇವೆ ವಿಸ್ತರಣೆಗೆ ಆದೇಶ

ಒಂದನೇ ಪುಟದಿಂದ...

ಪಾಷ ಮಾ.31ರಂದೇ ಸೇವೆಯಿಂದ ನಿವೃತ್ತರಾಗಿದ್ದು, ಕಚೇರಿಯ ಕಾರ್ಯಭಾರವನ್ನೂ ಬೇರೆ ಅಧಿಕಾರಿಗೆ ವಹಿಸಿಕೊಟ್ಟಿದ್ದಾರೆ. ಆದರೆ, ಮುಖ್ಯಮಂತ್ರಿಯವರ ಟಿಪ್ಪಣಿ ಆಧರಿಸಿ ಒಂದು ವರ್ಷ ಅವರ ಸೇವಾ ಅವಧಿ ವಿಸ್ತರಿಸಲು ಹಣಕಾಸು ಇಲಾಖೆಯ ಒಪ್ಪಿಗೆ ಕೋರಿ ಲೋಕೋಪಯೋಗಿ ಇಲಾಖೆಯಿಂದ ಪ್ರಸ್ತಾವ ಸಲ್ಲಿಸಲಾಗಿದೆ. ಇದು ರಾಜ್ಯ ಸರ್ಕಾರಿ ಅಧಿಕಾರಿಗಳ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

'ಸಿಗಂದೂರಿನಲ್ಲಿ 1.8 ಕಿ.ಮೀ. ಉದ್ದದ ಸೇತುವೆ ನಿರ್ಮಿಸಲಾಗುತ್ತಿದೆ. ಕಾಮಗಾರಿಯ ಅಂದಾಜು ಪಟ್ಟಿ, ಯೋಜನಾ ವರದಿ ತಯಾರಿಸುವ ಹಂತದಿಂದಲೂ ಪೀರ್ ಪಾಷ ಅಲ್ಲಿ ಕೆಲಸ ಮಾಡಿದ್ದಾರೆ. ದೊಡ್ಡ ಕಾಮಗಾರಿ ನಿರ್ವಹಿಸಿದ ಅನುಭವಿಗಳು ಅಗತ್ಯವಿರುವ ಕಾರಣದಿಂದ ಅವರ ಸೇವಾ ಅವಧಿ ಮುಂದುವರಿಸಲು ನಿರ್ಧರಿಸಲಾಗಿದೆ' ಎಂದು ಲೋಕೋಪಯೋಗಿ ಇಲಾಖೆ ಹಿರಿಯ ಅಧಿಕಾರಿಗಳು ಹೇಳುತ್ತಾರೆ.

ಆದರೆ, ಪೀರ್ ಪಾಷ ತಮ್ಮ ಸೇವಾ ಅವಧಿಯ ಹೆಚ್ಚಿನ ಕಾಲವನ್ನು ಶಿವಮೊಗ್ಗ ನಗರಸಭೆಯಲ್ಲೇ ಕಳೆದಿದ್ದರು. ಮೂರು ವರ್ಷಗಳಿಂದ ಈಚೆಗೆ ರಾಷ್ಟ್ರೀಯ ಹೆದ್ದಾರಿ ವಲಯದ ಶಿವಮೊಗ್ಗ ಉಪ ವಿಭಾಗದಲ್ಲಿ ಕೆಲಸ ಮಾಡಿದ್ದಾರೆ ಎಂಬ ಮಾಹಿತಿ ಲಭಿಸಿದೆ.

'ಪಕ್ಷದ ವೇದಿಕೆಯಲ್ಲಿ ಚರ್ಚಿಸಬೇಕು'

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಪಕ್ಷದಲ್ಲಿನ ಒಳ್ಳೆಯ ಸಂಗತಿಗಳನ್ನು ಹೊರಗಡೆ ಹೇಳಬೇಕು; ಒಳ್ಳೆಯ ಸಂಗತಿ ಅಲ್ಲದಿರುವುದನ್ನು ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಬೇಕು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಶುಕ್ರವಾರ ಇಲ್ಲಿ ಹೇಳಿದರು.

ಮುಖ್ಯಮಂತ್ರಿ ವಿರುದ್ಧ ರಾಜ್ಯಪಾಲ ಹಾಗೂ ಪಕ್ಷದ ವರಿಷ್ಠರಿಗೆ ಸಚಿವ ಕೆ.ಎಸ್.ಈಶ್ವರಪ್ಪ ಬರೆದಿರುವ ಪತ್ರದ ಕುರಿತಾಗಿ ಪ್ರತಿಕ್ರಿಯಿಸಿದ ಅವರು, ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಪಕ್ಷದ ವೇದಿಕೆಯಲ್ಲಿಯೇ ತಿಳಿಸುವುದಾಗಿ ಹೇಳಿದರು.

ಪತ್ರ ಬರೆದಿದ್ದು ಸರಿಯಲ್ಲ: ಶೆಟ್ಟರ್


ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಸಚಿವ ಕೆ.ಎಸ್. ಈಶ್ವರಪ್ಪ ಅವರು ಮುಖ್ಯಮಂತ್ರಿ ವಿರುದ್ಧ ರಾಜ್ಯಪಾಲರಿಗೆ ಪತ್ರ ಬರೆದಿದ್ದು ಸರಿಯಲ್ಲ' ಎಂದು ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಹೇಳಿದರು.

ಇಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಬಹಿರಂಗವಾಗಿ ಪತ್ರ ಬರೆಯುವುದು, ಅದನ್ನು ರಾಜ್ಯಪಾಲರಿಗಾಗಲಿ ಅಥವಾ ಪಕ್ಷದ ಮೇಲಿನವರಿಗಾಗಲಿ ಕಳುಹಿಸುವಂಥದು ಆಗಬಾರದಿತ್ತು. ಏನಿದ್ದರೂ ಮುಖ್ಯಮಂತ್ರಿ ಜೊತೆಯೇ ಚರ್ಚಿಸಬೇಕಿತ್ತು. ಇದೆಲ್ಲವೂ ನಾಲ್ಕು ಗೋಡೆಗಳ ಒಳಗೆ ಆಗಬೇಕಾಗಿತ್ತು' ಎಂದು ಪ್ರತಿಕ್ರಿಯಿಸಿದರು.

'ಈಶ್ವರಪ್ಪ ಅವರು ರಾಜ್ಯಪಾಲರಿಗೆ ದೂರು ನೀಡಿರುವ ವಿಚಾರವು, ಉಪ ಚುನಾವಣೆಗಳ ಮೇಲೆ ಪರಿಣಾಮ ಬೀರುವುದಿಲ್ಲ' ಎಂದರು.

'ಉಪ ಚುನಾವಣೆ ಬಳಿಕ ರಾಜಕೀಯ ಬದಲಾವಣೆ ಆಗುತ್ತದೆ' ಎಂಬ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಯಡಿಯೂರಪ್ಪ ಅಧಿಕಾರ ಸ್ವೀಕರಿಸಿದಾಗಿನಿಂದಲೂ ಕಾಂಗ್ರೆಸ್‌ನವರು ಇದನ್ನೇ ಹೇಳಿಕೊಂಡು ಬಂದಿದ್ದಾರೆ. ಏನೂ ಬದಲಾವಣೆ ಆಗುವುದಿಲ್ಲ' ಎಂದು ತಿಳಿಸಿದರು.



ಶರಣಬಸವೇಶ್ವರ ರಥೋತ್ಸವ

ಕಲಬುರ್ಗಿಯಲ್ಲಿ ಶುಕ್ರವಾರ ಶರಣಬಸವೇಶ್ವರ ರಥೋತ್ಸವ ನೆರವೇರಿತು. ಕೋವಿಡ್ ಮಾರ್ಗಸೂಚಿ ಅನುಸರಿಸುವ ಕಾರಣ ಈ ಬಾರಿ ಜಾತ್ರೆಯನ್ನು ಸಾಂಕೇತಿಕವಾಗಿ ಆಚರಿಸಲಾಯಿತು

'ಮುಖ್ಯಮಂತ್ರಿಯನ್ನು ಬದಲಿಸದಿದ್ದರೆ ದೊಡ್ಡ ಸ್ಫೋಟ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಕರ್ನಾಟಕದಲ್ಲಿ ಸದ್ಯ ಇರುವುದು ಬಿಜೆಪಿ ಸರ್ಕಾರವಲ್ಲ; ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನ ಸರ್ಕಾರವಲ್ಲ. ಇಲ್ಲಿ ಅಪ್ಪ–ಮಕ್ಕಳ ಕುಟುಂಬ ಸರ್ಕಾರ ಇದೆ. ಇದು ಆದಷ್ಟು ಬೇಗ ತೊಲಗಬೇಕು. ರಾಜ್ಯಕ್ಕೆ ಒಳ್ಳೆಯ ಮುಖ್ಯಮಂತ್ರಿ ಬರಬೇಕು' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,'ಮೇ 2ರ ಒಳಗಾಗಿ ಯಡಿಯೂರಪ್ಪನವರನ್ನು ಬದಲಿಸದಿದ್ದರೆ ರಾಜ್ಯ ರಾಜಕೀಯದಲ್ಲಿ ದೊಡ್ಡ ಸ್ಫೋಟ ಆಗಲಿದೆ' ಎಂದು ಎಚ್ಚರಿಸಿದರು.

'ರಾಜ್ಯದಲ್ಲಿ ಯಡಿಯೂರಪ್ಪ, ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ವಿಜಯೇಂದ್ರ ನೇತೃತ್ವದ ಸರ್ಕಾರವಿದೆ. ಇವರು ಪರಸ್ಪರ ಹೊಂದಾಣಿಕೆ ಮಾಡಿಕೊಂಡು ಸಿ.ಡಿ ಪ್ರಕರಣದ ಹೆಸರಲ್ಲಿ ಸದನ ನಡೆಯದಂತೆ ಮಾಡಿದ್ದಾರೆ' ಎಂದು ಅವರು ಆರೋಪಿಸಿದರು.

'ನನ್ನ ನಂತರ ನೀವೇ ಮುಖ್ಯಮಂತ್ರಿ ಎಂದು ನಾಲ್ಕೈದು ಜನಕ್ಕೆ ಆಸೆ ಹುಟ್ಟಿಸಿದ್ದಾರೆ. ಅವರೆಲ್ಲ ಯಡಿಯೂರಪ್ಪನವರನ್ನ ತಂದೆ, ತಾಯಿ ಎಂದು ಹೇಳಿಕೊಂಡು ಅವರ ಹಿಂದೆ ಸುತ್ತುತ್ತಿದ್ದಾರೆ. ಈ ನಾಲ್ಕು ಮಂದಿಗಾಗಿ ರಾಜ್ಯದಲ್ಲಿ ಬಿಜೆಪಿಯನ್ನು ಬಲಿಕೊಡಲು ಆಗುವುದಿಲ್ಲ' ಎಂದರು.

ಅರುಣ್ ಸಿಂಗ್ ವಿರುದ್ಧ ಗುಡುಗು: ಅರುಣ್ ಸಿಂಗ್ ಅವರಿಗೆ ರಾಜ್ಯ ಉಸ್ತುವಾರಿ ನೀಡಲಾಗಿದೆಯೇ ಹೊರತು, ಯಡಿಯೂರಪ್ಪನವರಿಗೆ, ಅವರ ಮಗನಿಗೆ ಶಹಾಬಾಷ್‌ಗಿರಿ ಕೊಡಲು ಅಲ್ಲ. 'ನೀವು ಬಿಜೆಪಿ ಪರವಾಗಿದ್ದೀರೊ ಅಥವಾ ಯಡಿಯೂರಪ್ಪನವರ ಪರವಾಗಿದ್ದೀರೊ ಎಂಬುದನ್ನು ಮೊದಲು ಸ್ಪಷ್ಟಪಡಿಸಿ' ಎಂದು ಅರುಣ್ ಸಿಂಗ್‌ರನ್ನು ಪ್ರಶ್ನಿಸಿದರು.

'ಯಾವ ಸಚಿವರಿಗೂ ಸ್ವತಂತ್ರ ನಿರ್ಧಾರ ಕೈಗೊಳ್ಳಲು ಬಿಡುತ್ತಿಲ್ಲ. ಅಪ್ಪ–ಮಗ ನೇರವಾಗಿ ಎಲ್ಲ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಹಾಗಾದರೆ ಸಚಿವ ಸಂಪುಟ ಏಕೆ ಬೇಕು? ಸಚಿವರು ಏಕೆ ಬೇಕು? ಎಲ್ಲ ಇಲಾಖೆಗಳನ್ನು ಸೇರಿಸಿ ವಿಜಯೇಂದ್ರ ಒಬ್ಬನನ್ನೇ ಸಚಿವನನ್ನಾಗಿ ಮಾಡಲಿ. ಮುಖ್ಯಮಂತ್ರಿನೂ ಆತನೇ ಆಗಲಿ' ಎಂದು ಗುಡುಗಿದರು.

'ಬಿಎಸ್‌ವೈಗೆ ₹ 200 ಕೋಟಿ ಮನೆ ಗಿಫ್ಟ್'



'ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಅವರ ಬೀಗ, ಬೆಂಗಳೂರು ನಗರ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಮರಿಸ್ವಾಮಿ ₹200 ಕೋಟಿ ಮೊತ್ತದ ಮನೆಯನ್ನು ಗಿಫ್ಟ್ ನೀಡಿದ್ದಾರೆ' ಎಂದು ಇದೇ ಸಂದರ್ಭದಲ್ಲಿ ಬಸನಗೌಡ ಪಾಟೀಲ ಯತ್ನಾಳ್ ಆರೋಪಿಸಿದರು.

ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಯುವಕನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿಂದ ಬೆಂಗಳೂರಿಗೆ ತೆರಳುತ್ತಿದ್ದ ಖಾಸಗಿ ಬಸ್‌ನಲ್ಲಿ ಅನ್ಯ ಧರ್ಮದ ಯುವತಿಯ ಜೊತೆಗೆ ಪ್ರಯಾಣಿಸುತ್ತಿದ್ದ ಯುವಕನ ಮೇಲೆ ಕೆಲ ವ್ಯಕ್ತಿಗಳು ಹಲ್ಲೆ ಮಾಡಿದ್ದಾರೆ. ಈ ಸಂಬಂಧ 8 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ.

ಗುರುವಾರ ರಾತ್ರಿ ನಗರದ ಪಂಪ್‌ವೆಲ್ ಬಳಿ ಈ ಘಟನೆ ನಡೆದಿದೆ. ಬೈಕಂಪಾಡಿ -ಜೋಕಟ್ಟೆ ನಿವಾಸಿ ಅಸ್ವಿದ್ ಅನ್ವರ್ ಮುಹಮ್ಮದ್ ಹಲ್ಲೆಗೆ ಒಳಗಾದವರು. ರಾತ್ರಿ ಬಸ್ ತಡೆದು ನಿಲ್ಲಿಸಿದ ನಾಲ್ಕೈದು ಮಂದಿಯ ತಂಡ ಯುವಕನನ್ನು ಬಸ್‌ನಿಂದ ಹೊರಗೆಳೆದು ಹಲ್ಲೆ ನಡೆಸಿದ್ದು, ಚೂರಿಯಿಂದ ಇರಿಯಲಾಗಿದೆ.

ಹಲ್ಲೆಗೊಳಗಾದ ಯುವಕನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಯುವಕನ ಜೊತೆ ಯುವತಿಯೊಬ್ಬಳಿದ್ದು, ಆಕೆಯನ್ನು ಪೋಷಕರ ವಶಕ್ಕೆ ಒಪ್ಪಿಸಲಾಗಿದೆ.

ಬಂಧನಕ್ಕೆ ಕ್ರಮ: 'ನಗರದ ಪಂಪ್‌ವೆಲ್ ಬಳಿ ಯುವಕನ ಮೇಲೆ ಹಲ್ಲೆ ನಡೆದಿದ್ದು, ಯುವಕನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಜೊತೆಗಿದ್ದ ಯುವತಿಯನ್ನು ಮನೆಗೆ ಕಳುಹಿಸಲಾಗಿದೆ. ಹಲ್ಲೆಗೆ ಸಂಬಂಧಿಸಿದಂತೆ ಕಂಕನಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಡಿಸಿಪಿ ನೇತೃತ್ವದಲ್ಲಿ ತನಿಖೆ ಆರಂಭಿಸಲಾಗಿದೆ. ಎಲ್ಲ ಆರೋಪಿಗಳನ್ನು ಶೀಘ್ರ ಬಂಧಿಸಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ನಿಧನ ವಾರ್ತೆ

ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ



ಅಫಜಲಪುರ (ಕಲಬುರ್ಗಿ ಜಿಲ್ಲೆ): ತಾಲ್ಲೂಕಿನ ನೀಲೂರ ಗ್ರಾಮದ ರಾಚೋಟೇಶ್ವರ ಮಠದ ಪೀಠಾಧಿಪತಿ ಮಲ್ಲಿಕಾರ್ಜುನ ಶಿವಾಚಾರ್ಯರು (62) ಅನಾರೋಗ್ಯದಿಂದ ಶುಕ್ರವಾರ ಮಠದಲ್ಲಿ ನಿಧನರಾದರು.

ಮಠದ ಆವರಣದಲ್ಲಿ ಶನಿವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಮಠದ ಭಕ್ತರು ತಿಳಿಸಿದ್ದಾರೆ.

ಜೇವರ್ಗಿ ತಾಲ್ಲೂಕಿನ ಮಂದೇವಾಲ ಗ್ರಾಮದ ಮಲ್ಲಿಕಾರ್ಜುನ ಶಿವಾಚಾರ್ಯರನ್ನು ರಾಚೋಟೇಶ್ವರ ಮಠಕ್ಕೆ 1984ರಲ್ಲಿ ಪೀಠಾಧಿಪತಿಯನ್ನಾಗಿ ಮಾಡಲಾಗಿತ್ತು. ಇವರು ಆಯುರ್ವೇದ ಚಿಕಿತ್ಸೆ ನೀಡುತ್ತಿದ್ದ ಕಾರಣ ಭಕ್ತರು 'ವೈದ್ಯಭೂಷಣ' ಎಂದು ಕರೆಯುತ್ತಿದ್ದರು.

ಮಾನವ ಹಸ್ತಕ್ಷೇಪ ಹೆಚ್ಚಾದಷ್ಟು ಅಪಾಯವೂ ಹೆಚ್ಚು: ಅಧ್ಯಯನ ವರದಿ

ಪಶ್ಚಿಮಘಟ್ಟ ಭೂಕುಸಿತದ ಸೂಕ್ಷ್ಮ ಪ್ರದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ರಸ್ತೆ, ಸೇತುವೆ, ಕಟ್ಟಡ ನಿರ್ಮಾಣಕ್ಕಾಗಿ ಇಳಿಜಾರನ್ನು ಅತಿಯಾಗಿ ಕತ್ತರಿಸುವುದೂ, ಗಣಿಗಾರಿಕೆ ನಡೆಸುವುದೂ ಭೂಕುಸಿತಕ್ಕೆ ಕಾರಣ ಎಂದು ಇಸ್ರೊ ಅಂಗ ಸಂಸ್ಥೆ ರಾಷ್ಟ್ರೀಯ ದೂರ ಸಂವೇದಿ ಕೇಂದ್ರ ಮತ್ತು ಭಾರತೀಯ ಭೂಗರ್ಭ ಶಾಸ್ತ್ರ ಸರ್ವೇಕ್ಷಣಾ ಸಂಸ್ಥೆ ನಡೆಸಿರುವ ಜಂಟಿ ಅಧ್ಯಯನದ ವರದಿ ತಿಳಿಸಿದೆ.

ಪಶ್ಚಿಮ ಘಟ್ಟವು ಮೂಲತಃ ಭೂಕುಸಿತದ ಸಾಧ್ಯತೆ ಇರುವ ಸೂಕ್ಷ್ಮ ಪ್ರದೇಶವಾಗಿದೆ. ಇಲ್ಲಿನ ಕಲ್ಲು ಮಿಶ್ರಿತ ಸಡಿಲವಾದ ಮಣ್ಣಿನ ರಚನೆ, ಕಡಿದಾದ ಗುಡ್ಡಗಳು, ತೆಳುವಾದ ಮೇಲ್ಮಣ್ಣಿನ ಹೊದಿಕೆ– ಇವೆಲ್ಲ ಭೂಕುಸಿತಕ್ಕೆ ಪೂರಕವಾಗಬಲ್ಲ ಸನ್ನಿವೇಶ ಸೃಷ್ಟಿಸಬಲ್ಲವು ಎಂದು ಹೇಳಿದೆ.

ಕಲ್ಲು ಬಂಡೆಗಳ ಅದಿರಿನ ಸ್ವರೂಪ ಮತ್ತು ರಚನೆ, ಮೇಲ್ಮಣ್ಣು ಹಾಗೂ ಕೆಳಸ್ತರದ ಭೂರಚನೆ, ಮೇಲ್ಪದರ ಹಸಿರು ಮರಗಿಡಗಳ ಹೊದಿಕೆ ಅಥವಾ ಕಾಡಿನ ನಾಶ, ಇಳಿಜಾರಿನ ಪ್ರದೇಶದ ಭೂಸ್ವರೂಪ ಬದಲಾವಣೆ, ನೀರಿನ ಹರಿವಿನ ನೈಸರ್ಗಿಕ ಬಸಿಗಾಲುವೆಗಳ ನಾಶ ಅಥವಾ ಹೂಳು ತುಂಬಿರುವುದು ಅಥವಾ ಅವುಗಳನ್ನು ಅನ್ಯ ಉದ್ದೇಶಕ್ಕೆ ಬಳಸಿರುವುದು ಮತ್ತೊಂದು ಕಾರಣ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮಣ್ಣು ಸಡಿಲವಾದ ಪ್ರದೇಶದಲ್ಲಿಯೇ ಮಳೆಯ ನೀರು ಹರಿಯುವುದು ಮತ್ತು ಇಂಗುವುದು, ಇಳಿಜಾರು ಪ್ರದೇಶದ ಕ್ವಾರಿಗಳು, ಕಡಿದಾದ ಇಳಿಜಾರಿನಲ್ಲಿ ಕಾಮಗಾರಿಗಳು, ಗುಡ್ಡಗಳ ಬುಡದಲ್ಲಿ ಮಣ್ಣು ಸವೆತ, ತೊರೆ–ಹೊಳೆಯಂಚುಗಳಲ್ಲಿ ಮಣ್ಣು ಸವೆತ ಕೂಡ ಭೂಕುಸಿತಕ್ಕೆ ಕಾರಣವಾಗಿದೆ.

ಇವೆಲ್ಲವೂ ಒಂದಲ್ಲ ಒಂದು ಬಗೆಯಲ್ಲಿ ಭೂಕುಸಿತಕ್ಕೆ ಪೂರಕ ಪರಿಸ್ಥಿತಿ ನಿರ್ಮಿಸುತ್ತಿವೆ. ಒಟ್ಟಾರೆಯಾಗಿ, ಇದರಿಂದಾಗುವ ಈ ಬಗೆಯ ಭೂಕುಸಿತಗಳು 'ತೇವಾಂಶ ಭರಿತ ಮಣ್ಣು ಹಾಗೂ ಕಲ್ಲು ಬಂಡೆಗಳ ಜಾರುವಿಕೆ' ಎಂದು ತಜ್ಞರು ಗುರುತಿಸುತ್ತಾರೆ.



ಭೂಕುಸಿತಕ್ಕೆ ಎರಡು ಬಗೆಯ ಕಾರಣ: ವರದಿ

- ಒಮ್ಮೆಲೆ ಅತಿಯಾಗಿ ಸುರಿಯುವ ಭಾರಿ ಮಳೆ (ಕರ್ನಾಟಕದಲ್ಲಿ ಬೀಳುವ ವಾರ್ಷಿಕ ಮಳೆಯ ಪ್ರಮಾಣ ಸರಾಸರಿ ಒಂದೇ ರೀತಿ ಇದ್ದರೂ, ಕೆಲವೇ ಗಂಟೆಗಳಲ್ಲಿ ಒಮ್ಮೆಲೇ ಅತಿಯಾಗಿ ಮಳೆ ಸುರಿಯುವ ಸಂದರ್ಭಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿರುವುದನ್ನು ಹವಾಮಾನ ತಜ್ಞರು ದಾಖಲಿಸಿದ್ದಾರೆ. ಸ್ಥಳೀಯ ಹಾಗೂ ಜಾಗತಿಕ ಪರಿಸರದ ಗುಣಮಟ್ಟದಲ್ಲಿನ ಭಾರಿ ಏರು ಪೇರಿನಿಂದಾಗುತ್ತಿರುವ ಒಟ್ಟಾರೆ ಫಲಶೃತಿಯಾದ ಹವಾಮಾನ ಬದಲಾವಣೆಯ ಪರಿಣಾಮ).
- ಸಡಿಲವಾದ ಮೇಲ್ಮಣ್ಣಿನ ಹಸಿರು ಹೊದಿಕೆಯನ್ನು ನಾಶ ಮಾಡುವ ಹಾಗೂ ಭಾರಿ ಪ್ರಮಾಣದ ಮಳೆ ನೀರನ್ನು ಒಮ್ಮೆಲೆ ಮಣ್ಣಿನೊಳಕ್ಕೆ ಬಿಟ್ಟುಕೊಡುವ ರೀತಿಯ ಭೂಸ್ವರೂಪ ಪರಿವರ್ತನೆ. ಒಂದು ಪ್ರದೇಶದಲ್ಲಿ ಏಕ ಕಾಲಕ್ಕೆ ಇವೆರಡೂ ಪ್ರಚೋದನೆಗಳು ಜೊತೆಯಾದರೆ ಅಲ್ಲಿ ಭೂಕುಸಿತವಾಗುತ್ತದೆ.

ಎಂಟು ಜಿಲ್ಲೆಗಳ ಚಿತ್ರಮಂದಿರಗಳಲ್ಲಿ ಶೇ 50 ಪ್ರೇಕ್ಷಕರಿಗಷ್ಟೇ ಅವಕಾಶ

ಸರ್ಕಾರದ ನಿರ್ಧಾರಕ್ಕೆ ಚಿತ್ರರಂಗದ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್–19 ನಿಯಂತ್ರಣಕ್ಕಾಗಿ ರಾಜ್ಯದ ಎಂಟು ಜಿಲ್ಲೆಗಳ ಚಿತ್ರಮಂದಿರಗಳಲ್ಲಿ ಗರಿಷ್ಠ ಶೇ 50 ಪ್ರೇಕ್ಷಕರಿಗಷ್ಟೇ ಅವಕಾಶ ನೀಡುವ ರಾಜ್ಯ ಸರ್ಕಾರದ ನಿರ್ಧಾರವನ್ನು ಚಿತ್ರರಂಗ ವಿರೋಧಿಸಿದೆ.

ಬಿಬಿಎಂಪಿ ವ್ಯಾಪ್ತಿ ಸೇರಿದಂತೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಕಲಬುರ್ಗಿ, ದಕ್ಷಿಣ ಕನ್ನಡ, ಉಡುಪಿ, ಬೀದರ್ ಮತ್ತು ಧಾರವಾಡ ಜಿಲ್ಲೆಗಳ ಚಿತ್ರಮಂದಿರಗಳಲ್ಲಿ ಗರಿಷ್ಠ ಶೇ 50 ವೀಕ್ಷಕರಿಗೆ ಮಾತ್ರ ಅವಕಾಶ ನೀಡಿ ಸರ್ಕಾರ ಆದೇಶ ಹೊರಡಿಸಿದೆ.

'ಆಘಾತ ಆಗಿದೆ': 'ಜನರು ಕುಟುಂಬ ಸಮೇತರಾಗಿ ಬಂದು ಚಿತ್ರಗಳನ್ನು ನೋಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಿರ್ಬಂಧ ಸೂಕ್ತವಲ್ಲ. ಎಲ್ಲ ಕಡೆ ಚುನಾವಣೆ ರ್‍ಯಾಲಿ, ಹಲವು ಕಾರ್ಯಕ್ರಮಗಳು ನಡೆಯುತ್ತಿದೆ. ಇದರ ನಡುವೆ ಸಿನಿಮಾವನ್ನು ಮಾತ್ರ ಗುರಿಯಾಗಿಸಿ ಏಕೆ ನಿರ್ಬಂಧ ಹಾಕಲಾಗುತ್ತಿದೆ. ಚಿತ್ರಮಂದಿರದೊಳಗೆ ಕೇವಲ 500–600 ಜನರಷ್ಟೇ ಇರುತ್ತಾರೆ. ಎಲ್ಲರೂ ಮಾಸ್ಕ್ ಧರಿಸಿಯೇ ಚಿತ್ರಗಳನ್ನು ನೋಡುತ್ತಿದ್ದಾರೆ. ಧೈರ್ಯವಾಗಿ ಚಿತ್ರಮಂದಿರದತ್ತ ಜನರು ಬರುತ್ತಿದ್ದಾರೆ. ಹೊಸ ನಿಯಮದಂತೆ ಎರಡೆರಡು ಇಂಟರ್‌ವಲ್‌ಗಳು ಇವೆ. ಏಕಾಏಕಿ ಈ ನಿರ್ಬಂಧ ಹೇರಿರುವುದು, ಉದ್ಯಮ, ಚಿತ್ರರಂಗವನ್ನು ನಡುನೀರಿನಲ್ಲಿ ಕೈಬಿಟ್ಟಂತಾಗಿದೆ. ಮುಂದೆ ನಿರ್ಮಾಪಕರ ಪರಿಸ್ಥಿತಿ ಏನು. ಇದು ದುಃಖಕರವಾದ ವಿಷಯ' ಎಂದು ಗುರುವಾರವಷ್ಟೇ ಬಿಡುಗಡೆಯಾದ 'ಯುವರತ್ನ' ಚಿತ್ರದ ನಿರ್ದೇಶಕ ಸಂತೋಷ್ ಆನಂದರಾಮ್ ಹೇಳಿದರು.

'ಈ ಪರಿಸ್ಥಿತಿಯಲ್ಲಿ ಸರ್ಕಾರ ಮುಂದಾಲೋಚಿಸಿಯೇ ನಿರ್ಧಾರ ತೆಗೆದುಕೊಂಡಿರುತ್ತದೆ. ಆದರೆ, ಈಗಾಗಲೇ ಲಾಕ್‌ಡೌನ್ ಹಾಗೂ ಹಲವು ನಿರ್ಬಂಧದಿಂದ ಚಿತ್ರರಂಗವು ಕಂಗೆಟ್ಟಿದೆ. ಸರ್ಕಾರವೂ ಇಂತಹ ನಿರ್ಬಂಧ ಹಾಕುವಾಗ, ಚಿತ್ರರಂಗಕ್ಕೆ ಕನಿಷ್ಠ ತೆರಿಗೆ ವಿನಾಯಿತಿ ಅಥವಾ ಕಡಿತದಂತಹ ಸೌಲಭ್ಯವನ್ನು ಕಲ್ಪಿಸಬೇಕು. ಇಲ್ಲವಾದಲ್ಲಿ ಸಂಕಷ್ಟ ಮತ್ತಷ್ಟು ಹೆಚ್ಚಲಿದೆ' ಎಂದು ನಿರ್ಮಾಪಕ ಉಮಾಪತಿ ಶ್ರೀನಿವಾಸಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರವು ಚಿತ್ರಮಂದಿರಗಳಲ್ಲಿ ಕಳೆದ ಫೆ.1ರಿಂದ ಪೂರ್ಣ ಪ್ರಮಾಣದ ಆಸನ ಭರ್ತಿಗೆ ಅವಕಾಶ ಕೊಟ್ಟಿದ್ದರೂ, ರಾಜ್ಯ ಸರ್ಕಾರ ಶೇ 50ರಷ್ಟು ಆಸನ ಭರ್ತಿಗೆ ಮಾತ್ರ ಅವಕಾಶ ನೀಡಿ ನಿರ್ಬಂಧ ಮುಂದುವರಿಸಿತ್ತು. ಇದಕ್ಕೆ ಚಿತ್ರರಂಗ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಬೆನ್ನಲ್ಲೇ ಈ ಆದೇಶವನ್ನು ಹಿಂಪಡೆದಿತ್ತು. ಇದೀಗ ಎಂಟು ಜಿಲ್ಲೆಗಳಲ್ಲಿ ಈ ನಿರ್ಬಂಧವನ್ನು ಮತ್ತೆ ಜಾರಿಗೊಳಿಸಲಾಗಿದೆ.



ಶನಿವಾರ ಈ ಕುರಿತು ತುರ್ತುಸಭೆ ಕರೆಯಲಾಗಿದೆ. ನಿರ್ಮಾಪಕರು, ನಟರನ್ನು ಈ ಸಭೆಗೆ ಆಹ್ವಾನಿಸಲಾಗಿದೆ. ಇಲ್ಲಿ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ.
ಜೈರಾಜ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ.



'ಯುವರತ್ನ' ಸಿನಿಮಾಗೆ ಮಾಡಿದ ದೊಡ್ಡ ಅನ್ಯಾಯ ಇದು. ಸಂದಿಗ್ಧ ಸ್ಥಿತಿಯಲ್ಲಿ ನಾವಿದ್ದು, ಇನ್ನೇನು ಪ್ರೇಕ್ಷಕರು ಕುಟುಂಬ ಸಮೇತರಾಗಿ ಬಂದು ಸಿನಿಮಾ ನೋಡಬೇಕು ಎನ್ನುವ ಸಂದರ್ಭದಲ್ಲಿ ಇಂತಹ ನಿರ್ಧಾರ ಇಕ್ಕಟ್ಟಿಗೆ ಸಿಲುಕಿಸಿದೆ.
ರಿಷಬ್ ಶೆಟ್ಟಿ, ನಟ, ನಿರ್ದೇಶಕ

ನಮ್ಮನ್ನು ವೆಂಟಿಲೇಟರ್‌ಗೆ ದೂಡಿದ ಹಾಗಾಗಿದೆ.
ಎಲ್ಲರೂ ಜೊತೆಗೂಡಿ ಪರಸ್ಪರ ಸಮಸ್ಯೆಯಾಗದಂತೆ ಚಿತ್ರ ಬಿಡುಗಡೆ ಮಾಡುತ್ತಿದ್ದೇವೆ. ರಾಜಕಾರಣಿಗಳ ರ್‍ಯಾಲಿಯಲ್ಲಿ ಕೊರೊನಾ ಹರಡುವುದಿಲ್ಲವೇ
–ಕೆ.ವಿ.ಚಂದ್ರಶೇಖರ್, ಅಧ್ಯಕ್ಷ, ಕರ್ನಾಟಕ ಚಲನಚಿತ್ರ ಪ್ರದರ್ಶಕರ ಸಂಘ.

'ಒಳ್ಳೆಯ ಕನ್ನಡ ಸಿನಿಮಾದ ಕೊಲೆ'



'ನಾಲ್ಕೈದು ದಿನಗಳ ಹಿಂದೆ ಈ ಘೋಷಣೆ ಮಾಡಿದ್ದರೆ 'ಯುವರತ್ನ' ಚಿತ್ರವನ್ನೇ ಬಿಡುಗಡೆ ಮಾಡುತ್ತಿರಲಿಲ್ಲ' ಎಂದು ನಟ ಪುನೀತ್ ರಾಜ್‌ಕುಮಾರ್ ಪ್ರತಿಕ್ರಿಯೆ ನೀಡಿದ್ದಾರೆ.

'ಚಿತ್ರ ಬಿಡುಗಡೆ ಮಾಡುವುದನ್ನು ಮುಂದಕ್ಕೆ ಹಾಕುತ್ತಿದ್ದೆವು. ಈ ಹಿಂದೆ ಮುಖ್ಯಮಂತ್ರಿ ಅವರು ಮಾಡಿದ್ದ ಟ್ವೀಟ್ ಆಧರಿಸಿಯೇ ನಾವು ಚಿತ್ರ ಬಿಡುಗಡೆ ಮಾಡಿದೆವು. ನಮಗೆ ಆಘಾತ ಆಗಿದೆ. ಭಾನುವಾರದವರೆಗೂ ಪ್ರೇಕ್ಷಕರಿಗೆ ಟಿಕೆಟ್ ಬಿಕರಿಯಾಗಿದೆ. ಏನು ಮಾಡಬೇಕು ಎಂದೇ ಅರ್ಥವಾಗುತ್ತಿಲ್ಲ. ಎಲ್ಲರೂ ಗೊಂದಲಕ್ಕೀಡು ಮಾಡುವ ಕೆಲಸ ಆಗಿದೆ. ಒಳ್ಳೆಯ ಕನ್ನಡ ಚಿತ್ರವೊಂದರ ಕೊಲೆಯಾದಂತಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಪ್ರೇಕ್ಷಕರ ಸಂಖ್ಯೆಯನ್ನು ಶೇ 50 ನಿರ್ಬಂಧಿಸಿರುವುದನ್ನು ರದ್ದುಗೊಳಿಸಿ ಚಿತ್ರಮಂದಿರಗಳ ಭರ್ತಿಗೆ ಅವಕಾಶ ನೀಡಬೇಕು. ಮಾಲ್‌ಗಳಲ್ಲಿ, ಚಿತ್ರಮಂದಿರಗಳಲ್ಲಿ ಜನರು ಸರ್ಕಾರದ ನಿಯಮಗಳನ್ನು ಪಾಲಿಸಿಯೇ ಸಿನಿಮಾ ನೋಡುತ್ತಿದ್ದಾರೆ. ದಯವಿಟ್ಟು ನಿರ್ಬಂಧ ಹಾಕಬೇಡಿ. ಚಿತ್ರರಂಗಕ್ಕೆ ಇದು ಕಷ್ಟವಾಗಲಿದೆ. ಇಂತಹ ನಿರ್ಧಾರ ಜನರಲ್ಲಿ ಹೆಚ್ಚಿನ ಭಯ ಮೂಡಿಸಲಿದೆ. ಪ್ರಸ್ತುತ ಸಂದರ್ಭದಲ್ಲಿ ಸುರಕ್ಷತೆ ಎನ್ನುವುದು ಮುಖ್ಯ. ಆದರೆ, ಅದರ ಜೊತೆಗೆ ಜೀವನವೂ ಸಾಗಿಸಬೇಕು' ಎಂದು ಹೇಳಿದರು.

ಶಾಲೆಗಳಿಗೆ ಮೇ ತಿಂಗಳಲ್ಲಿ ಬೇಸಿಗೆ ರಜೆ ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 1ರಿಂದ 9ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಈ ಬಾರಿ ಮೇ ತಿಂಗಳಲ್ಲಿ ಬೇಸಿಗೆ ರಜೆ ಸಿಗುವ ಸಾಧ್ಯತೆ ಇದೆ.

ಏಪ್ರಿಲ್ ಅಂತ್ಯದೊಳಗೆ ಪರೀಕ್ಷೆ ಹಾಗೂ ಮೌಲ್ಯಮಾಪನ ಪ್ರಕ್ರಿಯೆ ಪೂರ್ಣಗೊಳಿಸಿ ನಂತರ ರಜೆ ಘೋಷಿಸುವ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಚರ್ಚೆ ನಡೆಸುತ್ತಿದ್ದು, ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಿದೆ.

ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷ ವಿಳಂಬವಾಗಿ ಆರಂಭವಾಗಿದ್ದರಿಂದ ಬೇಸಿಗೆ ರಜೆ ಕಡಿತ ಮಾಡುವ ಬಗ್ಗೆ ಈ ಹಿಂದೆ ಇಲಾಖೆ ತೀರ್ಮಾನ ತೆಗೆದುಕೊಂಡಿತ್ತು. ಆದರೆ, ಬಿಸಿಲಿನ ಧಗೆಯ ಜೊತೆಗೆ ಕೊರೊನಾ ಎರಡನೇ ಅಲೆಯೂ ಪ್ರಾರಂಭವಾಗಿರುವುದರಿಂದ ಎಲ್ಲ ಪ್ರಕ್ರಿಯೆ ಬೇಗ ಪೂರ್ಣಗೊಳಿಸಿ, ರಜೆ ಘೋಷಿಸುವ ಚಿಂತನೆ ಇದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ರಜೆ: ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಈ ಬಾರಿ ಬೇಸಿಗೆ ರಜೆ ಬದಲು, ಪರೀಕ್ಷಾ ರಜೆ ಸಿಗಲಿದೆ. ಅಂದರೆ, ಪಠ್ಯಕ್ರಮ ಪೂರ್ಣಗೊಳ್ಳುತ್ತಿದ್ದಂತೆ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲು ಈ ವಿದ್ಯಾರ್ಥಿಗಳಿಗೆ ರಜೆ ನೀಡಲಾಗುತ್ತದೆ. ವಿದ್ಯಾರ್ಥಿಗಳು ಮನೆಯಲ್ಲೇ ಇದ್ದು, ಪರೀಕ್ಷೆಗೆ ಬೇಕಾದ ಸಿದ್ಧತೆ ಮಾಡಿಕೊಳ್ಳಬಹುದು. ಪಠ್ಯ ವಿಷಯಗಳ ಬಗ್ಗೆ ಗೊಂದಲಗಳಿದ್ದರೆ ಶಾಲೆಗೆ ಹೋಗಿ ಶಿಕ್ಷಕರನ್ನು ಸಂಪರ್ಕಿಸಬಹುದು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ವಿ. ಅನ್ಬುಕುಮಾರ್ ಅವರನ್ನು ಸಂಪರ್ಕಿಸಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

ಪರೀಕ್ಷೆ ನಡೆಸಲು ಅವಕಾಶ ನೀಡಿ: 6ರಿಂದ 9ನೇ ತರಗತಿಯವರೆಗೆ ವಿದ್ಯಾಗಮ ಸೇರಿದಂತೆ ಎಲ್ಲ ತರಗತಿಗಳನ್ನು ಸ್ಥಗಿತಗೊಳಿಸಿರುವ ಸರ್ಕಾರದ ನಿರ್ಧಾರಕ್ಕೆ ಖಾಸಗಿ ಅನುದಾನರಹಿತ ಶಾಲೆಗಳ ಒಕ್ಕೂಟ ವಿರೋಧ ವ್ಯಕ್ತಪಡಿಸಿದೆ.

'ಪಠ್ಯಕ್ರಮ ಎಲ್ಲ ಪೂರ್ಣಗೊಳಿಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದೇವೆ. ಈ ಸಂದರ್ಭದಲ್ಲಿ ತರಗತಿಗಳನ್ನು ಸ್ಥಗಿತಗೊಳಿಸಿರುವುದು ಸರಿಯಲ್ಲ. ಭೌತಿಕ ಪರೀಕ್ಷೆ ನಡೆಸಲಾದರೂ ಅವಕಾಶ ನೀಡಬೇಕು' ಎಂದು ಒಕ್ಕೂಟ ಒತ್ತಾಯಿಸಿದೆ.

ಕೋವ್ಯಾಕ್ಸಿನ್ : ಮೂರನೇ ಡೋಸ್ ಪ್ರಯೋಗಕ್ಕೆ ಅನುಮತಿ

ನವದೆಹಲಿ (ಪಿಟಿಐ): ಭಾರತ್ ಬಯೋಟೆಕ್ ಕಂಪನಿಯ 'ಕೋವಾಕ್ಸಿನ್' ಲಸಿಕೆಯ ಮೂರನೇ ಡೋಸೇಜ್ ಅನ್ನು ಕೆಲವು ಸ್ವಯಂ ಸೇವಕರಿಗೆ ಪ್ರಾಯೋಗಿಕವಾಗಿ ನೀಡಲು ಭಾರತೀಯ ಔಷಧ ನಿಯಂತ್ರಣ ಪ್ರಾಧಿಕಾರದ (ಡಿಸಿಜಿಐ) ತಜ್ಞರ ಸಮಿತಿ ಅನುಮತಿ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಭಾರತ್ ಬಯೋಟೆಕ್ ಕಂಪನಿಯವರು, ಈಗಾಗಲೇ ಎರಡನೇ ಡೋಸ್ ಪಡೆದಿರುವ ಸ್ವಯಂ ಸೇವಕರಿಗೆ ಆರು ತಿಂಗಳ ನಂತರ ಬೂಸ್ಟರ್ ಡೋಸ್ ನೀಡುವುದಕ್ಕೆ ಮಾಡಿಕೊಂಡಿರುವ ಅಗತ್ಯ ಸಿದ್ಧತೆಗಳ ಬಗ್ಗೆ ಡಿಸಿಜಿಐ ವಿಷಯ ತಜ್ಞರ ಸಮಿತಿ ಎದುರು ಮಂಡಿಸಿದರು.

'ಮೂರನೇ ಡೋಸ್ ಪಡೆದ ಸ್ವಯಂ ಸೇವಕರ ಆರೋಗ್ಯ ಕುರಿತ ಮಾಹಿತಿಯನ್ನು ಸಮಿತಿಗೆ ಸಲ್ಲಿಸಬೇಕು' ಎಂದು ಡಿಸಿಜಿಐ ತಜ್ಞರ ಸಮಿತಿ ಕಂಪನಿಗೆ ತಿಳಿಸಿದೆ.

ಕೋವಿಡ್ ಎರಡನೇ ಅಲೆ: ವಿಜ್ಞಾನಿಗಳ ವಿಶ್ಲೇಷಣೆ • ಗಣಿತ ಮಾದರಿ 'ಸೂತ್ರ' ಅನುಸರಿಸಿ ಅಂದಾಜು

ಏಪ್ರಿಲ್ ಮಧ್ಯ ವೇಳೆಗೆ ಏರಿಕೆ ಮೇ ಅಂತ್ಯಕ್ಕೆ ಇಳಿಕೆ

ನವದೆಹಲಿ (ಪಿಟಿಐ): ಕೋವಿಡ್ ಎರಡನೇ ಅಲೆಯಲ್ಲಿ ದೇಶದಾದ್ಯಂತ ಸೋಂಕು ಪ್ರಕರಣಗಳು ಏಪ್ರಿಲ್ ಮಧ್ಯಭಾಗದಲ್ಲಿ ತಾರಕಕ್ಕೇರುವ ಅಂದಾಜಿದೆ. ಅಂತೆಯೇ, ಮೇ ಅಂತ್ಯದ ವೇಳೆಗೆ ತೀವ್ರವಾಗಿ ಇಳಿಮುಖವಾಗಬಹುದು ಎಂದು ಗಣಿತ ಮಾದರಿಯನ್ನು ಆಧರಿಸಿ ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ.

ಕೋವಿಡ್ ಸೋಂಕಿನ ಮೊದಲ ಅಲೆಯಲ್ಲಿಯೂ ಗಣಿತ ಮಾದರಿ 'ಸೂತ್ರ' ಅನುಸರಿಸಿ ಅಂದಾಜು ಮಾಡಿದ್ದು, ಆಗಸ್ಟ್ ತಿಂಗಳಲ್ಲಿ ಇದ್ದುದಕ್ಕಿಂತ ಸೆಪ್ಟೆಂಬರ್ ತಿಂಗಳಲ್ಲಿ ಪ್ರಕರಣಗಳು ಗರಿಷ್ಠವಾಗಿರಲಿವೆ. ಫೆಬ್ರುವರಿ 2021ರ ವೇಳೆಗೆ ಪ್ರಕರಣಗಳ ಸಂಖ್ಯೆ ಕಡಿಮೆ ಇರಲಿವೆ ಎಂದು ತಿಳಿಸಲಾಗಿತ್ತು.

ವಿಜ್ಞಾನಿ, ಐಐಟಿ-ಕಾನ್ಪುರದ ಮಹೀಂದ್ರಾ ಅಗರವಾಲ್ ಅವರು, 'ಸೋಂಕು ಪ್ರಕರಣಗಳ ಈಗಿನ ಸ್ಥಿತಿಯನ್ನು ಆಧರಿಸಿ ಗಣಿತ ಸೂತ್ರದ ಅನುಸಾರ ಅಂದಾಜು ಮಾಡಿದ್ದು, ಸದ್ಯದ ಸ್ಥಿತಿಯಲ್ಲಿ ಏಪ್ರಿಲ್ ಮಧ್ಯದ ವೇಳೆಗೆ ಗರಿಷ್ಠ ಸಂಖ್ಯೆಯಲ್ಲಿ ಸೋಂಕಿನ ಪ್ರಕರಣಗಳು ಇರಲಿವೆ' ಎಂದು ತಿಳಿಸಿದ್ದಾರೆ.

'ಏಪ್ರಿಲ್ 15–20ರ ಅವಧಿಯಲ್ಲಿ ಸೋಂಕು ಪ್ರಕರಣಗಳು ಗರಿಷ್ಠ ಪ್ರಮಾಣದಲ್ಲಿ ದಾಖಲಾಗುವ ಸಂಭವವಿದೆ. ಮೇ ಅಂತ್ಯದ ವೇಳೆಗೆ ಅದೇ ವೇಗದಲ್ಲಿ ಸೋಂಕು ಪ್ರಕರಣಗಳು ಇಳಿಮುಖವಾಗುವ ಸಾಧ್ಯತೆಯಿದೆ' ಎಂದರು.

'ಆಗ ನಿತ್ಯ ದಾಖಲಾಗಬಹುದಾದ ಪ್ರಕರಣಗಳ ಸಂಖ್ಯೆ ಅಂದಾಜಿಸಲು ಆಗುತ್ತಿಲ್ಲ. ಸದ್ಯ, ನಿತ್ಯ ಸರಾಸರಿ 1 ಲಕ್ಷ ಪ್ರಕರಣಗಳು ವರದಿಯಾಗುತ್ತಿವೆ. ಇದು, ಹೆಚ್ಚೂ ಆಗಬಹುದು ಅಥವಾ ಕಡಿಮೆಯೂ ಆಗಬಹುದು. ಆದರೆ, ಸೋಂಕು ಗರಿಷ್ಠ ಮಟ್ಟದಲ್ಲಿರುವ ಅವಧಿ ಮಾತ್ರ ಏಪ್ರಿಲ್ 15–20 ಆಗಿರುತ್ತದೆ' ಎಂದು ತಿಳಿಸಿದರು.

'ಗರಿಷ್ಠ ಪ್ರಕರಣಗಳು ಮೊದಲು ಪಂಜಾಬ್ ಹಾಗೂ ನಂತರ ಮಹಾರಾಷ್ಟ್ರದಲ್ಲಿ ಕಾಣಿಸಿಕೊಳ್ಳಬಹುದು. ಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಆಗಬಹುದು. ಆದರೆ, ಗಂಭೀರ ಸ್ಥಿತಿ ಇರುವ ಪ್ರದೇಶಗಳು ಇವೇ ಆಗಿರುತ್ತವೆ' ಎಂದು ಸ್ಪಷ್ಟಪಡಿಸಿದ್ದಾರೆ.

ಹರಿಯಾಣದ ಅಶೋಕ ವಿಶ್ವವಿದ್ಯಾಲಯದ ಗೌತಮ್ ಮೆನನ್ ಅವರೂ ಪ್ರತ್ಯೇಕವಾಗಿ ಅಂದಾಜು ಮಾಡಿದ್ದು, ಎರಡನೇ ಅಲೆಯಲ್ಲಿ ಗರಿಷ್ಠ ಸಂಖ್ಯೆಯ ಪ್ರಕರಣಗಳು ಏಪ್ರಿಲ್ ಮಧ್ಯಭಾಗದಿಂದ ಮೇ ಮಧ್ಯಭಾಗದವರೆಗೂ ಇರುತ್ತವೆ ಎಂದು ಹೇಳಿದ್ದಾರೆ.

ಆದರೆ, ಮೆನನ್ ಅವರು,'ಕೋವಿಡ್ ಪ್ರಕರಣಗಳ ಭವಿಷ್ಯದ ಈ ಅಂದಾಜುಗಳನ್ನು ಅಲ್ಪಾವಧಿಗೆ ಮಾತ್ರವೇ ನಂಬಬಹುದಾಗಿದೆ' ಎಂದಿದ್ದಾರೆ.

ರಾಬರ್ಟ್ ವಾದ್ರಾಗೆ ಸೋಂಕು ದೃಢ ಪ್ರಿಯಾಂಕಾ ಗಾಂಧಿ ಪ್ರತ್ಯೇಕ ವಾಸ



ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರ ಪತಿ ರಾಬರ್ಟ್ ವಾದ್ರಾ ಅವರಿಗೆ ಕೋವಿಡ್ ಸೋಂಕು ಇರುವುದು ದೃಢಪಟ್ಟಿದ್ದು, ಇದರ ಹಿಂದೆಯೇ ಪ್ರಿಯಾಂಕಾ ಅವರು ಸ್ವಯಂ ಆಗಿ ಪ್ರತ್ಯೇಕ ವಾಸದಲ್ಲಿದ್ದಾರೆ.

ಈ ಕುರಿತು ವಿಡಿಯೊ ಸಂದೇಶ ನೀಡಿರುವ ಅವರು, ಪ್ರತ್ಯೇಕ ವಾಸದ ಕಾರಣ ಶುಕ್ರವಾರ, ಶನಿವಾರ ಮತ್ತು ಭಾನುವಾರ ಕ್ರಮವಾಗಿ ಅಸ್ಸಾಂ, ತಮಿಳುನಾಡು ಮತ್ತು ಕೇರಳದಲ್ಲಿ ನಿಗದಿಯಾಗಿದ್ದ ಚುನಾವಣಾ ಪ್ರಚಾರ ಕಾರ್ಯಕ್ರಮಗಳನ್ನು ರದ್ದುಪಡಿಸಿರುವುದಾಗಿ ತಿಳಿಸಿದ್ದಾರೆ.

ಪ್ರಿಯಾಂಕಾ ಅವರು ಪಶ್ಚಿಮ ಬಂಗಾಳ ಹೊರತುಪಡಿಸಿ ಮೇಲಿನ ಮೂರು ರಾಜ್ಯಗಳಲ್ಲಿ ಪಕ್ಷದ ಪರ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ. 'ನನ್ನ ಕೋವಿಡ್ ಪರೀಕ್ಷಾ ವರದಿ ನೆಗೆಟಿವ್ ಬಂದಿದೆ. ಆದರೂ, ವೈದ್ಯರ ಸಲಹೆ ಮೇರೆಗೆ ನಾನು ಕೆಲವು ದಿನ ಪ್ರತ್ಯೇಕವಾಸದಲ್ಲಿ ಇರಲಿದ್ದೇನೆ' ಎಂದು ತಿಳಿಸಿದ್ದಾರೆ.

ಸಕ್ರಿಯ ಪ್ರಕರಣಗಳಲ್ಲಿ ರಾಜ್ಯ ದ್ವಿತೀಯ ಸ್ಥಾನ

ದಿನಕ್ಕೆ 5 ಸಾವಿರದತ್ತ ಕೋವಿಡ್: ಬೆಂಗಳೂರಿನಲ್ಲಿ ಏರಿಕೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳಲ್ಲಿ ವರದಿಯಾದ ಕೋವಿಡ್ ಪ್ರಕರಣಗಳ ಸಂಖ್ಯೆ 5 ಸಾವಿರ (4,991) ಸಮೀಪಿಸಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 34 ಸಾವಿರಕ್ಕೆ ಏರಿಕೆಯಾಗಿದೆ.

ಸತತ ಮೂರನೇ ದಿನ ಕೂಡ ನಾಲ್ಕು ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗಿವೆ. ಈ ಅವಧಿಯಲ್ಲಿ 13,450 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳ ಕಂಡಿದೆ. ಪರಿಣಾಮ ದೇಶದಲ್ಲಿ ಅಧಿಕ ಸಕ್ರಿಯ ಪ್ರಕರಣಗಳನ್ನು ಹೊಂದಿರುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ದ್ವಿತೀಯ ಸ್ಥಾನಕ್ಕೆ ಏರಿದೆ. ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ. ರಾಜ್ಯದಲ್ಲಿ ಸೋಂಕು ದೃಢ ಪ್ರಮಾಣ ಶೇ 4.19ಕ್ಕೆ ತಲುಪಿದೆ.

ಬೆಂಗಳೂರಿನಲ್ಲಿ ಕೋವಿಡ್ ಮತ್ತಷ್ಟು ಏರಿಕೆ ಕಂಡಿದ್ದು, ಹೊಸದಾಗಿ 3,509 ಪ್ರಕರಣಗಳು ದೃಢಪಟ್ಟಿವೆ. ಮೈಸೂರು (174), ತುಮಕೂರು (142), ಬೀದರ್ (126), ಕಲಬುರ್ಗಿ (105), ದಕ್ಷಿಣ ಕನ್ನಡ (105), ಹಾಸನ (102) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ವರದಿಯಾಗಿವೆ. ಏರಿಕೆ ಕಂಡಿದ್ದ ಕೋವಿಡ್ ಮರಣ ಪ್ರಕರಣಗಳ ಸಂಖ್ಯೆ 6ಕ್ಕೆ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 5 ಮಂದಿ ಹಾಗೂ ಕಲಬುರ್ಗಿಯಲ್ಲಿ ಒಬ್ಬರು ಮೃತಪಟ್ಟಿರುವುದು ಖಚಿತಪಟ್ಟಿದೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,591ಕ್ಕೆ ತಲುಪಿದೆ.

ಸದ್ಯ 269 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ. ಕೋವಿಡ್ ಪರೀಕ್ಷೆಗಳ ಸಂಖ್ಯೆ ಕೂಡ ಏರಿಕೆ ಕಂಡಿದೆ. ಒಂದು ದಿನದ ಅವಧಿಯಲ್ಲಿ 1.18 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಕೊರೊನಾ ಸೋಂಕಿತರಲ್ಲಿ 1,631 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.59 ಲಕ್ಷ ದಾಟಿದೆ.

ಸುನಿಲಕುಮಾರ್‌ಗೆ ಕೋವಿಡ್



ಕಾರ್ಕಳ: ಶಾಸಕ ವಿ. ಸುನಿಲ್ ಕುಮಾರ್ ಅವರಿಗೆ ಕೋವಿಡ್–19 ದೃಢಪಟ್ಟಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಜ್ವರ ಕಾಣಿಸಿಕೊಂಡಿತ್ತು. ಆರೋಗ್ಯ ತಪಾಸಣೆ ಮಾಡಿದಾಗ ಕೋವಿಡ್ ಇರುವುದು ದೃಢವಾಗಿದೆ' ಎಂದು ತಿಳಿಸಿದ್ದಾರೆ. 'ವೈದ್ಯರ ಸಲಹೆಯಂತೆ ಕ್ವಾರಂಟೈನ್‌ನಲ್ಲಿದ್ದು, ನನ್ನ ಸಂಪರ್ಕಕ್ಕೆ ಬಂದವರು ತಪಾಸಣೆ ಮಾಡಿಸಿಕೊಳ್ಳುವಂತೆ' ಮನವಿ ಮಾಡಿದ್ದಾರೆ.

'ಲಾಕ್‌ಡೌನ್ 2 ದಿನದಲ್ಲಿ ನಿರ್ಧಾರ'

ಮುಂಬೈ: ಮಹಾರಾಷ್ಟ್ರದಲ್ಲಿ ಕೋವಿಡ್ ಸೋಂಕು ಪ್ರಕರಣಗಳ ಸಂಖ್ಯೆ ನಿತ್ಯ 50 ಸಾವಿರದ ಸಂಖ್ಯೆ ದಾಟುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಂಪೂರ್ಣ ಲಾಕ್ ಡೌನ್ ಜಾರಿಗೊಳಿಸುವ ಕುರಿತು ಎರಡು ದಿನದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ತಿಳಿಸಿದ್ದಾರೆ.

ರಾಜ್ಯವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಅವರು ಕೋವಿಡ್ ಸೋಂಕನ್ನು ಮಾಯಾವಿ ರಾಕ್ಷಸ ಎಂದು ಬಣ್ಣಿಸಿದರು. ಕೋವಿಡ್ ಪರಿಸ್ಥಿತಿ ಎದುರಿಸಲು ಸರ್ಕಾರ ಕಾರ್ಯಸೂಚಿಯನ್ನು ಸಿದ್ಧಪಡಿಸುತ್ತಿದೆ. ಜನರೂ ಅದಕ್ಕೆ ಪೂರಕವಾಗಿ ಸ್ಪಂದಿಸಬೇಕು ಎಂದು ಕೋರಿದರು.

ಮುಂದಿನ ಎರಡು ದಿನ ಪರಿಸ್ಥಿತಿಯನ್ನು ಗಮನಿಸಲಿದ್ದೇವೆ. ಜನರೂ ಕೂಡಾ ಎಚ್ಚರಿಕೆಯಿಂದ ಇದ್ದು ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಲಾಕ್ ಡೌನ್ ಜಾರಿಗೊಳಿಸುವ ಸಾಧ್ಯತೆಗಳನ್ನು ನಾನು ತಳ್ಳಿಹಾಕುವುದಿಲ್ಲ. ಎರಡು ದಿನದಲ್ಲಿ ತೀರ್ಮಾನ ಪ್ರಕಟಿಸುತ್ತೇವೆ ಎಂದು ತಿಳಿಸಿದರು.

ಇಲ್ಲಸಲ್ಲದ ಹೇಳಿಕೆ ನೀಡಿ ತನಿಖೆಗೆ ತೊಂದರೆ ನೀಡುತ್ತಿರುವ ಆರೋಪ

ಜಗದೀಶ್ ವಿರುದ್ಧ 'ಎಸ್‌ಐಟಿ' ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಕೀಲ ಕೆ.ಎನ್. ಜಗದೀಶ್ ಕುಮಾರ್ ವಿನಾಕಾರಣ ಇಲ್ಲಸಲ್ಲದ ಹೇಳಿಕೆ ನೀಡಿ ತನಿಖೆಗೆ ತೊಂದರೆ ಉಂಟು ಮಾಡುತ್ತಿದ್ದಾರೆ' ಎಂದು ಆರೋಪಿಸಿ ವಿಶೇಷ ತನಿಖಾ ದಳದ (ಎಸ್‌ಐಟಿ) ಅಧಿಕಾರಿಗಳು, ತಂಡದ ಮುಖ್ಯಸ್ಥರಿಗೆ ದೂರು ನೀಡಿರುವುದಾಗಿ ಮೂಲಗಳು ಹೇಳಿವೆ.

ಸಿ.ಡಿ.ಪ್ರಕರಣ ಬೆಳಕಿಗೆ ಬಂದಾಗಿನಿಂದ ನಿತ್ಯವೂ ನಾನಾ ತಿರುವು ಪಡೆಯುತ್ತಿದೆ. ನ್ಯಾಯಾಲಯದ ಎದುರು ಹಾಜರಾಗಿ ಸಿಆರ್‌ಪಿಸಿ 164ರಡಿ ಸಂತ್ರಸ್ತೆ ಹೇಳಿಕೆ ನೀಡಿದ ಬಳಿಕವಂತೂ ಪ್ರಕರಣಕ್ಕೆ ತಾರ್ಕಿಕ ತಿರುವು ಸಿಕ್ಕಿದ್ದು, ಅದೇ ಹೇಳಿಕೆ ಆಧರಿಸಿ ಎಸ್‌ಐಟಿ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ.

ಎಸ್‌ಐಟಿ ಅಧಿಕಾರಿಗಳ ಬಗ್ಗೆಯೇ ಹಲವು ಆರೋಪ ಮಾಡುತ್ತಿರುವ ಜಗದೀಶ್, ಮಾಧ್ಯಮಗಳ ಎದುರು ಮಾತನಾಡುತ್ತಿದ್ದಾರೆ. ಇದರಿಂದ ಮುಜುಗರಕ್ಕೀಡಾಗುತ್ತಿರುವ ಅಧಿಕಾರಿಗಳು, ಜಗದೀಶ್ ಅವರಿಂದ ಆಗುತ್ತಿರುವ ತೊಂದರೆ ಬಗ್ಗೆ ತಂಡದ ಮುಖ್ಯಸ್ಥ ಸೌಮೇಂದು ಮುಖರ್ಜಿ ಬಳಿ ಹೇಳಿಕೊಂಡಿದ್ದಾರೆ.

'ಸಂತ್ರಸ್ತೆ ಪರವಾಗಿ ಮಂಜುನಾಥ್ ವಕಾಲತ್ತು ವಹಿಸಿಕೊಂಡಿದ್ದಾರೆ. ನೋಟಿಸ್ ನೀಡುವ ಹಾಗೂ ಸಂತ್ರಸ್ತೆ ಕಾನೂನು ಪ್ರಕ್ರಿಯೆಗಳನ್ನು ಮಂಜುನಾಥ್ ಮೂಲಕ ಮಾಡಲಾಗುತ್ತಿದೆ. ಆದರೆ, ಜಗದೀಶ್ ಕುಮಾರ್ ತಾನೇ ಸಂತ್ರಸ್ತೆ ಪರ ವಕೀಲ ಎನ್ನುತ್ತಿದ್ದಾರೆ' ಎಂದೂ ಅಧಿಕಾರಿಗಳು ಹೇಳಿದ್ದಾರೆಂದು ಗೊತ್ತಾಗಿದೆ.

'ತನಿಖಾ ಸ್ಥಳ, ವಿಚಾರಣಾ ಕೊಠಡಿ ಬಳಿ ಜಗದೀಶ್ ನಿಲ್ಲುತ್ತಿದ್ದಾರೆ. ಮಾಧ್ಯಮಗಳ ಎದುರು ಎಸ್‌ಐಟಿ ವಿರುದ್ಧವೇ ಮಾತನಾಡುತ್ತಿದ್ದಾರೆ. ಇದು ತನಿಖೆಗೆ ಅಡಚಣೆಯನ್ನುಂಟು ಮಾಡುತ್ತಿದೆ. ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಗಮನಹರಿಸಬೇಕು' ಎಂದೂ ಅಧಿಕಾರಿಗಳು ಕೋರಿರುವುದಾಗಿ ತಿಳಿದುಬಂದಿದೆ.

ಈ ಬಗ್ಗೆ ಮಾತನಾಡಿದ ಜಗದೀಶ್‌ಕುಮಾರ್, 'ಸಂತ್ರಸ್ತೆ ಮನವಿ ಮಾಡಿದ್ದರಿಂದ ಅವರ ಪರ ಕಾನೂನು ಪ್ರಕಾರ ಹೋರಾಡುವ ಜತೆಗೆ, ಮಾಧ್ಯಮಗಳ ಎದುರು ಮಾತನಾಡುತ್ತಿದ್ದೇನೆ' ಎಂದರು.

'ನನ್ನಿಂದ ತನಿಖೆಗೆ ತೊಂದರೆಯಾಗುತ್ತಿದ್ದರೆ, ಎಸ್‌ಐಟಿ ಅಧಿಕಾರಿಗಳು ನೋಟಿಸ್ ನೀಡಲಿ' ಎಂದರೂ ಹೇಳಿದರು.

ವಿಶೇಷ ಪ್ರಾಸಿಕ್ಯೂಟರ್ ನೇಮಕ

ಸಿ.ಡಿ. ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಪರ ವಾದ ಮಂಡಿಸಲು ಹಾಗೂ ಕಾನೂನು ಸಲಹೆ ನೀಡಲು ವಿಶೇಷ ಪ್ರಾಸಿಕ್ಯೂಟರ್‌ಗಳನ್ನು ನೇಮಕ ಮಾಡಲಾಗಿದೆ.

ವಕೀಲ ಎಸ್. ಕಿರಣ್ ಜವಳಿ ಹಾಗೂ ಪಿ. ಪ್ರಸನ್ನ ಕುಮಾರ್ ಅವರನ್ನು ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಿಸಿ ಗೃಹ ಇಲಾಖೆ ಆದೇಶ ಹೊರಡಿಸಿದೆ.

ಹೈಕೋರ್ಟ್ ವಕೀಲ ಕಿರಣ ಜವಳಿ, ಕ್ರಿಮಿನಲ್ ಪ್ರಕರಣಗಳಲ್ಲಿ ಪರಿಣತಿ ಹೊಂದಿದ್ದಾರೆ. ಸಿಬಿಐ, ಎನ್‌ಐಎ ಪರ ವಕೀಲರಾದ ಪ್ರಸನ್ನಕುಮಾರ್, ಈ ಹಿಂದೆ ನಕಲಿ ಛಾಪಾ ಕಾಗದ ಹಗರಣ, ಗಣಿ ಹಗರಣ ಸೇರಿದಂತೆ ಹಲವು ಪ್ರಕರಣಗಳಲ್ಲಿ ವಾದ ಮಂಡಿಸಿದ್ದರು.

'ವಿಐಪಿ ಬಂಧಿಸಿ ಶಕ್ತಿ ಪ್ರದರ್ಶಿಸಿ'

'ಅತ್ಯಾಚಾರ ಪ್ರಕರಣದ ಸಂತ್ರಸ್ತೆಯೇ ನ್ಯಾಯಾಲಯಕ್ಕೆ ಬಂದು ಹೇಳಿಕೆ ನೀಡಿದ್ದರೂ ಎಸ್‌ಐಟಿ ಅಧಿಕಾರಿಗಳು ಮಾತ್ರ ಆರೋಪಿಯನ್ನು ಬಂಧಿಸುತ್ತಿಲ್ಲ. ಅನಾರೋಗ್ಯ ನೆಪಹೇಳಿ ವಿಚಾರಣೆಗೆ ಬರಲು ಆಗುವುದಿಲ್ಲವೆಂದು ಆರೋಪಿ ಹೇಳಿದ್ದಕ್ಕೆ ತಲೆಯಾಡಿಸುತ್ತಿದ್ದಾರೆ' ಎಂದು ವಕೀಲ ಕೆ.ಎನ್. ಜಗದೀಶ್ ಕುಮಾರ್ ಆರೋಪಿಸಿದರು.

'ಅಪರಾಧ ಪ್ರಕರಣಗಳಲ್ಲಿ ಜನಸಾಮಾನ್ಯರ ಮೇಲೆ ಶಕ್ತಿ ಪ್ರದರ್ಶನ ಮಾಡುವ ಪೊಲೀಸರು. ಅತ್ಯಾಚಾರದ ಆರೋಪಿಯಾಗಿರುವ ವಿಐಪಿಯನ್ನು ಬಂಧಿಸಿ ಶಕ್ತಿ ಪ್ರದರ್ಶನ ಮಾಡಬೇಕು. ಆ ಮೂಲಕ ಜನರ ನಂಬಿಕೆ ಗಳಿಸಬೇಕು' ಎಂದೂ ಹೇಳಿದರು.

ಮಗಳ ಜತೆ ಬಂದಿದ್ದ ಸೂರ್ಯ; ಪೋಷಕರ ಆಕ್ಷೇಪ

ಹೇಳಿಕೆ ನೀಡಲು ಸಂತ್ರಸ್ತೆ ನ್ಯಾಯಾಲಯಕ್ಕೆ ಹಾಜರಾಗುವ ವೇಳೆ ಕೆಪಿಸಿಸಿ ಕಾನೂನು ಘಟಕದ ಪ್ರಧಾನ ಕಾರ್ಯದರ್ಶಿ ಸೂರ್ಯ ಮುಕುಂದರಾಜ್ ಹಾಜರಿದ್ದ ಬಗ್ಗೆ ಯುವತಿಯ ಪೋಷಕರು ಆಕ್ಷೇಪ ವ್ಯಕ್ತಪಡಿಸಿದ್ದು, ಇದು ಚರ್ಚೆಗೆ ಕಾರಣವಾಗಿದೆ.

'ಮಗಳು ನಮ್ಮ ಸಂಪರ್ಕಕ್ಕೆ ಸಿಕ್ಕಿಲ್ಲ. ನ್ಯಾಯಾಲಯದಲ್ಲಿ ಸಿಆರ್‌ಪಿಸಿ 164ರಡಿ ಹೇಳಿಕೆ ದಾಖಲಿಸಲು ಆಕೆ ಬಂದಿರುವುದು ತಿಳಿಯಿತು. ಅವಳ ಜೊತೆಯಲ್ಲಿ ಕಾಂಗ್ರೆಸ್‌ನ ಸೂರ್ಯ ಮುಕುಂದರಾಜ್ ಇದ್ದರು. ಅದು ಮಗಳು ನೀಡಿರುವ ಹೇಳಿಕೆಯಲ್ಲ, ಸೂರ್ಯ ನೀಡಿರುವ ಹೇಳಿಕೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಇತರರು, ಮಗಳ ಮೇಲೆ ಒತ್ತಡ ಹಾಕುತ್ತಿರುವುದಕ್ಕೆ ಇದು ಸಾಕ್ಷಿ' ಎಂದು ಪೋಷಕರು ಆರೋಪಿಸಿದ್ದಾರೆ.

ಈ ಬಗ್ಗೆ ಮಾತನಾಡಿದ ಸೂರ್ಯ , 'ಪೋಷಕರಿಗೆ ಯಾರು ಏನು ಹೇಳಿದ್ದಾರೆಂಬುದು ಗೊತ್ತಿಲ್ಲ. ಯುವತಿ ಪರ ವಕೀಲರು ಕರೆದಿದ್ದಕ್ಕೆ ಸಹಾಯ ಮಾಡಿದೆ. ಸಂತ್ರಸ್ತೆ, ಪ್ರಾಪ್ತ ವಯಸ್ಕರಾಗಿದ್ದು ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಹಕ್ಕು ಅವರಿಗಿದೆ' ಎಂದರು.

ವಕೀಲ ಕೆ.ಎನ್. ಜಗದೀಶ್‌ಕುಮಾರ್, 'ಸಂತ್ರಸ್ತೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ಸೂರ್ಯ ವಕೀಲರಾಗಿ ಬಂದಿದ್ದರು. ಯಾವುದೇ ಪಕ್ಷದ ಪರ ಅಲ್ಲ. ಬಳ್ಳಾರಿಯ ಜನಾರ್ಧನ್ ರೆಡ್ಡಿ ಪರವಾಗಿಯೂ ಈ ಹಿಂದೆ ಅವರು ವಾದಿಸಿದ್ದರು. ಅಂದ ಮಾತ್ರಕ್ಕೆ ಅವರು ಬಿಜೆಪಿಯವರು ಎಂದು ಹೇಳಲಾಗದು. ನಮ್ಮದೆಲ್ಲ ವಕೀಲ ವೃತ್ತಿ' ಎಂದೂ ಜಗದೀಶ್ ಹೇಳಿದ್ದಾರೆ.

'ಬಿಜೆಪಿಗೆ ಎಲ್ಲಾ ವರ್ಗದ ಬೆಂಬಲವಿದೆ'

• ಅರ್ಜುನ್ ರಘುನಾಥ್



ಪ್ರಜಾವಾಣಿ ಸಂದರ್ಶನ
ಡಾ. ಸಿ.ಎನ್. ಅಶ್ವತ್ಥನಾರಾಯಣ

'ಬಿಜೆಪಿ ಎಲ್ಲಾ ವರ್ಗದವರನ್ನೂ ಒಳಗೊಂಡಿರುವ ಪಕ್ಷ ಆದರೆ, ಕೇರಳದಲ್ಲಿ ಕೆಲವು ಸಮುದಾಯದವರಲ್ಲಿ ಬಿಜೆಪಿಯ ಬಗ್ಗೆ ಭಯ ಹುಟ್ಟಿಸುವ ಪ್ರಯತ್ನವನ್ನು ವಿರೋಧಪಕ್ಷಗಳವರು ಮಾಡುತ್ತಿದ್ದಾರೆ. ಕ್ರೈಸ್ತ ಸಮುದಾಯದವರಿಗೆ ಇದನ್ನು ಮನವರಿಕೆ ಮಾಡಿಕೊಡುವ ಸರ್ವ ಪ್ರಯತ್ನಗಳನ್ನೂ ಬಿಜೆಪಿ ಮಾಡುತ್ತಿದೆ' ಎಂದು ಕೇರಳದಲ್ಲಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಪ್ರಚಾರದಲ್ಲಿ ತೊಡಗಿರುವ ಕರ್ನಾಟಕದ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ. ಅವರ ಜತೆ 'ಪ್ರಜಾವಾಣಿ' ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ:

• ಕೇರಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಭವಿಷ್ಯವೇನು?

ಕೇರಳದ ಜನರಿಗೆ ಈಗ ಬಿಜೆಪಿ ಮೇಲೆ ವಿಶ್ವಾಸ ಮೂಡಿದೆ. ಬಿಜೆಪಿಯೇ ದೇಶ ಮತ್ತು ರಾಜ್ಯವನ್ನು ಮುನ್ನಡೆಸುವುದನ್ನು ಅವರು ಎದುರು ನೋಡುತ್ತಿದ್ದಾರೆ. ಎಲ್‌ಡಿಎಫ್ ಹಾಗೂ ಯುಡಿಎಫ್‌ಗಳಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದಾರೆ. ಸ್ವಹಿತಾಸಕ್ತಿ ಹಾಗೂ ಪಟ್ಟಭದ್ರ ಹಿತಾಸಕ್ತಿಗಳ ಕಾರಣ ಆ ಎರಡೂ ಮೈತ್ರಿಕೂಟಗಳು ವಿಫಲವಾಗಿವೆ. ಈಗ ಅವರು ಅಪ್ರಸ್ತುತರಾಗಿದ್ದಾರೆ. ಜನರ ಒಳಿತಿಗಾಗಿ ಈ ಎರಡೂ ಮೈತ್ರಿಕೂಟಗಳಿಂದ ಕೇರಳವನ್ನು ರಕ್ಷಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. ಉತ್ತಮ ಶಿಕ್ಷಣ, ಉದ್ಯಮಶೀಲತಾ ಕೌಶಲ ಮುಂತಾದ ಅನೇಕ ಗುಣಗಳು ಕೇರಳದಲ್ಲಿವೆ. ಹೊಣೆಗಾರಿಕೆ ಮತ್ತು ಪಾರದರ್ಶಕತೆಯಿಂದ ಎಲ್ಲಾ ಕ್ಷೇತ್ರಗಳಲ್ಲಿ ಏಳಿಗೆ ಸಾಧಿಸಬಹುದು ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರು ಈಗಾಗಲೇ ಸಾಬೀತುಪಡಿಸಿದ್ದಾರೆ. ಪ್ರಕೃತಿ ವಿಕೋಪಗಳ ಸಂದರ್ಭದಲ್ಲೂ ಕೇಂದ್ರ ಸರ್ಕಾರವು ಕೇರಳಕ್ಕೆ ಸಾಧ್ಯವಾದ ಎಲ್ಲಾ ನೆರವುಗಳನ್ನೂ ನೀಡಿದೆ.

• ಕ್ರೈಸ್ತ ಮತದಾರರ ಮನವೊಲಿಸುವ ಪ್ರಯತ್ನ ಫಲಿಸುವುದೆಂಬ ಭಾವನೆ ಇದೆಯೇ?

ದೇಶಭಕ್ತಿ ಹೊಂದಿರುವ ಎಲ್ಲಾ ಸಮುದಾಯಗಳ ಮತಗಳನ್ನು ಪಡೆಯುವ ವಿಶ್ವಾಸ ಬಿಜೆಪಿಗೆ ಇದೆ. ಒಂದು ರಾಜಕೀಯ ಪಕ್ಷವಾಗಿ ನಾವು ಎಲ್ಲಾ ಧರ್ಮ, ಜಾತಿ ಹಾಗೂ ವರ್ಗದ ಜನರಿಗೆ ಮುಕ್ತವಾಗಿದ್ದೇವೆ. ವಿರೋಧಪಕ್ಷಗಳವರು ಕೆಲವು ಸಮುದಾಯದವರಲ್ಲಿ ನಮ್ಮ ಬಗ್ಗೆ ಭಯ ಮೂಡಿಸುತ್ತಿದ್ದಾರೆ. ನಮ್ಮ ಆದ್ಯತೆ ದೇಶ, ಆನಂತರ ಪಕ್ಷ ಅದಾದ ಮೇಲೆ ಉಳಿದೆಲ್ಲವೂ ಬರುತ್ತವೆ. ದೇಶದಲ್ಲಿ ನಂಬಿಕೆ ಹೊಂದಿದ್ದೇವೆ ಎಂದಮೇಲೆ ಎಲ್ಲಾ ಸಮುದಾಯಗಳ ಸಹಬಾಳ್ವೆಯಲ್ಲಿ ನಂಬಿಕೆ ಇಟ್ಟು ಎಲ್ಲರ ಪರವಾಗಿ ಕೆಲಸ ಮಾಡಬೇಕಾಗುತ್ತದೆ. ಬಿಜೆಪಿ ಯಾವತ್ತೂ ಭೇದಭಾವ ಮಾಡಿಲ್ಲ. ಎಲ್‌ಡಿಎಫ್, ಯುಡಿಎಫ್‌ಗಳೇ ಓಲೈಕೆ ಮತ್ತು ವಿಭಜನೆಯ ರಾಜಕೀಯ ಮಾಡುತ್ತಾ ಬಂದಿವೆ.

• ಈ ಸಂದೇಶವನ್ನು ಆ ಸಮುದಾಯಗಳಿಗೆ ನೀಡಲು ನಿಮಗೆ ಸಾಧ್ಯವಾಗಿದೆಯೇ?

ನಮ್ಮಿಂದಾದ ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದೇವೆ. ದೇಶಭಕ್ತರು ಹಾಗೂ ರಾಷ್ಟ್ರೀಯವಾದಿಗಳು ಬಿಜೆಪಿಯನ್ನು ಬೆಂಬಲಿಸುತ್ತಾರೆ ಎಂದು ನಾವು ನಂಬಿದ್ದೇವೆ. ಚರ್ಚ್‌ಗಳ ಮುಖಂಡರು ಸಹ ಪ್ರಧಾನಿ ಮೋದಿ ಹಾಗೂ ರಾಜ್ಯದ ಇತರ ಬಿಜೆಪಿ ಮುಖಂಡರನ್ನು ಭೇಟಿಮಾಡಿ ಮಾತುಕತೆ ನಡೆಸಿದ್ದಾರೆ.

• ಕೇರಳದ ಚುನಾವಣಾ ವ್ಯವಸ್ಥೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಮಹತ್ವದ ಸ್ಥಾನ ಇದೆ. ನೀವು ಆ ಸಮುದಾಯವನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವಿರಾ?

ನಾವು ಯಾರಿಗೂ ಬಾಗಿಲು ಮುಚ್ಚಿಲ್ಲ. ಆದರೆ, ಓಲೈಕೆ ರಾಜಕಾರಣವನ್ನು ವಿರೋಧಿಸುತ್ತೇವೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಎಲ್ಲಾ ಮುಸ್ಲಿಂ ರಾಷ್ಟ್ರಗಳ ಜತೆಗೆ ಬಾಂಧವ್ಯ ಹೊಂದಿದೆ. ಜಿಹಾದ್ ಹಾಗೂ ಭಯೋತ್ಪಾದನೆಯನ್ನು ಬೆಂಬಲಿಸುವ ಗುಂಪುಗಳನ್ನು ಮಾತ್ರ ನಾವು ವಿರೋಧಿಸುತ್ತೇವೆ. ಜಾತಿ– ಧರ್ಮಗಳ ಭೇದಭಾವವಿಲ್ಲದೆ, ಎಲ್ಲರಿಗೂ ಬಿಜೆಪಿ ಮುಕ್ತವಾಗಿದೆ. ನಾವು ನಿರೀಕ್ಷಿಸುವುದು ದೇಶಭಕ್ತಿಯನ್ನು ಮಾತ್ರ. ರಾಜಕೀಯ ಭಿನ್ನಾಭಿಪ್ರಾಯಗಳು ಇರಬಹುದು, ರಾಷ್ಟ್ರಹಿತದ ವಿಚಾರ ಬಂದಾಗ ನಾವೆಲ್ಲರೂ ಒಂದೇ.

• ಕೇರಳದಲ್ಲಿ ಬಿಜೆಪಿಯ ಬೆಳವಣಿಗೆಗೆ 'ಹಿಂದುತ್ವ'ದ ಹಣೆಪಟ್ಟಿ ಅಡ್ಡಿಯಾಗಿದೆ ಎಂದು ನೀವು ಭಾವಿಸುತ್ತೀರಾ?

ಹಿಂದುತ್ವ ಎಂಬುದು ಜೀವನ ವಿಧಾನ. ನಮ್ಮ ಸಂಸ್ಕೃತಿಯೇ ನಮ್ಮ ಜೀವನ ವಿಧಾನ. ಮೂಲತಃ ನಾವು ಸಂಸ್ಕೃತಿ ಮತ್ತು ಸಂಪ್ರದಾಯದ ಪರ ಇರುವವರು. ಅವುಗಳನ್ನು ರಕ್ಷಿಸಿ ಬೆಳೆಸುವ ಅಗತ್ಯವಿದೆ. ಅವರವರ ಸಂಪ್ರದಾಯ, ಸಂಸ್ಕೃತಿಯನ್ನು ಎಲ್ಲರೂ ಪಾಲಿಸಬಹುದಾಗಿದೆ. ಆದರೆ ಇತರರ ಸಂಸ್ಕೃತಿ ಸಂಪ್ರದಾಯಗಳನ್ನು ನಾಶಪಡಿಸುವ ಮೂಲಕ ಅಲ್ಲ.

• ಯುಡಿಎಫ್ ಮತ್ತು ಎಲ್‌ಡಿಎಫ್ ಪೈಕಿ ಕೇರಳದಲ್ಲಿ ನಿಮ್ಮ ಪ್ರಮುಖ ಎದುರಾಳಿ ಯಾರು?

ಆಡಳಿತ, ಆರ್ಥಿಕತೆ ಅಷ್ಟೇ ಅಲ್ಲ, ಸಂಸ್ಕೃತಿ– ಸಂಪ್ರದಾಯಗಳನ್ನು ಕಾಪಾಡುವಲ್ಲೂ ಈ ಎರಡೂ ಮೈತ್ರಿಕೂಟಗಳು ವಿಫಲವಾಗಿವೆ. ಸಂಸ್ಕೃತಿ ಸಂಪ್ರದಾಯಗಳಲ್ಲಿ ವಿಶ್ವಾಸ ಇಲ್ಲದವರು ಅವುಗಳನ್ನು ಹೇಗೆತಾನೇ ರಕ್ಷಿಸುತ್ತಾರೆ? ರಾಜ್ಯದ ಸಂಸ್ಕೃತಿಯನ್ನು ನಾಶಪಡಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಶಬರಿಮಲೆ, ಭಯೋತ್ಪಾದನೆ, ಲವ್ ಜಿಹಾದ್ ಮುಂತಾದ ವಿಚಾರಗಳು ಕೇರಳದಲ್ಲಿ ಮಹತ್ವದ್ದಾಗಿದ್ದರೂ, ಈ ವಿಚಾರಗಳ ಬಗ್ಗೆ ಎರಡೂ ಮೈತ್ರಿಕೂಟಗಳಲ್ಲಿ ಸ್ಪಷ್ಟತೆ ಇಲ್ಲ. ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳಲ್ಲೂ ಇವುಗಳಲ್ಲಿ ಸ್ಪಷ್ಟತೆ ಇಲ್ಲ.

• ಕೇರಳದಲ್ಲಿ ಎನ್‌ಡಿಎ ಸರ್ಕಾರ ರಚನೆ ವಿಶ್ವಾಸದಲ್ಲಿ ನೀವಿದ್ದೀರಿ. ಈಗಾಗಲೇ ಎಲ್‌ಡಿಎಫ್ ಅಥವಾ ಯುಡಿಎಫ್ ಜತೆ ಮಾತುಕತೆ ಆರಂಭಿಸಿದ್ದೀರಿ ಎಂದು ಭಾವಿಸಬಹುದೇ?

ನಾವು ಎನ್‌ಡಿಎ ಮಿತ್ರಪಕ್ಷಗಳ ಜತೆಗೆ ಮಾತ್ರ ಸಂಪರ್ಕದಲ್ಲಿದ್ದೇವೆ. ಯುಡಿಎಫ್, ಎಲ್‌ಡಿಎಫ್ ಎರಡೂ ನಮಗೆ ಸ್ಪರ್ಧಿಗಳೇ.

ಜ್ವರದ ಕಾರಣ ಕೊಟ್ಟು ರಮೇಶ ಜಾರಕಿಹೊಳಿ ಗೈರು

ಒಂದನೇ ಪುಟದಿಂದ

'ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಸಂತ್ರಸ್ತೆ, ಕಿರುಚಿತ್ರ ನಿರ್ಮಾಣದತ್ತ ಆಸಕ್ತಿ ತೋರಿದ್ದರು. ಉತ್ತರ ಕರ್ನಾಟಕದ ಜಲಾಶಯ ಹಾಗೂ ನದಿಗಳನ್ನು ಚಿತ್ರೀಕರಿಸಲು ಸ್ನೇಹಿತರ ಜೊತೆ ಸೇರಿ ಯೋಜನೆ ರೂಪಿಸಿದ್ದರು. 2019ರ ಡಿಸೆಂಬರ್‌ನಿಂದಲೇ ಯುವತಿಗೆ ರಮೇಶ ಜಾರಕಿಹೊಳಿ ಪರಿಚಯವಿತ್ತು. ಜನವರಿಯಲ್ಲಿ ರಮೇಶ, ಯುವತಿಗೆ ಮೊಬೈಲ್ ಉಡುಗೊರೆ ನೀಡಿದ್ದರು. ಅದಾದ ನಂತರ, ಚಿನ್ನಾಭರಣ ಸೇರಿದಂತೆ ಹಲವು ಉಡುಗೊರೆಗಳನ್ನೂ ಕೊಟ್ಟಿದ್ದರು. ಅವುಗಳನ್ನೆಲ್ಲ ಯುವತಿ ನಮಗೆ ನೀಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

ವಕೀಲರ ಮೂಲಕ ಪತ್ರ : ವಿಚಾರಣೆಗೆ ಗೈರಾದ ರಮೇಶ ತಮ್ಮ ವಕೀಲ ಶ್ಯಾಮಸುಂದರ್ ಮೂಲಕ ಎಸ್‌ಐಟಿ ಅಧಿಕಾರಿಗಳಿಗೆ ಪತ್ರ ತಲುಪಿಸಿದ್ದಾರೆ.'ನನಗೆ ಅನಾರೋಗ್ಯವಿದೆ. ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದು, ವಿಶ್ರಾಂತಿ ಪಡೆಯುವಂತೆ ವೈದ್ಯರು ತಿಳಿಸಿದ್ದಾರೆ. ಹೀಗಾಗಿ, ವಿಚಾರಣೆಗೆ ಬರಲು ಆಗುತ್ತಿಲ್ಲ' ಎಂದು ಪತ್ರದಲ್ಲಿ ರಮೇಶ ಉಲ್ಲೇಖಿಸಿರುವುದಾಗಿ ಗೊತ್ತಾಗಿದೆ.

ಸುದ್ದಿಗಾರರ ಜೊತೆ ಮಾತನಾಡಿದ ಶ್ಯಾಮಸುಂದರ್, 'ರಮೇಶ ಅವರಿಗೆ ಬಂಧನದ ಭೀತಿಯಿಲ್ಲ. ಗೋಕಾಕದಲ್ಲಿರುವ ಅವರು ಅನಾರೋಗ್ಯದ ಕಾರಣ ಹೊರಗೆ ಕಾಣಿಸುತ್ತಿಲ್ಲ' ಎಂದರು.

ವಿಚಾರಣೆ ಬಗ್ಗೆ ಮಾಹಿತಿ ನೀಡಿರುವ ಎಸ್‌ಐಟಿ ಮೂಲಗಳು, 'ಕಾಲಾವಕಾಶ ಕೋರಿದ ಪತ್ರವನ್ನು ಪರಿಶೀಲಿಸುತ್ತಿದ್ದೇವೆ. ಸೋಮವಾರ (ಏಪ್ರಿಲ್ 5) ಬೆಳಿಗ್ಗೆ ವಿಚಾರಣೆಗೆ ಕರೆಯಲು ಚಿಂತನೆ ನಡೆಸಿದ್ದೇವೆ' ಎಂದೂ ಹೇಳಿದರು.

'₹ 9 ಲಕ್ಷದ ಮಾಹಿತಿ ಇಲ್ಲ'

ರಮೇಶ ಜಾರಕಿಹೊಳಿ ದೂರು ಆಧರಿಸಿ ಸದಾಶಿವನಗರ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್ ತನಿಖೆ ಕೈಗೊಂಡಿದ್ದ ಎಸ್‌ಐಟಿ ಅಧಿಕಾರಿಗಳು, ಯುವತಿ ವಾಸವಿದ್ದ ಆರ್.ಟಿ.ನಗರದಲ್ಲಿರುವ ಕೊಠಡಿಯಲ್ಲಿ ತಪಾಸಣೆ ನಡೆಸಿತ್ತು. ಕೊಠಡಿಯ ಬೆಡ್ ಕೆಳಗೆ ₹ 9 ಲಕ್ಷ ಪತ್ತೆಯಾಗಿತ್ತು. ಆ ಬಗ್ಗೆ ತನಿಖಾಧಿಕಾರಿ ಪ್ರಶ್ನಿಸಿದ್ದು, 'ಆ ಹಣ ಎಲ್ಲಿಂದ ಬಂತು ಎಂಬ ಮಾಹಿತಿ ನನಗಿಲ್ಲ. ರಮೇಶ ಜಾರಕಿಹೊಳಿ ಹಾಗೂ ಅವರ ಕಡೆಯವರಿಂದ ಜೀವ ಭಯವಿತ್ತು. ಹೀಗಾಗಿ, ಕೊಠಡಿ ಬಿಟ್ಟು ಅಜ್ಞಾತ ಸ್ಥಳಕ್ಕೆ ಹೋಗಿದ್ದೆ' ಎಂದು ಯುವತಿ ಉತ್ತರಿಸಿರುವುದಾಗಿ ಮೂಲಗಳು ಹೇಳಿವೆ.

ಆಮಶಂಕೆ

ಲೋಳೆಸರದ ತಿರುಳಿಗೆ ಸ್ವಲ್ಪ ಉಪ್ಪು, ಸಕ್ಕರೆ ಸೇರಿಸಿ, ರುಬ್ಬಿಕೊಂಡು ಕುಡಿಯುವುದರಿಂದ ಆಮಶಂಕೆ ಕಡಿಮೆಯಾಗುತ್ತದೆ



ನೋಯಿಸದಿರಿ ಮನಸುಗಳ ಹೊಸಕದಿರಿ ಕನಸುಗಳ..

ಸುಕೃತ ಎಸ್.

ಆಕೆಗಿನ್ನೂ 30 ವರ್ಷ ವಯಸ್ಸು. ಮದುವೆ ಆಗಿ ಆರು ತಿಂಗಳು ಕಳೆದಿತ್ತು ಅಷ್ಟೆ. ಚಂದದ ಸಂಸಾರ. ಆದರೆ ದಾಂಪತ್ಯ ಬದುಕಿನ ಖುಷಿ ಅಲ್ಲಿಗೇ ಮೊಟಕಾಯಿತು. ಗಂಭೀರ ಆರೋಗ್ಯ ಸಮಸ್ಯೆಯಿಂದಾಗಿ ಗಂಡ ತೀರಿಕೊಂಡ.

'ಗಂಡ ತೀರಿಕೊಂಡು ಒಂದು ತಿಂಗಳು ಕಳೆದಿತ್ತು ಅಷ್ಟೆ. ನನ್ನ ಹುಟ್ಟಿದ ದಿನ ಬಂದಿತ್ತು. ನನ್ನ ತಮ್ಮ, ಅಕ್ಕ ಸೇರಿಕೊಂಡು ನನಗೆ ಗೊತ್ತಿಲ್ಲದಂತೆ ಕೇಕ್ ತಂದಿದ್ದರು. ಸಂಭ್ರಮಾಚರಣೆಗಲ್ಲ, ಉತ್ಸಾಹ ತುಂಬಲು. ಇದನ್ನು ತಿಳಿದ ನನ್ನ ದೂರದ ಸಂಬಂಧಿಕರೊಬ್ಬರು "ಗಂಡ ಸತ್ತು ಇನ್ನೂ ಒಂದು ತಿಂಗಳು ಕಳೆದಿಲ್ಲ, ಎಲ್ಲ ಮರೆತು ಹುಟ್ಟುಹಬ್ಬ ಆಚರಿಸಿಕೊಂಡಳು" ಎಂದು ವ್ಯಂಗ್ಯವಾಡಿದ್ದು ನನ್ನ ಕಿವಿಗೆ ಬಿತ್ತು' ಎಂದ ಆಕೆಯ ಮಾತಿನಲ್ಲಿ ನೋವಿನ ಜೊತೆಗೆ ಈ ಸಮಾಜ ಹಾಕಿದ ಕಟ್ಟುಪಾಡುಗಳ ಬಗ್ಗೆ ವಿಷಾದದ ಛಾಯೆಯಿತ್ತು.

ಇನ್ನೊಬ್ಬಳು ಯುವತಿ ಸರ್ಕಾರಿ ಉದ್ಯೋಗಿ. ಬಹಳ ಸಣ್ಣ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡರು. ಬದುಕನ್ನು ಒಂಟಿಯಾಗಿ ಎದುರಿಸುವ ಛಲ ಹೊಂದಿದಾಕೆ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಸಕ್ರಿಯರು. 'ಫೇಸ್‌ಬುಕ್‌ನಲ್ಲಿ, ವಾಟ್ಸ್‌ಆ್ಯಪ್‌ನಲ್ಲಿ ನಾನು ಮತ್ತು ನನ್ನ ಗಂಡ ಇರುವ ಫೋಟೊವನ್ನು ಡಿ.ಪಿ ಮಾಡಿಕೊಂಡಿದ್ದೆ. ನನ್ನ ಗಂಡನ ಕುಟುಂಬದವರು, "ಇಬ್ಬರೂ ಜೊತೆಯಲ್ಲಿರುವ ಫೋಟೊ ನೋಡಲು ಸಂಕಟ ಆಗುತ್ತದಮ್ಮ. ನಿನ್ನ ಜೀವನ ಹೀಗೆ ಆಯಿತಲ್ಲ ಎನ್ನಿಸುತ್ತದೆ. ಆ ಫೋಟೊ ತೆಗೆದುಬಿಡು" ಎಂದರು. ನಾನು ಆ ಫೋಟೊ ತೆಗೆದು ನನ್ನ ಯಾವುದೋ ಹಳೆಯ ಫೋಟೊವನ್ನು ಡಿ.ಪಿ ಮಾಡಿಕೊಂಡೆ. ನನ್ನ ಕಚೇರಿಯ ಸಹೋದ್ಯೋಗಿಗಳು ನೇರವಾಗಿ, "ಏನ್ರಿ ಮ್ಯಾಡಂ, ಗಂಡನನ್ನು ಇಷ್ಟು ಬೇಗ ಮರೆತು ಬಿಟ್ಟಿರಾ. ಡಿ.ಪಿ ಚೇಂಜ್ ಮಾಡಿದೀರಾ?" ಎಂದು ಹೇಳಿ ನಕ್ಕರು' ಎಂದು ಬಹಳ ನೋವಿನಿಂದ ಹೇಳಿಕೊಂಡರು.

> ಸಣ್ಣ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡ ಹೆಣ್ಣುಮಗಳನ್ನು ನೋಡುವ ಮತ್ತು ಆಕೆಯೊಂದಿಗೆ ವ್ಯವಹರಿಸುವ ನಮ್ಮ ನಡವಳಿಕೆ ಇನ್ನಷ್ಟು ಮಾನವೀಯಗೊಳ್ಳಬೇಕಿದೆ. ಹೊಸ ಬದುಕು ಕಟ್ಟಿಕೊಳ್ಳುವಲ್ಲಿ ಸಮಾಜ ಇನ್ನಷ್ಟು ಅನುವು ಮಾಡಿಕೊಡಬೇಕಿದೆ.



ವೈಧವ್ಯವೆಂದರೆ ವ್ಯಕ್ತಿತ್ವದ ಕೊನೆಯಲ್ಲ..

ಸಹಜತೆಗೆ ಇಂಬು ಕೊಡದವರು..

ಗಂಡ ಅಥವಾ ಹೆಂಡತಿ ತೀರಿಕೊಂಡಾಗ ಸಂಗಾತಿಗೆ ದುಃಖ, ನೋವು ಭರಿಸಲು ಸಾಧ್ಯವಿಲ್ಲದಂಥದ್ದು. ಹೆಂಡತಿ ಮೃತಪಟ್ಟ ನಂತರ ಸಹಜ ಚಟುವಟಿಕೆಗಳಲ್ಲಿ ತೊಡಗುವ ಪುರುಷನ ಬಗ್ಗೆ ಅಂತಹ ಕುತ್ಸಿತ ಮಾತುಗಳು ಬರುವುದು ಕಡಿಮೆ. 'ಅಳುತ್ತ ಕೂತರೆ ಜೀವನ ಸಾಗಬೇಕಲ್ಲ..!' ಎಂದು ಸಮರ್ಥಿಸಿಕೊಳ್ಳುವವರಿಗೇನೂ ಕಮ್ಮಿಯಿಲ್ಲ. ಆದರೆ ಮದುವೆ, ನಂತರದ ಬದುಕಿನಲ್ಲಿ ಖುಷಿಯಾಗಿರುವ ಯುವತಿ ಪತಿ ತೀರಿಕೊಂಡ ನಂತರ ಸಹಜ ಜೀವನಕ್ಕೆ ಹಿಂದಿರುಗಿದರೂ ನೂರೆಂಟು ಮಾತುಗಳನ್ನು ಕೇಳಬೇಕು. ಮದುವೆ ಮೊದಲಾದ ಶುಭ ಸಮಾರಂಭಗಳಲ್ಲಿ ಸಾಮಾನ್ಯರಂತೆ ಬೆರೆತರೂ, ತಮಾಷೆ ಮಾಡಿಕೊಂಡು ನಕ್ಕರೂ ಇತರ ಮಹಿಳೆಯರೇ ಕೊಂಕು ಮಾತನಾಡುವುದು ಈಗಲೂ ಇದೆ.

ಈಗ ಕಾಲ ಬದಲಾಗಿದೆ; ಹಿಂದೆ ಇದ್ದಂತಹ ಕಠೋರ ಪರಿಸ್ಥಿತಿಯನ್ನು ವಿಧವೆಯರು ಈಗ ಎದುರಿಸಬೇಕಾಗಿಲ್ಲ; ಒಂಟಿ ಬದುಕು ಈಗ ಅನಿವಾರ್ಯವಲ್ಲ. ಸಮಾಜ ಸಹ ಅಷ್ಟರ ಮಟ್ಟಿಗೆ ಸುಧಾರಿಸಿದೆ. ಆದರೆ, ಇಂಥ ಆಧುನಿಕ ಕಾಲಘಟ್ಟದಲ್ಲೂ ಸುತ್ತಲಿನ ಸಮಾಜ ವಿಧವೆಯನ್ನು ನೋಡುವ ನೋಟವೇ ಬೇರೆ. ಗಂಡ ಇದ್ದ ಎನ್ನುವ ಕಾರಣಕ್ಕಷ್ಟೆ ಆಕೆಗೊಂದು ಬದುಕು ಮತ್ತು ವ್ಯಕ್ತಿತ್ವವೇ ಎಂಬ ಪ್ರಶ್ನೆ ಏಳುವುದು ಸಹಜ. ಆದರೆ 'ಗಂಡನ ಹೊರತಾಗಿಯೂ ಆಕೆಗೆ ಬದುಕಿದೆ' ಎನ್ನುತ್ತಾರೆ ಮನೋಚಿಕಿತ್ಸಕ ನಡಹಳ್ಳಿ ವಸಂತ್.

'ಮೊದಲಿಗೆ, ಗಂಡ ತೀರಿಕೊಂಡ ನೋವನ್ನು ನಿರಾಕರಿಸಬಾರದು; ಒಪ್ಪಿಕೊಳ್ಳಬೇಕು. ಹೆಂಡತಿ ಆಗಿರುವುದು ಸರಿ, ಇದಕ್ಕೂ ಮೀರಿದ ನಿಮ್ಮದೇ ವ್ಯಕ್ತಿತ್ವ ಇರುತ್ತದಲ್ಲ, ಅದನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕು. ವ್ಯಕ್ತಿ ಆಗಿ ನಾನು ಏನು ಎಂದು ಪ್ರಶ್ನೆ ಹಾಕಿಕೊಂಡು ಉತ್ತರ ಕಂಡುಕೊಳ್ಳಬೇಕು' ಎನ್ನುತ್ತಾರೆ ಅವರು.

ಸಾಮಾಜಿಕ ಜಾಲತಾಣದಲ್ಲೂ ಟ್ರೋಲಿಂಗ್

ಒಂದು ಕಡೆ ಕೆಲವು ಸಮುದಾಯಗಳಲ್ಲಿ ವಿಧವಾ ವಿವಾಹ ಸಾಮಾನ್ಯ ಎಂಬಂತಾಗಿದೆ; ಬೆಳೆದ ಮಕ್ಕಳಿದ್ದರೂ ವಿಧವೆಯನ್ನು ಮದುವೆ ಮಾಡಿಕೊಂಡು, ಆ ಮಕ್ಕಳಿಗೂ ಬದುಕು ನೀಡಿದವರಿದ್ದಾರೆ. ಅತ್ತೆ- ಮಾವನೇ ಮುಂದೆ ನಿಂತು ಮಗ ತೀರಿಕೊಂಡ ನೋವಿನಲ್ಲೂ ತಮ್ಮ ಸೊಸೆಗೆ ಮರು ಮದುವೆ ಮಾಡಿಕೊಟ್ಟ ಉದಾಹರಣೆಗಳು ಬೇಕಾದಷ್ಟಿವೆ. ಮಗಳಂತೆ ನೋಡಿಕೊಂಡವರೂ ಇದ್ದಾರೆ. ಹಳ್ಳಿಗಳಲ್ಲಿ ಕೂಡ ಗಂಡ ಸತ್ತ ನಂತರ ತಾಳಿ, ಕಾಲುಂಗುರ ಇಟ್ಟುಕೊಳ್ಳುವುದನ್ನೂ ಸಾಮಾನ್ಯವೆಂಬಂತೆ ಜನ ಒಪ್ಪಿಕೊಂಡಿದ್ದಾರೆ. ಆದರೆ ಇನ್ನೊಂದು ಕಡೆ ಒಳ್ಳೆಯ ಉಡುಪು ತೊಟ್ಟು, ಖುಷಿಯಾಗಿರುವ ಫೋಟೊವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದರೂ ಟ್ರೋಲಿಂಗ್ ಮಾಡುವಂತಹ ವಿಕೃತ ಮನಸ್ಥಿತಿಯ ಜನರಿದ್ದಾರೆ. ಸಂಗಾತಿಯನ್ನು ಕಳೆದುಕೊಂಡ ದುಃಖ ಒಂದು ಕಡೆಯಾದರೆ, ಸಣ್ಣಪುಟ್ಟ ಖುಷಿಗೂ ಸಮಾಜದಿಂದ ಬರುವ ಇಂಥ ಮಾತುಗಳಿಂದ ಖಿನ್ನತೆಗೆ ಒಳಗಾಗದೇ ಬದುಕು ಕಟ್ಟಿಕೊಳ್ಳುವುದು ಹೇಗೆ?

'ನಮ್ಮ ಹವ್ಯಾಸಗಳು, ನಮ್ಮ ಆಸಕ್ತಿ ಇವೆಲ್ಲದರ ಕಡೆ ಹೆಚ್ಚು ಗಮನ ನೀಡಬೇಕು. ಇಲ್ಲಿಯವರೆಗೆ ಸರಿ, ಇನ್ನು ಮುಂದೆ ನಾನು ಯಾವ ರೀತಿ ಜೀವನ ನಡೆಸಬೇಕು ಎಂಬುದರ ಕಡೆಗೆ ನಮ್ಮ ಎಲ್ಲ ಗಮನ ಕೇಂದ್ರೀಕರಿಸಿಕೊಂಡರೆ ಬೇರೆ ಯಾವ ವಿಚಾರ, ಯಾರ ಮಾತೂ ನಮಗೆ ಕೇಳಿಸುವುದಿಲ್ಲ' ಎನ್ನುತ್ತಾರೆ ನಡಹಳ್ಳಿ ವಸಂತ್. ❖

> ಸಣ್ಣ ವಯಸ್ಸು, ಮತ್ತೊಂದು ಮದುವೆ ಮಾಡಿಬಿಡೋಣ ಎನ್ನುವ ಒತ್ತಡವನ್ನೂ ನಾವು ಹೇರಬಾರದು. ಅದು ಅವರ ಆಯ್ಕೆ. ಮುಂದೆ ಬದುಕಿನಲ್ಲಿ ಇನ್ನೊಬ್ಬ ಬೇಕು ಎನ್ನಿಸಿದಾಗ ಆ ವಿಷಯ ಚರ್ಚೆಗೆ ಅರ್ಹ. ಇಲ್ಲವಾದಲ್ಲಿ ಇನ್ನೊಂದು ಮದುವೆ ಆಗಲೇ ಬೇಕು ಎಂದು ಒತ್ತಾಯ ಮಾಡುವುದು ಸಲ್ಲ
>
> – **ನಡಹಳ್ಳಿ ವಸಂತ್**, ಮನೋಚಿಕಿತ್ಸಕ

ಸೌಂದರ್ಯ


ಸೌಂದರ್ಯವರ್ಧಕ ಹಳೆಯದನ್ನೇ ಬಳಸುತ್ತಿದ್ದೀರಾ?

ಅಮೃತ

ವರ್ಷದ ಹಿಂದೆ ಕೋವಿಡ್–19 ಶುರುವಾದಾಗ ಬಹುತೇಕರು ಮುಖಕ್ಕೆ ಮೇಕಪ್ ಮಾಡುವುದನ್ನು, ಕೈ- ಕಾಲಿಗೆ ಕ್ರೀಂ ಹಚ್ಚುವುದನ್ನು ಬಿಟ್ಟರು; ಮುಖಕ್ಕೆ ಮಾಸ್ಕ್ ಬಂದಿರುವಾಗ ಪೌಡರ್, ತುಟಿಗೆ ಲಿಪ್‌ಸ್ಟಿಕ್, ಕಣ್ಣಿಗೆ ಐಲೈನರ್ ಇನ್ನೇಕೆ ಎಂಬ ಧೋರಣೆ. ಆದರೆ ಕೋವಿಡ್ ಭಯ ನಿಧಾನವಾಗಿ ಕಡಿಮೆಯಾಗುತ್ತಿದ್ದಂತೆ, ಸುತ್ತಾಟ, ಇತರ ಚಟುವಟಿಕೆಗಳು ಗರಿಗೆದರುತ್ತಿದ್ದಂತೆ ಮೇಕಪ್, ಸೌಂದರ್ಯ ರಕ್ಷಣೆಯ ಉತ್ಪನ್ನಗಳು ಕೂಡ ಮತ್ತೆ ಸ್ಥಾನ ಪಡೆದುಕೊಂಡಿವೆ.

ಆದರೆ ಕಪಾಟಿನ ಡ್ರಾವರ್‌ನಲ್ಲಿ ಒಂದು ವರ್ಷದಿಂದ ಬೆಚ್ಚಗೆ ಕುಳಿತಿರುವ ಸೌಂದರ್ಯವರ್ಧಕಗಳನ್ನೇ ಮತ್ತೆ ಬಳಸಲು ಕೆಲವರು ಮುಂದಾಗುವುದು ಸಹಜ. ಹಳೆಯ ಲಿಪ್‌ಸ್ಟಿಕ್ ಅನ್ನೇ ಬಳಸಿದರೆ ತುಟಿಯ ನೈಸರ್ಗಿಕ ಬಣ್ಣವೇ ಹಾಳಾಗುವುದರ ಜೊತೆಗೆ ತ್ವಚೆಗೇ ಶಾಶ್ವತವಾಗಿ ಧಕ್ಕೆಯಾದೀತು ಎಂದು ಎಚ್ಚರಿಸುತ್ತಾರೆ ತಜ್ಞರು.

ಮೇಕಪ್ ಹಾಗೂ ತ್ವಚೆ ರಕ್ಷಣೆಗೆ ವರ್ಷದ ಹಿಂದೆ ಖರೀದಿಸಿದ್ದ ಉತ್ಪನ್ನಗಳ ಮೇಲಿನ ದಿನಾಂಕವನ್ನು ಗಮನಿಸಿ ಅವಧಿ ಮೀರಿದವುಗಳನ್ನು ಎಸೆಯುವುದು ಸೂಕ್ತ. ಉತ್ಪನ್ನಗಳ ಗುಣಮಟ್ಟ, ಅವುಗಳಲ್ಲಿ ಬಳಸಿರುವ ರಾಸಾಯನಿಕಗಳು, ಇತರ ಸಂಯುಕ್ತಗಳ ವಿವರಗಳನ್ನು ಗಮನಿಸಿದರೆ, ಬಹುತೇಕ ಉತ್ಪನ್ನಗಳನ್ನು ಒಂದು ವರ್ಷದೊಳಗೇ ಬಳಸಬೇಕಾಗುತ್ತದೆ. ಒಳ್ಳೆಯ ಕಂಪನಿಯ ಉತ್ಪನ್ನವಲ್ಲದಿದ್ದರೆ ಮೂರು ತಿಂಗಳಿಂದ ಆರು ತಿಂಗಳೊಳಗೆ ಬಳಸಬೇಕು. ಅಂದರೆ ಕಳೆದ ಮಾರ್ಚ್ ಅಥವಾ ಅದಕ್ಕಿಂತ ಮುಂಚೆ ಖರೀದಿಸಿದ್ದರೆ ಅವುಗಳನ್ನು ಎಸೆಯುವುದು ಸುರಕ್ಷಿತ ಎನ್ನುತ್ತಾರೆ ಚರ್ಮ ತಜ್ಞರಾದ ಡಾ. ಎನ್.ಎ. ಶಿವರಾಂ.



ಅವಧಿ ಮುಗಿಯುವ ದಿನಾಂಕವಿರುವ ಪ್ಯಾಕ್ ನಿಮ್ಮ ಬಳಿ ಇಲ್ಲದಿದ್ದರೆ ಹಿಂದೆ ಬಳಸಿದ್ದ ಉತ್ಪನ್ನದ ಬಣ್ಣ ಮತ್ತು ಪರಿಮಳದ ಮೂಲಕ ಉತ್ಪನ್ನ ಸರಿ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಪತ್ತೆ ಹಚ್ಚಬಹುದು. ಸೌಂದರ್ಯವರ್ಧಕ ಕ್ರೀಂ ಅನ್ನು ಒಳಗೊಂಡಿದ್ದರೆ ಅದು ಬಹು ಬೇಗ ಹಾಳಾಗುತ್ತದೆ. ಕೆಟ್ಟ ವಾಸನೆ ಬರಲು ಶುರುವಾಗುತ್ತದೆ. ಕ್ರೀಂ ನೀರು ನೀರಾಗಿ ಸೋರಲು ಆರಂಭವಾಗುತ್ತದೆ.

ಇನ್ನೂ ಮುಚ್ಚಳ ತೆರೆಯದ ಉತ್ಪನ್ನವಾಗಿದ್ದರೆ ಅವಧಿ ಮೀರದಿದ್ದರೆ ಕೆಲವೊಮ್ಮೆ ಬಳಸಬಹುದು. ಉದಾಹರಣೆಗೆ ಮುಖಕ್ಕೆ ಹಚ್ಚುವ ಕಾಂಪ್ಯಾಕ್ಟ್ ಪೌಡರ್. ಗಾಳಿಯ ಜೊತೆ ಸೇರದ, ಬೆಚ್ಚಗೆ ಪ್ಯಾಕ್‌ನೊಳಗೇ ಕೂತ ಲೂಸ್ ಪೌಡರ್ ಅನ್ನು ಕೂಡ ಬಳಸಬಹುದು. ಆದರೆ ಲಿಪ್‌ಸ್ಟಿಕ್ ಅಥವಾ ಮೇಕಪ್‌ಗೆ ಬಳಸುವ ದ್ರವ ಫೌಂಡೇಷನ್ ಪ್ಯಾಕ್‌ನೊಳಗೇ ಇದ್ದರೂ ಅಷ್ಟು ಸುರಕ್ಷಿತವಲ್ಲ. ಮುಚ್ಚಳ ತೆರೆಯದೇ ಹಾಗೇ ಇಟ್ಟರೂ ಕೂಡ ದ್ರವ ಆರಿಹೋಗಿ ಗುಣಮಟ್ಟ ಕಡಿಮೆಯಾಗಿರುತ್ತದೆ. ಆದರೆ ರಾಸಾಯನಿಕರಹಿತವಾದ ಅಂದರೆ ನೈಸರ್ಗಿಕ ಉತ್ಪನ್ನಗಳನ್ನು ಬಳಸಿದ ಸೌಂದರ್ಯವರ್ಧಕಗಳು ಬೇಗ ಹಾಳಾಗುವುದಿಲ್ಲ.

ಫೌಂಡೇಷನ್, ಕನ್ಸೀಲರ್ ಸ್ಟಿಕ್ ಅನ್ನು ಒಂದು ವರ್ಷದವರೆಗೆ ಬಳಸಬಹುದು. ಆದರೆ ಲಿಪ್‌ಸ್ಟಿಕ್‌ಗೆ ಮಾತ್ರ ಆರು ತಿಂಗಳ ಆಯುಷ್ಯ ಅಷ್ಟೇ. ಹಾಗೆಯೇ ಕಾಡಿಗೆ, ರೆಪ್ಪೆಗೆ ಬಳಸುವ ಐಲೈನರ್, ಮಸ್ಕರಾ ಕೂಡ 3–6 ತಿಂಗಳು ಬಾಳಿಕೆ ಬರುತ್ತದೆ.

ಮೇಕಪ್‌ಗೆ, ಐಲೈನರ್‌ಗೆ ಬಳಸುವ ಬ್ರಷ್‌ನಲ್ಲಿ ಕೂಡ ಬ್ಯಾಕ್ಟೀರಿಯ, ಫಂಗಸ್ ಬೆಳೆಯಬಹುದು. ಹೀಗಾಗಿ ಅವುಗಳ ಮೇಲಿನ ಮೋಹವನ್ನು ಬಿಟ್ಟು ಹೊಸದನ್ನು ಖರೀದಿಸಿ ಎನ್ನುತ್ತಾರೆ ಡಾ.ಶಿವರಾಂ. ಕಣ್ಣು ಅತ್ಯಂತ ಸೂಕ್ಷ್ಮವಾದ ಅಂಗವಾಗಿದ್ದು, ಅಲರ್ಜಿ ಉಂಟಾಗುವುದು ಬಹು ಬೇಗ. ಹೀಗಾಗಿ ಫಂಗಸ್, ಬ್ಯಾಕ್ಟೀರಿಯ ಇರುವ ಹಳೆಯ ಐಲೈನರ್, ಐ ಶಾಡೊ ಬಳಸಿದರೆ ಸೋಂಕಾಗುವುದು ನಿಶ್ಚಿತ. ಕಣ್ಣಿಗೆ ತುರಿಕೆ, ಕೆಂಪಗಾಗುವುದು, ನೋವು ಮೊದಲಾದ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.

ಇಂತಹ ಅಲರ್ಜಿ ಕಾಣಿಸಿಕೊಳ್ಳದಿದ್ದರೂ ಸಹ ಹಳೆಯ ಉತ್ಪನ್ನಗಳನ್ನು, ಅದರಲ್ಲೂ ಎಸ್‌ಪಿಎಫ್, ರೆಟಿನಾಲ್ ಮೊದಲಾದ ಅಂಶಗಳಿರುವ ಹಳೆಯ ಸೌಂದರ್ಯವರ್ಧಕಗಳನ್ನು ಎಸೆಯುವುದು ಒಳ್ಳೆಯದು. ಏಕೆಂದರೆ ದಿನ ಕಳೆದಂತೆ ಇಂತಹ ಅಂಶಗಳ ಪರಿಣಾಮ ಕಡಿಮೆಯಾಗುತ್ತ ಹೋಗುತ್ತದೆ ಎನ್ನುತ್ತಾರೆ ತಜ್ಞರು. ❖

ನಳಪಾಕ


ದಾಹ ತಣಿಸಲು ಹೆಸರುಕಾಳು ತಂಪು, ಎಳ್ಳು ಹನಿ

ಶ್ವೇತಾ ಹೆಗಡೆ, ಹೊನ್ನಾವರ

ಎಳ್ಳು ಹನಿ

ಬೇಕಾಗುವ ಸಾಮಗ್ರಿಗಳು: ಎಳ್ಳು - 2 ಟೇಬಲ್ ಚಮಚ, ಬೆಲ್ಲ - ರುಚಿಗೆ ಬೇಕಾದಷ್ಟು, ಏಲಕ್ಕಿ - 1, ತುರಿದ ತೆಂಗಿನಕಾಯಿ - 2 ಟೇಬಲ್ ಚಮಚ

ತಯಾರಿಸುವ ವಿಧಾನ: ಮೊದಲು ಎರಡು ಟೇಬಲ್ ಚಮಚ ಎಳ್ಳನ್ನು ಚೆನ್ನಾಗಿ ತೊಳೆದು ಸಂಪೂರ್ಣವಾಗಿ ನೀರನ್ನು ತೆಗೆದು ಬಾಣಲೆಯಲ್ಲಿ ಹುರಿಯಿರಿ, ಸಣ್ಣ ಉರಿಯಲ್ಲಿ ಎಳ್ಳು ಚಟಪಟ ಅಂತ ಸಿಡಿಯುವ ತನಕ ಹುರಿದುಕೊಳ್ಳಿ. ಹುರಿದ ಎಳ್ಳು ತಣ್ಣಗಾದ ಮೇಲೆ ಒಂದು ಮಿಕ್ಸಿ ಜಾರಿಗೆ ಎಳ್ಳು, ಏಲಕ್ಕಿ, ತುರಿದ ತೆಂಗಿನಕಾಯಿ ಸೇರಿಸಿ ಪುಡಿ ಮಾಡಿಕೊಳ್ಳಿ. ನಂತರ ಅದೇ ಮಿಕ್ಸಿ ಜಾರಿಗೆ ರುಚಿಗೆ ಬೇಕಾದಷ್ಟು ಬೆಲ್ಲ, ಸ್ವಲ್ಪನೀರು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ರುಬ್ಬಿದ ಎಳ್ಳಿನ ಮಿಶ್ರಣಕ್ಕೆ ಪಾನಕದ ಹದಕ್ಕೆ ನೀರು ಸೇರಿಸಿ ಜಾಲರಿಯಲ್ಲಿ ಸೋಸಿಕೊಂಡು ಎಳ್ಳಿನ ಹನಿ ಕುಡಿಯಿರಿ. ಬೇಕಾದರೆ ತಣ್ಣಗಿನ ನೀರು ಅಥವಾ ಐಸ್‌ತುಂಡು ಸೇರಿಸಿ ಕುಡಿಯಬಹುದು. ಬೇಸಿಗೆಯ ಬಿಸಿಲಿಗೆ ತಂಪಾದ, ಆರೋಗ್ಯಕರವಾದ ಎಳ್ಳು ಹನಿ ನಿಮ್ಮ ದಾಹ ತಣಿಸುತ್ತದೆ.



ರಾಗಿ ಪಾನಕ

ಬೇಕಾಗುವ ಸಾಮಗ್ರಿಗಳು: ರಾಗಿ- ¼ ಕಪ್, ಬೆಲ್ಲ - ರುಚಿಗೆ ಬೇಕಾದಷ್ಟು, ಏಲಕ್ಕಿ- 1, ತುರಿದ ತೆಂಗಿನಕಾಯಿ - 2 ಟೇಬಲ್ ಚಮಚ

ತಯಾರಿಸುವ ವಿಧಾನ: ಮೊದಲು ಕಾಲು ಕಪ್ ರಾಗಿಯನ್ನು ಚೆನ್ನಾಗಿ ತೊಳೆದು ಸಂಪೂರ್ಣವಾಗಿ ನೀರನ್ನು ತೆಗೆದು ಬಾಣಲೆಯಲ್ಲಿ ಹುರಿಯಿರಿ, ಸಣ್ಣ ಉರಿಯಲ್ಲಿ ಹಸಿವಾಸನೆ ಹೋಗಿ ಕಂದುಬಣ್ಣಕ್ಕೆ ಬರುವವರಿಗೆ ಹುರಿದುಕೊಳ್ಳಿ. ಹುರಿದ ರಾಗಿ ತಣ್ಣಗಾದ ಮೇಲೆ ಒಂದು ಮಿಕ್ಸಿ ಜಾರಿಗೆ ಹಾಕಿ ಪುಡಿಮಾಡಿಕೊಳ್ಳಿ, ನಂತರ ಅದೇ ಮಿಕ್ಸಿ ಜಾರಿಗೆ ಬೆಲ್ಲ, ಏಲಕ್ಕಿ, ತುರಿದ ತೆಂಗಿನಕಾಯಿ, ಸ್ವಲ್ಪ ನೀರು ಸೇರಿಸಿ ಸಾಧ್ಯವಾದಷ್ಟು ನುಣ್ಣಗೆ ರುಬ್ಬಿಕೊಳ್ಳಿ, ರುಬ್ಬಿದ ರಾಗಿ ಮಿಶ್ರಣಕ್ಕೆ ಪಾನಕದ ಹದಕ್ಕೆ ನೀರು ಸೇರಿಸಿ ಜಾಲರಿಯಲ್ಲಿ ಸೋಸಿಕೊಂಡು ರಾಗಿ ಹನಿ ಕುಡಿಯಿರಿ. ಬೇಕಾದರೆ ತಣ್ಣಗಿನ ನೀರು ಅಥವಾ ಐಸ್‌ತುಂಡು ಸೇರಿಸಿ ಕುಡಿಯಬಹುದು. ಬೇಸಿಗೆಯ ಬಿಸಿಲಿಗೆ ಎಷ್ಟು ತಂಪೋ ಅಷ್ಟೇ ರುಚಿಯೂ, ಆರೋಗ್ಯಕರವೂ ಹೌದು.

ಪ್ರಜಾವಾಣಿ ನೋಡಿಯೊ

ರೆಸಿಪಿಗಳ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಹೆಸರುಕಾಳು ತಂಪು

ಬೇಕಾಗುವ ಸಾಮಗ್ರಿಗಳು: ಹೆಸರುಕಾಳು- ¼ ಕಪ್, ಬೆಲ್ಲ - ರುಚಿಗೆ ಬೇಕಾದಷ್ಟು, ಏಲಕ್ಕಿ- 1, ತುರಿದ ತೆಂಗಿನಕಾಯಿ- 2 ಟೇಬಲ್ ಚಮಚ

ತಯಾರಿಸುವ ವಿಧಾನ: ಮೊದಲು ಕಾಲು ಕಪ್ ಹೆಸರುಕಾಳನ್ನು ಚೆನ್ನಾಗಿ ತೊಳೆದು ಸಂಪೂರ್ಣವಾಗಿ ನೀರನ್ನು ತೆಗೆದು ಬಾಣಲೆಯಲ್ಲಿ ಸಣ್ಣ ಉರಿಯಲ್ಲಿ ಹುರಿಯಿರಿ. ಹಸಿವಾಸನೆ ಹೋಗಿ, ಕಂದುಬಣ್ಣ ಬಂದು, ಪರಿಮಳ ಬರುವವರೆಗೆ ಹುರಿದುಕೊಳ್ಳಿ. ಹುರಿದ ಹೆಸರುಕಾಳು ತಣ್ಣಗಾದ ಮೇಲೆ ಒಂದು ಮಿಕ್ಸಿ ಜಾರಿಗೆ ಹಾಕಿ ಪುಡಿ ಮಾಡಿಕೊಳ್ಳಿ, ನಂತರ ಅದೇ ಮಿಕ್ಸಿ ಜಾರಿಗೆ ಬೆಲ್ಲ, ಏಲಕ್ಕಿ, ತುರಿದ ತೆಂಗಿನಕಾಯಿ, ಸ್ವಲ್ಪ ನೀರು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ, ರುಬ್ಬಿದ ಹೆಸರುಕಾಳಿನ ಮಿಶ್ರಣಕ್ಕೆ ಪಾನಕದ ಹದಕ್ಕೆ ನೀರು ಸೇರಿಸಿ ಜಾಲರಿಯಲ್ಲಿ ಸೋಸಿಕೊಂಡು ಹೆಸರುಕಾಳು ಪಾನಕ ಕುಡಿಯಿರಿ. ಬೇಕಾದರೆ ತಣ್ಣಗಿನ ನೀರು ಅಥವಾ ಐಸ್‌ತುಂಡು ಸೇರಿಸಿ ಕುಡಿಯಬಹುದು. ಬಿಸಿಲ ಉರಿಗೆ ದೇಹಕ್ಕೆ ತಂಪಾಗಿಸುವ, ರುಚಿಯಾದ, ಆರೋಗ್ಯಕರವಾದ ಹೆಸರುಕಾಳು ತಂಪು ನೀವು ಸುಲಭವಾಗಿ ಮಾಡಬಹುದು.



ಕಾಮಾಸಕ್ತಿಯೋ, ಮಾನಸಿಕ ಕಾಯಿಲೆಯೋ?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **ತಾಯಿಗೆ 73 ವರ್ಷ. 30 ವರ್ಷಗಳಿಂದ ಮಾನಸಿಕ ತೊಂದರೆಗಳಿಗೆ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಅವರು ಯೋನಿಯನ್ನು ಉಜ್ಜಿಕೊಳ್ಳಲು ಆರಂಭಿಸಿದ್ದಾರೆ. ನವೆ ಆಗಿದೆಯೇ ಎಂದು ಕೇಳಿದರೆ ಇಲ್ಲವೆನ್ನುತ್ತಾರೆ. ಕೆಲವೊಮ್ಮೆ ಜೋರಾಗಿ ಕಿರುಚುತ್ತಾರೆ. ಇಳಿವಯಸ್ಸಿನಲ್ಲಿ ಲೈಂಗಿಕ ಆಸಕ್ತಿ ಇರುತ್ತದೆಯೇ? ಇವರ ವರ್ತನೆ ಮುಜುಗರ ತರಿಸುತ್ತದೆ. ಇದಕ್ಕೆ ಚಿಕಿತ್ಸೆಯೇನಾದರೂ ಇದೆಯೇ?**

ಹೆಸರು, ಊರು ತಿಳಿಸಿಲ್ಲ.

ಮೂವತ್ತು ವರ್ಷಗಳಿಂದ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿರುವ ವೃದ್ಧ ತಾಯಿಗೆ ಏನಾಗುತ್ತಿದೆ ಎಂದು ತಿಳಿಯುವುದಾದರೂ ಹೇಗೆ? ಇಳಿವಯಸ್ಸಿನಲ್ಲಿ ಲೈಂಗಿಕ ಆಸಕ್ತಿ ಇರುವುದು ಅಸಹಜವೇನಲ್ಲ. ಆದರೆ ಅದೊಂದೇ ವಿಚಾರವನ್ನು ನೀವು ಮುಜುಗರವನ್ನಾಗಿ ತೆಗೆದುಕೊಂಡು ಅವರ ಮಾನಸಿಕ ಕಷ್ಟಗಳನ್ನು ಕಡೆಗಣಿಸುತ್ತಿದ್ದೀರಲ್ಲವೇ? ಮುಜುಗರ ಉಂಟುಮಾಡುವ ವರ್ತನೆಯನ್ನು ತೋರಿಸಿದಾಗ ಅವರನ್ನು ಖಾಸಗಿ ಸ್ಥಳಕ್ಕೆ ಕರೆದುಕೊಂಡು ಹೋಗಿ ಸಮಾಧಾನಪಡಿಸಿ. ನಿಮ್ಮ ಮುಜುಗರ, ಸಿಟ್ಟು, ಕೀಳುದೃಷ್ಟಿ ಅವರ ಮಾನಸಿಕ ಕಷ್ಟಗಳನ್ನು ಹೆಚ್ಚಿಸುತ್ತದೆ. ಸಹಾನುಭೂತಿಯಿಂದ ಮಾತನಾಡಿಸಿ ಅವರ ಕಷ್ಟಗಳನ್ನು ತಿಳಿಯಲು ಯತ್ನಿಸಿ. ಎಲ್ಲವೂ ವಿಫಲವಾದರೆ ಕೊನೆಯವರೆಗೆ ಮಗುವಂತೆ ನೋಡಿಕೊಳ್ಳುವುದೊಂದೇ ಉಳಿದಿರುವ ದಾರಿ.

- **29 ವರ್ಷದ ಅವಿವಾಹಿತೆ. ಎಂಸಿಎ ಪದವೀಧರೆ. ಪಿಸಿಓಡಿ ಸಮಸ್ಯೆಯಿಂದ ಬಳಲುತ್ತಿದ್ದೇನೆ. ಇದರಿಂದ ಮಕ್ಕಳಾಗುವುದು ಕಷ್ಟ. ವಯಸ್ಸಾಗಿರುವುದರಿಂದ ಅದರಲ್ಲಿ ಆಸಕ್ತಿಯೂ ಇಲ್ಲ. ಮದುವೆಯಾಗಿಲ್ಲವೆಂದು ಜನ ಆಡಿಕೊಳ್ಳುತ್ತಾರೆ. ನನಗೆ ಸರಿಯಾದ ಕೆಲಸವೂ ಸಿಗದೆ ರೋಸಿಹೋಗಿದ್ದೇನೆ. ಇಷ್ಟಪಟ್ಟಿರುವ ಹುಡುಗ ಜೂಜಾಡಿ ಮನೆಸಾಲ ತೀರಿಸಿ ಒಂದು ವರ್ಷದ ನಂತರ ಮದುವೆಯಾಗುತ್ತೇನೆ ಎಂದು ಹೇಳುತ್ತಿದ್ದಾನೆ. ಅವನ ಜೊತೆ ದೈಹಿಕ ಸಂಪರ್ಕವಾಗಿರುವುದರಿಂದ ಬೇರೆಯವರನ್ನು ಮದುವೆಯಾಗಲು ಭಯ. ಎಲ್ಲರೂ ದೈಹಿಕ ಸಂಪರ್ಕಕ್ಕೆ ಹಾತೊರೆಯುತ್ತಾರೆ. ವಯಸ್ಸಿನ ಕಾರಣ ಕೆಲಸವೂ ಸಿಗುತ್ತಿಲ್ಲ. ಜೀವನ ನಿಂತುಹೋಗಿದೆ. ಕೀಳರಿಮೆ, ಅವಮಾನ, ಹಿಂಸೆ. ಮನೆಯವರಿಗೆ ಭಾರವಾಗಿದ್ದೇನೆ ಅನ್ನಿಸುತ್ತದೆ. ಒಳ್ಳೆಯ ಕೆಲಸ ಸಿಕ್ಕರೆ ಎಲ್ಲದಕ್ಕೂ ಪರಿಹಾರವೆನ್ನಿಸುತ್ತಿದೆ. ಸಹಾಯಮಾಡಿ.**

ಹೆಸರು, ಊರು ಇಲ್ಲ.

ದೀರ್ಘವಾದ ಪತ್ರದಲ್ಲಿ ನಿಮ್ಮ ಮಾನಸಿಕ ನೋವು, ಹೋರಾಟಗಳನ್ನು ಸ್ಪಷ್ಟವಾಗಿ ನಿರೂಪಿಸಿದ್ದೀರಿ. ಪಿಸಿಓಡಿ ಸಮಸ್ಯೆ ಮಕ್ಕಳಾಗುವುದಕ್ಕೆ ತೊಂದರೆ ಕೊಡಬಹುದಾದರೂ ನೀವಂದುಕೊಂಡಷ್ಟು ಭಯಾನಕವಾದದ್ದಲ್ಲ. ನಿಮ್ಮನ್ನು ಅದು ಆವರಿಸಿರುವ ರೀತಿಯನ್ನು ನೋಡಿದರೆ ನಿಮ್ಮ ಸಂಪೂರ್ಣ ವ್ಯಕ್ತಿತ್ವ ಅದರಿಂದ ಕುಸಿದುಹೋಗಿದೆ ಎನ್ನಿಸುತ್ತಿದೆ. ಅದರ ಹೊರತಾಗಿ ನಿಮ್ಮೊಳಗಿರುವ ಅಗಾಧ ಶಕ್ತಿಯನ್ನೇಕೆ ಬಳಸುತ್ತಿಲ್ಲ? ನೀವಲ್ಲದೆ ಇನ್ನಾರು ಅದನ್ನು ಗುರುತಿಸುವವರು? "ಸರಿಯಾದ ಕೆಲಸ"ದ ಯೋಚನೆ ಬಿಟ್ಟು ಆತ್ಮಗೌರವದಿಂದ ಮಾಡಬಹುದಾದ ಕೆಲಸವೊಂದನ್ನು ಹುಡುಕಿಕೊಳ್ಳಿ. ನಿಂತು ಹೋಗಿರುವ ಬದುಕು ಅಂಬೆಗಾಲಿಡಲಿ. ಜೊತೆಜೊತೆಗೆ ನಿಮ್ಮ ವಿದ್ಯೆಗೆ ಹೊಂದುವ ಉದ್ಯೋಗವನ್ನು ಅರಸುವುದನ್ನು ಮುಂದುವರೆಸಿ. ನಿಮ್ಮ ಕೀಳರಿಮೆ, ಹತಾಶೆಗಳು ಜೂಜುಕೋರನ ಸಾಂಗತ್ಯವನ್ನಾದರೂ ಒಪ್ಪಿಕೊಳ್ಳುವುದಕ್ಕೆ ಪ್ರೇರೇಪಿಸುತ್ತಿದೆಯೇ ಯೋಚಿಸಿ. ಮದುವೆಯ ಯೋಚನೆಯನ್ನು ಸದ್ಯಕ್ಕೆ ಮುಂದೂಡಿ ನಿಮ್ಮೊಳಗಿರುವ ಪ್ರಬುದ್ಧ ಮಹಿಳೆಯನ್ನು ಹುಡುಕಿ ಹೊರತೆಗೆದರೆ ಹೇಗಿರುತ್ತದೆ? ನಿಮ್ಮನ್ನು ಗೌರವಿಸುವ, ಪ್ರೀತಿಸುವ ಸಂಗಾತಿ ತಾನಾಗಿಯೇ ಹುಡುಕಿ ಬರಬಹುದಲ್ಲವೇ?

- **23ರ ಯುವಕ. ಬಹಳ ವರ್ಷಗಳಿಂದ ಪ್ರತಿ ರಾತ್ರಿ ಐದಾರು ಆತಂಕ ಹುಟ್ಟಿಸುವ, ವಾಸ್ತವಕ್ಕೆ ಸಂಬಂಧವಿಲ್ಲದ ಭಯಾನಕ ಕನಸುಗಳು ಬೀಳುತ್ತವೆ. ಇದರಿಂದ ಎಚ್ಚರವಾಗಿ ನಿದ್ದೆ ಅಪೂರ್ಣವಾಗುತ್ತದೆ. ಕೆಲವೊಮ್ಮೆ ತಲೆನೋವು ಬರುತ್ತದೆ. ಕನಸುಗಳಿಲ್ಲದೆ ಮಲಗುವುದು ಹೇಗೆ ಎಂದು ತಿಳಿಸಿ.**

ಗಜೇಂದ್ರ, ಬೆಂಗಳೂರು.

ಕನಸುಗಳು ಎಲ್ಲರಿಗೂ ಬೀಳುತ್ತವೆ. ನಿಮಗೆ ಅದು ಭಯ ಹುಟ್ಟಿಸುತ್ತದೆ ಎಂದರೆ ಹಲವಾರು ವಿಷಯಗಳ ಕುರಿತಾದ ನಿಮ್ಮ ಆತಂಕ ಕನಸಾಗಿ ಕಾಣಿಸಿಕೊಳ್ಳುತ್ತದೆ ಎಂದರ್ಥ. ಕನಸಿನಿಂದ ಎಚ್ಚರವಾದಾಗ ನಿಧಾನವಾಗಿ, ಆಳವಾಗಿ ಉಸಿರಾಡುತ್ತಾ ದೇಹವನ್ನು ಶಾಂತಗೊಳಿಸಿ. ಕನಸಿನ ಕುರಿತಾದ ನೆನಪಿಗೆ ಬಂದಷ್ಟು ವಿವರಗಳನ್ನು ಬರೆದಿಡುತ್ತಾ ಹೋಗಿ. ಹೀಗೆ ಸಾಕಷ್ಟು ದಿನಗಳು ಮಾಡಿದರೆ ನಿಮ್ಮನ್ನು ಕಾಡುವ ಆತಂಕದ ಬಗೆಗಿನ ಚಿತ್ರಣ ದೊರಕುತ್ತದೆ. ದೀರ್ಘಕಾಲದಿಂದ ಕಾಡುವ ಇಂತಹ ಆತಂಕಗಳಿಗೆ ಪರಿಹಾರವನ್ನು ಹುಡುಕಿದಾಗ ಕನಸುಗಳು ಬಿದ್ದರೂ ಭಯಾನಕವಾಗಿರುವುದಿಲ್ಲ. ಅಗತ್ಯವೆನ್ನಿಸಿದರೆ ತಜ್ಞ ಮನೋಚಿಕಿತ್ಸಕರ ಸಹಾಯ ಪಡೆಯಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ದೇವರು ನಿಮಗೆ ಒಂದು ಮುಖವನ್ನು ಕೊಟ್ಟಿರುತ್ತಾನೆ. ಆದರೆ, ನೀವು ಸ್ವತಃ ಇನ್ನೊಂದು ಮುಖವನ್ನು ಸೃಷ್ಟಿಸಿಕೊಂಡಿರುತ್ತೀರಿ.

-ವಿಲಿಯಂ ಶೇಕ್ಸ್‌ಪಿಯರ್

ಸಂಪುಟದಲ್ಲಿ ಸಮನ್ವಯದ ಕೊರತೆ ಆಡಳಿತದ ಮೇಲೆ ಪ್ರತಿಕೂಲ ಪರಿಣಾಮ

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕೆಲವು ನಿರ್ಧಾರಗಳ ಬಗೆಗಿನ ಅಸಮಾಧಾನವನ್ನು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ಬಹಿರಂಗವಾಗಿಯೇ ವ್ಯಕ್ತಪಡಿಸಿದ್ದಾರೆ. 'ಮುಖ್ಯಮಂತ್ರಿಯವರು ನನ್ನ ಖಾತೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಗ್ರಾಮೀಣ ಸುಮಾರ್ಗ ಯೋಜನೆ ಸ್ಥಗಿತಗೊಳ್ಳುವಂತೆ ಮಾಡಿದ್ದಾರೆ. ಇಲಾಖೆಯ ಸಚಿವನಾದ ನನ್ನ ಗಮನಕ್ಕೆ ತಾರದೆ 81 ವಿಧಾನಸಭಾ ಕ್ಷೇತ್ರಗಳಿಗೆ ₹775 ಕೋಟಿ ಅನುದಾನ ನೀಡಿದ್ದಾರೆ. ಬಜೆಟ್‌ನಲ್ಲಿ ಪ್ರಕಟಿಸಿದ ಕೆಲವು ಯೋಜನೆಗಳಿಗೂ ಅನುದಾನ ಬಿಡುಗಡೆ ಮಾಡಿಲ್ಲ' ಎಂದು ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ವಿರುದ್ಧ ಆರೋಪ ಮಾಡಿದ್ದಾರೆ. ಈ ಕುರಿತು ರಾಜ್ಯಪಾಲರಿಗೂ ಅವರು ಲಿಖಿತ ದೂರು ನೀಡಿದ್ದಾರೆ ಎಂಬ ವಿದ್ಯಮಾನವು ರಾಜ್ಯ ಸರ್ಕಾರವು ಸುಲಲಿತವಾಗಿ ನಡೆಯುತ್ತಿಲ್ಲ ಎಂಬುದರ ಸೂಚನೆ ಎಂದೇ ಭಾವಿಸಬೇಕಾಗುತ್ತದೆ. ಬಿಜೆಪಿ ವರಿಷ್ಠರಿಗೂ ದೂರು ನೀಡಿದ್ದಾಗಿ ಈಶ್ವರಪ್ಪ ಹೇಳಿದ್ದಾರೆ. ಇಂತಹ ಬೆಳವಣಿಗೆಯು ರಾಜಕೀಯವಾಗಿ ಮತ್ತು ಆಡಳಿತಾತ್ಮಕವಾಗಿ ಬೇರೆಯದೇ ಸಂದೇಶ ರವಾನಿಸುತ್ತದೆ ಎಂಬುದನ್ನು ಅನುಭವಿ ರಾಜಕಾರಣಿಗಳಾದ ಯಡಿಯೂರಪ್ಪ ಮತ್ತು ಈಶ್ವರಪ್ಪ ಅರ್ಥ ಮಾಡಿಕೊಂಡಿಲ್ಲ ಎಂದು ಭಾವಿಸಲಾಗದು. 'ಶಿಸ್ತಿನ ಪಕ್ಷ' ಎಂದು ಬಿಂಬಿಸಿಕೊಳ್ಳುತ್ತಿರುವ ಬಿಜೆಪಿಯಲ್ಲಿ ಈ ರೀತಿಯ ಬೆಳವಣಿಗೆಗೆ ಬೇರೇನೊ ಕಾರಣ ಇದೆ ಎಂಬ ಅನುಮಾನ ಮೂಡಿದರೆ ಅದನ್ನು ತಪ್ಪು ಎನ್ನಲಾಗದು. ಏಕೆಂದರೆ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಬಹಳ ಸಮಯದಿಂದ ಯಡಿಯೂರಪ್ಪ ಅವರ ಮೇಲೆ ಹರಿಹಾಯುತ್ತಲೇ ಇದ್ದಾರೆ. ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂಬ ಹೇಳಿಕೆಯು ಪಕ್ಷದಿಂದ ಬಂದಿದೆಯೇ ಹೊರತು ಯಾವುದೇ ಕ್ರಮ ಈವರೆಗೆ ಆಗಿಲ್ಲ. ಈಶ್ವರಪ್ಪನವರ ಪ್ರಕರಣದಲ್ಲಿಯೂ ಯತ್ನಾಳ ಅವರು ಯಡಿಯೂರಪ್ಪ ವಿರುದ್ಧ ನಿಂತಿದ್ದಾರೆ. 'ಈಶ್ವರಪ್ಪ ನಡೆ ಸರಿಯಲ್ಲ' ಎಂದು ಯಡಿಯೂರಪ್ಪ ಅವರಿಗೆ ಆಪ್ತರಾಗಿರುವ ಕೆಲವು ಸಚಿವರು ಹೇಳಿದ್ದಾರೆ. ರಾಜ್ಯಪಾಲರಿಗೆ ಈಶ್ವರಪ್ಪ ಬಹಿರಂಗ ಪತ್ರ ಬರೆಯಬಾರದಿತ್ತು ಎಂದು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ. ರಾಜ್ಯಪಾಲರಿಗೆ ದೂರು ಸಲ್ಲಿಸಿದಾಕ್ಷಣ ಪವಾಡವೇನೂ ಆಗದು ಎಂಬುದು ಈಶ್ವರಪ್ಪನವರಿಗೆ ಗೊತ್ತಿಲ್ಲದ್ದಲ್ಲ. ಇವನ್ನೆಲ್ಲ ಗಮನಿಸಿದರೆ, ವಿಷಯವು ಹೊರಗೆ ಕಾಣುವಷ್ಟು ಸರಳವಾಗಿ ಇರಲಿಕ್ಕಿಲ್ಲ ಎಂದು ಅರ್ಥವಾಗುತ್ತದೆ. ಇಡೀ ಪ್ರಸಂಗದ ಹಿಂದೆ ರಾಜಕೀಯದ ಹತ್ತು ಹಲವು ಒಳಸುಳಿಗಳು ಇದ್ದಿರಬಹುದು.



ಮುಖ್ಯಮಂತ್ರಿ ಮತ್ತು ಸಚಿವರ ನಡುವೆ ತಾಳಮೇಳ ಇಲ್ಲ ಎಂಬುದು ಸರ್ಕಾರವನ್ನು ದುರ್ಬಲಗೊಳಿಸುತ್ತದೆ. ಇದು ಆಡಳಿತದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ

ಮುಖ್ಯಮಂತ್ರಿ ಮತ್ತು ಸಚಿವರ ನಡುವೆ ತಾಳಮೇಳ ಇಲ್ಲ ಎಂಬುದು ಸರ್ಕಾರವನ್ನು ದುರ್ಬಲಗೊಳಿಸುತ್ತದೆ. ಇದು ಆಡಳಿತದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಸಚಿವ ಸಂಪುಟದ ಸದಸ್ಯರು ಪರಸ್ಪರ ಕಚ್ಚಾಡುತ್ತಿದ್ದರೆ ಆಡಳಿತ ಯಂತ್ರವು ಹಳಿ ತಪ್ಪುತ್ತದೆ, ಅಧಿಕಾರಿಗಳು ಯಾರ ಮಾತನ್ನೂ ಕೇಳದ ಸ್ಥಿತಿ ನಿರ್ಮಾಣ ಆಗುತ್ತದೆ. ಇದರ ಪ್ರತ್ಯಕ್ಷ ಪರಿಣಾಮವನ್ನು ಜನರು ಅನುಭವಿಸಬೇಕಾಗುತ್ತದೆ. ಕೋವಿಡ್-19ರ ಎರಡನೇ ಅಲೆಯು ರಾಜ್ಯವನ್ನು ತೀವ್ರವಾಗಿ ಕಾಡುತ್ತಿರುವ ಹೊತ್ತಿನಲ್ಲಿ ಮುಖ್ಯಮಂತ್ರಿ ಮತ್ತು ಸಚಿವರು ಗುದ್ದಾಟಕ್ಕೆ ಇಳಿದರೆ ಅದಕ್ಕೆ ಜನರು ತೆರಬೇಕಾದ ಬೆಲೆಯು ಬಹಳ ದುಬಾರಿ ಆದೀತು ಎಂಬ ಎಚ್ಚರ ಅಧಿಕಾರಸ್ಥರಲ್ಲಿ ಇರಬೇಕು. ಸಚಿವ ಸಂಪುಟದ ಸಾಮೂಹಿಕ ಹೊಣೆಗಾರಿಕೆಗೆ ಭಂಗ ಬಂದಿದೆ. ಇದಕ್ಕೆ ಹೊಣೆಗಾರರು ಯಾರು, ಯಾರ ಪಾತ್ರ ಎಷ್ಟು ಎಂಬುದನ್ನು ಪಕ್ಷದ ವರಿಷ್ಠರು ಪತ್ತೆ ಮಾಡಬೇಕು ಅಥವಾ ಸಂಪುಟವೇ ಸಾಮೂಹಿಕವಾಗಿ ಆ ಕೆಲಸ ನಿಭಾಯಿಸಬೇಕು. ಆಡಳಿತ ವ್ಯವಸ್ಥೆಗೆ ಮುಖ್ಯಮಂತ್ರಿಯೇ ಮುಖ್ಯಸ್ಥ, ಅವರಿಗೆ ಪರಮಾಧಿಕಾರವೂ ಇದೆ ಎಂಬುದು ಒಂದು ಆಯಾಮ ಮಾತ್ರ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮುಖ್ಯಮಂತ್ರಿ ಅಥವಾ ಪ್ರಧಾನಿಯು ಸಚಿವ ಸಂಪುಟದಲ್ಲಿರುವ ಸಮಾನರಲ್ಲಿ ಮೊದಲಿಗ ಎಂಬುದು ಇನ್ನೊಂದು ಆಯಾಮ. ಅನುಭವಿ ಸಚಿವ ಈಶ್ವರಪ್ಪನವರ ಖಾತೆಯಲ್ಲಿ ಮುಖ್ಯಮಂತ್ರಿ 'ಹಸ್ತಕ್ಷೇಪ' ಮಾಡುವುದು ನೈತಿಕವಾಗಿ ಸರಿಯೇ ಎಂಬ ಪ್ರಶ್ನೆ ಮೂಡಬಹುದು. ಸಚಿವರಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ಕೊಡಬೇಕು. ಈ ಹಿಂದೆಯೂ ಸಚಿವರಿಗೆ ಮುಕ್ತ ಅವಕಾಶ ಇದ್ದಾಗ ಆಡಳಿತ ಹೆಚ್ಚು ಪರಿಣಾಮಕಾರಿಯಾಗಿದ್ದ ನಿದರ್ಶನಗಳು ಇವೆ. ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಎಲ್ಲರನ್ನೂ ಜತೆಗೆ ಒಯ್ಯುವ ಅವಕಾಶ ಇರುವಾಗ ಅದನ್ನು ಕೈಚೆಲ್ಲಿ ವಿವಾದ ಮೈಮೇಲೆ ಎಳೆದುಕೊಳ್ಳುವುದರಲ್ಲಿ ಯಾವ ಅರ್ಥವೂ ಇಲ್ಲ. ಸಚಿವ ಸ್ಥಾನದ ಹೊಣೆಗಾರಿಕೆಯನ್ನು ಮುಕ್ತವಾಗಿ, ಸಮರ್ಥವಾಗಿ ನಿಭಾಯಿಸಲು ಆಗುತ್ತಿಲ್ಲ ಎಂದು ಯಾರಿಗಾದರೂ ಅನಿಸಿದರೆ ಅಂಥವರು ಸಂಪುಟದಿಂದ ಹೊರನಡೆಯಲು ಅವಕಾಶ ಇದ್ದೇ ಇದೆ. ಸಂಪುಟದ ಸದಸ್ಯರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಅನಿಸಿದರೆ ಅವರನ್ನು ಸಂಪುಟದಿಂದ ಕೈಬಿಡುವ ಪರಮಾಧಿಕಾರವೂ ಮುಖ್ಯಮಂತ್ರಿಗೆ ಇದೆ.

ದಿನದ ಟ್ವೀಟ್

ಲಸಿಕೆಯ ಅಗತ್ಯ ಮನಗಾಣಿ



ಸೀಟ್ ಬೆಲ್ಟ್‌ಗಳು ಅಪಘಾತಗಳಿಂದ ನಮ್ಮನ್ನು ರಕ್ಷಿಸುವುದಿಲ್ಲ. ಆದರೂ ಅವುಗಳನ್ನು ಧರಿಸುತ್ತೇವೆ ಏಕೆ? ನಾವು ಗಂಭೀರವಾಗಿ ಗಾಯಗೊಳ್ಳುವ ಅಥವಾ ಸಾವಿಗೀಡಾಗುವ ಸಾಧ್ಯತೆಯನ್ನು ಅವು ಕಡಿಮೆ ಮಾಡುತ್ತವೆ. ಕೋವಿಡ್ ಲಸಿಕೆ ಸಹ ಅದೇ ರೀತಿಯದು. ಮುಂದೆ ಬಂದು ಲಸಿಕೆ ಹಾಕಿಸಿಕೊಳ್ಳಿ.

ಡಾ. ಅಂಬರೀಷ್ ಮಿಥಲ್, ವೈದ್ಯ

25 ವರ್ಷಗಳ ಹಿಂದೆ

ಬುಧವಾರ, 3-4-1996

• ಶಂಕರಾನಂದ, ನಾಯ್ಕರ್, ವರಲಕ್ಷ್ಮಿ ಮಾದೇಗೌಡ, ಕೃಷ್ಣರಾವ್‌ಗೆ ಟಿಕೆಟ್

ನವದೆಹಲಿ, ಏ. 2– ಕಾಂಗ್ರೆಸ್ ಪಕ್ಷದ ಕೇಂದ್ರ ಚುನಾವಣಾ ಸಮಿತಿಯು ಕಳೆದ 28ರಂದು ಕರ್ನಾಟಕದ 12 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿ, ಉಳಿದ ಕ್ಷೇತ್ರಗಳ ಬಗೆಗೆ ನಾಲ್ಕು ದಿನಗಳಿಂದ ತೀವ್ರ ಕುತೂಹಲ ಕೆರಳಿಸಿತ್ತಾದರೂ ಇಂದು ಮಧ್ಯಾಹ್ನದ ಹೊತ್ತಿಗೆ ಹತ್ತು ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಆಖೈರುಗೊಳಿಸಿತು.

ಈ ಕ್ಷೇತ್ರಗಳ ಪೈಕಿ ಪ್ರತಿಷ್ಠಿತ ಬೆಂಗಳೂರು ದಕ್ಷಿಣಕ್ಕೆ ದಿವಂಗತ ಮಾಜಿ ಮುಖ್ಯಮಂತ್ರಿ ಆರ್.ಗುಂಡೂರಾವ್ ಅವರ ಪತ್ನಿ ವರಲಕ್ಷ್ಮಿ ಗುಂಡೂರಾವ್, ಷೇರು ಹಗರಣದ ಹಿನ್ನೆಲೆಯಲ್ಲಿ ಮಂತ್ರಿ ಸ್ಥಾನ ತ್ಯಾಗ ಮಾಡಬೇಕಾಗಿ ಬಂದ ಬಿ.ಶಂಕರಾನಂದ ಅವರು ಮತ್ತೆ ಚಿಕ್ಕೋಡಿ ಕ್ಷೇತ್ರದಿಂದ ಮತ್ತು ಮೈಸೂರು ಕ್ಷೇತ್ರದಿಂದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅಭ್ಯರ್ಥಿಗಳಾಗಲಿದ್ದಾರೆ.

• ಜಾಫರ್ ಷರೀಫ್ ಸ್ಪರ್ಧೆ ಇಲ್ಲ

ಬೆಂಗಳೂರು, ಏ. 2– ಕಾಂಗ್ರೆ ಪಕ್ಷದಿಂದ ಟಿಕೆಟ್ ಲಭಿಸದಿದ್ದಲ್ಲಿ ಲೋಕಸಭಾ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಆಗಲಿ ಅಥವಾ ಇನ್ನಾವುದೇ ಪಕ್ಷದ ಟಿಕೆಟ್‌ನಿಂದಾಗಲಿ ಸ್ಪರ್ಧಿಸುವುದಿಲ್ಲ ಎಂದು ಕೇಂದ್ರದ ಮಾಜಿ ರೈಲ್ವೆ ಸಚಿವ ಜಾಫರ್ ಷರೀಫ್ ಇಂದು ಸ್ಪಷ್ಟಪಡಿಸಿದ್ದಾರೆ.

'ನಾನು ರಾಜಕೀಯವಾಗಿ ಬೆಳೆದಿರುವುದೇ ಕಾಂಗ್ರೆಸ್‌ನಿಂದಾಗಿ. ನನಗೆ ಸ್ಪರ್ಧಿಸಲು ಅವಕಾಶ ನೀಡಿಲ್ಲ ಎಂಬ ಒಂದೇ ಕಾರಣದಿಂದ ಪಕ್ಷಕ್ಕೆ ದ್ರೋಹ ಬಗೆಯಲು ನಾನು ಬಯಸುವುದಿಲ್ಲ' ಎಂದಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 3-4-1971

• ಅಜಯ್ ಮುಖರ್ಜಿ ಸಂಪುಟದಲ್ಲಿ 25 ಮಂದಿ ಸಚಿವರು

ಕಲ್ಕತ್ತ, ಏ. 2– ಬಂಗಾಳದಲ್ಲಿ 317 ದಿನಗಳ ರಾಷ್ಟ್ರಪತಿ ಆಳ್ವಿಕೆ ನಂತರ 25 ಸಚಿವರಿರುವ ಆರು ಪಕ್ಷಗಳ ಮಾರ್ಕ್ಸಿಸ್ಟೇತರ ಸಮ್ಮಿಶ್ರ ಸರ್ಕಾರವು ಬಾಂಗ್ಲಾ ಕಾಂಗ್ರೆಸ್ ಅಧ್ಯಕ್ಷ ಅಜಯ್ ಕುಮಾರ್ ಮುಖರ್ಜಿ ಅವರ ನಾಯಕತ್ವದಲ್ಲಿ ಇಂದು ಮಧ್ಯಾಹ್ನ ರಾಜಭವನದಲ್ಲಿ ರಾಜ್ಯಪಾಲ ಎಸ್.ಎಸ್. ಧಾವನ್ ಅವರಿಂದ ಪ್ರಮಾಣವಚನ ಸ್ವೀಕರಿಸಿತು.

ಪ್ರಜಾಸತ್ತಾತ್ಮಕ ಸಂಯುಕ್ತರಂಗದ ಅಂಗ ಪಕ್ಷಗಳೆಂದರೆ: ಆಡಳಿತ ಕಾಂಗ್ರೆಸ್, ಬಾಂಗ್ಲಾ ಕಾಂಗ್ರೆಸ್, ಸಿಪಿಐ, ಫಾರ್‌ವರ್ಡ್ ಬ್ಲಾಕ್, ಸಂಸ್ಥಾ ಕಾಂಗ್ರೆಸ್, ಗೂರ್ಖಾ ಲೀಗ್, ಮುಸ್ಲಿಂ ಲೀಗ್, ಪಿಎಸ್‌ಪಿ (ಬಂಡಾಯ) ಎಸ್‌ಎಸ್‌ಪಿ (ಬಂಡಾಯ).

• ಕಷ್ಟಸ್ಥಿತಿಯಲ್ಲಿ ಪಾಕ್ ಸೇನೆ 8 ಗಡಿ ಚೌಕಿ ವಿಮೋಚನಾ ಸೇನೆ ವಶ

ಷಿಲ್ಲಾಂಗ್, ಏ. 2– ಷೇಖ್ ಮುಜೀಬುರ್ ರಹಮಾನರ ವಿಮೋಚನಾ ಸೇನೆಯ ವಿರುದ್ಧ ಸಕಲ ರೀತಿಯ ದಾಳಿಯನ್ನು ಗುರುವಾರ ಆರಂಭಿಸಿದ ಪಶ್ಚಿಮ ಪಾಕಿಸ್ತಾನಿ ದಳಗಳಿಗೆ ಮೊದ ಮೊದಲು ವಿಜಯ ಕಂಡುಬಂದಿತಾದರೂ ಈಗ ಅಷ್ಟು ಸುಲಭವಾಗಿಲ್ಲ ಎಂದು ಇಂದು ಗಡಿಯ ಕಡೆಯಿಂದ ಬಂದ ವರದಿಗಳು ಹೇಳಿವೆ.

ಸ್ವತಂತ್ರ ಬಾಂಗ್ಲಾ ಬಾನುಲಿ ಮೂರನೇ ದಿನವಾದ ಈ ದಿನವೂ ಮೌನವಾಗಿತ್ತು.

ಹೋರಾಟ ನಡೆಯುತ್ತಲೇ ಇದೆ, ಜನತೆ ಸ್ಥೈರ್ಯ ಕೆಟ್ಟಿಲ್ಲ ಎಂದು ಬಾಂಗ್ಲಾದೇಶ ಸರ್ಕಾರ ಹೇಳಿಕೆಯಿತ್ತಿದೆಯೆಂದು ಗೊತ್ತಾಗಿದೆ.

ನೀರಿನಲ್ಲಿನ ರಾಸಾಯನಿಕವನ್ನು ಸಂಪೂರ್ಣ ತೊಡೆಯುವ ತಂತ್ರಜ್ಞಾನ ಎಷ್ಟರಮಟ್ಟಿಗೆ ಅಳವಡಿಕೆಯಾಗಿದೆ?

ಕೆರೆ ತುಂಬಿಸುವ ಮುನ್ನ...



ವಿಶ್ಲೇಷಣೆ

ಟಿ.ಆರ್.ಅನಂತರಾಮು

ಕೋರಮಂಗಲ- ಚಲ್ಲಘಟ್ಟ ಕಣಿವೆ (ಕೆ.ಸಿ. ವ್ಯಾಲಿ) ಸದಾ ಸುದ್ದಿಯಲ್ಲಿರುತ್ತದೆ. ಇದಕ್ಕೆ ಬೆಂಗಳೂರಿನ ಮಳೆನೀರು ಹರಿಯುವ ಪ್ರಮುಖ ಕಣಿವೆ ಎಂಬುದಷ್ಟೇ ಕಾರಣವಲ್ಲ. ಇಲ್ಲಿ ಮಳೆನೀರಿಗಿಂತ ಹೆಚ್ಚಿಗೆ ಹರಿಯುವುದು ಬೆಂಗಳೂರು ಜಲಮಂಡಳಿ ಸಂಸ್ಕರಿಸಿದ ಕೊಳಚೆ ನೀರು; ಅದೂ ಕೃಷಿಯ ಬಳಕೆಗಾಗಿ.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ 126 ಕೆರೆಗಳನ್ನು ಭರ್ತಿ ಮಾಡುವುದು ಮೊದಲ ಹಂತದ ಗುರಿಯಾಗಿತ್ತು. ಒಟ್ಟು ವೆಚ್ಚ ₹ 1,300 ಕೋಟಿ. ನಿತ್ಯ 40 ಕೋಟಿ ಲೀಟರ್ ಸಂಸ್ಕರಿಸಿದ ಕೊಳಚೆ ನೀರನ್ನು ಹರಿಸುವ ಉದ್ದೇಶದೊಂದಿಗೆ ಯೋಜನೆಯ ಅನುಷ್ಠಾನವೂ ಆಯಿತು. ಒಟ್ಟು 83 ಕೆರೆಗಳು ಭರ್ತಿಯಾದವು. ಇವೆಲ್ಲವೂ ಒಂದಕ್ಕೊಂದು ಕೊಂಡಿಯಾಗಿರುವುದು ವಿಶೇಷ. ಅಂದರೆ ಒಂದು ತುಂಬಿದರೆ ಮತ್ತೊಂದಕ್ಕೆ ಕೋಡಿ ಬೀಳುತ್ತದೆ. ಈ ಯೋಜನೆಗೆ ಏಕೆ ಇಷ್ಟು ಮಹತ್ವ ಬಂದಿದೆ ಎಂದರೆ, ಇಡೀ ಜಗತ್ತಿನಲ್ಲಿ ಇಸ್ರೇಲ್ ಹೊರತುಪಡಿಸಿದರೆ ಸಂಸ್ಕರಿಸಿದ ಕೊಳಚೆ ನೀರನ್ನು ಕೃಷಿಗಾಗಿ ಬಳಸುತ್ತಿರುವುದು ಈ ಕಣಿವೆಯಿಂದಲೇ.

ಎರಡನೇ ಹಂತದ ಯೋಜನೆಗೆ ಈಗ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಇದರ ಅಂದಾಜುವೆಚ್ಚ ₹ 455 ಕೋಟಿ. ಇದನ್ನು ಬಳಸಿಕೊಂಡು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಒಟ್ಟು 257 ಕೆರೆಗಳಿಗೆ ನೀರು ತುಂಬಿಸುವ ಉದ್ದೇಶವಿದೆ.

ಕೆ.ಸಿ. ವ್ಯಾಲಿ ಯೋಜನೆ ಕುರಿತು ಆರಂಭದಲ್ಲೇ ಅನೇಕ ಸಂದೇಹಗಳಿದ್ದವು. ಮೊದಲನೆಯದಾಗಿ, ಉದ್ದೇಶಿಸಿದಂತೆ ದಿನವಹಿ 40 ಕೋಟಿ ಲೀಟರ್ ನೀರನ್ನು ಸಂಸ್ಕರಿಸುವ ಗುರಿಯನ್ನು ತಲುಪಲೇ ಇಲ್ಲ. ಅದು 30 ಕೋಟಿ ಲೀಟರ್ ದಾಟಲೇ ಇಲ್ಲ. ಬಹುಶಃ ಇದು ಅಂಥ ಗಂಭೀರ ಸಮಸ್ಯೆ ಎನ್ನಿಸದು. ಬೆಳ್ಳಂದೂರು ಕೆರೆಯಿಂದ ಸಂಸ್ಕರಿಸಿದ ನೀರು ಮೊದಲು 45 ಕಿಲೊ ಮೀಟರ್ ದೂರದಲ್ಲಿರುವ ಲಕ್ಷ್ಮಿಸಾಗರ ಕೆರೆಗೆ ಹರಿಯಿತು, ಅಲ್ಲಿಂದ ಕೆರೆ ಜಾಲಗಳಿಗೆ ಹರಿಯುವ ನೈಸರ್ಗಿಕ ವ್ಯವಸ್ಥೆಯೇ ಇದೆ.

ಮೊದಲ ಹಂತದಲ್ಲಿ 2018ರಲ್ಲಿ ಈ ಯೋಜನೆ ಫಲಿಸಿದಾಗ, 2011ರಿಂದ ಏಳು ವರ್ಷ ಸತತವಾಗಿ ಬರಗಾಲ ಅನುಭವಿಸಿದ ಜಿಲ್ಲೆಗಳ ರೈತರಿಗೆ ಪುಳಕವಾಗಿದ್ದುಂಟು. ಏಕೆಂದರೆ ಕೆರೆಗಳು ಭರ್ತಿಯಾಗುತ್ತಿದ್ದಂತೆಯೇ ಸುತ್ತಣ ಭೂಮಿಯಲ್ಲಿ ಅಂತರ್ಜಲ ಮಟ್ಟ ಏರಿ ಕೃಷಿಗೆ ಒದಗಿಬಂತು. ವಾಸ್ತವವಾಗಿ ಕೆರೆಯ ನೀರನ್ನು ನೇರವಾಗಿ ಬಳಸಿಕೊಳ್ಳುವ ಉದ್ದೇಶ ಯೋಜನೆಯಲ್ಲಿ ಇರಲಿಲ್ಲ. ಆದರೆ ಸಂಸ್ಕರಿಸಿದ ಕೊಳಚೆ ನೀರಿನಲ್ಲಿ ಭಾರ ಧಾತುಗಳಿವೆ. ಅಲ್ಲದೆ ನೈಟ್ರೇಟ್ ಸಂಯುಕ್ತಗಳೂ ಇವೆ ಎಂದು ಭಾರತೀಯ ವಿಜ್ಞಾನ ಸಂಸ್ಥೆ ವರದಿ ಮಾಡಿದಾಗ ಅದು ಗೊಂದಲ ಸೃಷ್ಟಿಸಿತು. ಏಕೆಂದರೆ ಸಾರ್ವಜನಿಕ ಆರೋಗ್ಯದ ಪ್ರಶ್ನೆ ಅದರಲ್ಲಿತ್ತು. ಬೆಳೆಯುವ ಆಹಾರದಲ್ಲೂ ಅವು ಸೇರುತ್ತವೆ ಎಂಬ ವಿಚಾರ ಪರ-ವಿರೋಧ ಚರ್ಚೆಗಳನ್ನು ಹುಟ್ಟುಹಾಕಿತು. ಅದು ಸುಪ್ರೀಂ ಕೋರ್ಟ್ ಮೆಟ್ಟಿಲನ್ನೂ ಏರಿತು. ಸಂಸ್ಕರಿಸಿದ ನೀರಿನ ಪೂರೈಕೆ ಮಾಡುವುದನ್ನು ಕೋರ್ಟ್ ತಡೆಹಿಡಿಯಿತು. ಆನಂತರ, ಫಾಸ್ಫೇಟ್ ಅಂಶ ತೀರ ನಗಣ್ಯ ಎಂಬುದು ಪರೀಕ್ಷೆಯಿಂದ ಗೊತ್ತಾಗಿರುವುದಾಗಿ ಹೇಳಿದ ಮೇಲೆ ಕೋರ್ಟ್ ಹಸಿರು ನಿಶಾನೆ ತೋರಿತು.

ಬೆಂಗಳೂರಿನ ಕೈಗಾರಿಕೆಗಳು ಬೆಳ್ಳಂದೂರು ಕೆರೆಗೆ ಹರಿಸುತ್ತಿರುವ ಕೊಳಚೆ ನೀರಿನಲ್ಲಿ ಭಾರ ಧಾತುಗಳಾದ ಕ್ರೋಮಿಯಂ, ಕ್ಯಾಡ್ಮಿಯಂ, ನಿಕ್ಕಲ್ ಪ್ರಮಾಣ ನಿಗದಿತ ಪ್ರಮಾಣಕ್ಕಿಂತಲೂ ಹೆಚ್ಚಾಗಿಯೇ ಇರುವುದನ್ನು ಇತ್ತೀಚೆಗೆ ಮಾರಗೊಂಡನಹಳ್ಳಿ, ಹೊಸಕೋಟೆ, ವರ್ತೂರು, ಜಿಗಣಿ, ಭೈರಮಂಗಲ, ಎಲೆ ಮಲ್ಲಪ್ಪಶೆಟ್ಟಿ ಕೆರೆಗಳ ನೀರಿನ ವಿಶ್ಲೇಷಣೆ ಮಾಡಿರುವ ವಿಜ್ಞಾನಿಗಳ ತಂಡ ದೃಢಪಡಿಸಿದೆ. ವಿಶೇಷವಾಗಿ ನವಿಲುಕೋಸು, ಹರಿವೆ ಸೊಪ್ಪು, ಬೀಟ್‌ರೂಟ್, ಟೊಮ್ಯಾಟೊಗಳಲ್ಲಿ ಇವು ಹೆಚ್ಚು ಸಂಚಯಿಸಿರುವುದು ಸಾರ್ವಜನಿಕರನ್ನು ಗಾಬರಿಗೊಳಿಸಿದೆ.

ಈಗಾಗಲೇ 79 ಕಾರ್ಖಾನೆಗಳು ವೃಷಭಾವತಿಯ ನೀರನ್ನು ಕಲುಷಿತಗೊಳಿಸಿ ಅತಿ ಹೆಚ್ಚಿನ ಸೀಸವನ್ನು ಕೊಳಚೆ ನೀರಿಗೆ ಸೇರಿಸಿ ಅದು ಅಲ್ಲಿನ ಹುಲ್ಲಿನಲ್ಲೂ ಕೊನೆಗೆ ಹಸುವಿನ ಹಾಲಿನಲ್ಲೂ ತೂರಿಕೊಂಡಿರುವುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ. ಈಗ ಮಾಲಿನ್ಯ ನಿಯಂತ್ರಣ ಮಂಡಳಿ ಈ ಕಣಿವೆಯ ಅನೇಕ ಕೈಗಾರಿಕೆಗಳನ್ನು ಮುಚ್ಚಿಸಲು ಮುಂದಾಗಿದೆ. ಆದರೆ ಈಗಾಗಲೇ ಅಂತರ್ಜಲವನ್ನು ಸೇರಿರುವ ಭಾರ ಧಾತುಗಳನ್ನು ತೊಡೆದು ಹಾಕುವುದು ಹೇಗೆ?

ರಾಜ್ಯ ಸರ್ಕಾರ ಒಂದು ಹಂತದಲ್ಲಂತೂ ಎಚ್ಚೆತ್ತಿದೆ. ಹಸಿರು ನ್ಯಾಯಮಂಡಳಿ ಸೂಚಿಸಿದಂತೆ ಎನ್.ಕೆ.ಪಾಟೀಲರ ನೇತೃತ್ವದಲ್ಲಿ 2011ರಲ್ಲಿ ರಚಿಸಿದ ಸಮಿತಿ, ರಾಜಕಾಲುವೆಗೆ ಚರಂಡಿ ನೀರು ಸೇರಿ ಮಲಿನ ಮಾಡುವುದನ್ನು ತಪ್ಪಿಸಲು ಮಾಡಬೇಕಾದ ಕಾರ್ಯಗಳ ಬಗ್ಗೆ ವಿಶದವಾದ ವರದಿ ನೀಡಿತ್ತು. ಅದನ್ನು ಅನುಷ್ಠಾನಗೊಳಿಸಲು ಕೃಷ್ಣರಾಜ ಮಾರುಕಟ್ಟೆಯಿಂದ ಬೆಳ್ಳಂದೂರು ಕೆರೆವರೆಗೆ ರಾಜಕಾಲುವೆಯ ದುರಸ್ತಿಯನ್ನು ಮಾಡಲು ಹಾಗೂ ಮನರಂಜನೆಗಾಗಿ ಮತ್ತು ಪಾದಚಾರಿಗಳಿಗೆ ಅವಕಾಶ ಮಾಡಿಕೊಡಲು ಸುಮಾರು ₹ 169 ಕೋಟಿ ಅಂದಾಜು ವೆಚ್ಚದ ಯೋಜನೆಯನ್ನು ರೂಪಿಸಿದೆ. ಆದರೆ ಸದ್ಯದಲ್ಲಿ ಇದಕ್ಕಿಂತಲೂ ಮುಖ್ಯವಾದದ್ದು ಕೈಗಾರಿಕೆಗಳು ಭಾರ ಧಾತುಗಳನ್ನು ಬೆಳ್ಳಂದೂರು ಕೆರೆಗೆ ಬಿಡದಂತೆ ನಿರ್ಬಂಧಿಸುವುದು.

ಇಲ್ಲಿ ಪ್ರಮುಖವಾಗಿ ಯೋಚಿಸಬೇಕಾದದ್ದು ಜಲಮಂಡಳಿಯು ಕೊಳಚೆ ನೀರನ್ನು ಸಂಸ್ಕರಿಸಿ ಹೊರಬಿಡಲು ಅನುಸರಿಸುತ್ತಿರುವ ತಂತ್ರ ನಿಜಕ್ಕೂ ಎಷ್ಟರಮಟ್ಟಿಗೆ ಸುರಕ್ಷಿತ ಎನ್ನುವುದು. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀಡಿರುವ ಮಾರ್ಗದರ್ಶನ ಅನುಸರಿಸುತ್ತಿರುವುದಾಗಿ ಜಲಮಂಡಳಿ ಹೇಳುತ್ತಲೇ ಬಂದಿದೆ. ನೀರಿನಲ್ಲಿ ಸೇರಿರುವ ರಾಸಾಯನಿಕಗಳನ್ನು ಸಂಪೂರ್ಣವಾಗಿ ತೊಡೆದುಹಾಕುವ ತಂತ್ರಜ್ಞಾನ ಎಷ್ಟರಮಟ್ಟಿಗೆ ಅಳವಡಿಕೆಯಾಗಿದೆ ಎಂಬುದು ಜನಾರೋಗ್ಯದ ದೃಷ್ಟಿಯಿಂದ ಕೇಳಬೇಕಾದ ಪ್ರಶ್ನೆ.

ಕೇಂದ್ರ ಸರ್ಕಾರದ ಸಾರ್ವಜನಿಕ ಆರೋಗ್ಯ ಸಂಸ್ಥೆಯು 2013ರಲ್ಲಿ ನೀಡಿರುವ ಮಾರ್ಗದರ್ಶಿ ಸೂತ್ರಗಳನ್ನು ಕಡ್ಡಾಯವಾಗಿ ಪಾಲಿಸಿಯೇ ಕೊಳಚೆ ನೀರನ್ನು ಮೂರು ಹಂತಗಳಲ್ಲಿ ಸಂಸ್ಕರಿಸಬೇಕು. ಮೊದಲನೆಯದು, ಇದ್ದಿಲು ಬಳಸಿಕೊಂಡು ತೇಲುಕಣಗಳನ್ನು ತೊಡೆದುಹಾಕುವುದು, ಆನಂತರ ಸೋಸಿ ಅತಿ ಸೂಕ್ಷ್ಮ ರಾಸಾಯನಿಕಗಳನ್ನು ಬೇರ್ಪಡಿಸುವುದು, ಕೊನೆಯ ಹಂತದಲ್ಲಿ ಸೂಕ್ಷ್ಮಾತಿಸೂಕ್ಷ್ಮ ಪೊರೆಯನ್ನು ಬಳಸಿ ಒತ್ತಡದಲ್ಲಿ ನೀರನ್ನು ಹಾಯಿಸುವುದು. ಇದನ್ನು ರಿವರ್ಸ್ ಆಸ್ಮಾಸಿಸ್ ಎನ್ನುತ್ತಾರೆ. ಸಾಗರದ ಉಪ್ಪು ನೀರನ್ನು ಸಿಹಿ ನೀರನ್ನಾಗಿ ಪರಿವರ್ತಿಸುವ ತಂತ್ರ ಇದೇ. ಈ ಕೊನೆಯ ಹಂತ ಅತ್ಯಂತ ಮುಖ್ಯವಾದದ್ದು. ಏಕೆಂದರೆ ಕೊಳಚೆ ನೀರಿನಲ್ಲಿ ಮಲದ ಮೂಲಕ ಹೊರಬೀಳುವ ಇ-ಕೋಲಿ ಎಂಬ ಬ್ಯಾಕ್ಟೀರಿಯಗಳಿರುತ್ತವೆ. ಅವನ್ನು ತೊಡೆದುಹಾಕಲು ಈ ತಂತ್ರ ಬಳಸಲೇಬೇಕಾಗುತ್ತದೆ.

ಸದ್ಯದಲ್ಲಿ ಮೂರನೇ ಹಂತದ ಸಂಸ್ಕರಣೆಯ ತಂತ್ರಜ್ಞಾನದ ಅಳವಡಿಕೆಯ ಬಗ್ಗೆ ಜಲಮಂಡಳಿ ಏನೂ ಹೇಳಿಲ್ಲ. ಸಂಸ್ಕರಿಸಿದ ನೀರು ಕೆರೆಯನ್ನು ಭರ್ತಿ ಮಾಡಿದಾಗ ಅದು ಇಂಗಿ ಅಂತರ್ಜಲ ಭಂಡಾರವನ್ನೂ ತಲುಪುತ್ತದೆ. ಕೊಳವೆ ಬಾವಿಯ ನೀರಲ್ಲೂ ಬ್ಯಾಕ್ಟೀರಿಯ ಅವತರಿಸಲು ಸಾಧ್ಯ. ಕೇಂದ್ರ ಸರ್ಕಾರ ಇದಕ್ಕೆಲ್ಲ ಒಂದು ಮಿತಿಯನ್ನೂ ಸೂಚಿಸಿದೆ. 100 ಮಿಲಿ ಲೀಟರ್ ನೀರಿನಲ್ಲಿ 200 ಇ-ಕೋಲಿ ಬ್ಯಾಕ್ಟೀರಿಯಗಳಿದ್ದರೆ ಅದು ಹೆಚ್ಚೇನೂ ದುಷ್ಪರಿಣಾಮ ಬೀರದು. ಆದರೆ ನೀರನ್ನು ಸಂಸ್ಕರಿಸುವಾಗ ಬಳಸುವ ಕ್ಲೋರಿನ್ ಪ್ರಮಾಣದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಸಾಕು, ರೋಗಕಾರಕ ಬ್ಯಾಕ್ಟೀರಿಯಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ವೃದ್ಧಿಸುತ್ತದೆ. ಸಂಸ್ಕರಿಸಿದ ಕೊಳಚೆ ನೀರಿನಲ್ಲಿ ಯಾವ ಪ್ರಮಾಣದಲ್ಲಿ ಬ್ಯಾಕ್ಟೀರಿಯ ಇದೆ ಎಂಬುದು ವರದಿಯಾಗಿಲ್ಲ. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಈ ಪರೀಕ್ಷೆಯನ್ನು ತ್ವರಿತವಾಗಿ ಮಾಡಬೇಕಾದ ತುರ್ತಿದೆ.

ಸಂಸ್ಕರಿಸಿದ ಕೊಳಚೆ ನೀರು ಕೂಡ ಕುಡಿಯುವ ನೀರಿನ ಬಣ್ಣವನ್ನೇ ಹೋಲುತ್ತದೆ ಎಂದಮಾತ್ರಕ್ಕೆ ಅದು ಸಂಪೂರ್ಣವಾಗಿ ರಾಸಾಯನಿಕಮುಕ್ತ ಅಥವಾ ಬ್ಯಾಕ್ಟೀರಿಯಮುಕ್ತ ಎಂದು ತಿಳಿಯಬೇಕಾಗಿಲ್ಲ. ಅದನ್ನು ಖಚಿತಪಡಿಸಿಕೊಳ್ಳಲು ವಿಶ್ಲೇಷಣೆಯನ್ನೇ ಮಾಡಬೇಕು. ಏಕೆಂದರೆ ಇದು ಸಾರ್ವಜನಿಕ ಆರೋಗ್ಯದ ಪ್ರಶ್ನೆ. ಸರ್ಕಾರಕ್ಕೆ ಈ ವಿಚಾರದಲ್ಲಿ ದೊಡ್ಡ ಹೊಣೆ ಇದೆ.



ಚುರುಮುರಿ



ಸಿಡಿ ಹಬ್ಬ!

• ಎಸ್.ಬಿ.ರಂಗನಾಥ್

ಪೇಟೆ ಗೆಳೆಯನನ್ನು ಹಳ್ಳಿಗೆ ಕರೆದೊಯ್ದಿದ್ದೆ. ದೇವಸ್ಥಾನದ ಬಳಿ ರಿಟೈರ್ಡ್ ದಫೇದಾರ್ ಮುದುಕಪ್ಪ, 'ಸಿಡಿ ಹಬ್ಬಕ್ಕೆ ಬಂದಿರಾ?' ಎಂದರು.

ಬೆಚ್ಚಿದ ಮಿತ್ರ 'ಏನಯ್ಯಾ, ಇಲ್ಲಿಯೂ ಸೀಡಿ ಸದ್ದು?!' ಎಂದ.

ನಾನು, 'ಅದು ನೀನಂದ್ಕೊಂಡಿರೋ ಸೀಡಿ ಅಲ್ಲಯ್ಯಾ... ಅಜ್ಜ ಹೇಳ್ತಾರೆ ಕೇಳು' ಎಂದೆ.

ಮುದುಕಪ್ಪ ಹೇಳಿದರು, 'ಸಿಡಿಗಳಲ್ಲಿ ಎರಡು ನಮೂನಿ. ಒಂದು- ತಿರುಗಣೆ ಸಿಡಿ. ಇದು ನಿಮ್ಮ ಲ್ಯಾಂಡ್ ಫೋನ್ ಇದ್ದಂಗೆ. ನೆಲದಲ್ಲಿ ನೆಟ್ಟ ಇದರ ಸಿಡಿಗಂಬದ ಮೇಲೆ 35 ಮೊಳದುದ್ದದ ಸಿಡಿ ಮರ ಇರುತ್ತೆ. ಅದ್ರ ತುದಿಗೆ ಭಕ್ತರು ತಮ್ಮನ್ನು ಬಟ್ಟೆಯಿಂದ ಕಟ್ಟಿಕೊಂಡಿರ್ತಾರೆ. ಅದು ಗಾಣದಂತೆ ತಿರುಗ್ತಿರುತ್ತೆ. ನಮ್ಮೂರಿನದು ಇಂಥ ಸಿಡಿ'.

'ಇನ್ನೊಂದು ಸಿಡಿ ಎಂಥದ್ದು?'

'ಅದು ಬಂಡಿಸಿಡಿ, ನಿಮ್ಮ ಮೊಬೈಲ್ ಫೋನಿನಂತೆ. ಅತ್ತಿಂದಿತ್ತ ಓಡಾಡತ್ತೆ. ಒಳ್ಳೆ ಹೋರಿಗಳು ಆ ಬಂಡೀನ ಊರು ಗಡಿವರೆಗೆ ಎಳೆದೊಯ್ಯುತ್ವೆ... ದಾರಿಯಲ್ಲಿನ ಗುಂಡಿ ಗೊಟರು, ಕರೆಂಟ್ ಕಂಬ ತಪ್ಪಿಸೋಕೆ ಅದ್ರ ದಾರಿ ಬದ್ಲಾಗ್ತಿರತ್ತೆ'.

'ಎರಡಕ್ಕೂ ವ್ಯತ್ಯಾಸವೇನಜ್ಜಾ?'

'ಮೊದಲನೇದು ನಮ್ಮ ಹಳ್ಳಿ ಜನದಂತೆ... ಎರಡನೇದ್ರಂತೆ ನಮ್ಮ ನಾಯಕಮಣಿಗಳು'.

'ಅಂದ್ರೆ?'

'ನಾವು ಬಹುಪಾಲು ಏಕಪತ್ನಿ ವ್ರತಸ್ಥರು. ಕೆಲವ್ರು ಸೊಗಸುಗಾರ ಪುಟ್ಟಸ್ವಾಮಿಗಳಿದ್ರೂ ಅವ್ರ ಕಾರ್ಯಕ್ಷೇತ್ರ ತಿರುಗಣೆ ಸಿಡಿಯಂತೆ ಒಂದು ಕಡೆಗೇ ಸೀಮಿತ. ಎರಡನೆಯದು ಬಂಡಿ ಸಿಡಿ, ನಮ್ಮ ನಾಯಕಮಣಿಗಳ ಥರ. ಅವರಿಗೆ ಒಂದು ದಾರಿ ಸಾಲದು. ಅನೇಕವು ಬೇಕು. ಎಲ್ಲದರಲ್ಲೂ ಬಲಿಷ್ಠರಾದ ಅವರು ಆಗಾಗ ದಾರಿ ಬದಲಿಸ್ತಿರ್ತಾರೆ. ಈಗ ರಾಜಧಾನೀಲಿ ನಡೀತಿರೋದು ಇಂಥ ಸಿಡಿಯಾಟವೇ ಅಲ್ವೇ? ಅದು ಯಾವಾಗ, ಎಲ್ಲೆಲ್ಗೆ ಯಾರ‍್ಯಾರನ್ನು ಹತ್ತಿಸ್ಕೊಂಡುಹೋಗಿ ಎಲ್ಲಿ ನಿಲ್ಲುತ್ತೋ ಆ ದೇವರಿಗೇ ಗೊತ್ತು. ನಮ್ಮಿಂತ ಶ್ಯಾಣೇ ಆದ ನಿಮ್ಮಂಥ ಪ್ಯಾಟೇ ಮಂದೀನೆ ಹೇಳ್ಬೇಕು'.

ಬುಡಕ್ಕೇ ಸಂಚಕಾರ ಬಂತು! ದಿನಭವಿಷ್ಯದಲ್ಲಿ ಇವತ್ತು ಏಪ್ರಿಲ್ ಒಂದು, ಹುಷಾರಾಗಿರಿ ಎಂದಿದ್ದುದು ನೆನಪಾಗಿ, ಮಿತ್ರನನ್ನು ಮನೆಕಡೆ ಎಳೆದೊಯ್ದೆ.

ಸಂಗತ

ಆರ್‌ಟಿಇ: ನಿರೀಕ್ಷೆ ಫಲಿಸಿತೇ?

ಈ ಕಾಯ್ದೆ ಪರಿಣಾಮಕಾರಿಯಾಗಿ ಜಾರಿಯಾಗಿದೆಯೇ ಎಂದು ಕೇಳಿಕೊಳ್ಳಬೇಕಾಗಿದೆ

• ನಿರಂಜನಾರಾಧ್ಯ ವಿ.ಪಿ.

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ- 2009 (ಆರ್‌ಟಿಇ) ಜಾರಿಯಾಗಿ 11 ವರ್ಷ ಪೂರ್ಣಗೊಂಡಿದೆ. ಕಾಯ್ದೆಯು 2010ರ ಏಪ್ರಿಲ್ 1ರಂದು ಜಾರಿಯಾದಾಗ ಹಲವು ನಿರೀಕ್ಷೆಗಳನ್ನು ಇಟ್ಟುಕೊಳ್ಳಲಾಗಿತ್ತು. ಅದರಲ್ಲಿ ಬಹಳ ಮುಖ್ಯವಾಗಿ, ಶಿಕ್ಷಣ ಒಂದು ಸಂವಿಧಾನಬದ್ಧ ನ್ಯಾಯಯುತ ಮೂಲಭೂತ ಹಕ್ಕಾಗಿದ್ದು, ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ದೊರೆಯುವ ಕಾಲ ಒದಗಿಬಂದಿದೆ ಎಂದು ಸಂಭ್ರಮಿಸಲಾಯಿತು.

ಪ್ರಗತಿಪರ ರಾಜ್ಯವೆನಿಸಿರುವ ಕರ್ನಾಟಕದಲ್ಲಿ ಈ ಕಾಯ್ದೆಯನ್ನು ಜಾರಿಗೊಳಿಸಲು ಸರ್ಕಾರ ವಿಶೇಷ ಕಾಳಜಿ ವಹಿಸುವುದಲ್ಲದೆ ಅಗತ್ಯ ಹಣಕಾಸನ್ನು ಒದಗಿಸಲು ಕ್ರಮ ಕೈಗೊಳ್ಳುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಕಾಯ್ದೆ ಜಾರಿಯಾಗಿ 11 ವರ್ಷಗಳು ಮುಗಿದಿರುವ ಈ ಸಂದರ್ಭದಲ್ಲಿ ಕಾಯ್ದೆ ಪರಿಣಾಮಕಾರಿಯಾಗಿ ಜಾರಿಯಾಗಿದೆಯೇ ಎಂದು ನೋಡಿದರೆ, ನಿರಾಶೆಯೇ ಹೆಚ್ಚು ಕಂಡುಬರುತ್ತದೆ.

ಮೊದಲನೆಯದಾಗಿ, ಎಲ್ಲಾ ಅವಕಾಶಗಳನ್ನು ಒಂದು ಕಾಲಮಿತಿಯಲ್ಲಿ ಜಾರಿಗೊಳಿಸಲು ಸರ್ಕಾರ ನಿರ್ದಿಷ್ಟ ನೀಲಿ ನಕಾಶೆಯನ್ನು ತಯಾರಿಸಲು ವಿಫಲವಾಗಿದೆ. ಇದರಿಂದ ಮಕ್ಕಳ ಪ್ರವೇಶಕ್ಕೆ ಸಂಬಂಧಿಸಿದಂತೆ ಸರ್ಕಾರಿ, ಸರ್ಕಾರಿ ಅನುದಾನಿತ ಹಾಗೂ ಸರ್ಕಾರಿ ಅನುದಾನರಹಿತ ಶಾಲೆಗಳು ಮನಬಂದಂತೆ ಪ್ರವೇಶ ಪ್ರಕ್ರಿಯೆಯನ್ನು ಮಾಡುತ್ತಿವೆ. ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಶಾಲೆಗಳು ಪ್ರತೀ ಶೈಕ್ಷಣಿಕ ವರ್ಷದ ಜೂನ್ ತಿಂಗಳಿನಲ್ಲಿ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸಿದರೆ, ಸರ್ಕಾರಿ ಅನುದಾನರಹಿತ ಶಾಲೆಗಳು 6 ತಿಂಗಳು ಮುಂಚೆಯೇ ಪ್ರವೇಶ ಪ್ರಕ್ರಿಯೆ ಮುಗಿಸಿ ಸರ್ಕಾರಕ್ಕೆ ಸಡ್ಡು ಹೊಡೆಯುತ್ತವೆ. ಶಿಕ್ಷಣ ಹಕ್ಕು ಕಾಯ್ದೆ ಮಕ್ಕಳ ಪ್ರವೇಶಕ್ಕೆ ಯಾವುದೇ ಅರ್ಹತಾ ಪರೀಕ್ಷೆ ಅಥವಾ ಸಂದರ್ಶನ ನಡೆಸುವುದನ್ನು ನಿಷೇಧಿಸಿದ್ದರೂ ಖಾಸಗಿ ಶಾಲೆಗಳು ನಿರಂತರವಾಗಿ ಮಕ್ಕಳಿಗೆ ಹಾಗೂ ಪೋಷಕರಿಗೆ ಪರೀಕ್ಷೆ, ಸಂದರ್ಶನ ನಡೆಸುತ್ತಲೇ ಬಂದಿವೆ. ಇದನ್ನು ಪೂರ್ಣವಾಗಿ ನಿಷೇಧಿಸಿ ಕಾನೂನಿನ ಅನ್ವಯ ಪ್ರವೇಶ ಪ್ರಕ್ರಿಯೆ ನಡೆಸಲು ಸರ್ಕಾರ ಶೈಕ್ಷಣಿಕ ವರ್ಷದ ಕಾಯಂ ವೇಳಾಪಟ್ಟಿಯನ್ನು ನಿಗದಿಗೊಳಿಸಲು ಇಂದಿಗೂ ಸಾಧ್ಯವಾಗಿಲ್ಲ.

ಎರಡನೆಯದಾಗಿ, ಖಾಸಗಿ ಶಾಲೆಗಳು ವಂತಿಗೆ ಪಡೆಯುವುದನ್ನು ಕಾಯ್ದೆಯು ನಿಷೇಧಿಸಿದೆ. ಆದರೆ, ಈ ಶಾಲೆಗಳು ವಂತಿಗೆ ಮತ್ತು ದುಬಾರಿ ಶುಲ್ಕ ಸಂಗ್ರಹಿಸುವ ಪರಿಪಾಟ ಲಂಗು ಲಗಾಮಿಲ್ಲದೆ ಮುಂದುವರಿದಿದೆ. ನೆರೆ ರಾಜ್ಯವಾದ ತಮಿಳುನಾಡು ನಿವೃತ್ತ ನ್ಯಾಯಾಧೀಶರೊಬ್ಬರ ಅಧ್ಯಕ್ಷತೆಯಲ್ಲಿ ಶುಲ್ಕ ನಿಗದಿ ಸಮಿತಿಯನ್ನು ರಚಿಸಿ ಕಾಯ್ದೆಯ ಆಶಯವನ್ನು ಎತ್ತಿಹಿಡಿಯುವಲ್ಲಿ ಯಶಸ್ವಿಯಾಗಿದೆ. ನಮ್ಮ ರಾಜ್ಯ ಕೂಡ ಈ ದಿಕ್ಕಿನಲ್ಲಿ ಯೋಚಿಸಬೇಕು.

ಮೂರನೆಯದಾಗಿ, ಶಿಕ್ಷಣ ಹಕ್ಕು ಕಾಯ್ದೆ ಪ್ರತಿಯೊಂದು ಶಾಲೆಯಲ್ಲಿ ಕಡ್ಡಾಯವಾಗಿ ಇರಲೇಬೇಕಾದ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ನಿಗದಿಗೊಳಿಸಿ, ಕಾಯ್ದೆ ಜಾರಿಯಾದ 5 ವರ್ಷದ ಒಳಗಾಗಿ ಒದಗಿಸುವಂತೆ ಸೂಚಿಸಿತ್ತು. ಅವುಗಳೆಂದರೆ, ತರಬೇತಿ ಹೊಂದಿದ ಶಿಕ್ಷಕರು, ಉತ್ತಮ ತರಗತಿ ಕೋಣೆ, ಶುದ್ಧ ಕುಡಿಯುವ ನೀರು, ಹುಡುಗ ಹಾಗೂ ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯ, ವಿದ್ಯುಚ್ಛಕ್ತಿ, ಆಟದ ಮೈದಾನ, ಗ್ರಂಥಾಲಯ, ಪ್ರತೀ ತರಗತಿವಾರು ಪೀಠೋಪಕರಣ ಮತ್ತು ಪಾಠೋಪಕರಣ, ತರಗತಿವಾರು ಕ್ರೀಡಾ ಸಾಮಗ್ರಿ ಮತ್ತು ಸುರಕ್ಷತೆಗಾಗಿ ಕಾಂಪೌಂಡು. ಆದರೆ, ಇಂದಿಗೂ ಈ ಸೌಲಭ್ಯಗಳು ಎಲ್ಲಾ ಶಾಲೆಗಳಲ್ಲಿ ಲಭ್ಯವಿಲ್ಲ. ಸರ್ಕಾರಿ ಶಾಲೆಗಳ ಸ್ಥಿತಿ ಶೋಚನೀಯವಾಗಿದೆ.



ಸರ್ಕಾರದ ಅಂಕಿ ಅಂಶಗಳ ಅನ್ವಯ, ರಾಜ್ಯದಲ್ಲಿ 30,815 ಪ್ರಾಥಮಿಕ ಹಾಗೂ 3,371 ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಕಿರಿಯ ಪ್ರಾಥಮಿಕ ಶಾಲೆಯ 17,163 ಹಾಗೂ ಹಿರಿಯ ಪ್ರಾಥಮಿಕ ಶಾಲೆಯ 54,126 ಕೊಠಡಿಗಳು ದುರಸ್ತಿ ಸ್ಥಿತಿಯಲ್ಲಿವೆ. ಇನ್ನು ಶೌಚಾಲಯಗಳ ಸ್ಥಿತಿ ಹೇಳತೀರದು. ಈ ಕಾರಣದಿಂದಾಗಿ 2010– 11ರಲ್ಲಿ 45,677ರಷ್ಟಿದ್ದ ಸರ್ಕಾರಿ ಶಾಲೆಗಳ ಸಂಖ್ಯೆ 2018- 19ರಲ್ಲಿ 43,492ಕ್ಕೆ ಇಳಿದಿದೆ. ಅಂದರೆ, 2,185 ಸರ್ಕಾರಿ ಶಾಲೆಗಳು ಮಕ್ಕಳಿಲ್ಲದೆ ಮುಚ್ಚಿಹೋಗಿವೆ. ಇನ್ನು 2010- 11ರಲ್ಲಿ 1ರಿಂದ 10ನೇ ತರಗತಿಯವರೆಗೆ 54,53,725ರಷ್ಟಿದ್ದ ಮಕ್ಕಳ ಸಂಖ್ಯೆ 2018- 19ರಲ್ಲಿ 43,79,254ಕ್ಕೆ ಇಳಿದಿದೆ. ಸರಿಸುಮಾರು 10,74,471 ಮಕ್ಕಳು ಸರ್ಕಾರಿ ಶಾಲೆ ತೊರೆದಿದ್ದಾರೆ. ಇದು ಅತ್ಯಂತ ಗಂಭೀರವಾದ ವಿಷಯ. ಶಿಕ್ಷಣವು ಮೂಲಭೂತ ಹಕ್ಕಾಗಿದ್ದಾಗ್ಯೂ ಬಡ ಮತ್ತು ಅವಕಾಶವಂಚಿತ ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ನ್ಯಾಯಸಮ್ಮತವಾದ ಗುಣಾತ್ಮಕ ಶಿಕ್ಷಣ ಒದಗಿಸುವ ಕೆಲಸದಲ್ಲಿ ಸರ್ಕಾರ ಸೋತಿದೆ.

ಕೊನೆಯದಾಗಿ, ಶಿಕ್ಷಣದ ಗುಣಮಟ್ಟ ಸುಧಾರಣೆ ನಮ್ಮ ಮುಂದಿರುವ ದೊಡ್ಡ ಸವಾಲು. ಎಲ್ಲಾ ಮಕ್ಕಳು ವಯಸ್ಸು ಮತ್ತು ತರಗತಿಗೆ ಅನುಗುಣವಾಗಿ ಪಡೆದುಕೊಳ್ಳಬೇಕಾದ ಶೈಕ್ಷಣಿಕ ಸಾಮರ್ಥ್ಯಗಳನ್ನು ಸಾಧಿಸುವಲ್ಲಿ ನಾವು ನಿರೀಕ್ಷಿತ ಯಶಸ್ಸನ್ನು ಸಾಧಿಸಲು ಇಂದಿಗೂ ಸಾಧ್ಯವಾಗಿಲ್ಲ. ಕೋವಿಡ್ ಪರಿಣಾಮದಿಂದ ಇದು ಮತ್ತಷ್ಟು ಉಲ್ಬಣಗೊಂಡಿದೆ. ಕಳೆದ ದಶಕದಲ್ಲಿ ಸಾಧಿಸಿದ್ದ ಸ್ವಲ್ಪಮಟ್ಟಿನ ಯಶಸ್ಸನ್ನೂ ಕೋವಿಡ್ ಇಲ್ಲವಾಗಿಸಿದೆ. ಶಾಲೆಗಳು ದೀರ್ಘಕಾಲ ಮುಚ್ಚಿದ ಕಾರಣ ಬಾಲಕಾರ್ಮಿಕ ಪದ್ಧತಿ, ಬಾಲ್ಯವಿವಾಹ, ಮಕ್ಕಳು ಶಾಲೆ ತೊರೆಯುವ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಕಾಯ್ದೆಯ ಪೂರ್ಣ ಹಾಗೂ ಪರಿಣಾಮಕಾರಿ ಜಾರಿಗಾಗಿ ಒಂದು ನೀಲಿ ನಕಾಶೆಯನ್ನು ತಯಾರಿಸಬೇಕಿದೆ. ರಾಜ್ಯ ಸಲಹಾ ಮಂಡಳಿಯನ್ನು ಕೂಡಲೇ ರಚಿಸಲು ಸರ್ಕಾರ ಕ್ರಮ ವಹಿಸಬೇಕಿದೆ.

ವಾಚಕರ ವಾಣಿ

ಸಚಿವರಿಗೆ ಮಾರ್ಗಸೂಚಿ ತಿಳಿದಿರಲಿಲ್ಲವೇ?

ಕೃಷಿ ಸಚಿವ ಬಿ.ಸಿ.ಪಾಟೀಲ ಮತ್ತು ಅವರ ಪತ್ನಿಗೆ ವೈದ್ಯಕೀಯ ಸಿಬ್ಬಂದಿ ಅವರ ಮನೆಗೇ ತೆರಳಿ ಕೋವಿಡ್ ಲಸಿಕೆ ಹಾಕಿದ್ದಕ್ಕೆ ಹಿರೇಕೆರೂರು ತಾಲ್ಲೂಕು ಆರೋಗ್ಯಾಧಿಕಾರಿ (ಟಿ.ಎಚ್.ಒ) ಅವರನ್ನು ಅಮಾನತು ಮಾಡಲಾಗಿದೆ (ಪ್ರ.ವಾ., ಏ. 2). ಇದಕ್ಕೆ ಕೋವಿಡ್ ಮಾರ್ಗಸೂಚಿ ಉಲ್ಲಂಘನೆಯ ಕಾರಣ ನೀಡಲಾಗಿದೆ. ಇದು ಎಷ್ಟರಮಟ್ಟಿಗೆ ಸರಿ? ಮನೆಗೆ ಕರೆಸಿಕೊಂಡು ಲಸಿಕೆ ಹಾಕಿಸಿಕೊಂಡ ಸಚಿವರಿಗೆ ಮಾರ್ಗಸೂಚಿ ಕುರಿತು ತಿಳಿದಿರಲಿಲ್ಲವೇ?

ಸಚಿವರು ಮನೆಗೆ ಕರೆದಾಗ ಯಾವುದೇ ಅಧಿಕಾರಿ ಹೋಗದೇ ಇದ್ದರೆ, ನೀರು ನೆರಳು ಇಲ್ಲದ ಜಾಗಕ್ಕೆ ಎತ್ತಂಗಡಿ ಆಗುವುದಿಲ್ಲವೇ? ಹಿಂದೆ ಸರ್ಕಾರಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಸಚಿವರಿಗೆ ಸರ್ಕಾರಿ ನೌಕರರ ಇಂತಹ ಸಂದಿಗ್ಧ ಸ್ಥಿತಿ ತಿಳಿಯಲಿಲ್ಲವೇ? ಈ ವಿಚಾರದಲ್ಲಿ ತಮ್ಮ ತಪ್ಪೂ ಇರುವುದರಿಂದ ಸಚಿವರು ಸಾರ್ವಜನಿಕವಾಗಿ ಕ್ಷಮೆ ಕೇಳಿ, ಟಿ.ಎಚ್.ಒ ಅಮಾನತನ್ನು ತಪ್ಪಿಸಬಹುದಿತ್ತಲ್ಲವೇ? ಒಟ್ಟಿನಲ್ಲಿ ಹಣ್ಣು ತಿಂದವ ತಪ್ಪಿಸಿಕೊಂಡ, ಸಿಪ್ಪೆ ತಿಂದವ ಸಿಗಾಕಿಕೊಂಡ ಅನ್ನುವ ಮಾತು ಈ ಪ್ರಕರಣಕ್ಕೆ ಚೆನ್ನಾಗಿ ಅನ್ವಯವಾಗುವಂತಿದೆ.

ವಿ.ತಿಪ್ಪೇಸ್ವಾಮಿ, ಹಿರಿಯೂರು

ಮುಖ್ಯಮಂತ್ರಿ ವಿವೇಚನಾಧಿಕಾರ ಪ್ರಶ್ನಾತೀತವಲ್ಲ

ಶಾಸಕರಿಗೆ, ಸಚಿವರು ಪ್ರತಿನಿಧಿಸುವ ಇಲಾಖೆಗಳಿಗೆ ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ಅನುದಾನ ಹಂಚಿಕೆ ಮಾಡಲು ಮುಖ್ಯಮಂತ್ರಿಗೆ ವಿವೇಚನಾ ಅಧಿಕಾರ ಇರುವುದು ನಿಜ. ಆದರೆ ಆ ಅಧಿಕಾರ ಬಳಕೆ ಮಾಡುವ ವೈಖರಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಶ್ನಾತೀತವೇನಲ್ಲ. ಆಡಳಿತ ಪಕ್ಷದ ಶಾಸಕರು ಇರುವ ಕ್ಷೇತ್ರಗಳಿಗೆ ಹೆಚ್ಚು ಅನುದಾನ, ಬೇರೆ ಪಕ್ಷದ ಶಾಸಕರು ಇರುವ ಕ್ಷೇತ್ರಕ್ಕೆ ಕಡಿಮೆ ಅನುದಾನ ನೀಡುವ ತಾರತಮ್ಯದ ವಿವೇಚನಾಧಿಕಾರ ಪ್ರಜಾಪ್ರಭುತ್ವಕ್ಕೆ ಮಾರಕವಾಗುತ್ತದೆ. ಅದೇ ರೀತಿ ಸಚಿವರ ಖಾತೆಯ ವಿಚಾರದಲ್ಲಿ ಸಲಹೆ ನೀಡಲು ಮುಖ್ಯಮಂತ್ರಿಗೆ ಅಧಿಕಾರ ಇದೆ. ಹಾಗಂತ ಮಂತ್ರಿಗಳ ಗಮನಕ್ಕೆ ತರದೇ ಆಯಾ ಇಲಾಖೆಗೆ ಆಯವ್ಯಯದಲ್ಲಿ ಮೀಸಲಿಟ್ಟ ಹಣವನ್ನು ಇನ್ನೊಂದು ಇಲಾಖೆಗೆ ವರ್ಗಾಯಿಸುವುದು ವಿವೇಚನಾ ಅಧಿಕಾರದ ದುರ್ಬಳಕೆಯಲ್ಲದೆ ಮತ್ತೇನೂ ಅಲ್ಲ.

ರಾಜ್ಯದ ಆಡಳಿತ ನಡೆಸಲು ಸೂಕ್ತ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಮತದಾರ ತನ್ನ ಮತವನ್ನು ಮಾತ್ರ ನೀಡುವುದಿಲ್ಲ, ಜೊತೆಗೆ ಆಡಳಿತ ವೆಚ್ಚ ಭರಿಸಲು ಹೆಜ್ಜೆ ಹೆಜ್ಜೆಗೂ ತೆರಿಗೆಯನ್ನು ಸಹ ನೀಡುತ್ತಾನೆ. ಆ ತೆರಿಗೆಯ ಹಣದ ಲೆಕ್ಕ ಕೇಳುವ ಹಕ್ಕು ಎಲ್ಲರಿಗೂ ಇದೆ. ವ್ಯವಸ್ಥೆ ಹೀಗಿರುವಾಗ ಮುಖ್ಯಮಂತ್ರಿಯವರ ಅನುದಾನ ಹಂಚಿಕೆಯ ವಿವೇಚನಾಧಿಕಾರ ಪ್ರಶ್ನಾತೀತವೇನಲ್ಲ.

ಗಣಪತಿ ನಾಯ್ಕ್, ಕಾನಗೋಡ

ಚುನಾವಣೆ ವೇಳೆ ಪ್ರಶಸ್ತಿ ಘೋಷಣೆ ಸಲ್ಲ

ಚಿತ್ರರಂಗದಲ್ಲಿ ಸಲ್ಲಿಸಿದ ಅಪ್ರತಿಮ ಸೇವೆಗಾಗಿ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ- 2020ಕ್ಕೆ ತಮಿಳು ಚಿತ್ರರಂಗದ ಅನಭಿಷಿಕ್ತ ದೊರೆ ರಜನಿಕಾಂತ್ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಗೆ ಶ್ರೇಷ್ಠ ನಟ ರಜನಿಕಾಂತ್ ಅರ್ಹರು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ, ತಮಿಳುನಾಡು ವಿಧಾನಸಭಾ ಚುನಾವಣೆಯ ಸಮಯದಲ್ಲಿ ಪ್ರಶಸ್ತಿ ಘೋಷಿಸಿರುವ ಕೇಂದ್ರ ಸರ್ಕಾರದ ನಡೆ ನಾನಾ ಅರ್ಥಗಳಿಗೆ ಎಡೆ ಮಾಡಿದೆ. ರಜನಿಕಾಂತ್ ಅವರು ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವುದಾಗಿ ಹೇಳಿದ್ದರು. ನೂತನ ಪಕ್ಷ ಸ್ಥಾಪಿಸುವ ಇಂಗಿತವನ್ನೂ ವ್ಯಕ್ತಪಡಿಸಿದ್ದರು. ಆನಂತರ ಆರೋಗ್ಯದ ಕಾರಣವೊಡ್ಡಿ ಹಿಂದೆ ಸರಿದಿದ್ದರು. ಅವರು ಬಿಜೆಪಿ ಪರ ಒಲವು ಹೊಂದಿದ್ದಾರೆ ಎನ್ನುವ ವದಂತಿಯೂ ಇದೆ.

ಯಾವುದೇ ಪ್ರಶಸ್ತಿಯ ಮೌಲ್ಯ ಪ್ರಕಾಶಮಾನವಾಗಿ ಪಾರದರ್ಶಕತೆಯಿಂದ ಕಾಣಬೇಕೆಂದರೆ ಅಲ್ಲಿ ಅನುಮಾನಗಳಿಗೆ ಅವಕಾಶವೇ ಇರಬಾರದು. ಇನ್ನಾದರೂ ಕೇಂದ್ರ ಸರ್ಕಾರವು ರಾಜ್ಯಗಳಲ್ಲಿ ಚುನಾವಣೆ ನಡೆಯುವ ಸಮಯದಲ್ಲಿ ಪ್ರಶಸ್ತಿಗಳನ್ನು ಘೋಷಣೆ ಮಾಡುವ ಸಂಸ್ಕೃತಿಯನ್ನು ನಿಲ್ಲಿಸಲಿ.

ಅನಿಲ್ ಕುಮಾರ್, ನಂಜನಗೂಡು

ದ್ವೇಷ ಉಗುಳುವ ನಾಯಕರು

'ಇಂದಿರಾ ಪರ್ವ, ಅಮೆರಿಕದ ಗರ್ವ' ಲೇಖನದಲ್ಲಿ (ಪ್ರ.ವಾ., ಏ. 1) ಸುಧೀಂದ್ರ ಬುಧ್ಯ, 'ಬಾಂಗ್ಲಾ ವಿಮೋಚನೆ ಎಂದರೆ ಶೇಖ್ ಮುಜೀಬುರ್ ರಹಮಾನರ ಜೊತೆ, ಇಂದಿರಾ ಗಾಂಧಿ, ಮಾಣೆಕ್ ಶಾ ಕೂಡ ನೆನಪಾಗಬೇಕು' ಎಂದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಬಾಂಗ್ಲಾ ದೇಶಕ್ಕೆ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಇತ್ತೀಚೆಗೆ ಭೇಟಿ ಕೊಟ್ಟಾಗ, 'ಮುಜೀಬುರ್ ರಹಮಾನ್ ಮತ್ತು ಭಾರತೀಯ ಸೈನ್ಯವನ್ನು ಸ್ಮರಿಸಿ ಶ್ಲಾಘಿಸಿದರು' (ಪ್ರ.ವಾ., ಮಾರ್ಚ್ 27). ಮೋದಿ ಅವರು ಇಂದಿರಾ ಅವರನ್ನು ಸ್ಮರಿಸದೆ, ತಾವು ಬಾಂಗ್ಲಾ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದಾಗಿ ಎದೆ ತಟ್ಟಿಕೊಂಡಿದ್ದಾರೆ.

ಇಂದಿರಾ ಅವರ ಮೇಲಿನ ದ್ವೇಷವು ಮೋದಿಯವರಿಗಷ್ಟೇ ಸೀಮಿತವಲ್ಲ. ಬಾಂಗ್ಲಾದೇಶ ಉದಯವಾದಾಗ ಭಾರತ 90 ಸಾವಿರ ಪಾಕ್ ಸೈನಿಕರನ್ನು ಯುದ್ಧ ಕೈದಿಗಳನ್ನಾಗಿ ಒತ್ತೆ ಇಟ್ಟುಕೊಂಡಿತ್ತು. ಇಡೀ ದೇಶವೇ ಇಂದಿರಾ ಅವರನ್ನು ಕೊಂಡಾಡುತ್ತಿದ್ದಾಗ ಅಡ್ವಾಣಿ 'ದೇಶದಲ್ಲಿ ನಮಗೇ ಆಹಾರ ಇಲ್ಲದಿರುವಾಗ ಈ ಸೈನಿಕರನ್ನು ಸಾಕಬೇಕೇ' ಎಂದು ಟೀಕಿಸಿದ್ದರು.

ಅಮೃತಸರದ ಸ್ವರ್ಣ ಮಂದಿರದಲ್ಲಿ ಅಡಗಿದ್ದ ಭಿಂದ್ರನ್ ವಾಲೆ ಮತ್ತಿತರ ಅಕಾಲಿ ಉಗ್ರಗಾಮಿಗಳನ್ನು ಸೈನಿಕರು ಕೊಂದಾಗ ಇಂದಿರಾ ಅವರಿಗೆ ಕಮಾಂಡೊಗಳ ರಕ್ಷಣೆ ಕೊಡಲಾಗಿತ್ತು. ಅದಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಮಾಡಬೇಕಿತ್ತು. ಇದೇ ಅಡ್ವಾಣಿ ಆಗ, ಒಬ್ಬ ಹೆಣ್ಣಿಗಾಗಿ ಒಂದು ಕೋಟಿ ರೂಪಾಯಿ ಖರ್ಚು ಮಾಡಬೇಕೇ ಎಂದು ಕೂಗು ಹಾಕಿದ್ದರು. ಆರ್‌ಎಸ್‌ಎಸ್ ಮುಖ್ಯಸ್ಥರಾಗಿದ್ದ ಕೆ.ಎಸ್.ಸುದರ್ಶನ್ ಮಾತ್ರ, ವಾಜಪೇಯಿ ಅವರಿಗಿಂತ ಒಳ್ಳೆಯ ಆಡಳಿತ ನಡೆಸಿದವರು ಇಂದಿರಾ ಗಾಂಧಿ ಎಂದು ಮುಕ್ತ ಕಂಠದಿಂದ ಹೊಗಳಿದ್ದರು. ದ್ವೇಷ ಉಗುಳುವ ನಾಯಕರು ದೇಶಕ್ಕೆ ಮಾದರಿಯಾಗುವರೇ?

ಕೆ.ಎನ್.ಭಗವಾನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕಾವೇರಿ ‘ಅನ್ಯಾಯ’ದ ಹಿಂದಿನ ಸತ್ಯ – ಮಿಥ್ಯೆ

• ಉಮಾಪತಿ ಡಿ.



ಕರ್ನಾಟಕ ಮತ್ತು ತಮಿಳುನಾಡಿನ ನಡುವಣ ಕಾವೇರಿ ಜಲವಿವಾದಕ್ಕೆ ಒಂದೂಕಾಲು ಶತಮಾನದ ಇತಿಹಾಸವಿದೆ. ಇತಿಹಾಸದುದ್ದಕ್ಕೂ ತನಗೆ ಅನ್ಯಾಯ ಆಗಿದೆ ಎಂಬ ಕರ್ನಾಟಕದ ಭಾವನೆ ಸಂಪೂರ್ಣ ನಿರಾಧಾರ ಅಲ್ಲ. ಹಾಗೆಯೇ ಈ ಭಾವನೆಯನ್ನು ಸಾರಾಸಗಟಾಗಿ ಒಪ್ಪುವುದೂ ಸಾಧ್ಯವಿಲ್ಲ.

ಈ ‘ಅನ್ಯಾಯ’ದ ಹಿಂದೆ ಹಲವು ಕಾರಣಗಳು ಒಂದನ್ನೊಂದು ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ಐತಿಹಾಸಿಕ ಕಾರಣಗಳಿವೆ. ರಾಜಕಾರಣವೂ ಇದೆ. ಮೈಸೂರು ಸೀಮೆಯನ್ನು ಆಳಿದ ಅರಸೊತ್ತಿಗೆ ಕಾವೇರಿ ನೀರು ಬಳಕೆ ಕುರಿತು ತೀರಾ ತಡವಾಗಿ ಎಚ್ಚೆತ್ತುಕೊಂಡ ‘ಸ್ವಯಂಕೃತಾಪರಾಧ’ವೂ ಇದೆ. ಕಾವೇರಿ ನೀರು ಬಳಕೆಗೆ ಕರ್ನಾಟಕದಲ್ಲಿ ತಲೆಯೆತ್ತಿದ ಮೊದಲ ಯೋಜನೆ ಕೃಷ್ಣರಾಜಸಾಗರ. ಅದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂತಹ ಪ್ರಗತಿಪರ ಅರಸರೇ ಬರಬೇಕಾಯಿತು. ನಿರ್ಮಾಣ ಕಾರ್ಯ 1911ರಲ್ಲಿ ಆರಂಭವಾಗಿ 1931ರಲ್ಲಿ ಪೂರ್ಣಗೊಂಡಿತು. ಆದರೆ ತಮಿಳುನಾಡಿನಲ್ಲಿ ಕಾವೇರಿ ನೀರು ಬಳಕೆಗೆ ಮೊದಲ ಅಣೆಕಟ್ಟು ಕಟ್ಟಿದ್ದು ಎರಡನೆಯ ಶತಮಾನದಲ್ಲಿ, ಚೋಳರ ಆಳ್ವಿಕೆಯಲ್ಲಿ. ಕೃಷ್ಣರಾಜಸಾಗರ ಅಣೆಕಟ್ಟು ಮತ್ತು ಕರಿಕಾಲ ಚೋಳ ಕಟ್ಟಿದ ಕಲ್ಲಾಣೈ ಎಂಬ ಕಲ್ಲಿನ ಅಣೆಕಟ್ಟೆಗೂ 17 ನೂರು ವರ್ಷಗಳ ಅಂತರ! ಅರ್ಥಾತ್ ಕನ್ನಡಿಗರು ನೀರಾವರಿಗಾಗಿ ಕಾವೇರಿ ನೀರನ್ನು ಬಳಸುವ 17 ಶತಮಾನಗಳಷ್ಟು ಹಿಂದೆಯೇ ತಮಿಳರು ಆ ಕೆಲಸವನ್ನು ಮಾಡಿದ್ದರು.

ತಮಿಳುನಾಡು ಮತ್ತು ಕರ್ನಾಟಕದ ನಡುವೆ 1894 ಮತ್ತು 1924ರ ಒಪ್ಪಂದಗಳು ಏರ್ಪಡುವ ಹೊತ್ತಿಗೆ ತಮಿಳುನಾಡು ತನ್ನ ಕಾವೇರಿ ಕಣಿವೆಯಲ್ಲಿ ಸುಮಾರು 15 ಲಕ್ಷ ಎಕರೆಗಳಷ್ಟು ನೀರಾವರಿಯನ್ನು ಅಭಿವೃದ್ಧಿಪಡಿಸಿತ್ತು. ಶೇ 80ರಷ್ಟು ಕಾವೇರಿ ನೀರನ್ನು ತಮಿಳುನಾಡು ಬಳಸಿಕೊಳ್ಳುತ್ತಿತ್ತು. 1924ರ ಒಪ್ಪಂದ 1974ರಲ್ಲಿ ತೀರಿದಾಗಲೂ ಇದೇ ಪರಿಸ್ಥಿತಿ ಇತ್ತು. ತಡವಾಗಿ ಕಣ್ಣು ತೆರೆದ ಕರ್ನಾಟಕ ಬಹಳ ಹಿಂದೆ ಬಿದ್ದಿತ್ತು.

ಕರ್ನಾಟಕಕ್ಕೆ ಆದ ಕಾವೇರಿ ಅನ್ಯಾಯದ ಹಿಂದೆ ಇನ್ನೊಂದು ಐತಿಹಾಸಿಕ ಕಾರಣವಿದೆ.

ಅಂದಿನ ಮೈಸೂರು ಮತ್ತು ಮದ್ರಾಸ್ ಪ್ರೆಸಿಡೆನ್ಸಿ ನಡುವೆ 1892 ಮತ್ತು 1924ರ ಕಾವೇರಿ ಒಪ್ಪಂದಗಳು ಅಸಮಾನರ ನಡುವೆ ಜರುಗಿದ ಒಡಂಬಡಿಕೆಗಳು. ಮದ್ರಾಸ್ ಪ್ರೆಸಿಡೆನ್ಸಿಗೆ ಅಧೀನವಾಗಿದ್ದ ಮೈಸೂರು ಈ ಒಪ್ಪಂದಗಳಿಗೆ ಸಹಿ ಹಾಕದೆ ವಿಧಿಯೇ ಇರಲಿಲ್ಲ. ಈ ಒಪ್ಪಂದಗಳು ಕಾವೇರಿ ನೀರಿನ ಬಳಕೆಗೆ ಸಂಬಂಧಿಸಿದಂತೆ ಕರ್ನಾಟಕದ ಕೈಗಳನ್ನು ಸಂಪೂರ್ಣವಾಗಿ ಕಟ್ಟಿ ಹಾಕಿದವು. ಕಾವೇರಿ ಜಲವಿವಾದದ ಪ್ರಶ್ನೆ ಬಂದಾಗಲೆಲ್ಲ ತನ್ನ ನೇರ ಆಳ್ವಿಕೆಯಿದ್ದ ತಮಿಳುನಾಡಿನ ಹಿತವನ್ನೇ ಕಾಯುತ್ತಿತ್ತು ಅಂದಿನ ಬ್ರಿಟಿಷ್ ಆಡಳಿತದ ಮದ್ರಾಸ್ ಪ್ರೆಸಿಡೆನ್ಸಿ.

ಈ ಒಪ್ಪಂದಗಳ ಹೇರಿಕೆ ಕುರಿತು ಈ ಸಂದರ್ಭದಲ್ಲಿ ಉಲ್ಲೇಖಿಸಲೇಬೇಕಿರುವ ಅಂಶವೊಂದಿದೆ. ಕರ್ನಾಟಕದ ನಿಷ್ಕ್ರಿಯತೆಗೆ ಕನ್ನಡಿ ಹಿಡಿಯುವ ಅಂಶವಿದು. ಕಾವೇರಿ ವಿವಾದ ಕುರಿತು 2018ರಲ್ಲಿ ಹೊರಬಿದ್ದ ಸುಪ್ರೀಂ ಕೋರ್ಟ್ ತೀರ್ಪಿನ ಈ ಅಂಶವನ್ನು ಗಮನಿಸಿ.

‘1892 ಮತ್ತು 1924ರಲ್ಲಿ ಚೌಕಾಶಿ ಮಾಡುವ ಅಧಿಕಾರ ಅಂದಿನ ಮೈಸೂರು ಅರಸೊತ್ತಿಗೆಗೆ ಇಲ್ಲದಿರಬಹುದು. ಆದರೆ ಸ್ವಾತಂತ್ರ್ಯಾನಂತರ ಮತ್ತು ಸಂವಿಧಾನ ಅಳವಡಿಕೆಯ ನಂತರ ಈ ಒಪ್ಪಂದಗಳನ್ನು ಪ್ರಶ್ನಿಸುವ ಅಧಿಕಾರ ಕರ್ನಾಟಕ ರಾಜ್ಯಕ್ಕೆ ಖಚಿತವಾಗಿ ಇತ್ತು. ಆದರೆ ಆ ಗೊಡವೆಗೇ ಹೋಗಲಿಲ್ಲ. ಪುರಾಣದ ‘ಫೀನಿಕ್ಸ್’ ಹಕ್ಕಿಯಂತೆ ಬೂದಿಯಿಂದ ಮೇಲೇಳಲಿಲ್ಲ. ಬದಲಾಗಿ ‘ಸ್ಫಿಂಕ್ಸ್’ನಂತೆ (ಮಹಿಳೆಯ ರುಂಡ ಮತ್ತು ಸಿಂಹದ ಮುಂಡ ಹೊಂದಿದ ಪುರಾತನ ಈಜಿಪ್ಟಿನ ಬೃಹತ್ ಪೌರಾಣಿಕ ಶಿಲ್ಪ) ನಿಗೂಢ ಮೌನ ತಳೆದೇ ಉಳಿಯಿತು. ಹೀಗಾಗಿ ಅನೀತಿಯುತ ಎಂಬ ಕಾರಣ ನೀಡಿ ಈ ಒಪ್ಪಂದಗಳನ್ನು ಅಸಿಂಧುವೆಂದು ಸಾರಬೇಕೆಂಬ ವಾದವನ್ನು ನಾವು ಒಪ್ಪುವುದಿಲ್ಲ. 1956ರಲ್ಲಿ ರಾಜ್ಯಗಳ ಮರುವಿಂಗಡಣೆಯ ನಂತರವೂ ಹೊಸ ಮೈಸೂರು ರಾಜ್ಯ ಈ ಒಪ್ಪಂದಗಳನ್ನು ಪ್ರಶ್ನಿಸದೆ ಜಾರಿಗೊಳಿಸಿತು’.



ಕೇಂದ್ರದಲ್ಲಿ ವಿಶೇಷವಾಗಿ ಸಮ್ಮಿಶ್ರ ಸರ್ಕಾರಗಳ ಶಕೆ ಆರಂಭ ಆದ ನಂತರ ತಮಿಳುನಾಡಿನ ಎರಡು ಪ್ರಬಲ ಪ್ರಾದೇಶಿಕ ಪಕ್ಷಗಳಾದ ಡಿಎಂಕೆ ಮತ್ತು ಎಐಎಡಿಎಂಕೆ ತಮ್ಮ ರಾಜಕೀಯ ಪ್ರಾಬಲ್ಯ ಮೆರೆದಿವೆ. ಕೇಂದ್ರ ಸರ್ಕಾರವನ್ನು ತಮ್ಮ ಹಿತಾಸಕ್ತಿಗಳಿಗೆ ಬಗ್ಗಿಸಿಕೊಂಡಿವೆ.

ತಮಿಳುನಾಡು ಕಾಲ ಕಾಲಕ್ಕೆ ಕೇಂದ್ರದ ತೋಳು ತಿರುಚಿ ತನ್ನ ಕಾವೇರಿ ಬೇಳೆ ಬೇಯಿಸಿಕೊಳ್ಳುವ ರಾಜಕೀಯ ಕೂಡ ಎಲ್ಲ ಕಾಲಕ್ಕೂ ಅಷ್ಟೇ ತೀವ್ರವಾಗಿ ನಡೆಯಲಿಲ್ಲ. ಈ ಮಾತಿಗೆ ಹಲವು ನಿದರ್ಶನಗಳಿವೆ. ತಮಿಳುನಾಡಿನ ಕಾವೇರಿ ಸಿಂಹಪಾಲು ಅಬಾಧಿತವಾಗಿ ಮುಂದುವರಿದಿಲ್ಲ. ತಾನು ಅನುಭವಿಸುತ್ತಿದ್ದ ಶೇ 80ರ ಪ್ರಮಾಣಕ್ಕೆ ನ್ಯಾಯಮಂಡಳಿ ಮತ್ತು ಸುಪ್ರೀಂ ಕೋರ್ಟ್‌ನ ಕತ್ತರಿ ಬಿದ್ದು ಅದು ಶೇ 54.50ರಷ್ಟಕ್ಕೆ ಇಳಿದಿದೆ. ಕರ್ನಾಟಕದ ಪಾಲಿನ ಪ್ರಮಾಣ ಶೇ 16ರಿಂದ ಶೇ 39ರಷ್ಟಕ್ಕೆ ಏರಿದೆ.

1995-96ರ ಮಳೆಯ ಅಭಾವದ ವರ್ಷದಲ್ಲಿ ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ಆದೇಶದ ಪಾಲನೆ ಕರ್ನಾಟಕದ ಪಾಲಿಗೆ ನುಂಗಲಾರದ ತುತ್ತಾಗಿತ್ತು. ಕನಿಷ್ಠ 30 ಟಿಎಂಸಿ ಅಡಿಗಳಷ್ಟು ನೀರು ಹರಿಸಲು ತಮಿಳುನಾಡು ಒತ್ತಡ ಹೇರಿತ್ತು. ನ್ಯಾಯಮಂಡಳಿಯು 30 ಟಿಎಂಸಿ ಅಡಿಗಳನ್ನು 11 ಟಿಎಂಸಿ ಅಡಿಗಳಿಗೆ ತಗ್ಗಿಸಿತು. ತಮಿಳುನಾಡು ಪುನಃ ಸುಪ್ರೀಂ ಕೋರ್ಟ್‌ಗೆ ಹೋಯಿತು. ರಾಜಕೀಯ ಪರಿಹಾರವನ್ನು ಕಂಡು ಹಿಡಿಯುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿತು ನ್ಯಾಯಾಲಯ. ಪ್ರಧಾನಿ ಪಿ.ವಿ.ನರಸಿಂಹರಾವ್ ನೀರು ಬಿಡುಗಡೆಯ ಪ್ರಮಾಣವನ್ನು ಆರು ಟಿ.ಎಂ.ಸಿ.ಅಡಿಗಳಿಗೆ ತಗ್ಗಿಸಿ ಉಭಯ ರಾಜ್ಯಗಳನ್ನು ಒಪ್ಪಿಸಿದ್ದರು.

1998ರಲ್ಲಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ರಚನೆಗೆ ಅಗತ್ಯ ಬಹುಮತವನ್ನು ನೀಡಿದ್ದು ತಮಿಳುನಾಡು. ಜಯಲಲಿತಾ ಅವರ ಆಕ್ರೋಶಕ್ಕೆ ಗುರಿಯಾದ ವಾಜಪೇಯಿ ಸರ್ಕಾರ ವರ್ಷದೊಪ್ಪತ್ತಿನಲ್ಲಿ ಬಿದ್ದೇ ಹೋಯಿತು. 1999ರಲ್ಲಿ ವಾಜಪೇಯಿ ಪುನಃ ಸರ್ಕಾರ ರಚಿಸಿದರು. ಈ ಸಲ ಕರುಣಾನಿಧಿ ಅವರ ಡಿಎಂಕೆ ವಾಜಪೇಯಿ ಕೈ ಹಿಡಿದಿತ್ತು. ಹೀಗೆ ಕೇಂದ್ರ ಸರ್ಕಾರಗಳನ್ನು ಉರುಳಿಸುವ ಮತ್ತು ಉಳಿಸುವ ಎರಡೂ ಸಾಮರ್ಥ್ಯಗಳನ್ನು ತಮಿಳುನಾಡು ಕಾಲ ಕಾಲಕ್ಕೆ ರುಜುವಾತು ಮಾಡುತ್ತ ಬಂದಿದೆ.

ಈ ಒತ್ತಡತಂತ್ರಗಳಿಗೆ ಮಿತಿಗಳಿವೆ ಎಂಬುದನ್ನೂ ಗಮನಿಸಬೇಕಿದೆ. ನ್ಯಾಯಮಂಡಳಿಯ ಮಧ್ಯಂತರ ಆದೇಶವನ್ನು ಜಾರಿಗೆ ತರಲು ಕಾವೇರಿ ನದಿ ಪ್ರಾಧಿಕಾರ ರಚನೆಯ ಕರಡನ್ನು ಐ.ಕೆ. ಗುಜ್ರಾಲ್ ಸರ್ಕಾರ ರೂಪಿಸಿತ್ತು. ಕಾವೇರಿ ಜಲಾಶಯಗಳನ್ನು ವಶಪಡಿಸಿಕೊಳ್ಳುವ ಕರಾಳ ಅಧಿಕಾರಗಳನ್ನು ಈ ಪ್ರಾಧಿಕಾರ ಹೊಂದಿತ್ತು. ತಮಿಳುನಾಡು ಈ ಪ್ರಾಧಿಕಾರ ರಚನೆಯನ್ನು ಸಂತೋಷದಿಂದ ಸ್ವಾಗತಿಸಿತು. 1999ರಲ್ಲಿ ಅಧಿಕಾರಕ್ಕೆ ಬಂದ ವಾಜಪೇಯಿ ಸರ್ಕಾರದಲ್ಲಿ ಡಿಎಂಕೆ ಪ್ರಾಬಲ್ಯವಿತ್ತು. ಆದರೂ ಪ್ರಾಧಿಕಾರದ ಕರಾಳ ಅಧಿಕಾರಗಳನ್ನು ಕಿತ್ತು ಹಾಕುವಲ್ಲಿ ಈ ಸರ್ಕಾರ ಸಫಲವಾಯಿತು. ಅಂದಿನ ಸರ್ಕಾರದಲ್ಲಿ ಪ್ರಭಾವಿ ಮಂತ್ರಿಯಾಗಿದ್ದರು ಅನಂತಕುಮಾರ್. ಕರ್ನಾಟಕದ ಹಿತಾಸಕ್ತಿಗಳನ್ನು ಅವರು ಶಕ್ತಿ ಮೀರಿ ಕಾಪಾಡಿದ್ದು ಹೌದು. ಈ ಸಾಫಲ್ಯದ ಹಿಂದೆ ಅನಂತಕುಮಾರ್- ಎಚ್.ಡಿ.ದೇವೇಗೌಡ, ಎಚ್.ಎನ್. ನಂಜೇಗೌಡ- ನ್ಯಾಯವಾದಿ ಮೋಹನ್ ಕಾತರಕಿ ಅವರ ಶ್ರಮವಿತ್ತು. 40 ಪುಟಗಳ ಪ್ರಾಧಿಕಾರದ ಕರಡು ನಾಲ್ಕು ಪುಟಗಳಿಗೆ ಇಳಿದಿತ್ತು.

ತನ್ನ ಕಾವೇರಿ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಕೇಂದ್ರದ ತೋಳು ತಿರುಚುವ ರಾಜಕಾರಣ ಅನುಸರಿಸಿರುವುದು ಹೌದು. ಆದರೆ ಈ ಮೊದಲೇ ಹೇಳಿದಂತೆ ಅಂಶವನ್ನು ಮೀರಿದ ಹಲವು ಸಂಗತಿಗಳು ತಮಿಳುನಾಡು ಮೇಲುಗೈ ಹೊಂದಲು ಕಾರಣವಾಗಿವೆ. ಬ್ರಿಟಿಷರ ನೇರ ಆಡಳಿತದ ಫಲವಾಗಿ ಶಿಕ್ಷಣ, ನಾಗರಿಕ ಸೇವೆ, ನ್ಯಾಯಾಂಗದಲ್ಲಿ ತಮಿಳುನಾಡಿಗೆ ಪ್ರಭಾವೀ ಅಸ್ತಿತ್ವ ಇದೆ. ಪರೋಕ್ಷವಾಗಿ ಸದ್ದಿಲ್ಲದೆ ತಮಿಳುನಾಡಿನ ಪಾರಮ್ಯವನ್ನು ಹಿತಾಸಕ್ತಿಯನ್ನು ಎತ್ತಿ ಹಿಡಿಯುವ ಅಸ್ತಿತ್ವವಿದು. ಈ ಅಸ್ತಿತ್ವಕ್ಕೆ ಈಗಲೂ ಕುಂದು ಬಂದಿಲ್ಲ. ಸದ್ಯ ಭವಿಷ್ಯದಲ್ಲಿ ಅಂತಹ ಸಾಧ್ಯತೆಯೂ ಇಲ್ಲ.

ಲೇಖಕ: ಹಿರಿಯ ಪತ್ರಕರ್ತ

‘ತಮಿಳುನಾಡಿನ ತಕರಾರಿಗೆ ವೈಜ್ಞಾನಿಕ ಕಾರಣವಿಲ್ಲ’

• ಸತೀಶ್ ಬೆಳ್ಳಕ್ಕಿ


ತಮಿಳುನಾಡಿನ ಕೆಲವೊಂದು ಅವೈಜ್ಞಾನಿಕ ನಿಲುವುಗಳಿಂದಾಗಿಯೇ ಕಾವೇರಿ ಜಲ ವಿವಾದ ಸದಾಕಾಲ ಜೀವಂತವಾಗಿ ಉಳಿದುಕೊಂಡಿದೆ ಎಂಬುದು ಮಾಜಿ ಜಲಸಂಪನ್ಮೂಲ ಸಚಿವ, ಶಾಸಕ ಎಚ್.ಕೆ.ಪಾಟೀಲ ಅವರ ವಿಶ್ಲೇಷಣೆ. ಅಭಿವೃದ್ಧಿ ವಿಚಾರಗಳಲ್ಲಿ ರಾಜಕೀಯ ಸಲ್ಲದು ಎಂದು ಸ್ಪಷ್ಟವಾಗಿ ಹೇಳುವ ಅವರು ದೇಶ ಮತ್ತು ಜನರ ಒಳಿತಿಗೆ ಕೈಗೊಳ್ಳುವ ಯೋಜನೆಗಳಿಗೆ ಪ್ರತಿಯೊಬ್ಬರೂ ಬದ್ಧತೆಯಿಂದ ಕೈಜೋಡಿಸಬೇಕು ಎಂದು ‘ಪ್ರಜಾವಾಣಿ’ ಸಂದರ್ಶನದಲ್ಲಿ ಹೇಳಿದ್ದಾರೆ:

• ಕಾವೇರಿ–ವೈಗೈ–ಗುಂಡಾರ್ ನದಿ ಜೋಡಣೆ ಯೋಜನೆ ಕಾರಣಕ್ಕೆ ಕಾವೇರಿ ನೀರು ಹಂಚಿಕೆಗೆ ಸಂಬಂಧಿಸಿದ ವಿಚಾರವು ಕರ್ನಾಟಕ ಮತ್ತು ತಮಿಳುನಾಡು ಮಧ್ಯೆ ಮತ್ತೆ ವಿವಾದ ಸೃಷ್ಟಿಸುವ ಸಾಧ್ಯತೆ ಕಾಣಿಸುತ್ತಿದೆಯಲ್ಲ?

ಕಾವೇರಿ ನೀರಿನ ವಿಚಾರವಾಗಿ ತಮಿಳುನಾಡು ವಿವಾದ ಸೃಷ್ಟಿಸದ ದಿನವೇ ಇಲ್ಲ ಎನ್ನಬಹುದು. ಕರ್ನಾಟಕ ತನ್ನ ನ್ಯಾಯಯುತ ನಿಲುವುಗಳ ಜತೆಗೆ ಹಲವು ದಶಕಗಳಿಂದ ಹೋರಾಡುತ್ತಲೇ ಬಂದಿದೆ. ಕಾವೇರಿ ವಿವಾದವನ್ನು ನ್ಯಾಯಮಂಡಳಿಯು ಬಗೆಹರಿಸಿದೆ. ಜತೆಗೆ ಎರಡು ರಾಜ್ಯಗಳ ನಡುವಿನ ಕಾವೇರಿ ಕೊಳ್ಳದ ನೀರು ಹಂಚಿಕೆ ವಿಷಯವೂ ಪೂರ್ಣವಾಗಿದೆ. ಎರಡೂ ರಾಜ್ಯಗಳ ಪಾಲು ಅಂತಿಮಗೊಂಡಿದ್ದು, ಅವರ ಪಾಲಿನ ನೀರನ್ನು ಅವರಿಗೆ ಕೊಟ್ಟರೆ ಮುಗಿಯಲಿದೆ. ನಾವು ನಮ್ಮ ಜಾಗದಲ್ಲಿ ಯಾವುದೇ ಯೋಜನೆ ಕೈಗೆತ್ತಿಕೊಂಡರೂ ಅದಕ್ಕೆ ತಮಿಳುನಾಡು ತಕರಾರು ಎತ್ತಬಾರದು. ಏಕೆಂದರೆ ಅವರ ಪಾಲಿನ ನೀರಿಗೆ ಕೊರತೆ ಏನೂ ಆಗದು. ಈಗ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಅಸ್ತಿತ್ವದಲ್ಲಿದೆ. ಎರಡು ರಾಜ್ಯಗಳ ನೀರಿನ ಹಂಚಿಕೆಯನ್ನು ಈ ಪ್ರಾಧಿಕಾರವೇ ನೋಡಿಕೊಳ್ಳುತ್ತದೆ. ತಮಿಳುನಾಡು ಸೃಷ್ಟಿಸುವ ವಿವಾದಗಳಿಗೆ ಯಾವುದೇ ವೈಜ್ಞಾನಿಕ ಕಾರಣಗಳಿಲ್ಲ.

• ನದಿ ಜೋಡಣೆ ಯೋಜನೆಯಿಂದ ತಮಿಳುನಾಡಿಗೆ ಹಾಗೂ ಮೇಕೆದಾಟು ಯೋಜನೆಯಿಂದ ಕರ್ನಾಟಕ ರಾಜ್ಯಕ್ಕೆ ಆಗುವ ಪ್ರಯೋಜನ– ನಷ್ಟ ಏನು?

ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೆ ಯಾವುದೇ ನಷ್ಟವಾಗುವುದಿಲ್ಲ. ಬೆಂಗಳೂರು ಮತ್ತು ರಾಮನಗರ ಜಿಲ್ಲೆಯ ಸುತ್ತಲಿನ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಕೆಯಾಗುತ್ತದೆ. ಇಷ್ಟಕ್ಕೂ ಮೇಕೆದಾಟು ಯೋಜನೆ ಒಂದು ಸಮತೋಲನ ಜಲಾಶಯ. 4.75 ಟಿಎಂಸಿ ಅಡಿ ನೀರನ್ನು ಕುಡಿಯುವುದಕ್ಕಾಗಿ ಒದಗಿಸಲಾಗುತ್ತದೆ. 400 ಮೆಗಾವ್ಯಾಟ್ ಜಲ ವಿದ್ಯುತ್ ಉತ್ಪಾದಿಸಲಾಗುತ್ತದೆ. ತಮಿಳುನಾಡಿನ ನೀರಿನ ಹಂಚಿಕೆಯಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ.



ಪ್ರಜಾವಾಣಿ ಸಂದರ್ಶನ

ಎಚ್.ಕೆ ಪಾಟೀಲ, ಶಾಸಕ

• 1972ರ ನಂತರ ನೀರಿನ ಲಭ್ಯತೆ ಬಗ್ಗೆ ಸಮೀಕ್ಷೆಯೇ ನಡೆದಿಲ್ಲ. ಇಂತಹ ಮೂಲ ಮಾಹಿತಿಯೇ ಇಲ್ಲದೆ ಯೋಜನೆ ಕೈಗೆತ್ತಿಕೊಳ್ಳುವ ಉಮೇದು ಏಕೆ? ನೀರಿನ ಲಭ್ಯತೆ ಬಗ್ಗೆ ಮತ್ತೆ ಸಮೀಕ್ಷೆ ನಡೆಸುವ ಅಗತ್ಯ ಇದೆಯೇ?

ನೀರಿನ ಲಭ್ಯತೆಯ ಸಮೀಕ್ಷೆಗಳನ್ನು 100 ವರ್ಷಗಳ ಸರಾಸರಿ ಲೆಕ್ಕದಲ್ಲಿ ಮಾಡಲಾಗುತ್ತದೆಯೇ ಹೊರತು ಪ್ರತಿ ವರ್ಷ ಸಮೀಕ್ಷೆ ಮಾಡಲಾಗುವುದಿಲ್ಲ. ಕಾಲಹರಣಕ್ಕಾಗಿಯೇ ತಮಿಳುನಾಡು ಇಂತಹ ಬೇಡಿಕೆಗಳನ್ನು ಮಂಡಿಸುತ್ತಿರುತ್ತದೆ. ಕಾವೇರಿ ಜಲ ವಿವಾದವನ್ನು 1990ರಲ್ಲಿಯೇ ನ್ಯಾಯಮಂಡಳಿಗೆ ಒಪ್ಪಿಸಲಾಯಿತು. ಸಮೀಕ್ಷೆಗಳು, ವೈಜ್ಞಾನಿಕ ಮಾಹಿತಿ ಆಧಾರದ ಮೇಲೆಯೇ 22 ವರ್ಷಗಳ ಸುದೀರ್ಘ ಅವಧಿಯ ವಿಚಾರಣೆ ನಡೆಸಿ ನ್ಯಾಯಮಂಡಳಿಯು ವರದಿ ನೀಡಿದೆ. ಹೆಚ್ಚುವರಿ ನೀರಿನ ಯೋಜನೆಗಳಿದ್ದರೆ ನೀರಿನ ಲಭ್ಯತೆ ಆಧರಿಸಿ ಬಳಕೆ ಮಾಡಿಕೊಳ್ಳಲಾಗುತ್ತದೆಯೇ ಹೊರತು ಮೂಲ ನೀರಿನ ಹಂಚಿಕೆ ಮೇಲೆ ಯಾವುದೇ ಪರಿಣಾಮ ಬೀರದ ಯೋಜನೆಗೆ ಅಡ್ಡಿ, ತಕರಾರು ತೆಗೆದು ವೃಥಾ ಕಾಲಹರಣ ಮಾಡುವುದು ಸಲ್ಲದು.

• ಅಂತರ ಕಣಿವೆ ನೀರು ಹರಿಸುವಿಕೆಗೆ ಕಾವೇರಿ ನೀರು ಹಂಚಿಕೆ ತೀರ್ಪಿನಲ್ಲಿ ಅವಕಾಶ ಇದೆಯೇ? ಕೃಷ್ಣಾ ಅಥವಾ ಕಾವೇರಿ ನೀರನ್ನು ಕರ್ನಾಟಕವು ಬೇರೆ ಕಣಿವೆಗೆ ಹರಿಸಲು ಸಾಧ್ಯ ಇದೆಯೇ?

ಕೃಷ್ಣಾ ಕಣಿವೆಯಲ್ಲಿ ಈಗಾಗಲೇ ಪೋಲಾವರಂ ಯೋಜನೆ ಕೈಗೊಳ್ಳುವ ಮೂಲಕ ಅಂತರ ಕಣಿವೆ ನೀರು ಹರಿಸುವಿಕೆಯನ್ನು ಪ್ರಾರಂಭಿಸಿದ್ದೇವೆ. ಗೋದಾವರಿ ನದಿ ನೀರನ್ನು ಕೃಷ್ಣಾ ಕಣಿವೆಗೆ ತಿರುಗಿಸಿ ಕೃಷ್ಣಾ ಜಲ ವಿವಾದದ ಒಟ್ಟು ಹಂಚಿಕೆಯಲ್ಲಿ 23 ಟಿಎಂಸಿ ಅಡಿ ನೀರು ಕರ್ನಾಟಕಕ್ಕೆ ದೊರಕಿದೆ. ಅಂತರ ಕಣಿವೆ ವರ್ಗಾವಣೆಗಳು ನಿಷೇಧಿತವಲ್ಲ. ಮಹದಾಯಿ ನೀರನ್ನು ಮಲಪ್ರಭೆಗೆ ತಿರುಗಿಸುವ ಯೋಜನೆಗೂ ನ್ಯಾಯಮಂಡಳಿಯಿಂದ ಕರ್ನಾಟಕ ಅನುಮೋದನೆ ಪಡೆದಿದೆ. ರಾಜ್ಯ ಜಲ ವಿವಾದ ಕಾಯ್ದೆಯಲ್ಲಿ ಈ ಅವಕಾಶವಿದೆ.

• ನದಿ ನೀರು ಹಂಚಿಕೆ ವಿವಾದಗಳನ್ನು ಈ ರೀತಿ ಎಷ್ಟು ಕಾಲ ಜಗ್ಗಾಡುತ್ತಿರಬೇಕು? ಇದಕ್ಕೆ ಪರಿಹಾರ ಏನು?

ಪರಿಹಾರವಾಗಿರುವ ಅಂತರ ರಾಜ್ಯ ಜಲ ವಿವಾದಗಳ ಸಂಖ್ಯೆ ಕಡಿಮೆ ಅಥವಾ ಶೂನ್ಯ ಎಂದರೂ ತಪ್ಪಾಗುವುದಿಲ್ಲ. ಜಲವಿವಾದಗಳು ವಾಸ್ತವಿಕವಾಗಿ ಎಂದೂ ಪರಿಹಾರವಾಗದ ವಿವಾದಗಳಿಗೆ ಬಹುದೊಡ್ಡ ಉದಾಹರಣೆಗಳು. ಪ್ರಾದೇಶಿಕ ಅವಶ್ಯಕತೆ– ನ್ಯಾಯಯುತ ಹಂಚಿಕೆ ಎಂಬ ನಿಯಮವೇ ಎಲ್ಲದಕ್ಕೂ ಪರಿಹಾರ ಮಾರ್ಗ. ಜಲ ವಿವಾದ ನ್ಯಾಯಮಂಡಳಿಯು ತೀರ್ಪನ್ನು ಕಾಲಮಿತಿಯೊಳಗೆ ನೀಡಬೇಕು. ಜಲ ವಿವಾದಗಳ ಕಾರ್ಯ ಕಲಾಪಕ್ಕೆ ನಿಗದಿಪಡಿಸಿದ ಕಾಲಮಿತಿಯನ್ನು ಕೇವಲ ಒಂದು ವರ್ಷಕ್ಕೆ ಹೆಚ್ಚಿಸಬೇಕು ಎಂಬ ಕಾನೂನು ತಿದ್ದುಪಡಿಯನ್ನು 2013ರಲ್ಲಿಯೇ ಮನಮೋಹನ ಸಿಂಗ್ ಅವರ ಸರ್ಕಾರ ಮಾಡಿದೆ.

• ಕೇಂದ್ರ ಸಹಭಾಗಿತ್ವದ ಕಾವೇರಿ–ವೈಗೈ–ಗುಂಡಾರ್ ನದಿ ಜೋಡಣೆ ಯೋಜನೆಯನ್ನು ಕರ್ನಾಟಕವು ರಾಜಕೀಯವಾಗಿ ಹೇಗೆ ನಿಭಾಯಿಸಬಹುದು? ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಇರುವುದು ನೆರವಾಗಬಹುದೇ?

ಇಲ್ಲಿ ರಾಜಕೀಯವಾಗಿ ನಿಭಾಯಿಸುವ ಪ್ರಶ್ನೆ ಉದ್ಭವಿಸದು. ಪಕ್ಷಪಾತ ರಹಿತ ನ್ಯಾಯಯುತ ನಿರ್ಣಯಗಳು ನಮ್ಮ ರಾಜ್ಯಕ್ಕೆ ನೆರವಾಗಬಹುದು. ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಅಧಿಕಾರದಲ್ಲಿರುವಾಗ ನೆರವಾಗುತ್ತದೆ ಎಂಬುದು ನಮ್ಮ ಊಹೆಯಷ್ಟೇ. ಸರ್ಕಾರ ಯಾವುದೇ ಇರಲಿ ಕೇಂದ್ರ ಸರ್ಕಾರ ನಮ್ಮ ವಿಸ್ತೃತ ಯೋಜನಾ ವರದಿಗೆ ಅನುಮೋದನೆ ನೀಡಿದರಷ್ಟೇ ಸಾಕು.

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ಕೊಳೆತ ಆಸೆಯೇ ದುರಾಸೆ

ಭಗವಂತ ರೂಪಿಸಿದ ಸೃಷ್ಟಿಯ ಶಿಕ್ಷಣಶಾಲೆಯಲ್ಲಿ ಪ್ರತಿಜೀವಿಗೂ ಪರೀಕ್ಷೆ ಸದಾ ಇರುತ್ತದೆ. ಇದು ಮಾಸಿಕ, ವಾರ್ಷಿಕ ಪರೀಕ್ಷೆಯಂತಲ್ಲ, ಅಡಿಗಡಿಗೂ ಪರೀಕ್ಷೆಗಳಿರುತ್ತವೆ. ಅವು ಸಾವು-ಬದುಕಿನ ಪರೀಕ್ಷೆಗಳೇ ಇರಬಹುದು. ಬದುಕಿಗಾಗಿ ನಡೆಸುವ ಹೋರಾಟವೇ ಇರಬಹುದು. ಅವೆಲ್ಲಾ ಪರೀಕ್ಷಾ ಸೂತ್ರಧಾರಿ ಜಗನ್ನಾಥನ ಲೀಲೆಗಳು. ಕ್ಷಣಕ್ಷಣಕ್ಕೂ ಎದುರಾಗುವ ಭಗವಂತನ ಪರೀಕ್ಷೆಯನ್ನು ಎದುರಿಸಲು ನಾವು ಸದಾ ಸನ್ನದ್ಧವಾಗಿರಬೇಕು. ಭಗವಂತನ ಪರೀಕ್ಷೆಗೆ ಬೇಕಾದ ಕೌಶಲವೆಂದರೆ ಸ್ಥಿತಪ್ರಜ್ಞತೆ.

ಭಗವಂತ ಹರವಿದ ಬದುಕಿನ ಹಾಳೆಯಲ್ಲಿ ಪರೀಕ್ಷೆಗೆ ಬೇಕಾದ ಪ್ರಶ್ನೆಯೂ ಇರುತ್ತೆ, ಉತ್ತರವೂ ಅಲ್ಲೇ ಇರುತ್ತೆ. ಯಾವ ಪ್ರಶ್ನೆಗೆ ಯಾವ ಉತ್ತರ ಬರೆಯಬೇಕೆಂಬ ಜಾಣ್ಮೆ ಮನುಷ್ಯನಿಗಿರಬೇಕಷ್ಟೆ. ಇತರೆ ಜೀವಿಗಳಿಗಿಂತ ಭಗವಂತ ಹೆಚ್ಚು ಪರೀಕ್ಷೆಯನ್ನು ಒಡ್ಡುವುದು ಮತ್ತು ಹೆಚ್ಚು ಶಿಕ್ಷಿಸುವುದು ಮನುಷ್ಯನನ್ನು ಮಾತ್ರ. ಏಕೆಂದರೆ ಮನುಷ್ಯಜನ್ಮ ಜೀವನಚಕ್ರದ ಅಂತಿಮ ಭಾಗ. ಇದಕ್ಕಾಗಿ ಭಗವಂತ ಇತರೆ ಜೀವಿಗಳಿಗಿಂತ ಭಿನ್ನವಾಗಿ ಮನುಷ್ಯನನ್ನು ರೂಪಿಸಿದ್ದಾನೆ. ಇಂಥ ಉತ್ಕೃಷ್ಟವಾದ ಜನ್ಮದಲ್ಲಿ ಉತ್ತೀರ್ಣನಾದರೆ ಮೋಕ್ಷ ಸಿಗುತ್ತದೆ. ಆದ್ದರಿಂದ ಮಾನವರಾದವರು ಬಹಳ ಎಚ್ಚರಿಕೆಯಿಂದ ಬದುಕಿ, ಪುನೀತರಾಗಬೇಕು.

ಭಗವಂತ ನೀಡುವ ಪರೀಕ್ಷೆ ಬಹಳ ಸರಳ. ಅದೊಂದು ಸಾತ್ವಿಕ ಬದುಕಿನ ಹಂದರದ ಮೇಲೆ, ಸಜ್ಜನಿಕೆ ಎಂಬ ಹಲಗೆ ಹರವಿ, ಗುಣಮೌಲ್ಯದ ಸೌಧ ಕಟ್ಟುವ ಪರೀಕ್ಷೆ. ಇಂಥ ‘ಮಾನವತೆಯ ಭವನ’ ಕಟ್ಟಲು ಬೇಕಾದ ಸಾಮಗ್ರಿಗಳನ್ನು ಭಗವಂತ ಸನಿಹದಲ್ಲೆ ಇಟ್ಟಿರುತ್ತಾನೆ. ಆ ಸಾಮಗ್ರಿಯಲ್ಲಿ ತನ್ನದೆಷ್ಟು, ಪರರದೆಷ್ಟು, ತನ್ನದ್ಯಾವುದು, ಪರರದ್ಯಾವುದು – ಎಂದು ಕಂಡುಕೊಳ್ಳುವ ಒಳ್ಳೆಯ ಬುದ್ಧಿ ಬೇಕಷ್ಟೆ; ದುರಾಸೆಯಿಂದ ಪರರದ್ದನ್ನು ತನ್ನದ್ದೆಂದು ದೋಚಲು ಹೋದರೆ ಅನುತ್ತೀರ್ಣನಾಗುತ್ತಾನೆ. ಪಾಪದ ಪ್ರಾಯಶ್ಚಿತ್ತಕ್ಕಾಗಿ ಮತ್ತೆ ಕನಿಷ್ಠ-ಜೀವಿಯಾಗಿ ಸೃಷ್ಟಿಚಕ್ರ ಸುತ್ತಬೇಕಾಗುತ್ತದೆ.

ಹುಟ್ಟಿನಿಂದ ಸಾವಿನವರೆಗೆ ಭಗವಂತ ಒಡ್ಡುವ ಪರೀಕ್ಷೆಯಲ್ಲಿ ಬೀಳುವುದು, ಏಳುವುದು ಸಾಮಾನ್ಯ ಪ್ರಕ್ರಿಯೆ. ಎದ್ದಾಗ ಬೀಗದೆ, ಬಿದ್ದಾಗ ಅಂಜದೆ ಬದುಕಿನ ದೋಣಿಯನ್ನು ಒಳ್ಳೆಯ ಆಲೋಚನೆಯಿಂದ ಉಟ್ಟಾಕುತ್ತಾ, ಭಗವಂತನಿರುವ ದಡಕ್ಕೆ ಸಾಗಬೇಕು. ಹೀಗೆ ಸಾಗುವಾಗ ಬಯಕೆಯ ಮೀನುಗಳು, ಭಯಾನಕ ತಿಮಿಂಗಿಲಗಳು ಎದುರಾಗುತ್ತವೆ. ಇಂಥ ಬಯಕೆ-ಭಯಗಳನ್ನು ನಿಭಾಯಿಸುತ್ತಾ ಜೀವನದ ಗುರಿ ಮುಟ್ಟಲು ನಮಗೆ ಉತ್ತಮ ಮನಸ್ಸಿರಬೇಕು. ಬಸವಣ್ಣನವರ ‘ಪರರ ಸ್ವತ್ತನ್ನು ಒಲ್ಲೆ’ ಎಂಬ ದಿವ್ಯ ಮಂತ್ರವನ್ನು ಮನದ ತುಂಬ ತುಂಬಿಕೊಂಡು, ಇಹಬಂಧನದ ಸಂಕೋಲೆಗಳನ್ನು ಕಳೆದುಕೊಳ್ಳಬೇಕು.

ಈ ಸೃಷ್ಟಿಯಲ್ಲಿ ಜೀವಿಗಳನ್ನು ಬಂಧಿಸಿರುವುದೇ ಆಸೆ. ಸದಾ ಹುಟ್ಟುವ ಆಸೆಗಳು ಮನದಲ್ಲಿ ಕೊಳೆಯುತ್ತಾ ಹೋದರೆ ದುರಾಸೆಯಾಗುತ್ತವೆ. ದುರಾಸೆ ಕೊಳೆತಷ್ಟು ಮನುಷ್ಯನ ಮನಸ್ಸು ಕೆಡುತ್ತಾ ಹೋಗುತ್ತದೆ. ಮನಸ್ಸು ಕೆಟ್ಟಷ್ಟು ಮನುಷ್ಯ ಕೆಡುತ್ತಾ ಹೋಗುತ್ತಾನೆ. ಕೆಟ್ಟ ಮನುಷ್ಯ ಹುಟ್ಟಿದ ಮನೆಗಾಗಲಿ, ಸತ್ತಾಗ ಹೋಗುವ ಸುಡುಗಾಡಿಗಾಗಲಿ ಪ್ರಯೋಜನವಿಲ್ಲ. ಕಂಟಕ ಪ್ರಾಯನಾದ ಕೆಟ್ಟವರನ್ನ ಭಗವಂತ ಹತ್ತಿರಕ್ಕೂ ಬಿಟ್ಟುಕೊಳ್ಳುವುದಿಲ್ಲ. ಮತ್ತೆ ಹುಳು-ಹುಪ್ಪಟ್ಟೆಯಾಗಿ ಹುಟ್ಟಿ ಜೀವಾತ್ಮದ ಸರಪಣಿಯಲ್ಲೆ ಬಂಧಿಯಾಗಬೇಕಾಗುತ್ತದೆ. ಈ ಭವಬಂಧನದಿಂದ ಮುಕ್ತಿ ಹೊಂದಿ ಅನಂತ ದಿಗಂತದಲ್ಲಿ ಸಾಗಲು ಅದೆಷ್ಟೋ ಯುಗಗಳು ಬೇಕಾಗುತ್ತವೆ.

ಇದಕ್ಕಾಗೆ ಪುರಂದರದಾಸರು ‘ಮಾನವಜನ್ಮ ದೊಡ್ಡದು. ಅದನ್ನು ಹಾಳು-ಮಾಡಿಕೊಳ್ಳಬೇಡಿರೋ’ ಎಂದು ಎಚ್ಚರಿಸಿದ್ದರು. ಹಿರಿಯರು, ಅನುಭಾವಿಗಳ ಮಾತನ್ನ ಯಾರೂ ಕಡೆಗಣಿಸಬಾರದು. ನಮ್ಮ ಪೂರ್ವಿಕರು ಹಾಕಿಕೊಟ್ಟ ಒಳ್ಳೆಯ ಸಂಸ್ಕೃತಿಯ ಹಾದಿಯಲ್ಲೇ ನಡೆಯಬೇಕು. ಆ ಚೌಕಟ್ಟನ್ನು ಮೀರದಂತೆ ಸಂಯಮದಿಂದ ಹೆಜ್ಜೆ ಹಾಕುವ ಗಟ್ಟಿಮನಸ್ಸನ್ನು ಮಾಡಬೇಕು. ಅಡಿಗಡಿಗೆ ಎದುರಾಗುವ ಆಸೆಯ ಗಾಳಕ್ಕೆ ಮನಸ್ಸು ಸಿಕ್ಕಿಸಿಕೊಳ್ಳದೇ, ಎಚ್ಚರದಿಂದ ಸಾಗಿದರೆ ‘ಸಚ್ಚಿದಾನಂದ’ ಜಗತ್ತು ತೆರೆದುಕೊಳ್ಳುತ್ತದೆ. •

ಬಿಜೆಪಿ ಅಭ್ಯರ್ಥಿ ಪತ್ನಿ ಕಾರಿನಲ್ಲಿ ಮತಯಂತ್ರ

ಒಂದನೇ ಪುಟದಿಂದ

ಒಬ್ಬ ಕಾನ್‌ಸ್ಟೆಬಲ್ ಮತ್ತು ಒಬ್ಬ ಹೋಮ್‌ಗಾರ್ಡ್ ಇದ್ದ ಬೆಂಗಾವಲು ವಾಹನವೂ ಜತೆಗಿತ್ತು. ಈ ಸಂದರ್ಭದಲ್ಲಿ ಭಾರಿ ಮಳೆ ಸುರಿಯುತ್ತಿತ್ತು. ಮತಯಂತ್ರ ಇದ್ದ ವಾಹನದಲ್ಲಿ ತೊಂದರೆ ಕಾಣಿಸಿಕೊಂಡಿತು. ಸಂಚಾರ ದಟ್ಟಣೆ ಮತ್ತು ಮಳೆಯಿಂದಾಗಿ ಮತಯಂತ್ರ ಇದ್ದ ಕಾರು ಮತ್ತು ಬೆಂಗಾವಲು ವಾಹನ ಪ್ರತ್ಯೇಕಗೊಂಡವು.

ಚುನಾವಣಾ ಅಧಿಕಾರಿಯು ವಲಯ ಅಧಿಕಾರಿಗೆ ಕರೆ ಮಾಡಿ ಹೊಸ ವಾಹನ ಕಳುಹಿಸಿಕೊಡಲು ಕೋರಿದ್ದಾರೆ. ಆದರೆ, ಮತಯಂತ್ರ ತಲುಪಿಸಬೇಕಿರುವ ಕೇಂದ್ರಕ್ಕೆ ಬೇಗನೆ ತಲುಪುವುದಕ್ಕಾಗಿ ರಸ್ತೆಯಲ್ಲಿ ಬಂದ ವಾಹನವೊಂದನ್ನು ಏರಿಕೊಂಡು ಅಧಿಕಾರಿಗಳು ಹೋಗಿದ್ದಾರೆ. ಮತಯಂತ್ರವನ್ನು ಆ ವಾಹನದಲ್ಲಿ ಇರಿಸಿದ್ದಾರೆ. ಆ ಕಾರಿನ ಮಾಲೀಕರು ಯಾರು ಎಂಬುದನ್ನು ಆ ಸಂದರ್ಭದಲ್ಲಿ ಅಧಿಕಾರಿಗಳು ಖಚಿತಪಡಿಸಿಕೊಂಡಿಲ್ಲ ಎಂದು ಆಯೋಗವು ಹೇಳಿದೆ.

ಕರೀಮ್‌ಗಂಜ್‌ನತ್ತ ಸಾಗುತ್ತಿದ್ದ ವಾಹನವು ವಾಹನದಟ್ಟಣೆಯಿಂದಾಗಿ ನಿಧಾನವಾಗಿತ್ತು. ಈ ಸಂದರ್ಭದಲ್ಲಿ ಸುಮಾರು 50 ಜನರಿದ್ದ ಗುಂಪು ವಾಹನ ವನ್ನು ಸುತ್ತುವರಿದು, ಕಲ್ಲು ತೂರಾಟ ನಡೆಸಿದೆ. ಇದು ಪಕ್ಕದ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೃಷ್ಣೇಂದು ಪಾಲ್ ಅವರ ಕಾರು. ತಿರುಚುವುದಕ್ಕಾಗಿಯೇ ಮತಯಂತ್ರವನ್ನು ಈ ಕಾರಿನಲ್ಲಿ ಒಯ್ಯಲಾಗುತ್ತಿದೆ ಎಂದು ಗುಂಪು ಆರೋಪಿಸಿದೆ. ದಾಖಲೆಗಳನ್ನು ಪರಿಶೀಲಿಸಿದಾಗ ವಾಹನವು ಕೃಷ್ಣೇಂದು ಅವರ ಪತ್ನಿ ಮಧುಮಿತಾ ಹೆಸರಿನಲ್ಲಿ ಇರುವುದು ಗೊತ್ತಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ ಸ್ಥಳೀಯರು ಅವರನ್ನು ಒತ್ತೆ ಇರಿಸಿಕೊಂಡರು. ಬಳಿಕ ಪೊಲೀಸರು ಸ್ಥಳಕ್ಕೆ ಧಾವಿಸಿ, ಅಧಿಕಾರಿಗಳನ್ನು ರಕ್ಷಿಸಿದರು.

ಚೀನಾದಿಂದಲೂ ಸಹಕಾರ: ಭಾರತ ಆಶಯ

ಪೂರ್ವ ಲಡಾಖ್‌ನ ಉಳಿದ ಪ್ರದೇಶಗಳಲ್ಲಿ ಸೇನೆ ಹಿಂತೆಗೆತ

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನ ಉಳಿದ ಪ್ರದೇಶಗಳಲ್ಲಿ ತಮ್ಮ ಜತೆಗೆ ಚೀನಾ ಕೂಡ ಸೇನಾಪಡೆಗಳನ್ನು ಶೀಘ್ರವಾಗಿ ಹಿಂತೆಗೆದುಕೊಂಡು ಶಾಂತಿ ಸ್ಥಾಪನೆಗೆ ಕೈಜೋಡಿಸಲಿದೆ ಎಂದು ಭಾರತವು ಶುಕ್ರವಾರ ಆಶಯ ವ್ಯಕ್ತಪಡಿಸಿದೆ.

ಸೇನಾ ಪಡೆಗಳ ಹಿಂತೆಗೆತದಿಂದ ಮಾತ್ರ ಗಡಿಯಲ್ಲಿ ಶಾಂತಿ ಮರುಸ್ಥಾಪನೆ ಮತ್ತು ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸಲು ನೆರವಾಗಲಿದೆ ಎಂದು ಭಾರತ ಹೇಳಿದೆ.

ಗಡಿ ಸಮಸ್ಯೆಯನ್ನು ಮಿಲಿಟರಿ ಮತ್ತು ರಾಜತಾಂತ್ರಿಕ ಮಾರ್ಗಗಳಿಂದ ಬಗೆಹರಿಸಿಕೊಳ್ಳಲು ಎರಡೂ ಕಡೆಯವರೂ ಸಂಪರ್ಕದಲ್ಲಿರುತ್ತೇವೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಗ್ಚಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಪರಿಸ್ಥಿತಿಯನ್ನು ದೀರ್ಘವಾಗಿ ಎಳೆದೊಯ್ಯಲು ಎರಡೂ ದೇಶಗಳಿಗೂ ಆಸಕ್ತಿ ಇಲ್ಲ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ನೀಡಿರುವ ಅಭಿಪ್ರಾಯವನ್ನು ಬಗ್ಚಿ ಉಲ್ಲೇಖಿಸಿದ್ದಾರೆ. ‘ಶೀಘ್ರ ಪರಿಹರಿಸಿ ಕೊಳ್ಳಬೇಕೆಂಬ ನಿಲುವಿಗೆ ಇಬ್ಬರಲ್ಲೂ ಒಮ್ಮತವಿದೆ’ ಎಂದು ಹೇಳಿದ್ದಾರೆ. ಹಿರಿಯ ಕಮಾಂಡರ್‌ಗಳ ಸಭೆ ಮತ್ತು ಗಡಿ ವ್ಯವಹಾರಗಳ ಕುರಿತ ಡಬ್ಲ್ಯುಎಂಸಿಸಿ (ವರ್ಕಿಂಗ್ ಮೆಕ್ಯಾನಿಸಮ್ ಫಾರ್ ಕನ್ಸಲ್ಟೇಶನ್ ಅಂಡ್ ಕೋಆರ್ಡಿನೇಷನ್) ಚೌಕಟ್ಟಿನಡಿ ನಡೆದ ಚರ್ಚೆಗಳಲ್ಲಿ ಉಭಯತ್ತರು ಬಾಕಿ ಸಮಸ್ಯೆಗಳ ಕುರಿತು ಸಮಗ್ರ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ ಎಂದು ಬಗ್ಚಿ ಹೇಳಿದರು.

ಪುಲ್ವಾಮಾದಲ್ಲಿ ಮೂವರು ಉಗ್ರರ ಎನ್‌ಕೌಂಟರ್


ಶ್ರೀನಗರ (ಪಿಟಿಐ): ಇಲ್ಲಿನ ಬಿಜೆಪಿ ನಾಯಕರೊಬ್ಬರ ಮನೆ ಮೇಲಿನ ದಾಳಿಯಲ್ಲಿ ಭಾಗಿಯಾಗಿದ್ದ ಇಬ್ಬರು ಉಗ್ರರು ಸೇರಿ ಮೂವರು ಉಗ್ರರು ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಭದ್ರತಾ ಪಡೆ ನಡೆಸಿದ ಎನ್‌ಕೌಂಟರ್‌ಗೆ ಶುಕ್ರವಾರ ಹತರಾಗಿದ್ದಾರೆ.

ದಕ್ಷಿಣ ಕಾಶ್ಮೀರದ ಕಾಕಾಪೋರಾ ಪ್ರದೇಶದ ಘಾಟ್ ಮೊಹಲ್ಲಾದಲ್ಲಿ ಮುಂಜಾನೆ ಭದ್ರತಾ ಪಡೆ ಶೋಧ ಕಾರ್ಯಾಚರಣೆ ಕೈಗೊಂಡಿದ್ದಾಗ ಉಗ್ರರು ಭದ್ರತಾ ಪಡೆ ಸಿಬ್ಬಂದಿ ಮೇಲೆ ಗುಂಡು ಹಾರಿಸಿದ್ದಾರೆ. ಪ್ರತಿ ದಾಳಿ ನಡೆಸಿದ ಭದ್ರತಾ ಪಡೆ ಯೋಧರು, ಮೂವರು ಉಗ್ರರನ್ನು ಕೊಂದು ಹಾಕಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಹತ್ಯೆಗೀಡಾದ ಮೂವರು ಉಗ್ರರಲ್ಲಿ ಇಬ್ಬರು, ನಗರದ ನೌಗಮ್ ಪ್ರದೇಶದಲ್ಲಿ ಬಿಜೆಪಿ ಮುಖಂಡ ಅನ್ವರ್ ಅಹ್ಮದ್ ಅವರ ನಿವಾಸದ ಮೇಲೆ ಗುರುವಾರ ನಡೆದ ದಾಳಿಯಲ್ಲಿ ಭಾಗಿಯಾಗಿದ್ದರು ಎಂದು ಕಾಶ್ಮೀರದ ಐಜಿಪಿ ವಿಜಯ್ ಕುಮಾರ್ ತಿಳಿಸಿದ್ದಾರೆ.



ದಕ್ಷಿಣ ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಕಾಕಾಪೋರ್ ಪ್ರದೇಶದ ಘಾಟ್ ಮೊಹಲ್ಲಾದಲ್ಲಿ ಮೂವರು ಉಗ್ರರ ಎನ್‌ಕೌಂಟರ್ ನಡೆದ ನಂತರ ಭದ್ರತಾ ಪಡೆ ಯೋಧರು ಸ್ಥಳದಲ್ಲಿ ಬೀಡು ಬಿಟ್ಟಿದ್ದರು – ಪಿಟಿಐ ಚಿತ್ರ

ಗುಂಡಣ್ಣ



ದಿನ ಭವಿಷ್ಯ

ಶನಿವಾರ 3 ಏಪ್ರಿಲ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೇವತಿ ಷಷ್ಠೀ ಗಂ. 11-58 (ಹ. 11-9) ಶನಿವಾರ ನಿತ್ಯ ನಕ್ಷತ್ರ ಜ್ಯೇಷ್ಠ ಗಂ. 5-44 (ಬೆ. 8-40) ವರೀಯನ್‌ನಾಮ ಯೋಗ ಗಂ 48-2 ವಣಿಜ ಕರಣ ಗಂ. 11-58 ವಿಷ ಗಂ. 58-33 ಅಮೃತ ಗಂ. 47-20 ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-18 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 1 6

ಮೇಷ: ನಿಮ್ಮ ಒಳ್ಳೇತನದ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸಿ. ಅವಶ್ಯಕತೆಗಿಂತ ಹೆಚ್ಚಾಗಿ ಹಣಕಾಸಿನ ನೆರವು ದೊರೆಯಲಿದೆ. ಶೀಘ್ರದಲ್ಲೇ ಸಂತೋಷಕರ ಸುದ್ದಿಯೊಂದನ್ನು ಆಲಿಸಲಿದ್ದೀರಿ.

ವೃಷಭ: ಅಧಿಕಾರಿಗಳಿಗೆ ಸ್ಥಾನ ಬದಲಾವಣೆಯ ಸಾಧ್ಯತೆ. ನೌಕರ ವರ್ಗಕ್ಕೆ ಕೆಲಸಗಳಿಂದ ವಿರಾಮ ದೊರೆತು ಮನೆಯವರೊಂದಿಗೆ ಪ್ರವಾಸ. ಆರೋಗ್ಯದ ಬಗ್ಗೆ ವಿಶೇಷ ಗಮನ ಹರಿಸಿ.

ಮಿಥುನ: ಸರ್ಕಾರಿ ಕೆಲಸದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳಿಂದಾಗಿ ಆರೋಗ್ಯದಲ್ಲಿ ವ್ಯತ್ಯಯ. ಬಂಧುಗಳ ಮನೆಯ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಅವಕಾಶ ಕಂಡುಬರುತ್ತಿದೆ.

ಕರ್ಕಾಟಕ: ಸಂಶೋಧನೆ ಮತ್ತು ಉನ್ನತ ಅಧ್ಯಯನಕ್ಕೆ ಉತ್ತೇಜನ ದೊರೆತು ವಿದೇಶಕ್ಕೆ ಪ್ರಯಾಣ ಸಾಧ್ಯತೆ. ಸಾರಾಸಾರ ವಿವೇಚನೆಯಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ. ವಿಶೇಷ ಭೋಜನ ಕೂಟದಲ್ಲಿ ಭಾಗಿ.

ಸಿಂಹ: ಕೆಲಸ ಕಾರ್ಯಗಳಲ್ಲಿ ಅನುಕೂಲಕರವಾಗಿ ತೋರಿಬರಲಿದೆ. ಉದ್ಯೋಗ ಕ್ಷೇತ್ರದಲ್ಲಿ ಮೇಲಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ವಿಶ್ವಾಸದಿಂದ ಉದ್ಯೋಗ ವ್ಯಾಪಾರಗಳಲ್ಲಿ ತೊಡಗಿಕೊಳ್ಳುವುದರಿಂದ ಹೆಚ್ಚಿನ ಲಾಭ.

ಕನ್ಯಾ: ಗೃಹ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಉತ್ತಮ ಕಾಲ. ವಿದೇಶಿ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಭೂ ಖರೀದಿ ವ್ಯವಹಾರಕ್ಕೆ ಸಕಾಲ. ಸಂಗಾತಿಯೊಂದಿಗೆ ಪ್ರವಾಸ ಸಾಧ್ಯತೆ.

ತುಲಾ: ಉನ್ನತಾಧಿಕಾರಿಗಳ ಅನುಗ್ರಹದಿಂದಾಗಿ ನೌಕರಿಯಲ್ಲಿ ಅನುಕೂಲತೆ. ಸಾಮಾಜಿಕ ಸೇವೆಯಲ್ಲಿ ದಿನವಿಡೀ ತೊಡಗಿಕೊಂಡು ಸಂತೋಷವನ್ನು ಅನುಭವಿಸಲಿದ್ದೀರಿ. ಮಕ್ಕಳಿಂದ ಆರ್ಥಿಕ ಸಹಕಾರ.

ವೃಶ್ಚಿಕ: ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗಾವಕಾಶ ದೊರಕಲಿದೆ. ಬಹುದಿನಗಳಿಂದ ನಡೆಸಿಕೊಂಡು ಬರುತ್ತಿರುವ ವ್ಯವಹಾರಕ್ಕೊಂದು ತಿರುವು. ವಿದ್ಯಾರ್ಥಿಗಳ ವಿದ್ಯಾಭ್ಯಾಸದಲ್ಲಿ ಪ್ರಗತಿ.

ಧನು: ಆರ್ಥಿಕ ಅಡಚಣೆಗಳು ಹಂತ ಹಂತವಾಗಿ ನಿವಾರಣೆ. ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ. ಶಾರೀರಿಕ ಆಯಾಸ ತೋರಿಬಂದರೂ ದಿನದ ಅಂತ್ಯದಲ್ಲಿ ಪ್ರಗತಿ.

ಮಕರ: ಉದ್ಯೋಗಾವಕಾಶಗಳು ತೆರೆದುಕೊಳ್ಳುವ ಸಾಧ್ಯತೆ. ನ್ಯಾಯಾಲಯದಲ್ಲಿನ ವಿವಾದಗಳಿಗೆ ಚಾಲನೆ ದೊರಕಲಿದೆ. ಖರೀದಿ ಮಾರಾಟ ವ್ಯವಹಾರಗಳಲ್ಲಿ ಉತ್ತಮ ಲಾಭ.

ಕುಂಭ: ದೇವತಾನುಗ್ರಹದಿಂದ ಶುಭ ಕಾರ್ಯಗಳು ನಿಮ್ಮ ಮನದಿಚ್ಛೆಯಂತೆ ನೆರವೇರುವವು. ಧೈರ್ಯ ಆತ್ಮವಿಶ್ವಾಸ ಮತ್ತು ಪ್ರಯತ್ನ ಬಲದಿಂದಾಗಿ ಕಾರ್ಯ ಅನುಕೂಲವಾಗಲಿದೆ. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ.

ಮೀನ: ಆರ್ಥಿಕ ಅನುಕೂಲಕ್ಕಾಗಿ ಮಾಡಿದ ಯತ್ನಗಳಲ್ಲಿ ಯಶಸ್ಸು. ಕೃಷಿ ಕೈಗಾರಿಕಾ ಕ್ಷೇತ್ರದಲ್ಲಿ ಲಾಭಾಂಶ ಹೆಚ್ಚಳವಾಗಲಿದೆ. ರಾಜಕೀಯದಲ್ಲಿ ಸೂಕ್ತ ಸ್ಥಾನ. ವೈವಾಹಿಕ ಜೀವನದಲ್ಲಿ ಸಂಕಷ್ಟ ಸಾಧ್ಯತೆ.

ನಿಮ್ಮ ಜನ್ಮದಿನ 3-ಏಪ್ರಿಲ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಉನ್ನತ ವಿಚಾರ ಚಿಂತನೆಗಳಿಂದಾಗಿ ಸಾಮಾಜಿಕ ಗೌರವಗಳು ಪ್ರಾಪ್ತವಾಗುವವು. ಕಬ್ಬಿಣ, ಉಕ್ಕು ಮುಂತಾದ ವ್ಯಾಪಾರಗಳಲ್ಲಿ ತೊಡಗಿದವರಿಗೆ ವ್ಯಾಪಾರ ವೃದ್ಧಿ. ಸಂಗಾತಿಯ ಸಹಕಾರದಿಂದಾಗಿ ದಾಂಪತ್ಯ ಜೀವನದಲ್ಲಿ ಸಂತೃಪ್ತಿಯನ್ನು ಹೊಂದಲಿದ್ದೀರಿ.


ಪದಬಂಧ 4556 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಸಂಪೂರ್ಣ ಹಾನಿಯಿದು (4)
5.ಮಯನ ಹತ್ತಿರ ಕಳೆದ ಕಾಲ (3)
6.ವನದಲ್ಲಿ ತಿಳಿಸಿರುವ ಸುದ್ದಿ (4)
8.ನರಕಾಧಿಪತಿ ಹೊತ್ತಿರುವ ಅಧಿಕ ಒಜ್ಜೆ! (4)
12.ಭೂಮಿಗೂ ಆಕಾಶಕ್ಕೂ ನಡುವಣ ಪ್ರದೇಶ (4)
14.ಒಪ್ಪವಾಗಿ ರಾಗದೊಡನೆ ಮೂಡಿದ ಪ್ರೀತಿ (4)
15.ಉತ್ತರದವ ಪಡೆದುಕೊಂಡಿರುವ ಸಂಬಳ (3)
16.ಸಭೆಯನ್ನು ವಿಸರ್ಜಿಸುವುದು (4))

ಮೇಲಿಂದ ಕೆಳಕ್ಕೆ

1.ಒಳ್ಳೆಯ ನಡತೆಯಿಲ್ಲದಿರುವಿಕೆ (5)
2.ಆದಾಯ ಮತ್ತು ಖರ್ಚು (4)
3.ವರ ನೋಡುತ್ತಿರುವ ಕೊಳ (4)
4.ರೋಗ ಮೊದಲಾದವನ್ನು ಗುಣಪಡಿಸುವಿಕೆ (3)
7.ತಪ್ಪನ್ನು ಮನ್ನಿಸುವುದು (2)
9. ನಮ್ಮ ದೇಶ (3)
10.ಕೆಲಸಕ್ಕೆ ಬಾರದ ಮಾತಿದು (5)
11.ನೊಣ ಸಂಗ್ರಹಿಸಿರುವ ಮಧು! (2)
12.ಅಂಗಾಗಗಳಿಗೆಲ್ಲಾ ಸುಗಂಧ ಲೇಪನ (4)
13.ಕ್ಷಮೆಯನ್ನು ಯಾಚಿಸುವುದು (4)
14.ಈ ಮಡಿವಾಳ ಆಗಸ ನೋಡುತ್ತಿರುವನಲ್ಲಾ? (3)



4555ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ಸತತ 7.ವಿದ್ರುಮ 9.ಪಾಯಸ 11.ಸಹಗಮನ 12.ಚರಣ 14.ಕಲಹ 16.ತಕಲಿ

ಮೇಲಿಂದ ಕೆಳಕ್ಕೆ: 1.ಆಭಾಸ 2.ನಿಶ್ಚಿತ 3.ಕದ್ರು 5.ತಲೆಗಡಿಕ 6.ಕ್ಷಯ 7.ವಿಕಚ 8.ಮಸಣ 9.ಪಾನಕ 10.ಸನ್ನಾಹ 13.ರಫ್ತು 15.ಲಜ್ಜೆ 16.ತರ್ಜನಿ 17.ಲಿಲಾವು

ಸುಡೊಕು 4942

	6				8			5
				6		8	9	4
	8		5				6	
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4941 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಮುಂಬೈ ಧಾರಣೆ

ಶೇಂಗಾ

2-4-2021

ಜಾವಾ 70/80(ಹೊಸ)	10950-11000
ಜಾವಾ 80/90(ಹೊಸ)	10450-10500
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	9100-9200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1560)
ಒಂದು ವಾರದ ಡೆಲಿವರಿ	1575 (1555)
ಸೋಯಾ ಕಚ್ಚಾ	1270 (1265)
ಪಾಮ್ ವಾರದ ಡೆಲಿವರಿ	1216 (1211)
ಸೂರ್ಯಕಾಂತಿ ಎಣ್ಣೆ ಕಚ್ಚಾ	1640(1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
45,050 (44,900)
ಬೆಳ್ಳಿ ಕೆ.ಜಿ
65,000 (63,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹420
12 ಮೊಟ್ಟೆಗೆ	₹56

ಮೈಸೂರು

100 ಮೊಟ್ಟೆಗೆ	₹426



ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1550)
ಸೋಯಾ (ರಿಫೈನ್ಡ್)	₹1285 (1282)
ಸೂರ್ಯಕಾಂತಿ (ರಿಫೈನ್ಡ್)	₹1700(1700)
ಪಾಮೋಲಿನ್	₹1218 (1213)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	900 - 9050
ನಡುಗೋಲು	1,000-1,050
ರಾಶಿ	1,200-1,300
ರಾಶಿ ಉತ್ತಮ	1,300-1,400
ಜರಡಿ	1,500-1,550
ಹೆರಕಿದ್ದು	1,900-2,000
ಹಸಿರು ಸಾಧಾರಣ	1,300-1,400
ಹಸಿರು ಉತ್ತಮ	1,700-1,750
ಹಸಿರು ಅತಿ ಉತ್ತಮ	1,900-2,000
ಕಾಳು ಮೆಣಸು	390

ರಾಮನಗರ ರೇಷ್ಮೆ

ಮಿಶ್ರತಳಿ (ಸಿ.ಬಿ)	245-391
ದ್ವಿತಳಿ (ಬಿ.ವಿ)	257-458

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	9,750	9600	9650	121.6 ಸೆಂಟ್ಸ್
ಎಸಿ	3920	3700	3675	ಲಂಡನ್
ಆರ್‌ಪಿ	5100	5050	5025	
ಆರ್‌ಸಿ	2,900	2850	2825	1325 ಡಾಲರ್ಸ್

ಸಣ್ಣ ಉಳಿತಾಯ ಯೋಜನೆಗಳಿಗೆ ರಾಜ್ಯವಾರು ಕೊಡುಗೆ


ಮುಂಚೂಣಿಯಲ್ಲಿ ಪಶ್ಚಿಮ ಬಂಗಾಳ

ನವದೆಹಲಿ (ಪಿಟಿಐ): ವಿಧಾನಸಭಾ ಚುನಾವಣೆ ಎದುರಿಸುತ್ತಿರುವ ಪಶ್ಚಿಮ ಬಂಗಾಳವು ಇತರ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗಿಂತ ಹೆಚ್ಚಿನ ಕೊಡುಗೆಯನ್ನು ಸಣ್ಣ ಉಳಿತಾಯ ಯೋಜನೆಗಳಿಗೆ ನೀಡುತ್ತಿದೆ. ಸಣ್ಣ ಉಳಿತಾಯ ಯೋಜನೆಗಳಾದ ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ), ಪಿಪಿಎಫ್‌ಗೆ ಬರುವ ಕೊಡುಗೆಗಳಲ್ಲಿ ಪಶ್ಚಿಮ ಬಂಗಾಳದಿಂದಲೇ ಅಂದಾಜು ಶೇಕಡ 15ರಷ್ಟು ಮೊತ್ತ ಸಂದಾಯವಾಗುತ್ತದೆ.

ನಂತರದ ಸ್ಥಾನದಲ್ಲಿ ಉತ್ತರ ಪ್ರದೇಶ ಇದೆ. ಸಣ್ಣ ಉಳಿತಾಯ ಯೋಜನೆಗಳಿಗೆ ಯಾವ ರಾಜ್ಯದಿಂದ ಎಷ್ಟು ಕೊಡುಗೆ ಬರುತ್ತದೆ ಎಂಬುದರ 2017-18ರವರೆಗಿನ ವಿವರ ಲಭ್ಯವಿದೆ. 2017-18ರಲ್ಲಿ ಸಂಗ್ರಹವಾದ ಒಟ್ಟು ₹ 5.96 ಲಕ್ಷ ಕೋಟಿಯಲ್ಲಿ ಪಶ್ಚಿಮ ಬಂಗಾಳದಿಂದಲೇ ₹ 90 ಸಾವಿರ ಕೋಟಿ ಬಂದಿದೆ. ಉತ್ತರ ಪ್ರದೇಶ ರಾಜ್ಯದಿಂದ ಒಟ್ಟು ₹ 69 ಸಾವಿರ ಕೋಟಿ ಬಂದಿದೆ ಎಂದು ಹಣಕಾಸು ಸಚಿವಾಲಯದ ಅಧೀನದಲ್ಲಿರುವ ರಾಷ್ಟ್ರೀಯ ಉಳಿತಾಯ ಸಂಸ್ಥೆಯ ಅಂಕಿ-ಅಂಶಗಳು ಹೇಳುತ್ತವೆ.

ಮುಖ್ಯಾಂಶಗಳು

- ಎರಡನೆಯ ಸ್ಥಾನದಲ್ಲಿ ಉತ್ತರ ಪ್ರದೇಶ
- ಚುನಾವಣೆ ಎದುರಿಸುತ್ತಿರುವ ರಾಜ್ಯಗಳಿಂದ ಗಣನೀಯ ಕೊಡುಗೆ
- ಚುನಾವಣೆ ನಂತರ ಬಡ್ಡಿ ಕಡಿತ: ಪ್ರತಿಪಕ್ಷಗಳ ಆರೋಪ



ಸಾಂದರ್ಭಿಕ ಚಿತ್ರ

ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರವನ್ನು ಭಾರಿ ಪ್ರಮಾಣದಲ್ಲಿ ಕಡಿತ ಮಾಡಿ ಬುಧವಾರ ಆದೇಶ ಹೊರಡಿಸಿದ್ದ ಕೇಂದ್ರ ಸರ್ಕಾರವು, ಗುರುವಾರ ಬೆಳಿಗ್ಗೆ ಆ ಆದೇಶ ಹಿಂದಕ್ಕೆ ಪಡೆಯಿತು. ಪಶ್ಚಿಮ ಬಂಗಾಳ ಹಾಗೂ ಅಸ್ಸಾಂನಲ್ಲಿ ಎರಡನೆಯ ಹಂತದ ಮತದಾನ ನಡೆಯುವ ಒಂದು ದಿನ ಮೊದಲು, ಬಡ್ಡಿ ಕಡಿತದ ಆದೇಶ ಹೊರಬಿದ್ದಿತ್ತು.

ರಾಷ್ಟ್ರೀಯ ಉಳಿತಾಯ ಸಂಸ್ಥೆಯ ಅಂಕಿ-ಅಂಶದ ಪ್ರಕಾರ ಪಶ್ಚಿಮ ಬಂಗಾಳ ರಾಜ್ಯವು ಸಣ್ಣ ಉಳಿತಾಯ ಯೋಜನೆಗಳಿಗೆ ಕೊಡುಗೆ ನೀಡುವಲ್ಲಿ ಮುಂಚೂಣಿ ಸ್ಥಾನದಲ್ಲಿ ಇದೆ. ಒಟ್ಟು ಕೊಡುಗೆಯಲ್ಲಿ ಈ ರಾಜ್ಯದ ಪಾಲು ಕಳೆದ ಕೆಲವು ವರ್ಷಗಳಲ್ಲಿ ಶೇಕಡ 12ರಿಂದ ಶೇ 15ರಷ್ಟು ಇದೆ.

ಚುನಾವಣೆ ಎದುರಿಸುತ್ತಿರುವ ಅಸ್ಸಾಂ ರಾಜ್ಯವು 2017-18ರಲ್ಲಿ ₹ 9 ಸಾವಿರ ಕೋಟಿ ಕೊಡುಗೆ ನೀಡಿದೆ. ಚುನಾವಣೆ ನಡೆಯಲಿರುವ ಕೇರಳವು ₹ 14 ಸಾವಿರ ಕೋಟಿ, ತಮಿಳುನಾಡು ₹ 28 ಸಾವಿರ ಕೋಟಿ ಹಾಗೂ ಪುದುಚೇರಿ ₹ 1 ಸಾವಿರ ಕೋಟಿ ಕೊಡುಗೆಯನ್ನು 2017-18ರಲ್ಲಿ ನೀಡಿವೆ. ಚುನಾವಣೆ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಬಡ್ಡಿ ಕಡಿತದ ತೀರ್ಮಾನವನ್ನು ಜಾರಿಗೆ ತರಲಾಗುತ್ತದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ಕೋವಿಡ್: ವಿವೇಕ್ ಮೂರ್ತಿಗೆ ಕಮಲಾ ಹ್ಯಾರಿಸ್ ಮೆಚ್ಚುಗೆ

ವಾಷಿಂಗ್ಟನ್ (ಪಿಟಿಐ): ಕೊರೊನಾ ಸೋಂಕನ್ನು ನಿಯಂತ್ರಿಸಲು ಶ್ರಮಿಸುತ್ತಿರುವ ಸರ್ಜನ್ ಜನರಲ್ ಡಾ. ವಿವೇಕ್ ಮೂರ್ತಿ ಅವರನ್ನು ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಶ್ಲಾಘಿಸಿದ್ದಾರೆ.

‘ನೀವು ಸದಾ ರಾಷ್ಟ್ರ ಮತ್ತು ವಿಜ್ಞಾನದ ಪ್ರಾಮುಖ್ಯತೆಯನ್ನು ಮೇಲೆತ್ತಲು ಪ್ರಯತ್ನಿಸಿದ್ದೀರಿ. ಈ ಪರಿಸ್ಥಿತಿಯಲ್ಲಿ ನಾವೆಲ್ಲರೂ ಒಟ್ಟಿಗೆ ಇದ್ದೇವೆ ಎಂಬುದನ್ನು ತಿಳಿಸಿಕೊಟ್ಟ ನಿಮಗೆ ಧನ್ಯವಾದಗಳು’ ಎಂದು ಹೇಳಿದರು.

ಪಾಕ್ ಜವಳಿ ಉದ್ಯಮ ಬೇಸರ

ಕರಾಚಿ (ಪಿಟಿಐ): ಭಾರತದಿಂದ ಹತ್ತಿಯನ್ನು ಆಮದು ಮಾಡಿಕೊಳ್ಳುವ ಪ್ರಸ್ತಾವ ತಿರಸ್ಕರಿಸಿದ ಇಮ್ರಾನ್ ಖಾನ್ ನೇತೃತ್ವದ ಸರ್ಕಾರದ ಕ್ರಮಕ್ಕೆ ಪಾಕಿಸ್ತಾನದ ಜವಳಿ ಉದ್ಯಮವು ಅಸಮಾಧಾನ ವ್ಯಕ್ತಪಡಿಸಿದೆ.

ಭಾರತದಿಂದ ಹತ್ತಿ ಆಮದು ಮಾಡಿಕೊಳ್ಳಬೇಕು ಎಂದು ಉನ್ನತಾಧಿಕಾರ ಸಮಿತಿಯೊಂದು ಮಾಡಿದ್ದ ಪ್ರಸ್ತಾವವನ್ನು ಪಾಕಿಸ್ತಾನದ ಸಚಿವ ಸಂಪುಟವು ಗುರುವಾರ ತಿರಸ್ಕರಿಸಿದೆ. ಈ ತೀರ್ಮಾನವು ಜವಳಿ ಉದ್ಯಮದ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ‘ಡಾನ್’ ಪತ್ರಿಕೆ ವರದಿ ಮಾಡಿದೆ.

ಭಾರತದ ಹತ್ತಿ ಮತ್ತು ಹತ್ತಿ ನೂಲು ಆಮದು ಮಾಡಿಕೊಳ್ಳಬೇಕು ಎಂಬ ಪ್ರಸ್ತಾವವನ್ನು ಸರ್ಕಾರವು ಗಂಭೀರವಾಗಿ ಪರಿಶೀಲಿಸಬೇಕು ಎಂದು ಪಾಕಿಸ್ತಾನದ ಸಿದ್ಧಉಡುಪುಗಳ ವೇದಿಕೆ ಅಧ್ಯಕ್ಷ ಜಾವೆದ್ ಬಿಲ್ವಾನಿ ಒತ್ತಾಯಿಸಿರುವುದಾಗಿ ಡಾನ್ ಪತ್ರಿಕೆಯ ವರದಿ ಹೇಳಿದೆ. ‘ಭಾರತದಿಂದ ಹತ್ತಿ ನೂಲು ಆಮದು ಮಾಡಿಕೊಳ್ಳಬಾರದು ಎಂದಾದರೆ ಪಾಕಿಸ್ತಾನದಲ್ಲಿ ಅದು ಸಿಗುವಂತೆ ಮಾಡುವುದು ಸರ್ಕಾರದ ಹೊಣೆ’ ಎಂದೂ ಅವರು ಹೇಳಿದ್ದಾರೆ.

ತೈಲ ಉತ್ಪಾದನೆ ಹೆಚ್ಚಿಸಲು ಒಪ್ಪಿದ ಒಪೆಕ್



ಫ್ರ್ಯಾಂಕ್‌ಫರ್ಟ್ (ಎಪಿ): ಮೇ ತಿಂಗಳಿನಿಂದ ಜುಲೈ ನಡುವಿನ ಅವಧಿಯಲ್ಲಿ ಕಚ್ಚಾ ತೈಲ ಉತ್ಪಾದನೆಯನ್ನು ಪ್ರತಿ ದಿನಕ್ಕೆ ಅಂದಾಜು 20 ಲಕ್ಷ ಬ್ಯಾರೆಲ್‌ಗಳಷ್ಟು ಹೆಚ್ಚಿಸಲಾಗುವುದು ಎಂದು ಪೆಟ್ರೋಲಿಯಂ ರಫ್ತುದಾರ ದೇಶಗಳ ಒಕ್ಕೂಟ (ಒಪೆಕ್) ಮತ್ತು ಆ ಒಕ್ಕೂಟದ ಮಿತ್ರರಾಷ್ಟ್ರಗಳು ಹೇಳಿವೆ.

ಕೋವಿಡ್-19 ಸಾಂಕ್ರಾಮಿಕ ತೀವ್ರವಾಗಿದ್ದ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಕುಸಿದಾಗ, ಒಪೆಕ್ ದೇಶಗಳು ಉತ್ಪಾದನೆಯನ್ನು ಕಡಿಮೆ ಮಾಡಿದ್ದವು. ಈಗ ಒಕ್ಕೂಟವು ತೈಲ ಉತ್ಪಾದನೆಯನ್ನು ಜಾಗರೂಕವಾಗಿ ಹೆಚ್ಚಿಸುವ ತೀರ್ಮಾನ ಕೈಗೊಂಡಿವೆ.

ಮೇ ತಿಂಗಳಲ್ಲಿ ಪ್ರತಿದಿನ 3.50 ಲಕ್ಷ ಬ್ಯಾರೆಲ್‌ನಷ್ಟು ತೈಲ ಉತ್ಪಾದನೆ ಹೆಚ್ಚಿಸಲಾಗುವುದು. ಜೂನ್‌ನಲ್ಲಿ ಕೂಡ ಪ್ರತಿದಿನ 3.50 ಲಕ್ಷ ಬ್ಯಾರೆಲ್ ಹಾಗೂ ಜುಲೈನಲ್ಲಿ ಪ್ರತಿದಿನ 4 ಲಕ್ಷ ಬ್ಯಾರೆಲ್‌ನಷ್ಟು ತೈಲ ಉತ್ಪಾದನೆ ಹೆಚ್ಚಿಸಲು ಒಪೆಕ್ ನಿರ್ಧರಿಸಿದೆ. ಇದಲ್ಲದೆ, ಸೌದಿ ಅರೇಬಿಯಾ ದೇಶವು ಹೆಚ್ಚುವರಿಯಾಗಿ ಪ್ರತಿದಿನ 10 ಲಕ್ಷ ಬ್ಯಾರೆಲ್ ತೈಲ ಉತ್ಪಾದನೆ ಮಾಡಲಿದೆ.

ಸೌದಿ ಅರೇಬಿಯಾ ನೇತೃತ್ವದ ಒಪೆಕ್ ಮತ್ತು ರಷ್ಯಾ ನೇತೃತ್ವದ ಇತರ ತೈಲ ಉತ್ಪಾದಕ ರಾಷ್ಟ್ರಗಳು ಪ್ರತಿ ತಿಂಗಳೂ ಸಭೆ ಸೇರಿ, ಉತ್ಪಾದನೆಯು ಯಾವ ಪ್ರಮಾಣದಲ್ಲಿ ಇರಬೇಕು ಎಂಬುದನ್ನು ತೀರ್ಮಾನಿಸುತ್ತಿವೆ. ಈ ದೇಶಗಳು ಈಗ ಹಲವು ಒತ್ತಡಗಳನ್ನು ಎದುರಿಸುತ್ತಿವೆ.

ತೈಲಕ್ಕೆ ಪೂರ್ತಿ ಪ್ರಮಾಣದಲ್ಲಿ ಬೇಡಿಕೆ ಸೃಷ್ಟಿಯಾಗುವ ಮೊದಲೇ ಉತ್ಪಾದನೆ ಜಾಸ್ತಿ ಮಾಡಿದರೆ ಮಾರುಕಟ್ಟೆಯಲ್ಲಿ ತೈಲದ ಬೆಲೆ ಕುಸಿಯುತ್ತದೆ. ಉತ್ಪಾದನೆಯನ್ನು ಕಡಿಮೆ ಮಟ್ಟದಲ್ಲಿಯೇ ಇರಿಸಿದರೆ, ಈ ದೇಶಗಳ ಬಜೆಟ್‌ಗೆ ಅಗತ್ಯವಿರುವ ಹಣದ ಹರಿವು ಇರುವುದಿಲ್ಲ.

‘ಭಾರತದಿಂದ ಹೊರನಡೆಯುವ ಉದ್ದೇಶವಿಲ್ಲ’

ನವದೆಹಲಿ (ಪಿಟಿಐ): ಭಾರತದ ಮಾರುಕಟ್ಟೆಯಿಂದ ಹೊರನಡೆಯುವ ಯಾವ ಉದ್ದೇಶವೂ ಇಲ್ಲ ಎಂದು ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ಮ್ಯೂಚುವಲ್ ಫಂಡ್ ಶುಕ್ರವಾರ ಹೇಳಿದೆ.

ಸಾಲಪತ್ರ ಆಧಾರಿತ ಆರು ಮ್ಯೂಚುವಲ್ ಫಂಡ್ ಯೋಜನೆಗಳಿಗೆ ಸಂಬಂಧಿಸಿದ ವಿಚಾರಣೆಯ ಸಂದರ್ಭದಲ್ಲಿ ‘ಸೆಬಿ’ ತನ್ನ ವಾದವನ್ನು ನ್ಯಾಯಸಮ್ಮತವಾಗಿ ಆಲಿಸದೆ ಇದ್ದರೆ ಭಾರತದ ಮಾರುಕಟ್ಟೆಯಿಂದ ಹೊರನಡೆಯಬೇಕಾಗುತ್ತದೆ ಎಂದು ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ಹೇಳಿದೆ ಎಂದು ವರದಿಯಾಗಿತ್ತು. ಈ ವರದಿಗೆ ಪ್ರತಿಕ್ರಿಯೆಯಾಗಿ ಕಂಪನಿಯು ಸ್ಪಷ್ಟನೆ ನೀಡಿದೆ.

‘ನಾವು ಭಾರತದಿಂದ ಹೊರನಡೆಯಲಿದ್ದೇವೆ ಎಂಬ ಮಾತುಗಳು ಸತ್ಯವಲ್ಲ’ ಎಂದು ಕಂಪನಿಯ ಅಧ್ಯಕ್ಷ ಸಂಜಯ್ ಸಪ್ರೆ ಹೂಡಿಕೆದಾರರಿಗೆ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

ಭಾರತದ ಮ್ಯೂಚುವಲ್ ಫಂಡ್ ಮಾರುಕಟ್ಟೆಗೆ ಆರಂಭದ ದಿನಗಳಲ್ಲೇ ಪ್ರವೇಶಿಸಿದ ಕಂಪನಿಗಳ ಪೈಕಿ ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ಕೂಡ ಒಂದು. ಜಾಗತಿಕ ಮಟ್ಟದ ಕೆಲವು ಆಸ್ತಿ ನಿರ್ವಹಣಾ ಕಂಪನಿಗಳು ಹೊರ ನಡೆದಾಗಲೂ ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ಕಂಪನಿಯು ಉದ್ಯಮದ ಭಾಗವಾಗಿ ಮುಂದುವರಿಯಲು ತೀರ್ಮಾನಿಸಿತು ಎಂದು ಅವರು ಪತ್ರದಲ್ಲಿ ನೆನಪಿಸಿದ್ದಾರೆ.

ಸುಕೋ ಬ್ಯಾಂಕ್: ₹1,346 ಕೋಟಿ ವಹಿವಾಟು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ಸುಕೋ ಬ್ಯಾಂಕ್ 2020-21ರಲ್ಲಿ ಒಟ್ಟು ₹1,346 ಕೋಟಿ ವ್ಯವಹಾರ ನಡೆಸಿ ₹11.83 ಕೋಟಿ ಲಾಭ ಗಳಿಸಿದೆ’ ಎಂದು ಬ್ಯಾಂಕ್‌ನ ಅಧ್ಯಕ್ಷ ಮೋಹಿತ್ ಮಸ್ಕಿ ತಿಳಿಸಿದ್ದಾರೆ.

‘2020-21ನೆಯ ಆರ್ಥಿಕ ಸಾಲಿನಲ್ಲಿ ಬ್ಯಾಂಕ್ ಒಟ್ಟು ₹ 858 ಕೋಟಿ ಠೇವಣಿ ಸಂಗ್ರಹಿಸಿ, ₹ 488 ಕೋಟಿ ಸಾಲ ನೀಡಿದೆ. ಷೇರುದಾರರಿಗೆ ಶೇಕಡ 9ರಷ್ಟು ಡಿವಿಡೆಂಡ್ (ಲಾಭಾಂಶ) ನೀಡಲು ಸರ್ವ ಸದಸ್ಯರ ಸಭೆಗೆ ಶಿಫಾರಸು ಮಾಡಲು ತೀರ್ಮಾನಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಬ್ಯಾಂಕ್‌ನ ಎಲ್ಲ 28 ಶಾಖೆಗಳಲ್ಲೂ ಏಪ್ರಿಲ್ ಕೊನೆಯ ವಾರದಿಂದ ಸ್ವತಂತ್ರವಾದ ಐಎಫ್‌ಎಸಿ ಸಂಖ್ಯೆಯೊಂದಿಗೆ ವ್ಯವಹರಿಸಲು ತಂತ್ರಜ್ಞಾನದ ಉನ್ನತೀಕರಣ ಸಿದ್ಧತೆ ನಡೆದಿದೆ’ ಎಂದಿದ್ದಾರೆ.

‘ಸಹಕಾರಿ ಕ್ಷೇತ್ರದಲ್ಲಿ ಬ್ಯಾಂಕ್‌ನ ವ್ಯವಹಾರವನ್ನು ವಿಸ್ತರಿಸಲು ‘ಕನೆಕ್ಟ್ @ ಸುಕೋ ಬ್ಯಾಂಕ್’ ಪರಿಕಲ್ಪನೆ ಮೂಲಕ ಅನೇಕರಿಗೆ ಸ್ವಾವಲಂಬನೆಯ ಬದುಕನ್ನು ಕಲ್ಪಿಸಲಾಗಿದೆ. ನವೋದ್ಯಮದಿಂದ ಸ್ವಉದ್ಯೋಗ ವಿಶೇಷ ಸಾಲ ಯೋಜನೆ ಅಡಿಯಲ್ಲಿ ಮೂರು ವಿಶೇಷ ನವೋದ್ಯಮ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡು, ಫ್ರಾಂಚೈಸಿ ಪ್ರಾರಂಭಿಸಲು ಆರ್ಥಿಕ ನೆರವು ನೀಡಲಾಗಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೈವಾನ್: ರೈಲು ಅಪಘಾತದಲ್ಲಿ 48 ಮಂದಿ ಸಾವು; 100ಕ್ಕೂ ಹೆಚ್ಚು ಜನರಿಗೆ ಗಾಯ

ತೈಪೆ (ಎಪಿ): ‘ತೈವಾನ್‌ನ ಪೂರ್ವ ಕರಾವಳಿಯಲ್ಲಿ ಶುಕ್ರವಾರ ರೈಲೊಂದು ಹಳಿ ತಪ್ಪಿ, 48 ಮಂದಿ ಮೃತಪಟ್ಟಿದ್ದು, ನೂರಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿವೆ’ ಎಂದು ಪೊಲೀಸರು ತಿಳಿಸಿದರು.

ಟೊರೊಕೊ ಜಾರ್ಜ್ ಪ್ರದೇಶದಲ್ಲಿ ಬೆಳಿಗ್ಗೆ 9 ಗಂಟೆ ಸುಮಾರಿಗೆ ಈ ಅಪಘಾತ ಸಂಭವಿಸಿದೆ. ರೈಲಿನಲ್ಲಿ 400ಕ್ಕೂ ಹೆಚ್ಚು ಪ್ರಯಾಣಿಕರಿದ್ದರು.

ವಿವರ: ‘ಮೇಲ್ಸೇತುವೆಯಿಂದ ಟ್ರಕ್ ಆಯತಪ್ಪಿ ಕೆಳಗಿರುವ ರೈಲು ಹಳ್ಳಿ ಮೇಲೆ ಬಿದ್ದಿದೆ. ಇದೇ ವೇಳೆ ಸುರಂಗದೊಳಗಿನಿಂದ ಬರುತ್ತಿದ್ದ ರೈಲು, ಟ್ರಕ್‌ಗೆ ಅಪ್ಪಳಿಸಿ, ಹಳಿ ತಪ್ಪಿದೆ. ರೈಲಿನ ಹೆಚ್ಚಿನ ಭಾಗ ಈಗಲೂ ಸುರಂಗದಲ್ಲಿಯೇ ಸಿಲುಕಿದೆ. ಕೆಲವು ಪ್ರಯಾಣಿಕರು ಅಲ್ಲಿಂದ ಹೊರಬರುವಲ್ಲಿ ಯಶಸ್ವಿಯಾಗಿದ್ದಾರೆ’ ಎಂದು ವರದಿ ಹೇಳಿದೆ.

ಮೇಲ್ಸೇತುವೆಯಲ್ಲಿ ಕಾಮಗಾರಿ ನಡೆಯುತ್ತಿತ್ತು. ರೈಲ್ವೆ ಇಲಾಖೆ ನಿರ್ಮಾಣ ಕಾರ್ಯಕ್ಕಾಗಿ ಈ ಟ್ರಕ್ ಅನ್ನು ಬಳಸಿಕೊಂಡಿತ್ತು. ಟ್ರಕ್ ಮೇಲಿನಿಂದ ಬಿದ್ದಾಗ, ಟ್ರಕ್‌ನಲ್ಲಿ ಯಾರೂ ಇರಲಿಲ್ಲ. ಒಟ್ಟಾರೆ ಈ ಘಟನೆ ಬಗ್ಗೆ ತನಿಖೆ ಆರಂಭವಾಗಿದೆ ಎಂದು ವರದಿ ತಿಳಿಸಿದೆ.

ರೈಲು ಅಪಘಾತದದ ಬಗ್ಗೆ ವಿಷಾದ ವ್ಯಕ್ತಪಡಿಸಿರುವ ತೈವಾನ್ ಅಧ್ಯಕ್ಷ ತ್ಸೈ ಇಂಗ್-ವೆನ್ ಅವರು, ‘ತುರ್ತುಸೇವಾ ಸಿಬ್ಬಂದಿಯನ್ನು ರಕ್ಷಣಾ ಕಾರ್ಯದಲ್ಲಿ ನಿಯೋಜಿಸಲಾಗಿದೆ.

ಸಂತ್ರಸ್ತರಿಗೆ ಎಲ್ಲಾ ರೀತಿಯ ನೆರವನ್ನು ನೀಡಲಾಗುವುದು’ ಎಂದು ಟ್ವೀಟ್ ಮಾಡಿದ್ದಾರೆ.



ತೈವಾನ್‌ನ ಹಳಿ ತಪ್ಪಿದ ರೈಲಿನಿಂದ ಹೊರ ಬರುತ್ತಿರುವ ಪ್ರಯಾಣಿಕರು – ರಾಯಿಟರ್ಸ್ ಚಿತ್ರ

ರಿಲಯನ್ಸ್–ಫ್ಯೂಚರ್ ವಹಿವಾಟು: ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಕಿಶೋರ್ ಬಿಯಾನಿ ನೇತೃತ್ವದ ಫ್ಯೂಚರ್ ಸಮೂಹದ ರಿಟೇಲ್ ಹಾಗೂ ಸಗಟು ವ್ಯಾಪಾರ ವಿಭಾಗವನ್ನು ಖರೀದಿಸಲು ರಿಲಯನ್ಸ್ ರಿಟೇಲ್ ವೆಂಚರ್ಸ್ ಕಂಪನಿಯು ಹೆಚ್ಚುವರಿಯಾಗಿ ಆರು ತಿಂಗಳ ಸಮಯ ನಿಗದಿ ಮಾಡಿಕೊಂಡಿದೆ. ಒಟ್ಟು ₹ 24,713 ಕೋಟಿ ಮೌಲ್ಯದ ಖರೀದಿ ವಹಿವಾಟು ಇದು.

ಹೊಸ ಕಾಲಮಿತಿಯ ಅನ್ವಯ ಖರೀದಿ ಒಪ್ಪಂದವು ಈ ವರ್ಷದ ಸೆಪ್ಟೆಂಬರ್ 30ರೊಳಗೆ ಕಾರ್ಯರೂಪಕ್ಕೆ ಬರಬೇಕಿದೆ. ರಿಲಯನ್ಸ್ ಕಂಪನಿಯು ‘ಫ್ಯೂಚರ್’ನ ರಿಟೇಲ್ ಮತ್ತು ಸಗಟು ವಹಿವಾಟು ಖರೀದಿಸಲು ಮಾಡಿಕೊಂಡಿರುವ ಒಪ್ಪಂದಕ್ಕೆ ಅಮೆಜಾನ್ ಕಂಪನಿಯ ಆಕ್ಷೇಪ ಇದೆ.

ಫ್ಯೂಚರ್-ರಿಲಯನ್ಸ್ ಒಪ್ಪಂದಕ್ಕೆ ಭಾರತೀಯ ಸ್ಪರ್ಧಾ ಆಯೋಗ, ಸೆಬಿ ಮತ್ತು ಷೇರು ಪೇಟೆಗಳ ಅನುಮೋದನೆ ದೊರೆತಿದೆ. ಇದಕ್ಕೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ಮತ್ತು ಷೇರುದಾರರ ಅನುಮತಿ ದೊರೆಯಬೇಕಿದೆ.

ತಡೆರಹಿತ ಸರಕು ಸಾಗಣೆಗೆ ಸಹಕಾರಿ: ತೆರಿಗೆ ವಂಚನೆಗೆ ಕಡಿವಾಣ

ಇ-ವೇ ಬಿಲ್: ಭಾರಿ ದಂಡವೇ ಹೊರೆ

• ವಿಶ್ವನಾಥ ಎಸ್.


ಬೆಂಗಳೂರು: ಸರಕು ಸಾಗಣೆ ವೇಳೆ ತೆರಿಗೆ ವಂಚನೆಗೆ ಕಡಿವಾಣ ಹಾಕುವ ಉದ್ದೇಶದ ಇ-ವೇ ಬಿಲ್‌ನ ಮಾನ್ಯತೆಯ ಅವಧಿ ಹಾಗೂ ಸಣ್ಣಪುಟ್ಟ ತಪ್ಪುಗಳಿಗೂ ಭಾರಿ ದಂಡ ತೆರಬೇಕಾಗಿರುವ ಬಗ್ಗೆ ವಹಿವಾಟುದಾರರು, ಸರಕು ಸಾಗಣೆದಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ದಂಡವು ಗರಿಷ್ಠ ಮಟ್ಟದಲ್ಲಿದ್ದು, ಶೇಕಡ 200ರವರೆಗೂ ಇದೆ. ಉದ್ಯಮದ ದೃಷ್ಟಿಯಿಂದ ಇದು ಹಿತಕರವಲ್ಲ. ಪಾವತಿಸಲು ಆಗದಿರುವಷ್ಟು ದಂಡ ಇರಬಾರದು. ಉದ್ದೇಶಪೂರ್ವಕ ಅಲ್ಲದ, ನಿರ್ಲಕ್ಷಿಸಬಹುದಾದ ತಪ್ಪುಗಳಿಗೂ ಕಠಿಣ ಶಿಕ್ಷೆ ನೀಡುವುದು ಸರಿಯಲ್ಲ. ತಪಾಸಣೆ ವೇಳೆ ಇ-ವೇ ಬಿಲ್‌ನಲ್ಲಿ ದೋಷ ಕಂಡುಬಂದರೆ ಆ ಸ್ಥಳದಲ್ಲಿಯೇ ದಂಡ ಕಟ್ಟಬೇಕಾಗಿದೆ’ ಎಂದು ಅಖಿಲ ಭಾರತ ತಯಾರಕರ ಸಂಸ್ಥೆಯ ಕರ್ನಾಟಕದ ಅಧ್ಯಕ್ಷ ಸಂಪತ್ ರಾಮನ್ ಸಮಸ್ಯೆ ವಿವರಿಸಿದರು.

‘ಈ ಮುಂಚೆ 100 ಕಿಲೋ ಮೀಟರ್ ಅಂತರಕ್ಕೆ ಇ-ವೇ ಬಿಲ್ ಸಿಂಧುತ್ವ ಅವಧಿ ಒಂದು ದಿನ ಇತ್ತು. ಆದರೆ, ಜಿಎಸ್‌ಟಿ ಮಂಡಳಿಯು ನಿಯಮದಲ್ಲಿ ತಿದ್ದುಪಡಿ ತಂದು ಅದನ್ನು 200 ಕಿಲೋ ಮೀಟರಿಗೆ ನಿಗದಿಪಡಿಸಲಾಗಿದೆ. ಅತಿಯಾದ ವಾಹನ ದಟ್ಟಣೆ ಇರುವುದರಿಂದ ಇದು ಎಲ್ಲರಿಗೂ ಹೊರೆಯಾಗಿದೆ’ ಎಂದು ರಾಜ್ಯ ಲಾರಿ ಮಾಲೀಕರು ಹಾಗೂ ಏಜೆಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಜಿ.ಆರ್. ಷಣ್ಮುಗಪ್ಪ ತಿಳಿಸಿದರು.

‘ಬೆಂಗಳೂರನ್ನೂ ಒಳಗೊಂಡು ಬಹುತೇಕ ನಗರಗಳಲ್ಲಿ ಹಗಲಿನ ವೇಳೆಯಲ್ಲಿ ಭಾರಿ ಗಾತ್ರದ ವಾಹನಗಳ ಪ್ರವೇಶಕ್ಕೆ ಅನುಮತಿ ಇಲ್ಲ. ಇದರಿಂದಾಗಿ ಸರಕನ್ನು ಸಂಬಂಧಪಟ್ಟವರಿಗೆ ತಲುಪಿಸುವ ಮುನ್ನ ಇ-ವೇ ಬಿಲ್ ಅವಧಿ ಮುಕ್ತಾಯವಾಗುವ ಸಂದರ್ಭ ಇರುತ್ತದೆ. ಹೆದ್ದಾರಿಗಳಲ್ಲಿ ಭಾರಿ ವಾಹನಗಳು ಒಂದೇ ಸಾಲಿನಲ್ಲಿ ಚಲಿಸಬೇಕಿದೆ. ಈ ಕಾರಣಗಳಿಂದಾಗಿಯೂ ಒಟ್ಟಾರೆ ಸಾಗಣೆ ಸಮಯ ಹೆಚ್ಚಾಗುತ್ತಿದೆ. ಪಾರ್ಸೆಲ್ ಸರಕುಗಳನ್ನು ಹಲವು ಮಾರಾಟಗಾರರಿಂದ ಸಂಗ್ರಹಿಸಿದ ಬಳಿಕ ಅವನ್ನು ಒಂದು ವಾಹನದಲ್ಲಿ ತುಂಬಿಕೊಂಡು ಸಾಗಿಸಬೇಕು. ಈ ಹಂತದಲ್ಲಿಯೂ ಇ-ವೇ ಬಿಲ್ ಸಮಯಮಿತಿ ಸಾಕಾಗುವುದಿಲ್ಲ’ ಎಂದು ಅವರು ಹೇಳಿದರು.

ಸರಕು ಸಾಗಣೆದಾರರ ಸಮಸ್ಯೆಗಳನ್ನು ಜಿಎಸ್‌ಟಿ ಮಂಡಳಿಯ ಸದಸ್ಯ, ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ವಿವರಿಸಲಾಗಿದೆ. ಅವರು ಮಂಡಳಿಯ ಗಮನಕ್ಕೆ ತಂದು ಪರಿಹಾರ ಒದಗಿಸುವ ನಿರೀಕ್ಷೆ ಇದೆ ಎಂದೂ ಅವರು ತಿಳಿಸಿದರು.



‘ತೆರಿಗೆ ಸಂಗ್ರಹಕ್ಕೆ ಪೂರಕ’

‘ದಾಖಲೆ ಇಲ್ಲದ ಸರಕು ಸಾಗಣೆಗೆ ಕಡಿವಾಣ ಹಾಕಲು ಇ-ವೇ ಬಿಲ್ ಪರಿಣಾಮಕಾರಿ. ತಡೆರಹಿತವಾಗಿ ಸರಕು ಸಾಗಿಸಬಹುದಾದ್ದರಿಂದ ವಿತರಕರು ಇದಕ್ಕೆ ಹೊಂದಿಕೊಂಡಿದ್ದಾರೆ. ಸತತ ಎರಡು ತಿಂಗಳು ರಿಟರ್ನ್ಸ್ ಸಲ್ಲಿಸದೇ ಇದ್ದರೆ ಇ-ವೇ ಬಿಲ್ ಸೃಷ್ಟಿಯಾಗದಂತೆ ಮಾಡುವ ವ್ಯವಸ್ಥೆ ರೂಪಿಸಲಾಗಿದೆ. ಇ-ವೇ ಬಿಲ್ ಸೃಷ್ಟಿಯಾಗದೆ ₹ 50 ಸಾವಿರ ಮತ್ತು ಅದಕ್ಕೂ ಹೆಚ್ಚಿನ ಮೊತ್ತದ ಸರಕು ಸಾಗಣೆ ಅಸಾಧ್ಯ. ಹೀಗಾಗಿ ಯಾವುದೇ ಸಣ್ಣಪುಟ್ಟ ಸಮಸ್ಯೆಗಳಿದ್ದರೂ ಕನಿಷ್ಠ ಎರಡು ತಿಂಗಳಿಗೊಮ್ಮೆಯಾದರೂ ರಿಟರ್ನ್ಸ್ ಸಲ್ಲಿಸುವುದರಿಂದ ಸರ್ಕಾರಕ್ಕೆ ತೆರಿಗೆ ಬರುತ್ತದೆ’ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ತೆರಿಗೆ ಸಮಿತಿ ಅಧ್ಯಕ್ಷ ಬಿ.ಟಿ. ಮನೋಹರ್ ಮಾಹಿತಿ ನೀಡಿದರು.

ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮಂಗಲಾ ಅಂಗಡಿ, ಸತೀಶ ಜಾರಕಿಹೊಳಿ ಪರವಾಗಿ ಮತ ಯಾಚನೆ

ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳ ಮಕ್ಕಳೇ 'ಸ್ಟಾರ್ ಪ್ರಚಾರಕರು'

ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ತಂದೆ ಸತೀಶ ಜಾರಕಿಹೊಳಿ ಪರವಾಗಿ ಪುತ್ರಿ ಪ್ರಿಯಾಂಕಾ ಗೋಕಾಕ ತಾಲ್ಲೂಕಿನ ಕಡಬಗಟ್ಟಿ ಗ್ರಾಮದಲ್ಲಿ ಮತ ಯಾಚಿಸಿದರು



• ಎಂ. ಮಹೇಶ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮಕ್ಕಳೇ 'ಸ್ಟಾರ್ ಪ್ರಚಾರಕ'ರಾಗಿದ್ದಾರೆ.

ಹೌದು. ಪ್ರಬಲ ಅಭ್ಯರ್ಥಿಗಳಾದ ಬಿಜೆಪಿಯ ಮಂಗಲಾ ಅಂಗಡಿ ಮತ್ತು ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ ಸ್ಪರ್ಧೆಯಿಂದ ಕಣ ರಂಗೇರಿದ್ದು, ಪ್ರಚಾರ ಕಾರ್ಯದಲ್ಲಿ ಅವರಿಗೆ ಮಕ್ಕಳು ಸಾಥ್ ನೀಡುತ್ತಿದ್ದಾರೆ.

ಮಂಗಲಾ ಅವರ ಪರವಾಗಿ ಪುತ್ರಿಯರಾದ ಶ್ರದ್ಧಾ ಶೆಟ್ಟರ್ ಮತ್ತು ಡಾ.ಸ್ಫೂರ್ತಿ ಪಾಟೀಲ, ಸತೀಶ ಜಾರಕಿಹೊಳಿ ಪರವಾಗಿ ಪ್ರಿಯಾಂಕಾ ಹಾಗೂ ರಾಹುಲ್ ಜಾರಕಿಹೊಳಿ ಬಿರುಬಿಸಿಲಿನಲ್ಲೂ ಹಳ್ಳಿಗಳನ್ನು ಸುತ್ತಿ ಮತ ಯಾಚಿಸುತ್ತಾ ಬೆವರು ಹರಿಸುತ್ತಿದ್ದಾರೆ. ಕ್ಷೇತ್ರದಲ್ಲಿನ ಸದ್ಯದ 'ಸ್ಟಾರ್ ಪ್ರಚಾರಕರಂತೆ' ಆಕರ್ಷಿಸುತ್ತಿದ್ದಾರೆ. ಅವರನ್ನು ಆತ್ಮೀಯವಾಗಿ ಸ್ವಾಗತಿಸಲು ಆಯಾ ಪಕ್ಷಗಳ ಕಾರ್ಯಕರ್ತರು ಹಾಗೂ ಅಭಿಮಾನಿಗಳು ನೆರೆಯುತ್ತಿದ್ದಾರೆ. ಕೋವಿಡ್ ಅನ್ನೂ ಲೆಕ್ಕಿಸದೆ ಮತಬೇಟೆಗೆ ಇಳಿಯುತ್ತಿದ್ದಾರೆ.

ತಾಲೀಮು ನಡೆಸಿದ್ದರು: ಕೇಂದ್ರದಲ್ಲಿ ಸಚಿವರಾಗಿದ್ದ ಸುರೇಶ ಅಂಗಡಿ ಅವರ ಅಕಾಲಿಕ ನಿಧನದಿಂದ ತೆರವಾದ ಸ್ಥಾನಕ್ಕೆ ಉಪ ಚುನಾವಣೆ ನಡೆಯುತ್ತಿದೆ. ಒಂದು ಹಂತದಲ್ಲಿ, ಅಂಗಡಿ ಅವರ ಪುತ್ರಿ ಶ್ರದ್ಧಾ ಶೆಟ್ಟರ್ ಅವರಿಗೇ ಬಿಜೆಪಿ ಟಿಕೆಟ್ ಸಿಗುತ್ತದೆ ಎನ್ನಲಾಗಿತ್ತು. ಇದಕ್ಕೆ ತಾಲೀಮು ಎನ್ನುವಂತೆ ಶ್ರದ್ಧಾ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಜನರ ಮನದಾಳ ಅರಿಯುವ ಪ್ರಯತ್ನವನ್ನೂ ನಡೆಸಿದ್ದರು. ಕೊನೆಗೆ ಪಕ್ಷವು ಅವರ ತಾಯಿಗೆ ಟಿಕೆಟ್ ನೀಡಿದೆ. ಹೀಗಾಗಿ, ಸಹೋದರಿ ಸ್ಫೂರ್ತಿಯೊಂದಿಗೆ ಹಳ್ಳಿಗಳಲ್ಲಿ ಸಂಚರಿಸಿ ಮತ ಯಾಚಿಸುತ್ತಿದ್ದಾರೆ.

ಬಿಜೆಪಿ ಸರ್ಕಾರದ ಸಾಧನೆ ಹಾಗೂ ತಂದೆ ನೀಡಿದ ಕೊಡುಗೆಗಳನ್ನು ಪ್ರಸ್ತಾಪಿಸಿ ಬೆಂಬಲ ಕೋರುತ್ತಿದ್ದಾರೆ. ಅಲ್ಲಲ್ಲಿ ದೇಗುಲ, ಮಠಗಳಿಗೂ ಭೇಟಿ ನೀಡಿ ಬಿಜೆಪಿಯ ಸಾಂಪ್ರದಾಯಿಕ ಮತಗಳು ಚದುರಿ ಹೋಗದಂತೆ ನೋಡಿಕೊಳ್ಳುವ ಪ್ರಯತ್ನವನ್ನು ನಡೆಸುತ್ತಿದ್ದಾರೆ.

ರಾಜಕೀಯಕ್ಕಾಗಿ ತರಬೇತಿ: 'ಮಕ್ಕಳು ರಾಜಕೀಯಕ್ಕೆ ಬರುತ್ತಾರೆ. ಅವರಿಗೆ ರಾಜಕೀಯ ತರಬೇತಿ ನೀಡುತ್ತಿದ್ದೇನೆ' ಎಂದು ಸತೀಶ ಹೇಳಿದ್ದರು. ಈ ಉಪ ಚುನಾವಣೆಯನ್ನು 'ತರಬೇತಿ ಶಾಲೆ'ಯಾಗಿ ಮಾಡಿಕೊಂಡಿದ್ದಾರೆ. ಅವರ ಸೂಚನೆ ಮೇರೆಗೆ ಮಕ್ಕಳು ಪ್ರಚಾರಕ್ಕಿಳಿದಿದ್ದಾರೆ. ವಿಶೇಷವಾಗಿ ಯುವ ಮತದಾರರನ್ನು ಸೆಳೆಯಲು ಯತ್ನಿಸುತ್ತಿದ್ದಾರೆ. ಊರಿನ ಕಟ್ಟೆಯಲ್ಲಿ ಜನರೊಂದಿಗೆ ಬೆರೆಯುತ್ತಿದ್ದಾರೆ.

'ಮಕ್ಕಳನ್ನು ಚುನಾವಣಾ ರಾಜಕಾರಣಕ್ಕೆ ತರುವ ಇರಾದೆ ಸತೀಶ ಅವರದಾಗಿದೆ. ಒಂದೊಮ್ಮೆ ಉಪ ಚುನಾವಣೆಯಲ್ಲಿ ಗೆದ್ದಲ್ಲಿ, ಈಗ ತಾವು ಪ್ರತಿನಿಧಿಸುತ್ತಿರುವ ಯಮಕನಮರಡಿ ಕ್ಷೇತ್ರಕ್ಕೆ ಎದುರಾಗುವ ಉಪ ಚುನಾವಣೆಯಲ್ಲಿ ಮಕ್ಕಳಲ್ಲಿ ಒಬ್ಬರನ್ನು ಕಣಕ್ಕಿಳಿಸುವ ಯೋಚನೆಯೂ ಅವರದು' ಎನ್ನುತ್ತಾರೆ ಸತೀಶ ಆಪ್ತರು.

> **ತಂದೆ ಹಲವು ವರ್ಷಗಳಿಂದ ಜಿಲ್ಲೆಯಲ್ಲಿ ಜನಪರ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಮತ ನೀಡಲುಕೋರುತ್ತಿದ್ದೇನೆ**
> **ಪ್ರಿಯಾಂಕಾ ಜಾರಕಿಹೊಳಿ**

> **ತಂದೆ ಜನರೊಂದಿಗೆ ಉತ್ತಮ ಸಂಪರ್ಕ ಇಟ್ಟುಕೊಂಡಿದ್ದರು. ಅಭಿವೃದ್ಧಿ ಕಾರ್ಯ ಜನ ಮರೆತಿಲ್ಲ. ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ.**
> **ಶ್ರದ್ಧಾ ಶೆಟ್ಟರ್**



ಬಿಜೆಪಿ ಅಭ್ಯರ್ಥಿಯಾಗಿರುವ ತಾಯಿ ಮಂಗಲಾ ಅಂಗಡಿ ಪರವಾಗಿ ಪುತ್ರಿಯರಾದ ಡಾ.ಸ್ಫೂರ್ತಿ ಪಾಟೀಲ ಹಾಗೂ ಶ್ರದ್ಧಾ ಶೆಟ್ಟರ್ ರಾಮದುರ್ಗ ತಾಲ್ಲೂಕು ಗೊಡಚಿಯಲ್ಲಿ ಮತ ಯಾಚಿಸಿದರು

ಕೇಂದ್ರದ ಭದ್ರತಾ ಪಡೆ ಬಿಜೆಪಿ ಪರ: ಟಿಎಂಸಿ ಆರೋಪ • ನೀತಿ ಸಂಹಿತೆ ಉಲ್ಲಂಘಿಸಿದ ಮಮತಾ: ಬಿಜೆಪಿ

ದೂರು–ಪ್ರತಿದೂರು ರಾಜಕಾರಣ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಗುರುವಾರ ನಡೆದ ಎರಡನೇ ಹಂತದ ಮತದಾನದಲ್ಲಿ ಭದ್ರತಾ ಪಡೆಗಳು ಬಿಜೆಪಿ ಪರವಾಗಿ ಕೆಲಸ ಮಾಡಿವೆ ಎಂದು ಟಿಎಂಸಿ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಇದರ ಬೆನ್ನಲ್ಲೇ ಬಿಜೆಪಿ ಸಹ, ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎಂದು ಮಮತಾ ಬ್ಯಾನರ್ಜಿ ವಿರುದ್ಧ ದೂರು ನೀಡಿದೆ.

ಈಚೆಗಷ್ಟೇ ಟಿಎಂಸಿ ಸೇರಿರುವ ಯಶವಂತ್ ಸಿನ್ಹಾ ಮತ್ತು ಪಕ್ಷದ ಉಪಾಧ್ಯಕ್ಷ ಸುಬ್ರತಾ ಮುಖರ್ಜಿ ಅವರು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ. 'ಕೇಂದ್ರ ಸಚಿವ ಅಮಿತ್ ಶಾ ಅವರು ಚುನಾವಣಾ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುತ್ತಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ.

'ಎರಡನೇ ಹಂತದ ಮತದಾನದ ವೇಳೆ ಕೆಲವು ಮತಗಟ್ಟೆಗಳಲ್ಲಿ ಕೇಂದ್ರೀಯ ಭದ್ರತಾ ಪಡೆಗಳು ಬಿಜೆಪಿ ಪರವಾಗಿ ಪಕ್ಷಪಾತ ಮಾಡಿವೆ ಎಂದು ಆಯೋಗಕ್ಕೆ ದೂರು ನೀಡಿದ್ದೇವೆ. ಬಿಜೆಪಿ ಕಾರ್ಯಕರ್ತರು ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ದಾಳಿ ನಡೆಸಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ.

'ಕೇಂದ್ರೀಯ ಪಡೆಗಳು ಕೇಂದ್ರ ಗೃಹ ಸಚಿವಾಲಯದ ಅಧೀನದಲ್ಲಿ ಬರುತ್ತವೆ. ಪಶ್ಚಿಮ ಬಂಗಾಳ ಚುನಾವಣಾ ಕರ್ತವ್ಯದಲ್ಲಿ ಈ ಪಡೆಗಳು ಹೇಗೆ ಕಾರ್ಯನಿರ್ವಹಿಸಬೇಕು ಎಂಬ ನಿರ್ದೇಶನವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡುತ್ತಿದ್ದಾರೆ. ಅಮಿತ್ ಶಾ ಅವರು ಬಿಜೆಪಿ ಪರವಾಗಿ ಫಲಿತಾಂಶ ಬರುವಂತೆ ನೋಡಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಟಿಎಂಸಿ ಬೆಂಬಲಿಗರು ಮತದಾನಕ್ಕೆ ಬರುವುದನ್ನು ಕೇಂದ್ರೀಯ ಭದ್ರತಾ ಪಡೆಗಳು ತಡೆಯುತ್ತಿವೆ ಎಂದು ದೂರಿನಲ್ಲಿ ವಿವರಿಸಿದ್ದೇವೆ' ಎಂದು ಸಿನ್ಹಾ ಮಾಹಿತಿ ನೀಡಿದ್ದಾರೆ.

'ಎರಡನೇ ಹಂತದ ಮತದಾನ ನಡೆದ ಹಲವು ಮತಗಟ್ಟೆಗಳಲ್ಲಿ ಮತಯಂತ್ರಗಳು ಸರಿಯಾಗಿ ಕಾರ್ಯನಿರ್ವಹಿಸಿಲ್ಲ. ಈ ಬಗ್ಗೆಯೂ ಆಯೋಗಕ್ಕೆ ದೂರು ನೀಡಿದ್ದೇವೆ. ಮುಂದಿನ ಆರೂ ಹಂತದ ಮತದಾನದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಅಗತ್ಯ ಕ್ರಮ ತೆಗೆದುಕೊಳ್ಳಿ ಎಂದು ಆಯೋಗವನ್ನು ಕೇಳಿಕೊಂಡಿದ್ದೇವೆ' ಎಂದು ಯಶವಂತ ಸಿನ್ಹಾ ಅವರು ಮಾಹಿತಿ ನೀಡಿದ್ದಾರೆ.

'ಮಮತಾ ವಿರುದ್ಧ ಕ್ರಮ ತೆಗೆದುಕೊಳ್ಳಿ': ಟಿಎಂಸಿ ಈ ದೂರು ನೀಡಿದ ಬೆನ್ನಲ್ಲೇ ಬಿಜೆಪಿ ನಿಯೋಗ ಸಹ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಪಶ್ಚಿಮ ಬಂಗಾಳದ ಬಿಜೆಪಿ ನಾಯಕರು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ನೇತೃತ್ವದಲ್ಲಿ ಈ ದೂರು ನೀಡಿದ್ದಾರೆ.

'ನಂದಿಗ್ರಾಮದ ಬೋಯಾಲ್ ಮತಗಟ್ಟೆ 7ರ ಒಳಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರವೇಶಿಸಿದ್ದರು. ಅಲ್ಲೇ ಎರಡು ತಾಸು ಇದ್ದರು. ಇದರಿಂದ ಮತದಾನ ಪ್ರಕ್ರಿಯೆಗೆ ಅಡಚಣೆಯಾಯಿತು. ಇದು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ' ಎಂದು ಬಿಜೆಪಿ ತನ್ನ ದೂರಿನಲ್ಲಿ ವಿವರಿಸಿದೆ.

'ಮತದಾನ ನಡೆಯುತ್ತಿದ್ದ ವೇಳೆಯೇ ಮಮತಾ ಅವರು ಅಲ್ಲಿ ಧರಣಿ ನಡೆಸಿದರು. ಇದು ಪ್ರಜಾಪ್ರಭುತ್ವ ವಿರೋಧಿ ನಡೆ ಮತ್ತು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ. ಈ ತಪ್ಪಿಗಾಗಿ ಮಮತಾ ವಿರುದ್ಧ ತಕ್ಷಣವೇ ಕ್ರಮ ತೆಗದುಕೊಳ್ಳಬೇಕು' ಎಂದು ಕೇಂದ್ರ ಸಚಿವ ಪ್ರಕಾಶ ಜಾವಡೇಕರ್ ಆಗ್ರಹಿಸಿದ್ದಾರೆ.

'ಮೋದಿ ನನಗೆ ಸಲಹೆ ನೀಡಬೇಕಿಲ್ಲ'

'ನಂದಿಗ್ರಾಮದಲ್ಲಿ ನಾನು ಜಯಗಳಿಸುತ್ತೇನೆ. ಬೇರೆ ಕ್ಷೇತ್ರದಲ್ಲಿ ಸ್ಪರ್ಧಿಸುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ನನಗೆ ಸಲಹೆ ನೀಡುವುದು ಬೇಡ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

'ಮಮತಾ ದೀದಿ ನೀವು ಬೇರೆ ಕ್ಷೇತ್ರದಲ್ಲಿ ಸ್ಪರ್ಧಿಸುತ್ತೀರಿ ಎಂಬ ವದಂತಿಗಳಿವೆ. ಅದು ನಿಜವೇ' ಎಂದು ಪ್ರಧಾನಿ ಮೋದಿ ಕೇಳಿದ್ದರು. ಈ ಹೇಳಿಕೆಯ ಮೂಲಕ ಮಮತಾ ಅವರು, ಮೋದಿ ಅವರಿಗೆ ತಿರುಗೇಟು ನೀಡಿದ್ದಾರೆ. 'ಬೇರೆ ಕ್ಷೇತ್ರದಲ್ಲಿ ಸ್ಪರ್ಧಿಸಿ ಎಂದು ನೀವು ನನಗೆ ಸಲಹೆ ನೀಡಲು, ನಾನು ನಿಮ್ಮ ಪಕ್ಷದ ಸದಸ್ಯೆ ಅಲ್ಲ. ನಂದಿಗ್ರಾಮದಿಂದ ಸ್ಪರ್ಧಿಸಿದ್ದೇನೆ, ಅಲ್ಲಿಂದಲೇ ಗೆಲ್ಲುತ್ತೇನೆ' ಎಂದು ಮಮತಾ ಹೇಳಿದ್ದಾರೆ.

'ನಿಮ್ಮ ಗೃಹ ಸಚಿವರನ್ನು ಮೊದಲು ನಿಯಂತ್ರಿಸಿ, ಆಮೇಲೆ ನಮ್ಮನ್ನು ನಿಯಂತ್ರಿಸಲು ಪ್ರಯತ್ನಿಸಿ ಎಂದು ಮೋದಿ ಅವರಿಗೆ ಹೇಳಲು ಬಯಸುತ್ತೇನೆ. ನಮ್ಮನ್ನು ನಿಯಂತ್ರಿಸಲು ನಾವು ನಿಮ್ಮ ಪಕ್ಷದವರಲ್ಲ' ಎಂದು ಮಮತಾ ಖಾರವಾಗಿ ಹೇಳಿದ್ದಾರೆ.

'ಇಲ್ಲಿ ಚುನಾವಣಾ ಆಯೋಗವು ಚುನಾವಣೆ ನಡೆಸುತ್ತಿಲ್ಲ. ಬದಲಿಗೆ ಅಮಿತ್ ಶಾ ಚುನಾವಣೆ ನಡೆಸುತ್ತಿದ್ದಾರೆ. ಕೇಂದ್ರೀಯ ಪಡೆಗಳನ್ನು ಬಳಸಿಕೊಂಡು, ಮತದಾರರ ಮೇಲೆ ಪ್ರಭಾವ ಬೀರಲಾಗುತ್ತಿದೆ' ಎಂದು ಅವರು ಆರೋಪಿಸಿದ್ದಾರೆ.

ಶೇ 86ಕ್ಕೂ ಹೆಚ್ಚು ಮತದಾನ

ಪಶ್ಚಿಮ ಬಂಗಾಳದಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆದ ಕ್ಷೇತ್ರಗಳಲ್ಲಿ ಒಟ್ಟು ಶೇ 86.11ರಷ್ಟು ಮತದಾನ ನಡೆದಿದೆ ಎಂದು ಚುನಾವಣಾ ಆಯೋಗ ಮಾಹಿತಿ ನೀಡಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಬಿಜೆಪಿಯ ಸುವೇಂದು ಅಧಿಕಾರಿ ಸ್ಪರ್ಧಿಸಿರುವ ನಂದಿಗ್ರಾಮ ಕ್ಷೇತ್ರದಲ್ಲಿ ಶೇ 88.01ರಷ್ಟು ಮತದಾನ ನಡೆದಿದೆ.

ಗುರುವಾರ ಚುನಾವಣೆ ಎದುರಿಸಿದ ಪೂರ್ವ ಮೇದಿನಿಪುರದಲ್ಲಿ ಶೇ 87.42, ಬಂಕುರಾದಲ್ಲಿ ಶೇ 86.98, ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಶೇ 86.74 ಮತ್ತು ಪಶ್ಚಿಮ ಮೇದಿನಿಪುರದಲ್ಲಿ ಶೇ 83.84ರಷ್ಟು ಮತದಾನ ನಡೆದಿದೆ ಎಂದು ಆಯೋಗವು ಹೇಳಿದೆ.

ನುಡಿ–ಕಿಡಿ




ಅವರು (ಕಮಲ್‌ಹಾಸನ್) ಒಂದು ಸೂಪರ್ ನೋಟಾ. ಅವರ ಪಕ್ಷವು ಒಂದು ಕ್ಷೇತ್ರದಲ್ಲಿಯೂ ಗೆಲ್ಲುವುದಿಲ್ಲ. ಅದು ಸುಸ್ಥಿರ ರಾಜಕೀಯ ಪಕ್ಷವೇ ಅಲ್ಲ. ಚುನಾವಣೆಗಾಗಿ ಎಲ್ಲರೂ ಒಟ್ಟಾಗುತ್ತಾರೆ ಮತ್ತು ಬಳಿಕ ಎಲ್ಲರೂ ಚೆದುರಿ ಹೋಗುತ್ತಾರೆ

ಕಾರ್ತಿ ಚಿದಂಬರಂ, ಕಾಂಗ್ರೆಸ್ ಸಂಸದ



ಕಾಂಗ್ರೆಸ್ ಪಕ್ಷವು ಸೈದ್ಧಾಂತಿಕವಾಗಿ ದಿವಾಳಿಯಾಗಿದೆ. ದೇಶದ ಅತ್ಯಂತ ಹಳೆಯ ಪಕ್ಷವು ಅಧಿಕಾರಕ್ಕೆ ಬರುವ ಏಕೈಕ ಉದ್ದೇಶದಿಂದ ಕೋಮುವಾದಿ ಪಕ್ಷಗಳ ಜತೆಗೆ ಯಾವ ಹಿಂಜರಿಕೆಯೂ ಇಲ್ಲದೆ ಹೊಂದಾಣಿಕೆ ಮಾಡಿಕೊಂಡಿದೆ

ಜೆ.ಪಿ. ನಡ್ಡಾ, ಬಿಜೆಪಿ ಅಧ್ಯಕ್ಷ



ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಈಗಾಗಲೇ ಸೋತುಹೋಗಿದ್ದಾರೆ. ಮತದಾನ ನಡೆದಿರುವ 60 ಕ್ಷೇತ್ರಗಳಲ್ಲಿ ನಾವು ಈಗಾಗಲೇ 50ರಲ್ಲಿ ಗೆದ್ದಿದ್ದೇವೆ ಎಂದು ಪಕ್ಷದ ಕಾರ್ಯಕರ್ತರು ಹೇಳಿದ್ದಾರೆ. 294ರಲ್ಲಿ 200 ಕ್ಷೇತ್ರಗಳನ್ನು ಗೆಲ್ಲುತ್ತೇವೆ. ನಮ್ಮ ಸರ್ಕಾರದ ಮೊದಲ ಸಭೆಯಲ್ಲೇ ಪೌರತ್ವ ತಿದ್ದುಪಡಿ ಕಾಯ್ದೆ ಜಾರಿಗೆ ಕ್ರಮ ತೆಗೆದುಕೊಳ್ಳುತ್ತೇವೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ



ಈ ಚುನಾವಣೆಯಲ್ಲಿ ಟಿಎಂಸಿ 200ಕ್ಕಿಂತಲೂ ಹೆಚ್ಚು ಕ್ಷೇತ್ರಗಳನ್ನು ಗೆಲ್ಲಲಿದೆ. ನಮ್ಮ ಪಕ್ಷದ ಶಾಸಕರನ್ನು ಅಪಹರಿಸುವ ಮೂಲಕ ಮಾತ್ರ ಬಿಜೆಪಿ 200 ಕ್ಷೇತ್ರಗಳನ್ನು ತನ್ನದಾಗಿಸಿಕೊಳ್ಳಲು ಸಾಧ್ಯ. ಅಸ್ಸಾಂನಲ್ಲಿ 14 ಲಕ್ಷ ಜನ ಬಂಗಾಳಿಗಳನ್ನು ರಾಷ್ಟ್ರೀಯ ಪೌರತ್ವ ನೋಂದಣಿಯಿಂದ ಹೊರಗಿಡಲಾಗಿದೆ. ಬಿಜೆಪಿ ಇಲ್ಲಿಯೂ ಅದೇ ಕೆಲಸ ಮಾಡುತ್ತದೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ



ಸ್ಪರ್ಧೆಯ ಉಮೇದು

ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಉತ್ಸಾಹ ಜನರಲ್ಲಿ ಹೆಚ್ಚುತ್ತಿದೆ. ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸುವ ಅರ್ಜಿ ಪಡೆದುಕೊಳ್ಳಲು ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ಶುಕ್ರವಾರ ಭಾರಿ ನೂಕುನುಗ್ಗಲು ಕಂಡು ಬಂತು. ಕೋವಿಡ್ ಮಾರ್ಗಸೂಚಿಯಂತೆ ಅಂತರ ಕಾಯ್ದುಕೊಳ್ಳಬೇಕು ಎಂಬುದೂ ಸ್ಪರ್ಧೆಯ ಉತ್ಸಾಹದಲ್ಲಿ ಜನರಿಗೆ ಮರೆತು ಹೋಗಿತ್ತು –ಪಿಟಿಐ ಚಿತ್ರ

ಮಗಳ ಮನೆಯಲ್ಲಿ ಐ.ಟಿ ಶೋಧ ಮೋದಿ ವಿರುದ್ಧ ಸ್ಟಾಲಿನ್ ಆಕ್ರೋಶ

ಪ್ರಜಾವಾಣಿ ವಾರ್ತೆ

ಚೆನ್ನೈ: ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರ ಮಗಳು ಸೆಂತಾಮರೈ ಮತ್ತು ಅಳಿಯ ಶಬರೀಶನ್ ಅವರಿಗೆ ಸೇರಿದ ಸ್ಥಳಗಳಲ್ಲಿ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ಶುಕ್ರವಾರ ಶೋಧ ನಡೆಸಿದ್ದಾರೆ. ತಮಿಳುನಾಡು ವಿಧಾನಸಭೆಗೆ ಮತದಾನ ನಡೆಯಲು ನಾಲ್ಕು ದಿನಗಳಷ್ಟೇ ಇರುವಾಗ ಈ ವಿದ್ಯಮಾನ ನಡೆದಿದೆ. ಈ ಶೋಧವನ್ನು ಡಿಎಂಕೆ ಬಲವಾಗಿ ಖಂಡಿಸಿದೆ. ಶೋಧದ ಸಮಯಕ್ಕೆ ಆಕ್ಷೇಪ ವ್ಯಕ್ತಪಡಿಸಿದೆ.

ಈಸ್ಟ್ ಕೋಸ್ಟ್ ರಸ್ತೆಯಲ್ಲಿರುವ ಸೆಂತಾಮರೈ ಅವರ ಮನೆ, ಶಬರೀಶನ್ ಅವರ ಸಂಸ್ಥೆಯ ಕಚೇರಿಗಳಲ್ಲಿ ಶೋಧ ನಡೆದಿದೆ. ಶೋಧ ಮುಂದುವರಿದಿದ್ದರೂ ಅಧಿಕಾರಿಗಳು ಈ ಬಗ್ಗೆ ಏನನ್ನೂ ಬಹಿರಂಗಪಡಿಸಿಲ್ಲ.

ಚುನಾವಣೆ ಸಂದರ್ಭದಲ್ಲಿ ಡಿಎಂಕೆ ಮುಖಂಡರ ನಿವಾಸದಲ್ಲಿ ಆದಾಯ ತೆರಿಗೆ ಇಲಾಖೆ ನಡೆಸಿದ ಎರಡನೇ ಶೋಧ ಇದು. ಪಕ್ಷದ ಮುಖಂಡ ಇ.ವಿ. ವೇಲು ಅವರಿಗೆ ಸೇರಿದ ಸ್ಥಳಗಳಲ್ಲಿಯೂ ಇತ್ತೀಚೆಗೆ ಶೋಧ ನಡೆದಿತ್ತು.



ಸೆಂತಾಮರೈ ಮನೆಯ ಮುಂದೆ ಭದ್ರತಾ ಸಿಬ್ಬಂದಿ

'ದುರುದ್ದೇಶಪೂರಿತ ಮತ್ತು ಪ್ರತೀಕಾರ'ದ ಶೋಧ ಇದು ಎಂದು ಕೆಲವು ರಾಜಕೀಯ ಪಕ್ಷಗಳು ಈ ಶೋಧವನ್ನು ಬಣ್ಣಿಸಿವೆ. ಹಾಗಾಗಿ, ಆದಾಯ ತೆರಿಗೆ ಇಲಾಖೆಯ ಶೋಧವು ವಿವಾದಕ್ಕೆ ಕಾರಣವಾಗಿದೆ.


ಶೋಧಕ್ಕೆ ಸಂಬಂಧಿಸಿ ಬಿಜೆಪಿ ಮತ್ತು ಪ್ರಧಾನಿ ವಿರುದ್ಧದ ವಾಗ್ದಾಳಿಯಲ್ಲಿ ಸ್ಟಾಲಿನ್ ಅವರೇ ಮುಂಚೂಣಿಯಲ್ಲಿದ್ದಾರೆ.

'ಇದು ಡಿಎಂಕೆ ಎಂಬುದನ್ನು ಮೋದಿ ಅವರಿಗೆ ನೆನಪಿಸಲು ಬಯಸುತ್ತೇನೆ. ನಾನು ಕರುಣಾನಿಧಿ ಮಗ. ಇಂತಹ ದಮನಕಾರಿ ತಂತ್ರದಿಂದ ನನ್ನ ಬಗ್ಗಿಸಲಾಗದು. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ನಾನು ಮೀಸಾವನ್ನೇ (ಆಂತರಿಕ ಸುರಕ್ಷತಾ ಕಾಯ್ದೆ) ಎದುರಿಸಿದ್ದೇನೆ' ಎಂದು ಸ್ಟಾಲಿನ್ ಹೇಳಿದ್ದಾರೆ.

'ನಿಮ್ಮ ಕಾಲಿಗೆ ಬೀಳಲು, ತಮಿಳುನಾಡಿನ ಹಕ್ಕುಗಳನ್ನು ಶರಣಾಗಿಸಲು ಡಿಎಂಕೆ ಎಂದರೆ ಎಐಎಡಿಎಂಕೆ ಅಲ್ಲ. ಸಚಿವರು ಮತ್ತು ಮಾಜಿ ಮುಖ್ಯ ಕಾರ್ಯದರ್ಶಿಯ ಮನೆಯಲ್ಲಿ ಕೇಂದ್ರದ ತನಿಖಾ ಸಂಸ್ಥೆಗಳ ಮೂಲಕ ಶೋಧ ನಡೆಸಿ ರಾಜ್ಯ ಸರ್ಕಾರಕ್ಕೆ ದಿಗಿಲು ಹುಟ್ಟಿಸುವ ಕೆಲಸವನ್ನು ಕೇಂದ್ರ ಮಾಡಿತ್ತು' ಎಂದು ಅವರು ಹೇಳಿದ್ದಾರೆ.

'ಡಿಎಂಕೆ ಶಾಸಕರನ್ನು ಬಿಜೆಪಿ ಖರೀದಿಸಲಾಗದು'

ಕೊಯಮತ್ತೂರು (ಪಿಟಿಐ): ಅಧಿಕಾರದಾಹದ ಬಿಜೆಪಿಯು ಬೇರೆ ರಾಜ್ಯಗಳಲ್ಲಿ ಮಾಡಿದಂತೆ ಡಿಎಂಕೆ ನೇತೃತ್ವದ ಮೈತ್ರಿಕೂಟದ ಒಬ್ಬ ಶಾಸಕನನ್ನೂ ಖರೀದಿಸುವುದು ಸಾಧ್ಯವಿಲ್ಲ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಹೇಳಿದ್ದಾರೆ.



ಖರ್ಗೆ

ಬಿಜೆಪಿಯು ಪಕ್ಷಾಂತರಕ್ಕೆ ಪ್ರಚೋದನೆ ನೀಡುತ್ತಿದೆ. ಗೋವಾ, ಮಣಿಪುರ, ಕರ್ನಾಟಕ ಮತ್ತು ಮಧ್ಯ ಪ್ರದೇಶದಲ್ಲಿ ಶಾಸಕರನ್ನು ಖರೀದಿಸುವ ಮೂಲಕ ಸರ್ಕಾರಗಳನ್ನು ಉರುಳಿಸಿದೆ. ತಮಿಳುನಾಡಿನ ಶಾಸಕರು ವಿದ್ಯಾವಂತರು ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದವರು. ಅವರನ್ನು ಖರೀದಿಸಲಾಗದು ಎಂದು ಖರ್ಗೆ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡುತ್ತಾ ಹೇಳಿದ್ದಾರೆ.

ಬಿಜೆಪಿ ವಿಷಪೂರಿತ ಹಾವು. ಧರ್ಮ ಮತ್ತು ಜಾತಿಯ ಆಧಾರದಲ್ಲಿ ಜನರನ್ನು ವಿಭಜಿಸುವ ಆರ್‌ಎಸ್‌ಎಸ್ ಸಿದ್ಧಾಂತವನ್ನು ಬಿಜೆಪಿ ಅನುಷ್ಠಾನಗೊಳಿಸುತ್ತಿದೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಎರಡು ದಿನಗಳ ಹಿಂದೆ ಭೇಟಿ ನೀಡಿದ್ದಾಗ ನಡೆದ ಹಿಂಸಾಚಾರವೇ ಇದಕ್ಕೆ ಸಾಕ್ಷಿ. ನೋಟು ರದ್ದತಿ ಮತ್ತು ಜಿಎಸ್‌ಟಿಯಂತಹ ಕ್ರಮಗಳಿಂದಾಗಿ ಜನರ ಜೀವನವೇ ದುಸ್ತರವಾಗಿದೆ ಎಂದು ಖರ್ಗೆ ಆರೋಪಿಸಿದ್ದಾರೆ.

ತಮಿಳುನಾಡಿನಲ್ಲಿ ನಾರಿಶಕ್ತಿಗೆ ಮೋದಿ ತಾರೀಫು

ಮಧುರೈ/ಕೊಣ್ಣಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ದಕ್ಷಿಣದ ರಾಜ್ಯಗಳಾದ ಕೇರಳ ಹಾಗೂ ತಮಿಳುನಾಡಿನಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದರು. ತಮಿಳುನಾಡಿನಲ್ಲಿ ಡಿಎಂಕೆ–ಕಾಂಗ್ರೆಸ್ ಮೈತ್ರಿಕೂಟ ಹಾಗೂ ಕೇರಳದಲ್ಲಿ ಎಲ್‌ಡಿಎಫ್ ಹಾಗೂ ಯುಡಿಎಫ್ ಮೈತ್ರಿಕೂಟಗಳ ವಿರುದ್ಧ ವಾಗ್ದಾಳಿ ನಡೆಸಿದರು.

ತಮಿಳುನಾಡಿನ ಮಧುರೈಯಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡುತ್ತಾ, 'ಡಿಎಂಕೆ ಹಾಗೂ ಕಾಂಗ್ರೆಸ್ ಮುಖಂಡರು ಮಹಿಳೆಯರನ್ನು ಅಪಮಾನಿಸುತ್ತಾ ಬಂದಿದ್ದಾರೆ. ಆದರೆ, ಎನ್‌ಡಿಎ ಮಾತ್ರ ಮಹಿಳೆಯರ ಸಬಲೀಕರಣಕ್ಕಾಗಿ ಶ್ರಮಿಸುತ್ತದೆ. ಎಲ್ಲರನ್ನೂ ಒಳಗೊಂಡಂಥ ಅಭಿವೃದ್ಧಿ ಹಾಗೂ ಸಮೃದ್ಧವಾದ ಸಮಾಜ ನಿರ್ಮಿಸಬೇಕು ಎಂಬ ಎಂ.ಜಿ. ರಾಮಚಂದ್ರನ್ ಅವರ ಕನಸೇ ನಮಗೆ ಪ್ರೇರಣೆ' ಎಂದರು.



ತಮಿಳುನಾಡಿನ ಮಧುರೈಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಎನ್‌ಡಿಎ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದರು –ಪಿಟಿಐ ಚಿತ್ರ

'ಮಹಿಳಾ ಸಬಲೀಕರಣ ಎಂದರೇನು ಎಂಬುದನ್ನು ಮಧುರೈ ನಗರ ಕಲಿಸುತ್ತದೆ. ಇಲ್ಲಿನ 'ಮೀನಾಕ್ಷಿ ಅಮ್ಮ'ನನ್ನು ಎಲ್ಲರೂ ಗೌರವಿಸುತ್ತಾರೆ. ಇದಲ್ಲದೆ, ಇಲ್ಲಿನ ಕಣ್ಣಗಿ ಅಮ್ಮನ್, ರಾಣಿ ಮಂಗಮ್ಮಾಳ್ ಹಾಗೂ ವೇಲು ನಾಚಯ್ಯಾರ್ ಅವರು ನಾರಿ ಶಕ್ತಿಗೆ ಶ್ರೇಷ್ಠ ಉದಾಹರಣೆಗಳಾಗಿದ್ದಾರೆ. ಕಾಂಗ್ರೆಸ್ ಹಾಗೂ ಡಿಎಂಕೆ ಮಧುರೈಯ ಅಂತರಂಗವನ್ನೇ ಅರ್ಥ ಮಾಡಿಕೊಂಡಿಲ್ಲ. ಆದ್ದರಿಂದ ಅವರ ನಾಯಕರು ಆಗಾಗ ಮಹಿಳೆಯರನ್ನು ಅಪಮಾನಿಸುವುದರಲ್ಲಿ ಅಚ್ಚರಿ ಇಲ್ಲ' ಎಂದರು.

ಡಿಎಂಕೆ ನಾಯಕ ಎ. ರಾಜಾ ಅವರು ಕೆಲವು ದಿನಗಳ ಹಿಂದೆ ಮುಖ್ಯಮಂತ್ರಿ ಪಳನಿಸ್ವಾಮಿ ಅವರ ತಾಯಿಯ ಬಗ್ಗೆ ಅಪಮಾನಕಾರಿ ಹೇಳಿಕೆ ನೀಡಿದ್ದರು. ಆ ನಂತರ ಅದಕ್ಕಾಗಿ ಕ್ಷಮೆಯನ್ನೂ ಯಾಚಿಸಿದ್ದರು. ಎಐಎಡಿಎಂಕೆ ನೀಡಿದ ದೂರನ್ನು ಪರಿಗಣಿಸಿದ ಚುನಾವಣಾ ಆಯೋಗವು ಗುರುವಾರ 48 ಗಂಟೆಗಳ ಕಾಲ ಪ್ರಚಾರದಲ್ಲಿ ಪಾಲ್ಗೊಳ್ಳುವುದರಿಂದ ರಾಜಾ ಅವರಿಗೆ ನಿಷೇಧ ಹೇರಿತ್ತು.

ಡಿಎಂಕೆಯನ್ನೇ ತನ್ನ ಟೀಕೆಯ ಮುಖ್ಯ ಗುರಿಯಾಗಿಸಿದ ಮೋದಿ, 'ಡಿಎಂಕೆ ಮುಖ್ಯಸ್ಥರ ಕುಟುಂಬದಲ್ಲಿ (ಎಂ.ಕೆ. ಸ್ಟಾಲಿನ್ ಹಾಗೂ ಎಂ.ಕೆ. ಅಳಗಿರಿ ಮಧ್ಯೆ) ಜಗಳ ಉಂಟಾಗಿದ್ದ ಸಂದರ್ಭದಲ್ಲಿ, ಮಧುರೈಯನ್ನು 'ಮಾಫಿಯಾ ಗುಹೆ'ಯಾಗಿಸಲು ಡಿಎಂಕೆ ಪ್ರಯತ್ನಿಸಿತ್ತು. ಕಾಂಗ್ರೆಸ್ ಆಗಲಿ, ಡಿಎಂಕೆಯಾಗಲಿ ನಿಮ್ಮ ರಕ್ಷಣೆ ಹಾಗೂ ಘನತೆ ಕಾಪಾಡುವ ಭರವಸೆ ನೀಡಲಾರವು. ಅವರ ಆಡಳಿತದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡಲಿದೆ ಎಂದರು.

ಜಾತಿ ಧರ್ಮ ನೋಡುವುದಿಲ್ಲ: ಕನ್ಯಾಕುಮಾರಿ ಲೋಕಸಭಾ ಕ್ಷೇತ್ರದಲ್ಲಿ ಪ್ರಚಾರ ಭಾಷಣ ಮಾಡಿದ ಮೋದಿ, 'ನಮ್ಮ ಪಕ್ಷವು ಜನರ ಸೇವೆ ಮಾಡುವುದಕ್ಕೂ ಮುನ್ನ ಅವರ ಜಾತಿ– ಧರ್ಮಗಳನ್ನು ನೋಡುವುದಿಲ್ಲ' ಎಂದರು.

'ತಮಿಳುನಾಡಿನಲ್ಲಿ ಡಿಎಂಕೆಯನ್ನು ಕಟ್ಟಲು ಕರುಣಾನಿಧಿ ಅವರ ಜತೆಗೆ ಹೆಗಲುಕೊಟ್ಟು ದುಡಿದಿದ್ದವರಿಗೆ ಈಗ ಹೊಸದಾಗಿ ಯುವರಾಜನಾಗಿ ಉದಯಿಸಿರುವ ವ್ಯಕ್ತಿಯಿಂದಾಗಿ (ಡಿಎಂಕೆ ಯುವ ಘಟಕದ ಕಾರ್ಯದರ್ಶಿ ಉದಯನಿಧಿ ಸ್ಟಾಲಿನ್) ಪಕ್ಷದೊಳಗೆ ಉಸಿರುಗಟ್ಟಿದ ಅನುಭವವಾಗುತ್ತಿದೆ. ರಾಜಕೀಯ ಹೀಗೆ ನಡೆಯುವುದಿಲ್ಲ. ದೇಶದ ಜನರು ಸ್ವಜನಪಕ್ಷಪಾತದ ವಿರುದ್ಧ ಇದ್ದಾರೆ. ಜನರನ್ನು ಪ್ರಜಾಪ್ರಭುತ್ವ ವಿರೋಧಿಗಳು ಎಂದು ನಿಂದಿಸುವ ವಿರೋಧಪಕ್ಷದವರು ಒಮ್ಮೆ ಕನ್ನಡಿಯಲ್ಲಿ ತಮ್ಮ ಮುಖ ನೋಡಿಕೊಳ್ಳಬೇಕು' ಎಂದರು.

ಜಲ್ಲಿಕಟ್ಟು– ತಮಿಳು ಸಂಸ್ಕೃತಿ

'ನಾವು ಮಾತ್ರ ತಮಿಳು ಸಂಸ್ಕೃತಿಯನ್ನು ರಕ್ಷಿಸಬಲ್ಲೆವು' ಎಂದು ಕಾಂಗ್ರೆಸ್ ಮತ್ತು ಡಿಎಂಕೆ ಹೇಳುತ್ತಾ ಬಂದಿವೆ. ಆದರೆ ವಾಸ್ತವ ಹಾಗಿಲ್ಲ. ದ್ರಾವಿಡ ಪಕ್ಷಗಳ ಹಿರಿಯ ನಾಯಕರು ಕೇಂದ್ರದ ಯುಪಿಎ ಸರ್ಕಾರದಲ್ಲಿ ಪ್ರಭಾವಿ ಸಚಿವರಾಗಿದ್ದರೂ 2011ರಲ್ಲಿ ಜಲ್ಲಿಕಟ್ಟು ಸಂಪ್ರದಾಯವನ್ನು ನಿಷೇಧಿಸಲಾಗಿತ್ತು' ಎಂದು ಮೋದಿ ಟೀಕಿಸಿದರು.

'2011ರಲ್ಲಿ ಡಿಎಂಕೆ ನಾಯಕರು ಕೇಂದ್ರದಲ್ಲಿ ದೊಡ್ಡ ಸಚಿವಾಲಯಗಳನ್ನು ನಿರ್ವಹಿಸುತ್ತಿದ್ದರು. ಹಾಗಿದ್ದರೂ ಜಲ್ಲಿಕಟ್ಟು ಮೇಲೆ ನಿಷೇಧ ಹೇರಲಾಯಿತು. ಒಬ್ಬ ಸಚಿವರಂತೂ 'ಜಲ್ಲಿಕಟ್ಟು ಅನಾಗರಿಕ ಸಂಪ್ರದಾಯ' ಎಂದೂ ಹೇಳಿದ್ದರು. ಶತಮಾನಗಳಿಂದ ತಮಿಳು ಸಂಸ್ಕೃತಿಯ ಜತೆಗೆ ಬೆಸೆದುಕೊಂಡಿರುವ ಸಂಪ್ರದಾಯವನ್ನು ವರ್ಣಿಸಲು ನೀವು ಇಂಥ ಪದಗಳನ್ನು ಬಳಸುವಿರೇ ಎಂದು ಅವರು ಪ್ರಶ್ನಿಸಿದರು.

ಏಳು ಪಾಪಗಳ ಮೈತ್ರಿಕೂಟ

ಕೊಣ್ಣಿ (ಕೇರಳ) (ಪಿಟಿಐ): ರಾಜ್ಯದಲ್ಲಿ ಪರ್ಯಾಯದಂತೆ ಆಡಳಿತ ನಡೆಸುತ್ತಾ ಬಂದಿರುವ ಯುಡಿಎಫ್ ಹಾಗೂ ಎಲ್‌ಡಿಎಫ್‌ಅನ್ನು ಜರೆಯಲು ಮೋದಿ ಅವರು ಬೈಬಲ್‌ನ ಉದಾಹರಣೆಯನ್ನು ಬಳಸಿಕೊಂಡರು.

'ಅತಿಯಾಸೆ, ಅಧಿಕಾರ ದಾಹ ಸೇರಿದಂತೆ ಏಳು ಮಹಾ ಪಾಪಗಳನ್ನು ಈ ಎರಡು ಮೈತ್ರಿಕೂಟಗಳು ಮಾಡಿವೆ. ತಮ್ಮನ್ನು ಯಾರೂ ಸೋಲಿಸಲಾರರು ಎಂಬ ಹೆಮ್ಮೆ ಮತ್ತು ದುರಹಂಕಾರ, ಹಣದ ಲಾಲಸೆ (ಚಿನ್ನ ಕಳ್ಳಸಾಗಾಣಿಕೆ, ಡಾಲರ್ ಹಾಗೂ ಸೌರಫಲಕ ಹಗರಣ) ಮುಂತಾದವು ಈ ಪಾಪಗಳಲ್ಲಿ ಪ್ರಮುಖವಾದವು ಎಂದರು.'ಕೇರಳದ ಜನರು ಬಿಜೆಪಿ, ಎನ್‌ಡಿಎ ಅಭಿವೃದ್ಧಿಗಳನ್ನು ನೋಡಿ, ಯುಡಿಎಫ್, ಎಲ್‌ಡಿಎಫ್‌ಗಳ ಸಹವಾಸ ಸಾಕು ಎನ್ನುತ್ತಿದ್ದಾರೆ. ನಮ್ಮ ಅಭಿವೃದ್ಧಿ ಯೋಜನೆಗಳನ್ನು ಅವರ ಯೋಜನೆಗಳ ಜತೆಗೆ ತಾಳೆಮಾಡಿ ನೋಡುತ್ತಿದ್ದಾರೆ ಎಂದರು.



ಮಸ್ಕಿ ಕ್ಷೇತ್ರದ ಉಪ ಚುನಾವಣೆ ಪ್ರಚಾರಕ್ಕೆ ಬಂದ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಜೆಸಿಬಿ ವಾಹನಗಳ ನೆರವಿನಿಂದ ಹೂಗಳನ್ನು ಸುರಿದು ಸ್ವಾಗತ ಕೋರಲಾಯಿತು

ವಿಜಯೇಂದ್ರಗೆ 'ಹೂಮಳೆ'ಯ ಸ್ವಾಗತ

ಮಸ್ಕಿ (ರಾಯಚೂರು ಜಿಲ್ಲೆ): ಮಸ್ಕಿ ಕ್ಷೇತ್ರದಲ್ಲಿ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಚಾರ ಆರಂಭಿಸಿದ್ದು, ಶುಕ್ರವಾರ ಸಂತೆಕೆಲ್ಲೂರು ಜಿಲ್ಲಾ ಪಂಚಾಯಿತಿ ಕ್ಷೇತ್ರದಲ್ಲಿ ಪ್ರಚಾರ ನಡೆಸಿದರು.

ಅಭಿಮಾನಿಗಳು ಹಾಗೂ ಬಿಜೆಪಿ ಕಾರ್ಯಕರ್ತರು ಜೆಸಿಬಿ ಯಂತ್ರದ ಮೂಲಕ ಹೂಮಳೆಗರೆದರೆ, ಮಹಿಳೆಯರು ತಿಲಕ ಇಟ್ಟು ಸ್ವಾಗತಿಸಿದರು. ನಂತರ ವಿಜಯೇಂದ್ರ ಬೈಕ್ ಜಾಥಾದ ಮೂಲಕ ಹಲವೆಡೆ ಸಂಚರಿಸಿ ಪ್ರಚಾರ ಮಾಡಿದರು. ಮಸ್ಕಿ ಪಟ್ಟಣದಲ್ಲಿ ರೋಡ್‌ಷೋ ನಡೆಸಿದರು. ಗಾಂಧಿ ನಗರದಲ್ಲಿಯೂ ನೂರಾರು ಯುವಕರು ಜೆಸಿಬಿ ಯಂತ್ರದ ಸಹಾಯದಿಂದ ಅವರ ಮೇಲೆ ಹೂವುಗಳನ್ನು ಎರಚಿದರು.

'ಗೆಲ್ಲಲು ಬೇಕಿರುವ ತಂತ್ರ ರೂಪಿಸುತ್ತೇವೆ. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಲು ತ್ಯಾಗ ಮಾಡಿರುವ ಪ್ರತಾಪಗೌಡ ಪಾಟೀಲ ಅವರನ್ನು ಗೆಲ್ಲಿಸಲು ಶ್ರಮಿಸುತ್ತೇವೆ. ಅವರು 20 ಸಾವಿರ ಮತಗಳ ಅಂತರದಿಂದ ಗೆಲ್ಲುತ್ತಾರೆ' ಎಂದು ವಿಜಯೇಂದ್ರ ಹೇಳಿದರು.

ರಾಜ್ಯಪಾಲರಿಗೆ ಸಚಿವ ಕೆ.ಎಸ್. ಈಶ್ವರಪ್ಪ ಅವರು ಪತ್ರ ಬರೆದಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಸಣ್ಣಮಟ್ಟದ ವ್ಯತ್ಯಾಸಗಳಿದ್ದು, ದೊಡ್ಡ ಸಮಸ್ಯೆಯಲ್ಲ. ಕೂತು ಚರ್ಚಿಸಿ ಬಗೆಹರಿಸಿಕೊಳ್ಳುವ ಕುರಿತು ಸ್ವತಃ ಈಶ್ವರಪ್ಪ ಅವರೇ ಹೇಳಿದ್ದಾರೆ' ಎಂದರು.

'ಮತಯಂತ್ರ ವಂಚನೆ: ಜನತಂತ್ರಕ್ಕೆ ಮಾರಕ'

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಅಸ್ಸಾಂನಲ್ಲಿ ಬಿಜೆಪಿ ಅಭ್ಯರ್ಥಿಯ ಹೆಂಡತಿಯ ಕಾರಿನಲ್ಲಿ ಮತಯಂತ್ರ ಸಿಕ್ಕಿದ ಪ್ರಕರಣದಲ್ಲಿ ಚುನಾವಣಾ ಆಯೋಗವನ್ನು ಕಾಂಗ್ರೆಸ್ ಶುಕ್ರವಾರ ಪ್ರಶ್ನಿಸಿದೆ. ಆಯೋಗವು ಈಗಲಾದರೂ ಎಚ್ಚೆತ್ತುಕೊಳ್ಳದಿದ್ದರೆ ಮತ್ತು ಇಂತಹ ಕೃತ್ಯಗಳಲ್ಲಿ ಶಾಮೀಲಾಗುವುದನ್ನು ಮುಂದುವರಿಸಿದರೆ ಪ್ರಜಾಪ್ರಭುತ್ವಕ್ಕೆ ಮಾರಣಾಂತಿಕ ಹೊಡೆತ ಬೀಳುತ್ತದೆ ಎಂದು ಕಾಂಗ್ರೆಸ್ ಹೇಳಿದೆ.

ಬಿಜೆಪಿ ಅಭ್ಯರ್ಥಿಯ ಹೆಂಡತಿಯ ಕಾರಿನಲ್ಲಿ ಮತಯಂತ್ರ ಪತ್ತೆಯಾದ ವಿಡಿಯೊವು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. 'ಆಯೋಗದ ಕಾರು ಹಾಳಾಗಿದೆ. ಬಿಜೆಪಿಯ ಉದ್ದೇಶ ಕೆಟ್ಟದ್ದು ಮತ್ತು ಪ್ರಜಾಪ್ರಭುತ್ವದ ಸ್ಥಿತಿ ಶೋಚನೀಯ' ಎಂದು ರಾಹುಲ್ ಟ್ವೀಟ್ ಮಾಡಿದ್ದಾರೆ.

ಅಸ್ಸಾಂನಲ್ಲಿ ಭಾರಿ ಸೋಲು ಕಾದಿದೆ ಎಂಬುದು ಬಿಜೆಪಿಗೆ ಅರಿವಾಗಿದೆ. ಹಾಗಾಗಿಯೇ ಆ ಪಕ್ಷವು ಹೇಳಲಾಗದಷ್ಟು ದಿಗಿಲುಗೊಂಡಿದೆ ಎಂದು ಸುರ್ಜೇವಾಲಾ ಹೇಳಿದ್ದಾರೆ.

> **'ಮತಯಂತ್ರ ವಂಚನೆ' ಈಗ ಎಲ್ಲರ ಕಣ್ಣ ಮುಂದೆಯೇ ಇದೆ. ಮತಯಂತ್ರಗಳನ್ನು ಸಾಗಿಸಲು ಚುನಾವಣಾ ಆಯೋಗಕ್ಕೆ ಬಿಜೆಪಿಯ ನೆರವು ಬೇಕಿದೆಯೇ?**
> **ರಣದೀಪ್ ಸುರ್ಜೇವಾಲಾ,** ಕಾಂಗ್ರೆಸ್ ವಕ್ತಾರ

'ಹತಾಶೆಯ ಕೊನೆಯ ಕ್ರಮವೇ ಮತಯಂತ್ರ ಕಳ್ಳತನ. ಮತಯಂತ್ರವು ಬಿಜೆಪಿ ಅಭ್ಯರ್ಥಿ ಕೃಷ್ಣೇಂದು ಅವರ ಕಾರಿನಲ್ಲಿ ಹೇಗೆ ಬಂತು? ಅಸ್ಸಾಂನ ದಿಫು ಬಳಿಯ ಹಾತಿಪುರ ಮತಗಟ್ಟೆಯ ಬಳಿ ಐಷಾರಾಮಿ ಕಾರಿನ ಡಿಕ್ಕಿಯಲ್ಲಿ ಮತಯಂತ್ರ ಇರಿಸಿದ್ದು ಏಕೆ? ಆಯೋಗವು ಉತ್ತರಿಸುತ್ತದೆಯೇ' ಎಂದು ಅವರು ಪ್ರಶ್ನಿಸಿದ್ದಾರೆ.

ಭದ್ರತಾ ಸಿಬ್ಬಂದಿ ಇಲ್ಲದೆಯೇ ಮತಯಂತ್ರಗಳನ್ನು ಒಯ್ದದ್ದು ಏಕೆ? ಕಾಲೈಗಾಂವ್ ಮತಗಟ್ಟೆಯಿಂದ ಮತಯಂತ್ರ ಮಾಯವಾಗಿತ್ತು ಎಂದು ಮತದಾರರು ದೂರಿದ್ದು ನಿಜವೇ? ಯಾವ ತನಿಖೆ ನಡೆದಿದೆ? ಯಾವ ಕ್ರಮ ಕೈಗೊಳ್ಳಲಾಗಿದೆ? ಮತಯಂತ್ರಗಳನ್ನು ಇರಿಸಿದ ದಿಬ್ರುಗಡದ ಕೊಠಡಿಯಲ್ಲಿ ಅನುಮಾನಾಸ್ಪದ ಅಧಿಕಾರಿಯೊಬ್ಬರು ಇದ್ದದ್ದು ಹೌದೇ? ಈ ಪ್ರಕರಣದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ... ಹೀಗೆ ಹಲವು ಪ್ರಶ್ನೆಗಳನ್ನು ಅವರು ಕೇಳಿದ್ದಾರೆ.

139 ಮತಗಟ್ಟೆಗಳಲ್ಲಿ ಮತಯಂತ್ರಗಳಲ್ಲಿ ಗಂಭೀರ ಸಮಸ್ಯೆಗಳು ಕಾಣಿಸಿಕೊಂಡಿದ್ದವು. ಈ ವಿಚಾರದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಕೇಳಿದ್ದಾರೆ.

ಇಂತಹ ಘಟನೆಗಳು ಪದೇ ಪದೇ ನಡೆಯುತ್ತಿವೆ. ಚುನಾವಣೆಗಳು ಮತ್ತು ಮತಯಂತ್ರ ಸುರಕ್ಷತೆಯ ಬಗ್ಗೆ ಆಯೋಗವು ಜನರ ವಿಶ್ವಾಸವನ್ನು ಮರುಸ್ಥಾಪಿಸಬೇಕಿದೆ ಎಂದು ಕಾಂಗ್ರೆಸ್ ಮುಖಂಡ ರಾಜೀವ್ ಶುಕ್ಲಾ ಹೇಳಿದ್ದಾರೆ.

ನೀರಿನ ಬವಣೆ ಮಕ್ಕಳ ಭಾವನೆ

ಚಿತ್ರ ಸ್ಪರ್ಧೆ ವಿಜೇತರು

ಸೃಜನ ದೇಸಾಯಿ (ಧಾರವಾಡ), ಸಮನ್ವಿ ಆಳ್ವ – ಹನ್ಸಿಕಾ – ಸಾಚಿ (ಮಂಗಳೂರು), ಶಹನ (ಚಿಕ್ಕಮಗಳೂರು), ಪ್ರತೀಕ್ (ವಿಜಯಪುರ), ಮಿಷಿಕ– ಮಾನ್ಯ– ಅವನಿ ಭಟ್– ಓಂಕಾರ್ (ಬೆಂಗಳೂರು), ರುಚಿಕಾ (ಹಾವೇರಿ), ಕುಂತಲ್ ಜೈನ್– ಯಶಸ್ ಗೌಡ (ಮೈಸೂರು), ಅವನಿ – ನಿಶಾಂತ್ – ಪ್ರತೀಕ್ಷಾ – ಶಿವಾಂಶಿ (ಶಿವಮೊಗ್ಗ), ಸ್ವರಾಂಜಲಿ (ಬೆಳಗಾವಿ), ಭರತ್ (ಕುಣಿಗಲ್)

ಗಾಯ: ಶ್ರೇಯಸ್‌ಗೆ 8ರಂದು ಶಸ್ತ್ರಚಿಕಿತ್ಸೆ


ಶ್ರೇಯಸ್

ಮುಂಬೈ (ಪಿಟಿಐ): ಭುಜದ ಗಾಯದಿಂದ ಬಳಲುತ್ತಿರುವ ಭಾರತದ ಬ್ಯಾಟ್ಸ್‌ಮನ್ ಶ್ರೇಯಸ್ ಅಯ್ಯರ್, ಇದೇ 8ರಂದು ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದಾರೆ. ಇಂಗ್ಲೆಂಡ್ ವಿರುದ್ಧದ ಕೊನೆಯ ಎರಡು ಏಕದಿನ ಪಂದ್ಯಗಳಿಂದ ಹೊರಗುಳಿದಿದ್ದ ಅವರು, ಐಪಿಎಲ್ ಟೂರ್ನಿಗೂ ಅಲಭ್ಯರಾಗಿದ್ದಾರೆ.

ಮಾರ್ಚ್ 23ರಂದು ಪುಣೆಯಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯದ ವೇಳೆ ಜಾನಿ ಬೆಸ್ಟೊ ಹೊಡೆದ ಚೆಂಡನ್ನು ತಡೆಯುವ ಯತ್ನದಲ್ಲಿ ಅಯ್ಯರ್, ಭುಜಕ್ಕೆ ಗಾಯಮಾಡಿಕೊಂಡಿದ್ದರು. ತೀವ್ರನೋವಿನಿಂದಾಗಿ ಅವರು ಭುಜ ಹಿಡಿದುಕೊಂಡೇ ಮೈದಾನದಿಂದ ಹೊರ ನಡೆದಿದ್ದರು.

‘ಭುಜದ ಗಾಯದಿಂದ ಬಳಲುತ್ತಿರುವ ಶ್ರೇಯಸ್, ಏಪ್ರಿಲ್ 8 ರಂದು ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಭಾರತ–ಇಂಗ್ಲೆಂಡ್ ಕ್ರಿಕೆಟ್ ಸರಣಿಗಳಲ್ಲಿ ಮೆಚ್ಚುಗೆ ಗಳಿಸಿದ ಅಂಪೈರ್

ಮೆನನ್‌ಗೆ ಒತ್ತಡ ನಿರ್ವಹಿಸಿದ ಖುಷಿ


ನಿತಿನ್ ಮೆನನ್ (ಬಲ) ಹಾಗೂ ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ – ಬಿಸಿಸಿಐ ವೆಬ್‌ಸೈಟ್ ಚಿತ್ರ

ನವದೆಹಲಿ (ಪಿಟಿಐ): ‘ಆಟಗಾರರಂತೆ ಅಂಪೈರ್‌ಗಳೂ ಒತ್ತಡಕ್ಕೆ ಸಿಲುಕುವ ಸಂದರ್ಭಗಳು ಕೆಲವೊಮ್ಮೆ ಸೃಷ್ಟಿಯಾಗುತ್ತವೆ. ನಾನು ಅವುಗಳನ್ನು ನನ್ನ ಕೌಶಲ ವೃದ್ಧಿಗೆ ಬಳಸಿಕೊಂಡಿದ್ದೇನೆ’ ಎಂದು ಐಸಿಸಿ ಎಲೀಟ್ ಪ್ಯಾನಲ್ ಅಂಪೈರ್ ಭಾರತದ ನಿತಿನ್ ಮೆನನ್ ಹೇಳಿದರು.

ಇಂದೋರ್‌ನ 37 ವರ್ಷದ ನಿತಿನ್ ಅವರನ್ನು ಕಳೆದ ವರ್ಷದ ಜೂನ್‌ನಲ್ಲಿ ಎಲೀಟ್ ಪ್ಯಾನಲ್‌ಗೆ ಸೇರಿಸಲಾಗಿತ್ತು. ಎಸ್.ವೆಂಕಟರಾಘವನ್ ಮತ್ತು ಎಸ್. ರವಿ ನಂತರ ಈ ಗೌರವಕ್ಕೆ ಪಾತ್ರರಾದ ಭಾರತದ ಅಂಪೈರ್ ಆಗಿದ್ದಾರೆ ಅವರು. ಆದರೆ ಎಲೀಟ್ ಪ್ಯಾನಲ್ ಸೇರಿದ ಮೇಲೆ ಮೊದಲ ಪಂದ್ಯದಲ್ಲಿ ಕಾರ್ಯನಿರ್ವಹಿಸಲು ಈ ವರ್ಷದ ಫೆಬ್ರುವರಿ ವರೆಗೆ ಕಾಯಬೇಕಾಗಿತ್ತು.

ಕೋವಿಡ್ ಆತಂಕದಿಂದಾಗಿ ಐಸಿಸಿ ಈಚೆಗೆ ದ್ವಿಪಕ್ಷೀಯ ಸರಣಿಗಳಿಗೆ ಸ್ಥಳೀಯ ಅಂಪೈರ್‌ಗಳನ್ನೇ ನಿಯೋಜಿಸುತ್ತಿದೆ. ಹೀಗಾಗಿ ಭಾರತ ಮತ್ತು ಇಂಗ್ಲೆಂಡ್ ನಡುವಿನ ಸರಣಿಗಳಲ್ಲಿ ನಿತಿನ್‌ಗೆ ಸುಲಭವಾಗಿ ಅವಕಾಶ ಲಭಿಸಿತ್ತು. ಎಲ್ಲ ನಾಲ್ಕು ಟೆಸ್ಟ್‌ಗಳಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದ ಅವರು 5 ಟಿ20 ಪಂದ್ಯಗಳ ಪೈಕಿ ಮೂರರಲ್ಲಿ ಮತ್ತು 3 ಏಕದಿನ ಪಂದ್ಯಗಳಲ್ಲಿ ತೀರ್ಪು ನೀಡಿದ್ದು, ಮೆಚ್ಚುಗೆ ಗಳಿಸಿದ್ದಾರೆ. ಐಪಿಎಲ್‌ಗಾಗಿ ಈಗ ಚೆನ್ನೈನಲ್ಲಿ ಕ್ವಾರಂಟೈನ್‌ನಲ್ಲಿದ್ದಾರೆ.

‘ಹಿಂದಿನ ಎರಡು ತಿಂಗಳು ನನ್ನ ಪಾಲಿಗೆ ಮಹತ್ವದ್ದಾಗಿದ್ದವು. ಉತ್ತಮವಾಗಿ ಕಾರ್ಯನಿರ್ವಹಿಸಿರುವುದಾಗಿ ಜನರು ಅಭಿನಂದನೆಯ ನುಡಿಗಳನ್ನಾಡಿದ್ದಾರೆ. ಇದರಿಂದ ಖುಷಿಯಾಗಿದೆ. ಭಾರತ ಮತ್ತು ಇಂಗ್ಲೆಂಡ್ ನಡುವಿನ ಟೆಸ್ಟ್ ಸರಣಿ ಸವಾಲಿನದ್ದಾಗಿತ್ತು. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್ ಮೇಲೆ ಕಣ್ಣಿಟ್ಟು ಎರಡೂ ತಂಡಗಳು ಕಣಕ್ಕೆ ಇಳಿದಿದ್ದವು. ಟಿ20 ಮತ್ತು ಏಕದಿನ ಸರಣಿಯಲ್ಲಿ ಎರಡು ಪ್ರಮುಖ ತಂಡಗಳ ನಡುವಿನ ಪಂದ್ಯಗಳಲ್ಲಿ ಅಂಪೈರ್ ಆಗಿ ಇರಬೇಕಾಗಿತ್ತು. ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿ ನೋಡಿದರೆ ಮೂರೂ ಸರಣಿಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಸಂತೃಪ್ತಿ ಇದೆ’ ಎಂದು ಅವರು ಅಭಿಪ್ರಾಯಪಟ್ಟರು.

ಎರಡು ಬಲಿಷ್ಠ ತಂಡಗಳು ಸೆಣಸುತ್ತಿದ್ದರೆ ಮೆನನ್ ಶಾಂತಚಿತ್ತರಾಗಿ ವಿಕೆಟ್ ಬಳಿ ನಿಂತಿದ್ದರು. ಅವರು ನೀಡಿದ ತೀರ್ಪುಗಳಿಗೆ ವಿರುದ್ಧವಾಗಿ 40 ಬಾರಿ ಮೂರನೇ ಅಂಪೈರ್‌ಗೆ ಮನವಿ ಸಲ್ಲಿಸಲಾಗಿತ್ತು. ಈ ಪೈಕಿ ಐದರಲ್ಲಿ ಮಾತ್ರ ತೀರ್ಪು ಬದಲಿಸಲಾಗಿತ್ತು. ಎಲ್‌ಬಿಡಬ್ಲ್ಯುಗೆ ಸಂಬಂಧಿಸಿ 35 ತೀರ್ಪುಗಳ ಮರುಪರಿಶೀಲನೆಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಎರಡರಲ್ಲಿ ಮಾತ್ರ ತೀರ್ಪು ಬದಲಿಸಬೇಕಾಗಿ ಬಂದಿತ್ತು.

ವಿಶ್ವಕಪ್ ಗೆಲುವು ಚಿರಂತನ: ಯುವರಾಜ್


ಯುವರಾಜ್

ನವದೆಹಲಿ: ಏಕದಿನ ವಿಶ್ವಕಪ್ ಗೆಲುವು ಚಿರಂತನವಾಗಿದ್ದು, ಕ್ರಿಕೆಟ್ ವೃತ್ತಿ ಜೀವನದಲ್ಲಿ ಅದಕ್ಕೆ ಯಾವುದೂ ಪರ್ಯಾಯವಾಗಲಾರದು ಎಂದು 2011ರ ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರ ಯುವರಾಜ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ.

ದಶಕದ ಹಿಂದೆ ಅಂದಿನ ಆ ದಿನದಂದು (ಏಪ್ರಿಲ್ 2, 2011), ಭಾರತ 28 ವರ್ಷಗಳ ಬಳಿಕ ಏಕದಿನ ವಿಶ್ವಕಪ್ ಪ್ರಶಸ್ತಿ ಜಯಿಸಿತ್ತು. ಟೂರ್ನಿಯಲ್ಲಿ ಬೌಲಿಂಗ್ ಹಾಗೂ ಬ್ಯಾಟಿಂಗ್‌ನಲ್ಲಿ ಅಮೋಘ ಪ್ರದರ್ಶನ ನೀಡಿದ್ದ ಯುವರಾಜ್ ಸಿಂಗ್, ಅರ್ಹವಾಗಿಯೇ ಸರಣಿಶ್ರೇಷ್ಠ ಪ್ರಶಸ್ತಿಗೆ ಭಾಜನವಾಗಿದ್ದರು.

ಕ್ಯಾನ್ಸರ್ ರೋಗಕ್ಕೆ ತುತ್ತಾಗಿದ್ದ ಯುವರಾಜ್, ಅತೀವ ನೋವಿನಲ್ಲೂ ದೇಶಕ್ಕಾಗಿ ಕ್ರಿಕೆಟ್ ಆಡಿ ಟೂರ್ನಿಯಲ್ಲಿ ಒಟ್ಟು 362 ರನ್ ಮತ್ತು 15 ವಿಕೆಟ್‌ಗಳನ್ನು ಕಬಳಿಸಿದ್ದರು.

‘ನಾವು ವಿಶ್ವಕಪ್ ಗೆದ್ದು 10 ವರ್ಷಗಳು ಕಳೆದಿವೆ. ಸಮಯ ಇಷ್ಟು ಬೇಗ ಸಾಗಿದೆ. ಇಡೀ ತಂಡವೇ ವಿಶೇಷವಾಗಿ, ಕೊನೆಯ ವಿಶ್ವಕಪ್ ಆಡಿದ್ದ ಸಚಿನ್ ತೆಂಡೂಲ್ಕರ್ ಅವರಿಗಾಗಿ ತವರಿನಲ್ಲಿ ಟ್ರೋಫಿ ಜಯಿಸಲು ಬಯಸಿದ್ದೆವು. ಇದು ನಮ್ಮ ಪಾಲಿಗೆ ವಿಶೇಷ. ಆ ಭಾವನೆಗಳನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ’ ಎಂದು ಯುವರಾಜ್ ಟ್ವೀಟ್ ಮಾಡಿದ್ದಾರೆ.

ಸುದ್ದಿ 2 ನಿಮಿಷ

ರೊನಾಲ್ಡೊ ಆರ್ಮ್‌ಬ್ಯಾಂಡ್‌ಗೆ ₹ 55 ಲಕ್ಷ

ಬೆಲ್‌ಗ್ರೇಡ್ (ಎಪಿ): ಪೋರ್ಚುಗಲ್ ತಂಡದ ನಾಯಕ ಕ್ರಿಸ್ಟಿಯಾನೊ ರೊನಾಲ್ಡೊ ಹೋದ ವಾರ ನಡೆದಿದ್ದ ಫಿಫಾ ವಿಶ್ವಕಪ್ ಕ್ವಾಲಿಫೈಯರ್ ಪಂದ್ಯದಲ್ಲಿ ಸಿಟ್ಟಿನಿಂದ ಬೀಸಾಕಿದ್ದ ಆರ್ಮ್‌ಬ್ಯಾಂಡ್ ಈಗ ₹ 55 ಲಕ್ಷಕ್ಕೆ ಮಾರಾಟವಾಗಿದೆ.

ಸರ್ಬಿಯಾದಲ್ಲಿ ಬೆನ್ನುಹುರಿಯ ಸಮಸ್ಯೆಯಿಂದ ಬಳಲುತ್ತಿರುವ ಆರು ತಿಂಗಳ ಗಂಡುಮಗುವಿನ ಚಿಕಿತ್ಸೆಗೆ ಈ ಹಣ ನೀಡಲಾಗಿದೆ ಎಂದು ಸರ್ಬಿಯನ್ ಸ್ಟೇಟ್ ಟಿವಿ ವರದಿ ಮಾಡಿದೆ. ನೀಲಿ ಬಣ್ಣದ ಆರ್ಮ್‌ಬ್ಯಾಂಡ್ (ತೋಳುಪಟ್ಟಿ) ಅನ್ನು ಆನ್‌ಲೈನ್‌ನಲ್ಲಿ ಮಾನವಿಕ ಸಂಘಟನೆಯೊಂದು ಬಿಡ್ ಮಾಡಿತು. ಆದರೆ ಕೆಲವು ಕಿಡಿಗೇಡಿಗಳು ಬಿಡ್ ಪ್ರಕ್ರಿಯೆಗೆ ತಡೆಯೊಡ್ಡುವ ಪ್ರಯತ್ನ ಮಾಡಿದರು. ನಕಲಿ ಖಾತೆಗಳ ಮೂಲಕ ಅತಿ ದೊಡ್ಡ ಮೊತ್ತಗಳನ್ನು ಬಿಡ್ ಮಾಡಿದರು. ಸ್ಥಳೀಯ ಪೊಲೀಸರು ಅಂತಹವರ ವಿರುದ್ಧ ದೂರು ದಾಖಲಿಸಿದ್ದಾರೆ.

ಹೋದ ಶನಿವಾರ ಇಲ್ಲಿ ನಡೆದಿದ್ದ ಪೋರ್ಚುಗಲ್ ಮತ್ತು ಸರ್ಬಿಯಾ ನಡುವಣ ಪಂದ್ಯವು 2–2ರಲ್ಲಿ ಸಮಬಲವಾಗಿತ್ತು. ಇಂಜುರಿ ಟೈಮ್‌ನಲ್ಲಿ ಗಳಿಸಿದ ಗೋಲಿಗೆ ರೆಫರಿ ಮಾನ್ಯತೆ ನೀಡದ ಕಾರಣ ರೊನಾಲ್ಡೊ ಅಂಗಣ ತೊರೆದು ಹೊರನಡೆದಿದ್ದರು. ಡ್ರೆಸ್ಸಿಂಗ್ ರೂಮ್‌ಗೆ ತೆರಳುವ ಹಾದಿಯಲ್ಲಿ ಅಂಗಣದ ಟಚ್‌ಲೈನ್ ಬಳಿ ತಮ್ಮ ತೋಳುಪಟ್ಟಿಯನ್ನು ಬೀಸಾಕಿದ್ದರು. ಆಗ ಅವರ ನಡವಳಿಕೆಯ ಬಗ್ಗೆ ಟೀಕೆ ವ್ಯಕ್ತವಾಗಿದ್ದವು. ಫಿಫಾ ಅವರ ಮೇಲೆ ಕ್ರಮ ಕೈಗೊಳ್ಳುವ ಸಾಧ್ಯತೆಯೂ ಇದೆ.

ಆ ವೇಳೆ ಅಲ್ಲಿಯೇ ಇದ್ದ ಅಗ್ನಿಶಾಮಕ ದಳದ ಸಿಬ್ಬಂದಿ, ಅದನ್ನು ತೆಗೆದುಕೊಂಡು ಚಾರಿಟಿ ಸಂಸ್ಥೆಗೆ ನೀಡಿದ್ದರು.



‘ಸ್ಪಿನ್ ಪಿಚ್; ಎಚ್ಚರಿಕೆ ನೀಡಿದ್ದ ಕೊಹ್ಲಿ’

ಲಂಡನ್ (ಪಿಟಿಐ): ‘ಈ ಸರಣಿಯಲ್ಲಿ ನೀವು ಸಪಾಟಾದ ಪಿಚ್‌ನಲ್ಲಿ ಆಡುವುದು ಇದೊಂದೇ ಪಂದ್ಯ’ –ಈಚೆಗೆ ಅಹಮದಾಬಾದಿನ ಮೊಟೇರಾದಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಎದುರಾಳಿ ಬ್ಯಾಟ್ಸ್‌ಮನ್ ಒಲಿ ಪೋಪ್ ಅವರಿಗೆ ಹೇಳಿದ್ದ ಮಾತಿದು.

‘ಆ ಮಾತು ನನಗೆ ಇನ್ನೂ ನೆನಪಿದೆ. ನಾನು ನಾನ್‌ಸ್ಟ್ರೈಕರ್ ತುದಿಯಲ್ಲಿದ್ದೆ. ಕೊಹ್ಲಿ ನನ್ನ ಬಳಿ ಬಂದು ಫ್ಲ್ಯಾಟ್ ವಿಕೆಟ್ ಇದೇ ಕೊನೆಯದು ಎಂದಿದ್ದರು. ಆ ಮಾತಿನ ಬಗ್ಗೆ ಯೋಚಿಸಿದೆ. ಮುಂದಿನ ಪಂದ್ಯಗಳಲ್ಲಿ ಬ್ಯಾಟಿಂಗ್‌ಗೆ ಕಠಿಣ ಸವಾಲೊಡ್ಡಲಿವೆಂಬುದು ಹೊಳೆಯಿತು’ ಎಂದು ಪೋಪ್ ಹೇಳಿದ್ದಾರೆ.

‘ಆ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಚೆಂಡು ಸ್ಪಿನ್ ಆಗುತ್ತಿತ್ತು. ಅದನ್ನು ಗಮನಿಸಿದ್ದ ವಿರಾಟ್ ಆ ರೀತಿ ಹೇಳಿದ್ದರು’ ಎಂದು ಇಎಸ್‌ಪಿಎನ್‌ಕ್ರಿಕ್‌ಇನ್ಫೋಗೆ ನೀಡಿರುವ ಸಂದರ್ಶನದಲ್ಲಿ ಪೋಪ್ ಹೇಳಿದ್ದಾರೆ.

ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು ಮೊದಲು ಬ್ಯಾಟಿಂಗ್ ಮಾಡಿತ್ತು. ನಾಯಕ ಜೋರೂಟ್ ಅವರ ದ್ವಿಶತಕದ ಬಲದಿಂದ 578 ರನ್‌ಗಳನ್ನು ಪೇರಿಸಿತ್ತು. ಪೋಪ್ 89 ಎಸೆತಗಳಲ್ಲಿ 34 ರನ್ ಗಳಿಸಿದ್ದರು. ಆ ಪಂದ್ಯದಲ್ಲಿ ಇಂಗ್ಲೆಂಡ್ 227 ರನ್‌ಗಳಿಂದ ಗೆದ್ದಿತ್ತು.

‘ನಮ್ಮ ತಂಡದ ಅನುಭವಿಗಳಾದ ರೂಟ್ ಮತ್ತು ಬೆನ್ ಸ್ಟೋಕ್ಸ್ ಕೂಡ ವಿರಾಟ್ ಹೇಳಿದ್ದ ಮಾತನ್ನೇ ಪುನರುಚ್ಚಿಸಿದ್ದರು. ಮುಂದಿನ ಹಂತವು ಕ್ಲಿಷ್ಟವಾಗಲಿದೆ ಎಂಬುದು ಅರ್ಥವಾಗಿತ್ತು. ಉಳಿದ ಪಂದ್ಯಗಳಲ್ಲಿ ಸ್ಪಿನ್ ಬೌಲಿಂಗ್ ಎದುರಿಸುವುದು ದೊಡ್ಡ ಸವಾಲಾಯಿತು’ ಎಂದರು.

ಎಐಟಿಎ–ಕೆಎಸ್‌ಎಲ್‌ಟಿಎ ಟೆನಿಸ್ ಟೂರ್ನಿ: ವನ್ಯಾಗೆ ಕಿರೀಟ

ಕ್ರಿಷ್‌ಗೆ ಪ್ರಶಸ್ತಿ ‘ಡಬಲ್’

ಪ್ರಜಾವಾಣಿ ವಾರ್ತೆ



ಪ್ರಶಸ್ತಿಗಳೊಂದಿಗೆ ವನ್ಯಾ ಶ್ರೀವಾತ್ಸವ್ ಹಾಗೂ ಕ್ರಿಷ್ ಅಜಯ್ ತ್ಯಾಗಿ

ಬೆಂಗಳೂರು: ಭರ್ಜರಿ ಆಟವಾಡಿದ ಕ್ರಿಷ್ ಅಜಯ್ ತ್ಯಾಗಿ ಇಲ್ಲಿ ನಡೆದ ಎಐಟಿಎ–ಕೆಎಸ್‌ಎಲ್‌ಟಿಎ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗಗಳಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡರು. ಶುಕ್ರವಾರ ಕೊನೆಗೊಂಡ ಟೂರ್ನಿಯ ಬಾಲಕಿಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿಯು ವನ್ಯಾ ಶ್ರೀವಾತ್ಸವ್ ಅವರ ಪಾಲಾಯಿತು.

ಬಾಲಕರ ಸಿಂಗಲ್ಸ್ ಫೈನಲ್ ಹಣಾಹಣಿಯಲ್ಲಿ ಕ್ರಿಷ್ 6–1, 6–2ರಿಂದ ಶ್ರೀನಿಕೇತ್ ಕಣ್ಣನ್ ಅವರನ್ನು ಪರಾಭವಗೊಳಿಸಿದರು. ಡಬಲ್ಸ್‌ನಲ್ಲಿ ಅನೂಪ್ ಕೇಶವಮೂರ್ತಿ ಜೊತೆಗೂಡಿದ ಕ್ರಿಷ್ 2–6, 6–1 (10–5)ರಿಂದ ಅಗ್ರಶ್ರೇಯಾಂಕದ ಜೇಸನ್ ಮೈಕೆಲ್ ಡೇವಿಡ್–ಶ್ರೀನಿಕೇತ್ ಜೋಡಿಯನ್ನು ಸೋಲಿಸಿದರು.

ಶ್ರೀ ತನ್ವಿ ದಾಸರಿ ಎದುರು 6-3, 6-3 ರಿಂದ ಗೆದ್ದ ವನ್ಯಾ ಬಾಲಕಿಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿಗೆ ಮುತ್ತಿಕ್ಕಿದರು.

ಬಾಲಕಿಯರ ಡಬಲ್ಸ್ ವಿಭಾಗದ ಪ್ರಶಸ್ತಿಯನ್ನು ಹರ್ಷಿಣಿ ಎನ್–ದಿಶಾ ಸಂತೋಷ್ ಖಂಡೋಜಿ ಜೋಡಿ ಗೆದ್ದುಕೊಂಡಿತು.

ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅವರು 6-3, 6-2ರಿಂದ ವನ್ಯಾ ಶ್ರೀವಾತ್ಸವ್–ಗಗನಾ ಮೋಹನ್ ಕುಮಾರ್ ಅವರನ್ನು ಪರಾಭವಗೊಳಿಸಿದರು.

ಫುಟ್‌ಬಾಲ್: ವಿದೇಶಿ ಆಟಗಾರರ ಸೇರ್ಪಡೆಗೆ ಸ್ಟಿಮ್ಯಾಚ್ ಆಸಕ್ತಿ


ಇಗರ್ ಸ್ಟಿಮ್ಯಾಚ್–ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ರಾಷ್ಟ್ರೀಯ ಫುಟ್‌ಬಾಲ್ ತಂಡಕ್ಕೆ ವಿದೇಶಗಳಲ್ಲಿ ನೆಲೆಸಿರುವ ಭಾರತ ಮೂಲದ ಆಟಗಾರರನ್ನು (ಒಸಿಐ) ಸೇರ್ಪಡೆಗೊಳಿಸುವ ಕುರಿತು ತಂಡದ ಕೋಚ್ ಇಗರ್ ಸ್ಟಿಮ್ಯಾಚ್ ಆಸಕ್ತಿ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ದುಬೈನಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ ಎದುರು ನಡೆದ ಸ್ನೇಹಪರ ಪಂದ್ಯದಲ್ಲಿ ಯುವ ಆಟಗಾರರನ್ನು ಹೊಂದಿದ್ದ ಭಾರತ ತಂಡ 0–6 ಗೋಲುಗಳ ಸೋಲು ಅನುಭವಿಸಿತ್ತು. ಹೀಗಾಗಿ ವಿದೇಶಿ ಆಟಗಾರರ ಸೇರ್ಪಡೆ ವಿಷಯವನ್ನು ಸ್ಟಿಮ್ಯಾಚ್ ಮುನ್ನೆಲೆಗೆ ತಂದಿದ್ದಾರೆ.

‘ಅಫ್ಗಾನಿಸ್ತಾನ ಹಾಗೂ ಬಾಂಗ್ಲಾದೇಶ ತಂಡಗಳಿಗೆ ಹೋಲಿಸಿದಾಗ ನಾವು, ನಮ್ಮತನದ ಬಗ್ಗೆ ಹೆಚ್ಚು ಒಲವು ಹೊಂದಿದ್ದೇವೆ ಎಂದೆನಿಸುತ್ತದೆ’ ಎಂದು ಸ್ಟಿಮ್ಯಾಚ್ ಹೇಳಿದ್ದಾಗಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಉಲ್ಲೇಖಿಸಿದೆ.

‘ಅಫ್ಗಾನಿಸ್ತಾನ ರಾಷ್ಟ್ರೀಯ ತಂಡದ ಪರ ಆಡಲು ವಿದೇಶಿ ಆಟಗಾರರಿಗೆ ಅವಕಾಶ ಮಾಡಿಕೊಟ್ಟಿದೆ. ಯೂರೋಪಿಯನ್ ಲೀಗ್‌ಗಳಲ್ಲಿ ಆಡಿದ 13 ಆಟಗಾರರು ಸದ್ಯ ಆ ತಂಡದಲ್ಲಿದ್ದಾರೆ. ಜರ್ಮನಿ, ಪೋಲೆಂಡ್, ಫಿನ್ಲೆಂಡ್ ಹಾಗೂ ನೆದರ್ಲೆಂಡ್‌ನಲ್ಲಿ ಇವರು ಆಡಿದ್ದಾರೆ. ಬಾಂಗ್ಲಾದೇಶ ತಂಡವೂ 3 + 1 ವಿಧಾನವನ್ನು ಅಳವಡಿಸಿಕೊಂಡಿದೆ’ ಎಂದು ಸ್ಟಿಮ್ಯಾಚ್ ಪ್ರತಿಪಾದಿಸಿದ್ದಾರೆ.

2019ರ ಮೇ ತಿಂಗಳಿಂದ ಭಾರತ ತಂಡ ಆಡಿರುವ ಪಂದ್ಯಗಳಲ್ಲಿ ಥಾಯ್ಲೆಂಡ್ ಎದುರು ಮಾತ್ರ ಗೆಲುವು ಸಾಧಿಸಿದೆ. ಈ ಹಿಂದೆ ತರಬೇತುದಾರರಾಗಿದ್ದ ಸ್ಟೀಫನ್ ಕಾನ್‌ಸ್ಟಂಟೈನ್ ಕೂಡ ವಿದೇಶಿ ಆಟಗಾರರ ಸೇರ್ಪಡೆ ಬಗ್ಗೆ ಪ್ರಸ್ತಾಪಿಸಿದ್ದರು.

ಒಲಿಂಪಿಕ್ಸ್: ಡೈವಿಂಗ್ ಅರ್ಹತೆ ಸ್ಪರ್ಧೆ ರದ್ದು?

ಟೋಕಿಯೊ (ರಾಯಿಟರ್ಸ್): ಒಲಿಂಪಿಕ್ಸ್ ಈಜು ಸ್ಪರ್ಧೆಯ ಡೈವಿಂಗ್ ವಿಭಾಗದ ಅರ್ಹತಾ ಸುತ್ತಿನ ಕುರಿತು ಮರುಪರಿಶೀಲನೆ ನಡೆಸಲು ಅಂತರರಾಷ್ಟ್ರೀಯ ಈಜು ಫೆಡರೇಷನ್ (ಫಿನಾ) ನಿರ್ಧರಿಸಿದೆ. ಕೊವಿಡ್–19ರಿಂದಾಗಿ ಈ ಸ್ಪರ್ಧೆಯನ್ನು ರದ್ದುಪಡಿಸುವ ಸಾಧ್ಯತೆ ಇದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಅರ್ಹತಾ ಸುತ್ತಿನ ಸ್ಪರ್ಧೆ ಈ ತಿಂಗಳ 18ರಿಂದ 23ರವರೆಗೆ ನಡೆಸಲು ನಿರ್ಧರಿಸಲಾಗಿದೆ. ಆದರೆ ಈ ಬಗ್ಗೆ ಇನ್ನೂ ಸರಿಯಾದ ನಿರ್ಧಾರ ಕೈಗೊಳ್ಳಲಿಲ್ಲ ಎಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು.

ಬಾಬರ್ ಶತಕ: ಪಾಕ್‌ಗೆ ರೋಚಕ ಜಯ

ಸೆಂಚುರಿಯನ್ : ಶುಕ್ರವಾರ ರಾತ್ರಿ ಕೊನೆಯ ಎಸೆತದವರೆಗೂ ಕುತೂಹಲ ಕೆರಳಿಸಿದ್ದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಪಾಕಿಸ್ತಾನ ತಂಡವು 3 ವಿಕೆಟ್‌ಗಳಿಂದ ದಕ್ಷಿಣ ಆಫ್ರಿಕಾ ಎದುರು ಜಯಿಸಿತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 50 ಓವರ್‌ಗಳಲ್ಲಿ 6ಕ್ಕೆ273 (ವ್ಯಾನ್ ಡರ್ ಡಸೆ 123, ಡೇವಿಡ್ ಮಿಲ್ಲರ್ 50, ಆ್ಯಂಡಿಲೆ ಪಿಶುವಾಯೊ 29, ಶಾಹೀನ್ ಆಫ್ರಿದಿ 61ಕ್ಕೆ2, ಹ್ಯಾರಿಸ್ ರವೂಫ್ 72ಕ್ಕೆ2) ಪಾಕಿಸ್ತಾನ: 50 ಓವರ್‌ಗಳಲ್ಲಿ 7ಕ್ಕೆ274 (ಇಮಾಮ್ ಉಲ್ ಹಕ್ 70, ಬಾಬರ್ ಆಜಂ 103, ಮೊಹಮ್ಮದ್ ರಿಜ್ವಾನ್ 40, ಶಾದಾಬ್ ಖಾನ್ 33, ಎನ್ರಿಚ್ ನಾಕಿಯಾ 51ಕ್ಕೆ4, ಆ್ಯಂಡಿಲೆ ಪಿಶುವಾಯೊ 56ಕ್ಕೆ2) ಫಲಿತಾಂಶ: ಪಾಕಿಸ್ತಾನ ತಂಡಕ್ಕೆ 3 ವಿಕೆಟ್‌ಗಳ ಜಯ

ಸಂತೋಷ್ ನಾಲ್ಕು ಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂತೋಷ್ ತಮಾಟ ಗಳಿಸಿದ ನಾಲ್ಕು ಗೋಲುಗಳ ನೆರವಿನಿಂದ ಡಿವೈಇಎಸ್ ಎಫ್‌ಸಿ ತಂಡವು ಬಿಡಿಎಫ್‌ಎ ಬಿ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು. ಇಲ್ಲಿಯ ಬಿಎಫ್‌ಎಸ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಬಿ ಗುಂಪಿನ ಹಣಾಹಣಿಯಲ್ಲಿ 5–0 ಗೋಲುಗಳಿಂದ ಸನ್‌ರೈಸ್ ಎಫ್‌ಸಿ ತಂಡವನ್ನು ಮಣಿಸಿತು.

ಲೆನಾಲ್ಡ್ ಕಾರ್ಲ್ ಮಾರ್ಕ್ (9ನೇ ನಿಮಿಷ) ವಿಜೇತ ತಂಡದ ಮೊದಲ ಗೋಲು ಹೊಡೆದರು. ಸಂತೋಷ್ 26, 35 + 2, 49 ಹಾಗೂ 70ನೇ ನಿಮಿಷಗಳಲ್ಲಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಬಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಎಚ್‌ಎಎಲ್ ಎಫ್‌ಸಿ 8–0ಯಿಂದ ಬೆಂಗಳೂರು ಮಾರ್ಸ್ ತಂಡವನ್ನು ಪರಾಭವಗೊಳಿಸಿತು. ಎಚ್‌ಎಎಲ್ ತಂಡದ ರವಿತೇಜ ವೈ.ಆರ್. (47 ಹಾಗೂ 63ನೇ ನಿ.) ಎರಡು ಬಾರಿ ಕಾಲ್ಚಳಕ ತೋರಿದರು. ಮಲಿಕ್ ಲಾಜಿಂ (6ನೇ ನಿ.), ಸ್ವಮ್ಯ ಹಾರ್ದಿಕ ಸಿಂಗ್ (13ನೇ ನಿ.), ರೋಮನ್ ಸುಬ್ಬ (27ನೇ ನಿ.), ಶ್ಯಾಮ್ ಜೋಸ್ (35ನೇ ನಿ.), ಶಕತ್ ದಾಸ್ (45ನೇ ನಿ.) ಹಾಗೂ ಅಂಕಿತ್ ಕುಮಾರ್ (70 + 3ನೇ ನಿ.) ತಲಾ ಒಂದು ಗೋಲು ದಾಖಲಿಸಿದರು.

ಎ ಗುಂಪಿನ ಪಂದ್ಯದಲ್ಲಿ ಮಹಮ್ಮಡನ್ ಸ್ಪೋರ್ಟಿಂಗ್ ಎಫ್‌ಸಿ 2–1ರಿಂದ ಆರ್.ಎಸ್. ಸ್ಪೋರ್ಟ್ಸ್ ತಂಡದ ವಿರುದ್ಧ ಗೆದ್ದಿತು.

ಇಂಗ್ಲೆಂಡ್ ಕ್ರಿಕೆಟಿಗ ಏಯಾನ್ ಮಾರ್ಗನ್

ಟೂರ್ನಿಯು ಹೋದ ವರ್ಷವೇ ಇಂಗ್ಲೆಂಡ್‌ನಲ್ಲಿ ಆರಂಭವಾಗಬೇಕಿತ್ತು. ಆದರೆ ಕೋವಿಡ್ –19 ಕಾರಣದಿಂದ ಮುಂದೂಡಲಾಯಿತು.

ದ ಹಂಡ್ರೆಡ್ ಟೂರ್ನಿಯತ್ತ ಭಾರತದ ಆಟಗಾರರ ಒಲವು

ಕೋಲ್ಕತ್ತ (ಪಿಟಿಐ): ತಮ್ಮ ದೇಶದಲ್ಲಿ ಆರಂಭವಾಗಲಿರುವ ದ ಹಂಡ್ರೆಡ್ ಕ್ರಿಕೆಟ್ ಲೀಗ್ ಟೂರ್ನಿಯಲ್ಲಿ ಆಡಲು ಭಾರತದ ಹಲವು ಆಟಗಾರರು ಉತ್ಸುಕರಾಗಿದ್ದಾರೆ ಎಂದು ಇಂಗ್ಲೆಂಡ್ ಏಕದಿನ ಕ್ರಿಕೆಟ್ ತಂಡದ ನಾಯಕ ಏಯಾನ್ ಮಾರ್ಗನ್ ಹೇಳಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕತ್ವ ವಹಿಸಿರುವ ಮಾರ್ಗನ್ ಶುಕ್ರವಾರ ‘ಸ್ಕೈ ಸ್ಪೋರ್ಟ್ಸ್’ ವಾಹಿನಿ ಕಾರ್ಯಕ್ರಮದಲ್ಲಿ ಈ ಹೇಳಿಕೆ ನೀಡಿದ್ದಾರೆ.



‘ನೂರು ಎಸೆತಗಳ ಪಂದ್ಯಗಳಿರುವ ದ ಹಂಡ್ರೆಡ್ ಟೂರ್ನಿಯು ಬಹಳಷ್ಟು ಕ್ರಿಕೆಟಿಗರನ್ನು ಆಕರ್ಷಿಸುತ್ತಿದೆ. ಈ ಟೂರ್ನಿಯ ಕುರಿತು ಭಾರತದ ಹಲವು ಕ್ರಿಕೆಟಿಗರೊಂದಿಗ ನಡೆದ ಮಾತುಕತೆಗಳಲ್ಲಿ ನಾನು ಗಮನಿಸಿದ್ದೇನೆ. ಭಾರತೀಯ ಆಟಗಾರರು ಈ ಟೂರ್ನಿಯತ್ತ ಹೆಚ್ಚು ಒಲವು ತೋರುತ್ತಿದ್ದಾರೆ. ಅಲ್ಲದೇ ಜಗತ್ತಿನ ಬೇರೆ ಬೇರೆ ಕಡೆ ನಡೆಯುತ್ತಿರುವ ಫ್ರ್ಯಾಂಚೈಸಿ ಲೀಗ್ ಟೂರ್ನಿಗಳಲ್ಲಿ ಆಡುವ ಆಸಕ್ತಿಯನ್ನೂ ಹೊಂದಿದ್ದಾರೆ’ ಎಂದು ಮಾರ್ಗನ್ ಹೇಳಿದ್ದಾರೆ. ಆದರೆ ಅವರು ಯಾವುದೇ ಆಟಗಾರನ ಹೆಸರನ್ನೂ ಬಹಿರಂಗಪಡಿಸಿಲ್ಲ.

‘ಭಾರತೀಯ ಆಟಗಾರರು ಪ್ರವಾಸ, ಪ್ರಯಾಣ ಮಾಡುವುದನ್ನು ಇಷ್ಟಪಡುತ್ತಾರೆ. ಬೇರೆ ಬೇರೆ ದೇಶಗಳ ಸಂಸ್ಕೃತಿ, ವಾತಾವರಣಗಳನ್ನು ತಿಳಿದುಕೊಳ್ಳುವ ಆಸಕ್ತರಾಗಿದ್ದಾರೆ. ಇದರಿಂದಾಗಿ ಆ ಟೂರ್ನಿಗಳ ಗುಣಮಟ್ಟವೂ ವರ್ಧಿಸುತ್ತದೆ’ ಎಂದರು.

ಈ ವರ್ಷ ‘ದ ಹಂಡ್ರೆಡ್’ ಟೂರ್ನಿ ನಡೆಯಲಿದೆ.

ಚೆಸ್: ಅಗ್ರ ಸ್ಥಾನದಲ್ಲಿ ಸಂಜಯ್, ಬಾಲಕಿಶನ್, ಪಾರ್ಥಸಾರಥಿ

ಇಶಾ ಮಣಿಸಿದ ರಂಗನಾಯಕಿ

ಪ್ರಜಾವಾಣಿ ವಾರ್ತೆ


ರಂಗನಾಯಕಿ

ಬೆಂಗಳೂರು: ಅಮೋಘ ಸಾಮರ್ಥ್ಯ ತೋರಿದ ಬೆಂಗಳೂರಿನ ರಂಗನಾಯಕಿ, ಮಹಿಳಾ ಅಂತರರಾಷ್ಟ್ರೀಯ ಮಾಸ್ಟರ್ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಇಶಾ ಶರ್ಮಾ ವಿರುದ್ಧ ಗೆದ್ದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆ ಆಯೋಜಿಸಿರುವ ರಾಜ್ಯ ಮುಕ್ತ ಚಾಂಪಿಯನ್‌ಷಿಪ್‌ನ ಮೂರನೇ ದಿನ ಗಮನ ಸೆಳೆದರು.

1783 ರೇಟಿಂಗ್ ಪಾಯಿಂಟ್ ಹೊಂದಿರುವ ರಂಗನಾಯಕಿ ತಮಗಿಂತ ಹೆಚ್ಚು ಪಾಯಿಂಟ್ ಗಳಿಸಿರುವ ಇಶಾ (2256) ಅವರನ್ನು ನಾಲ್ಕನೇ ಸುತ್ತಿನಲ್ಲಿ ಮಣಿಸಿದರು. ಆದರೆ ಐದನೇ ಸುತ್ತಿನಲ್ಲಿ ಬಾಲಕಿಶನ್‌ಗೆ ಮಣಿದು ನಿರಾಸೆ ಅನುಭವಿಸಿದರು. ಇಶಾ ಶರ್ಮಾ ಐದನೇ ಸುತ್ತಿನಲ್ಲಿ ಮೇಧಾಂಶ್ ಎದುರು ಗೆದ್ದು ಸಮಾಧಾನಪಟ್ಟುಕೊಂಡರು.

ಮೂರನೇ ದಿನದ ಅಂತ್ಯಕ್ಕೆ ಸಂಜಯ್ ಎನ್, ಬಾಲಕಿಶನ್ ಮತ್ತು ಪಾರ್ಥಸಾರಥಿ ತಲಾ ಐದು ಪಾಯಿಂಟ್ ಗಳಿಸಿ ಅಗ್ರ ಸ್ಥಾನಗಳನ್ನು ಹಂಚಿಕೊಂಡರು. ಮಂಗಳೂರಿನ ಶರಣ್ ರಾವ್, ಸುದರ್ಶನ್ ಭಟ್, ತೇಜಸ್, ಓಜಸ್ ಮತ್ತು ಪ್ರಚುರ ಅವರು ತಲಾ 4.5 ಪಾಯಿಂಟ್ ಹೊಂದಿದ್ದಾರೆ.

ಮೂರನೇ ದಿನದ (5ನೇ ಸುತ್ತು) ಫಲಿತಾಂಶಗಳು: ಸಂಜಯ್‌ಗೆ ರಕ್ಷಿತ್ ಶ್ರೀನಿವಾಸನ್ ಎದುರು ಗೆಲುವು; ಬಾಲಕಿಶನ್‌ಗೆ ರಂಗನಾಯಕಿ ವಿರುದ್ಧ ಜಯ, ಪಾರ್ಥಸಾರಥಿಗೆ ಅಪೂರ್ವಾ ಕಾಂಬ್ಳೆ ಎದುರು ಗೆಲುವು. ಪ್ರಚುರಗೆ ವಿವೇಕ್ ನಂಬಿಯಾರ್ ವಿರುದ್ಧ, ದಿಲೀಪ್ ಕುಮಾರ್‌ಗೆ ಹರ್ಷಿಣಿ ವಿರುದ್ಧ, ಇಶಾ ಶರ್ಮಾಗೆ ಮೇಧಾಂಶ್ ರಾಠಿ ಎದುರು, ಅರ್ಹನ್ ಚೇತನ್ ಆನಂದ್‌ಗೆ ವಿನೀತ್ ವಿರುದ್ಧ, ದರ್ಶನ್ ವಿ.ಪಿ.ಎನ್‌ಗೆ ಮನಸ್ವಿ ಎದುರು, ಲೀಲಾ ಜೈ ಕೃಷ್ಣಗೆ ನಿಶಾ ಪಾಟ್ಕರ್ ಎದುರು, ಅರವಿಂದ್ ರಾಮನಾಥ್‌ಗೆ ನಿಶಾಂತ್ ಡಿ ಸೋಜಾ ಎದುರು, ಶಾನ್ ಸಿಕ್ವೇರಾಗೆ ಹರಿಹರನ್ ಪಿಳ್ಳೆ ಎದುರು, ಸ್ಯಾಮ್ಯುಯೆಲ್ ಅಜಿತ್‌ಗೆ ಸಂಪತ್ ಕುಮಾರ್ ವಿರುದ್ಧ ಜಯ.

ತೇಜಸ್ ಸುರೇಶ್ ಮತ್ತು ಓಜಸ್ ಕುಲಕರ್ಣಿ, ಸುದರ್ಶನ್ ಭಟ್ ಮತ್ತು ಶರಣ್ ರಾವ್, ಸುಜಯ್ ಮತ್ತು ತೇಜಸ್ ಕುಮಾರ್ ಡ್ರಾ ಮಾಡಿಕೊಂಡರು.

ಸಚಿನ್ ತೆಂಡೂಲ್ಕರ್ ಆಸ್ಪತ್ರೆಗೆ ದಾಖಲು

ಮುಂಬೈ (ಎಎಫ್‌ಪಿ): ಕೋವಿಡ್–19 ಸೋಂಕಿಗೆ ಒಳಗಾಗಿರುವ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಆಸ್ಪತ್ರೆಗೆ ದಾಖಲಾಗಿದ್ದಾರೆ. 47 ವರ್ಷದ ತೆಂಡೂಲ್ಕರ್ ಮೊದಲ ಆರು ದಿನ ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದರು. ಮುನ್ನೆಚ್ಚರಿಕೆಯ ಕ್ರಮವಾಗಿ ಶುಕ್ರವಾರ ಆಸ್ಪತ್ರೆ ಸೇರಿದ್ದಾರೆ.

‘ವೈದ್ಯಕೀಯ ಸಲಹೆಯ ಮೇರೆಗೆ, ಮುನ್ನೆಚ್ಚರಿಕೆ ವಹಿಸಲು ಮುಂದಾಗಿದ್ದೇನೆ. ಶೀಘ್ರದಲ್ಲೇ ಮನೆಗೆ ಮರಳುವ ವಿಶ್ವಾಸವಿದೆ. ಎಲ್ಲರೂ ಎಚ್ಚರಿಕೆಯಿಂದಿರಿ, ಆರೋಗ್ಯವಂತರಾಗಿರಿ’ ಎಂದು ಸಚಿನ್ ಟ್ವೀಟ್ ಮಾಡಿದ್ದಾರೆ.

ವಿಶ್ವ ಕ್ರಿಕೆಟ್‌ನ ದಾಖಲೆ ವೀರ ಆಸ್ಪತ್ರೆಗೆ ಸೇರಿದ್ದು ತಿಳಿದ ಕೂಡಲೇ ದೇಶ ಹಾಗೂ ವಿದೇಶದ ಕೋಟ್ಯಂತರ ಅಭಿಮಾನಿಗಳು ಶುಭ ಹಾರೈಸಿದ್ದಾರೆ.


ಭಾರತ ತಂಡದ ಮಾಜಿ ನಾಯಕನೂ ಆಗಿರುವ ಸಚಿನ್ ಈಚೆಗೆ ನಡೆದ ರಸ್ತೆ ಸುರಕ್ಷತಾ ಟಿ20 ಪ್ರದರ್ಶನ ವಿಶ್ವ ಸರಣಿಯಲ್ಲಿ ಇಂಡಿಯಾ ಲೆಜೆಂಡ್ ತಂಡವನ್ನು ಮುನ್ನಡೆಸಿದ್ದರು.





ಮನೆಯೂ ಸ್ವಚ್ಛ: ಮನಸ್ಸೂ ನಿರಾಳ

ಎಸ್.ಜಿ. ಹುತ್ತಗಾರ



'ಮನೆಯೆಲ್ಲ ಸ್ವಚ್ಛವಾಗಿದ್ದರೂ ಮನಸ್ಸಿಗೆ ಬೇಸರವಾದಾಗಲೆಲ್ಲ ಮತ್ತೆ ಮತ್ತೆ ವಸ್ತುಗಳನ್ನೆಲ್ಲ ನೀಟಾಗಿಟ್ಟು, ನೆಲ ಒರೆಸುತ್ತೇನೆ. ಉಡುಪುಗಳನ್ನೆಲ್ಲ ಆಚೆ ತೆಗೆದು ಜೋಡಿಸಿಟ್ಟರೆ ಮನಸ್ಸಿನೊಳಗಿನ ದುಗುಡವೆಲ್ಲ ಮಂಗಮಾಯ' ಎಂದು ಸ್ನೇಹಿತೆ ನವ್ಯಾ ನಕ್ಕಾಗ, ಹೌದಲ್ಲ, ಇದೊಂದು ಚಿಕಿತ್ಸಾ ಪದ್ಧತಿಯಿದ್ದಂತೆ ಎಂದು ಎಲ್ಲಿಯೋ ಓದಿದ್ದು ನೆನಪಾಯಿತು.

ಮನಸ್ಸಿನಲ್ಲಿ ಆತಂಕ ಮೂಡಿದಾಗ ಅಥವಾ ಖಾಲಿ ಖಾಲಿ ಎನಿಸಿದಾಗ ಮನೆಯನ್ನು ಸ್ವಚ್ಛ ಮಾಡುವ ಹವ್ಯಾಸ ಇಟ್ಟುಕೊಂಡವರ ಬಗ್ಗೆ ನೋಡಿ ಅಥವಾ ಕೇಳಿದ ಅನುಭವ ಬಹುತೇಕ ಮಂದಿಗೆ ಇರಬಹುದು. ಮನೆಯಲ್ಲಿ ಯಾರಾದರೂ ಇಂಥವರಿದ್ದರೆ, ಅಂದರೆ ಸಂಗಾತಿ, ಅತ್ತೆ-ಮಾವ ಅಥವಾ ಅವಿವಾಹಿತರಾಗಿದ್ದರೆ ಒಂದೇ ಕೊಠಡಿಯಲ್ಲಿ ವಾಸವಾಗಿರುವ ಸ್ನೇಹಿತ/ಸ್ನೇಹಿತೆ ಇದ್ದರೆ ನಿರಾಳವಾಗುವುದು ನಿಶ್ಚಿತ. ನಮ್ಮ ಕಪಾಟಿನಿಂದ ಹಿಡಿದು, ಮೇಜಿನ ಮೇಲೆ, ಟಿಪಾಯ್, ಅಡುಗೆಮನೆ, ಸ್ನಾನದ ಕೊಠಡಿಯಲ್ಲಿ ಹರಡಿಕೊಂಡಿರುವ ವಸ್ತುಗಳನ್ನು ಜೋಡಿಸಿ, ನೆಲ, ಗೋಡೆಯ ದೂಳು ಹೊಡೆದು, ಲಕಲಕ ಹೊಳೆಯುವಂತೆ ತೊಳೆದು, ಒರೆಸಿದರೆ ಯಾರಿಗೆ ಖುಷಿಯಾಗುವುದಿಲ್ಲ ಹೇಳಿ!

ಮಾನಸಿಕ ಚಿಕಿತ್ಸೆ

ವಸ್ತುಗಳೆಲ್ಲ ಹರಡಿಕೊಂಡು, ಮನೆಯೆಲ್ಲ ಧೂಳು, ಕಸದಿಂದ ಗಲೀಜಾಗಿದ್ದರೆ ಒತ್ತಡ ಸರ್‍ರಂತ ಏರಿಬಿಡುತ್ತದೆ. ಬೇಕಾದಷ್ಟು ಜನರಿಗೆ ಇದರ ಅನುಭವ ಆಗಿರಬಹುದು. ಮನೆಯಲ್ಲಿ ಪೇಪರ್ ಹರಡಿಕೊಂಡಿದ್ದರೂ ಸಾಕು, 'ನೀಟಾಗಿಡಲು ನಿನಗೇನು ಸಮಸ್ಯೆ (ಜೊತೆಗೆ ಬೈಗಳವೂ ಸೇರಿಕೊಂಡಿರುತ್ತದೆ)?' ಎಂಬ ಕೂಗಾಟದಿಂದಲೇ ಬೆಳಗು ಶುರುವಾಗಬಹುದು.

ಆದರೆ ತಾತ್ಕಾಲಿಕವಾಗಿ ಆತಂಕದ ಛಾಯೆ ಮನಸ್ಸಿನೊಳಗೆ ಮೂಡಿದಾಗ, ಎಲ್ಲೋ ಬೇಸರದ ನೆರಳು ಹಾದು ಹೋದಾಗ ಉಗುರು ಕಚ್ಚುತ್ತ, ಶತಪಥ ಓಡಾಡುತ್ತ ಇರುವ ಬದಲು ಈ ರೀತಿ ಮನೆಯೊಳಗೆ, ಹೊರಗೆ ಸ್ವಚ್ಛತಾ ಕಾರ್ಯ ಕೈಗೊಳ್ಳುವುದು ಒಂದು ರೀತಿ ಮಾನಸಿಕ ಚಿಕಿತ್ಸೆಯಿದ್ದಂತೆ ಎನ್ನುತ್ತಾರೆ ತಜ್ಞರು. ವಸ್ತುಗಳು ಚೆಲ್ಲಾಪಿಲ್ಲಿ ಹರಡಿಕೊಂಡಿದ್ದರೆ ಕೆಲವರಿಗೆ ಕಿರಿಕಿರಿಯಾಗಿ ಕೋಪ ಏರುಮುಖದಲ್ಲಿರುತ್ತದೆ. ಅಮ್ಮಂದಿರು ಮಕ್ಕಳ ಮೇಲೆ ಹೆಚ್ಚು ಸಲ ಕೂಗಾಡುವುದು ಇದೇ ಕಾರಣಕ್ಕಾಗಿಯೇ. ಅವೆಲ್ಲವನ್ನೂ ಜೋಡಿಸಿಟ್ಟಾಗಲೇ ಧುಮುಗುಡುವ ಕೋಪ ಶಾಂತವಾಗಿ ಕೂಲ್ ಪಾಯಿಂಟ್‌ಗೆ ಬರುವುದು. ಈ ರೀತಿಯ ಸ್ವಚ್ಛತಾ ಕಾರ್ಯದಿಂದ ಹಲವರಿಗೆ ಒತ್ತಡ ಕಡಿಮೆಯಾಗುವುದಂತೂ ನಿಜ.

ಈ 'ಸ್ವಚ್ಛತಾ ಕಾರ್ಯ' ಇದೆಯಲ್ಲ, ಆತಂಕವನ್ನು ಹೋಗಲಾಡಿಸಿ ಮನಸ್ಸನ್ನು ನಿಯಂತ್ರಿಸುವ ಹಾಗೇ, ಮನೆಯೊಳಗಿನ ವಾತಾವರಣವನ್ನು ನಿಯಂತ್ರಿಸುವ ಕೀ ನಮ್ಮ ಬಳಿಯೇ ಇದೆ ಎಂಬ ಸಮಾಧಾನದ ಭಾವನೆಯನ್ನು ಮೂಡಿಸುತ್ತದೆ ಎನ್ನುತ್ತಾರೆ ತಜ್ಞರು. ಬದುಕಿನಲ್ಲಿ ಕೆಲವೊಂದು ವಿಷಯ ನಮ್ಮ ನಿಯಂತ್ರಣ ಮೀರಿ ಏನೇನೋ ತಿರುವು ಪಡೆಯಬಹುದು. ಆದರೆ ಕನಿಷ್ಠ ನಮ್ಮ ಮನೆಯೊಳಗಿನ ವಾತಾವರಣವನ್ನಾದರೂ ನಿಯಂತ್ರಣದಲ್ಲಿ ಇಡಬಹುದಲ್ಲ ಎಂಬ ಸಮಾಧಾನ ಇದಕ್ಕೆ ಕಾರಣವಂತೆ.

ಮರೆಯೋಣ ಚಿಂತೆಯ...

ನೀವೇ ಅನುಭವ ಪಡೆದು ನೋಡಿ. ನಿಮ್ಮ ಮನೆಯ ವಾರ್ಡ್‌ರೋಬ್ ಅಥವಾ ಪುಸ್ತಕದ ಗೂಡಿನಲ್ಲಿ ಯದ್ವಾತದ್ವಾ ಹರಡಿಕೊಂಡಿರುವ ವಸ್ತುಗಳನ್ನು ಚೆಂದವಾಗಿ ಜೋಡಿಸಿ. ಸ್ವಲ್ಪ ಸಮಯದಲ್ಲೇ ಮನಸ್ಸಿನೊಳಗಿನ ಒತ್ತಡವೆಲ್ಲ ಕಡಿಮೆಯಾಗುತ್ತ ಬರುತ್ತದೆ. ಇದೇ ರೀತಿ ಯೋಜಿತ ರೀತಿಯಲ್ಲಿ ಬದುಕು ಸಾಗಬಹುದು ಎಂಬ ಹೋಲಿಕೆ ಕೂಡ ಮನಸ್ಸಿನಲ್ಲಿ ನಿರಾಳ ಮೂಡಿಸುತ್ತದೆ. ಹಾಗೆಯೇ ಸ್ವಚ್ಛತಾ ಕಾರ್ಯದಲ್ಲಿ ಸಂಪೂರ್ಣ ಮನಸ್ಸು ತಲ್ಲೀನವಾಗಿ ಬೇರೆ ಎಲ್ಲ ಚಿಂತೆಯನ್ನು ತಾತ್ಕಾಲಿಕವಾಗಿಯಾದರೂ ಮರೆಯಬಹುದು.

ಇದು ಮನಸ್ಸಿಗೆ ಮಾತ್ರವಲ್ಲ, ದೈಹಿಕವಾಗಿಯೂ ಒಂದಿಷ್ಟು ಕಸರತ್ತು ಕೊಡುತ್ತದೆ. ಮನೆಯೊಳಗೆ ಓಡಾಡುತ್ತ, ಮೆಟ್ಟಿಲು ಹತ್ತುತ್ತ- ಇಳಿಯುತ್ತ, ದೂಳು ಹೊಡೆಯುವಾಗ ಬಗ್ಗುತ್ತ ಸಾಕಷ್ಟು ವ್ಯಾಯಾಮ ಸಿಗುತ್ತದೆ. ಪಾತ್ರೆ ತೊಳೆಯುವಾಗ, ನೆಲ ಒರೆಸುವಾಗ ತೋಳಿಗೆ ಕೂಡ ವ್ಯಾಯಾಮ ಒದಗಿಸುತ್ತದೆ. ಈ ತರಹದ ಸಣ್ಣಪುಟ್ಟ ವ್ಯಾಯಾಮ ಮಾನಸಿಕ ಲವಲವಿಕೆಗೂ ಕಾರಣವಾಗುತ್ತದೆ ಎನ್ನುತ್ತಾರೆ ತಜ್ಞರು.

ಆದರೆ ನೀವು ನಿಮ್ಮ ಒತ್ತಡ ಮತ್ತು ಚಿಂತೆ ಮರೆಯಲು ಮತ್ತು ಮನಸ್ಸನ್ನು ನಿರಾಳವಾಗಿಟ್ಟುಕೊಳ್ಳಲು ಹರಡಿಕೊಂಡಿರುವ ವಸ್ತುಗಳನ್ನು ಸರಿಪಡಿಸಿ. ಅದರ ಬದಲು ನಿಮ್ಮ ಕುಟುಂಬದ ಸದಸ್ಯರಿಗೂ ಕೂಡ ಇದೇ ರೀತಿ ಎಲ್ಲ ವಸ್ತುಗಳನ್ನು ನೀಟಾಗಿ ಇಟ್ಟುಕೊಳ್ಳಬೇಕು ಎಂಬ ಉಪದೇಶ ಮಾಡಲಿಕ್ಕೆ ಹೋಗಬೇಡಿ.

> ಮನೆಯೊಳಗೆ ಸ್ವಚ್ಛತಾ ಕಾರ್ಯ ನಡೆಸುವುದರಿಂದ ಮನಸ್ಸಿನೊಳಗೂ ಆತಂಕ, ದುಗುಡ, ಒತ್ತಡವನ್ನೆಲ್ಲ ಗುಡಿಸಿ ಹಾಕಬಹುದು. ಪುಸ್ತಕ, ಉಡುಪು, ಪಾತ್ರೆಗಳನ್ನೆಲ್ಲ ನೀಟಾಗಿ ಜೋಡಿಸಿಡುವುದು, ಒಂಚೂರೂ ದೂಳಿಲ್ಲದಂತೆ ಲಕಲಕ ಹೊಳೆಯುವಂತೆ ಮನೆಯನ್ನು ಇಟ್ಟುಕೊಳ್ಳುವುದು ಒಂದು ರೀತಿಯ ಮಾನಸಿಕ ಚಿಕಿತ್ಸೆ ಇದ್ದಂತೆ.

ಏಕಾಗ್ರತೆ

ನಮ್ಮ ಸುತ್ತಮುತ್ತಲಿನ ಜಾಗ ಸ್ವಚ್ಛಗೊಳಿಸುವುದರಿಂದ ಮನಸ್ಸು ಪ್ರಫುಲ್ಲವಾಗಿ ಬೇರೆ ಕೆಲಸ ಮಾಡುವಾಗಲೂ ಏಕಾಗ್ರತೆ ಮೂಡುತ್ತದೆ. ಉದಾಹರಣೆಗೆ ನಾವು ಬೆಳಿಗ್ಗೆ ಎದ್ದ ನಂತರ ಹಾಸಿಗೆಯ ಹೊದಿಕೆಯನ್ನು ಸರಿಪಡಿಸಿ ಇಡುವುದರಿಂದ ಇಡೀ ದಿನ ಖುಷಿಯಾಗಿರಬಹುದು, ಕಚೇರಿ ಕೆಲಸವೂ ಸುಲಭವಾಗಿ ಸಾಗುತ್ತದೆ ಎನ್ನುತ್ತಾರೆ ತಜ್ಞರು.

ಈ ಸ್ವಚ್ಛ ಮಾಡುವ ಕೆಲಸ, ಜೋಡಿಸಿಡುವುದು ಇವಕ್ಕೆಲ್ಲ ಕೊನೆ ಎಂಬುದಿಲ್ಲ. ನಿರಂತರವಾಗಿ ನಡೆಯುತ್ತಿರುತ್ತದೆ. ಒಂದು ಮನೆಯಲ್ಲಿ ಸ್ವಚ್ಛತೆಯ ಗೀಳು ಇರುವವರಿದ್ದರೆ, ಹಾಗೆಯೇ ಎಲ್ಲವನ್ನೂ ಹರಡಿಕೊಂಡು ಅದರ ಮಧ್ಯೆಯೇ ಆರಾಮವಾಗಿರುವವರೂ ಇರುತ್ತಾರೆ. ಹೀಗಾಗಿ ಒಬ್ಬರು ಕೊಳೆ ಮಾಡುವುದು, ಇನ್ನೊಬ್ಬರೂ ಸ್ವಚ್ಛ ಮಾಡುವುದು ಒಂದು ಚಕ್ರದಂತೆ ನಡೆಯುತ್ತಿರುತ್ತದೆ. ❖

ಮನಸ್ಸಿಗೆ ಆಹ್ಲಾದ ತುಂಬುವ ಒಳಾಂಗಣ ಗಿಡಗಳು

ಮುದುಡಿದ ಮನಸ್ಸಿಗೆ ಒಂದಿಷ್ಟು ಖುಷಿ ತುಂಬಲು, ಪುನಃ ಬದುಕಿನ ಏರಿಳಿತಗಳನ್ನು ಎದುರಿಸುವ ಶಕ್ತಿಯನ್ನು ಕ್ರೋಢೀಕರಿಸಲು ಏನೆಲ್ಲಾ ಕಸರತ್ತು ನಡೆಸುತ್ತೇವೆ. ಪ್ರವಾಸ, ವ್ಯಾಯಾಮ, ಯೋಗ, ಮುದ್ದುಪ್ರಾಣಿಗಳು, ಶಾಪಿಂಗ್.. ಹೀಗೆ ಎಲ್ಲಾ ಸಲಹೆಗಳ ಸುರಿಮಳೆ ಸ್ನೇಹಿತರಿಂದ, ಬಂಧುಗಳಿಂದ ಆಗುವುದು ಸಹಜವೇ. ಮನೆಯೊಳಗೆ, ಮನಸ್ಸಿನೊಳಗೆ ಒಂದಿಷ್ಟು ಆಹ್ಲಾದ ತುಂಬಲು ಇನ್ನೊಂದು ಮಾರ್ಗವೂ ಇದೆ. ಅದೆಂದರೆ ಪರಿಮಳ ಸೂಸುವ ಗಿಡಗಳನ್ನು ಬೆಳೆಯುವುದು.

ಮನೆಗೆ ಅಂದ, ರಂಗು, ಮನಸ್ಸಿಗೆ ಚೈತನ್ಯ ಎಲ್ಲವನ್ನೂ ನೀಡುವ ಇಂತಹ ಗಿಡಗಳು ಸೌಂದರ್ಯ ಸೂಸುತ್ತ ಇದ್ದರೆ ಮನದೊಳಗಿನ ಕಳವಳ ಮಾಯವಾಗುವುದು ಖಚಿತ. ಇಂತಹ ಕೆಲವು ಗಿಡಗಳನ್ನು ಹೆಚ್ಚಿನ ಶ್ರಮವಿಲ್ಲದೇ ಬೆಳೆದುಕೊಳ್ಳಬಹುದು.

ನಂದಿಬಟ್ಟಲು

ಸ್ವಚ್ಛ ಬಿಳುಪಿನೊಂದಿಗೆ ನಗುವ ಈ ಹೂವುಗಳು ಹೊಳೆಯುವ ಕಡು ಹಸಿರು ಎಲೆಗಳಿಂದ ಒತ್ತಡ ಕಮ್ಮಿ ಮಾಡುವುದಂತೂ ಹೌದು. ಸ್ನಿಗ್ಧ ಪರಿಮಳ ಸೂಸುವ ಈ ಹೂವಿನ ಗಿಡಗಳನ್ನು ಕೈತೋಟದಲ್ಲಿ ಬೆಳೆಯುವುದು ಸಾಮಾನ್ಯ. ಆದರೆ ಒಳಾಂಗಣದಲ್ಲಿ ಕೂಡ ಬೆಳೆಸಬಹುದು. ಉತ್ತಮ ಬೆಳಕು ಮನೆಯೊಳಗಿದ್ದರೆ ದೊಡ್ಡ ಕುಂಡದಲ್ಲಿ ಬೆಳೆಸಬಹುದು. ಬೇಸಿಗೆ, ಚಳಿಗಾಲದಲ್ಲಿ ಹೂ ಬಿಡುವ ಈ ಗಿಡಗಳಿಗೆ ಆಗಾಗ ಮಣ್ಣು, ಗೊಬ್ಬರ ಕೊಡುವುದನ್ನು ಮರೆಯಬಾರದು. ನಿತ್ಯ ಬೆಳಿಗ್ಗೆ ಸ್ವಲ್ಪ ನೀರು ಹನಿಸಿದರೆ ತಮ್ಮಷ್ಟಕ್ಕೇ ಬೆಳೆಯುತ್ತವೆ.

ಪರಿಮಳದ ಹೂವುಗಳೆಂದರೆ ಮಲ್ಲಿಗೆಯನ್ನು ಮರೆಯಲಾದೀತೆ. ನಿತ್ಯ ಮಲ್ಲಿಗೆಯ ಗಿಡಗಳನ್ನು ಹಾಕಿದರೆ ರಾತ್ರಿ ಕೂಡ ತಂಗಾಳಿಯೊಂದಿಗೆ ಹೂಗಳ ಕಂಪು ಹರಡುತ್ತಿರುತ್ತದೆ. ಬೇಸಿಗೆ ಮತ್ತು ಚಳಿಗಾಲದಲ್ಲಿ ಹೂವು ಬಿಡುವ ಮಲ್ಲಿಗೆ ಬಳ್ಳಿ ಅಥವಾ ಪೊದೆಯನ್ನು ಕುಂಡದಲ್ಲಿ ಬೆಳೆಸಿ ಮನೆಯೊಳಗೆ ಅಥವಾ ಬಾಲ್ಕನಿಯಲ್ಲಿ ಇಡಬಹುದು. ಹೆಚ್ಚು ಬೆಳಕು ಬೇಕಾಗಿರುವುದರಿಂದ ಬಾಲ್ಕನಿಯೇ ಸೂಕ್ತ. ತೇವಾಂಶ ಸಾಕಷ್ಟಿರಬೇಕು. ಕುಂಡವನ್ನು ಕಲ್ಲು ಹಾಗೂ ನೀರಿರುವ ಟ್ರೇನಲ್ಲಿ ಇಡುವುದು ಉತ್ತಮ. ಸ್ವಲ್ಪ ನೀರುಣಿಸಿದರೆ ಸಾಕು. ❖



ನಿಮ್ಮ ಮಗು ಸ್ವಾವಲಂಬಿಯೇ?

ಎಸ್ಸೆಚ್

ಗೆಳತಿ ನಿಯತಿಯ ಮಗನಿಗೆ ಇನ್ನೂ 7 ವರ್ಷ. ಊಟ- ತಿಂಡಿ ಆದ ತಕ್ಷಣ ತನ್ನ ಪ್ಲೇಟ್, ಲೋಟ ಎತ್ತಿಕೊಂಡು ವಾಷ್ ಬೇಸಿನ್‌ನಲ್ಲಿ ತೊಳೆದು ಅಡುಗೆಕಟ್ಟೆಯ ಮೇಲೆ ಕವುಚಿ ಇಡುವ ಅಭ್ಯಾಸ ಬೆಳೆಸಿಕೊಂಡಿದ್ದಾನೆ. ಸ್ನಾನ ಮಾಡುವಾಗ ಪುಟ್ಟ ಚೆಡ್ಡಿಯನ್ನು ತೊಳೆದು, ಹಿಂಡಿ ಬಾಲ್ಕನಿಯಲ್ಲಿ ಒಣ ಹಾಕುವುದಲ್ಲದೇ, ಒಣಗಿದ ಬಟ್ಟೆಯನ್ನು ಮಡಿಸಿ ಒಳಗಿಡುವ ರೂಢಿಯೂ ಆತನಿಗಿದೆ. ಶಾಲೆಗೆ ಹಾಕಿಕೊಂಡು ಹೋಗುವ ಶೂ ಧೂಳು ಒರೆಸಿ ಓರಣವಾಗಿಟ್ಟುಕೊಳ್ಳುವ ಆ ಬಾಲಕನ ನಡವಳಿಕೆ ಎಂಥವರಿಗೂ ಖುಷಿ ಕೊಡುವಂತಹದ್ದು.

'ಸೊಪ್ಪು ತಂದರೆ ಬಿಡಿಸಿ ಕೊಡ್ತಾನೆ. ಶಾಲೆಗೆ ಒಯ್ಯುವ ಡಬ್ಬಿಯನ್ನು ತೊಳೆದಿಡುವುದೂ ಅವನೇ. ಮೊನ್ನೆ 'ದೋಸೆ ಮಾಡುವುದು ಹೇಳಿ ಕೊಡು' ಎನ್ನುತ್ತಿದ್ದ. ನಾನೇ ಗ್ಯಾಸ್ ಬಳಿ ಬಿಡುವುದಿಲ್ಲ' ಎಂದು ಮಗನನ್ನು ಹೊಗಳುತ್ತಿದ್ದ ನಿಯತಿಯ ಮುಖದಲ್ಲಿ ಹೆಮ್ಮೆಯ ನಗುವಿತ್ತು.

ಹೌದು, ಮಕ್ಕಳಿಗೆ ಸ್ವಾವಲಂಬನೆಯ ಪಾಠ ಕಲಿಸುವುದು ಒಳ್ಳೆಯದೇ. ಚಿಕ್ಕಂದಿನಿಂದಲೇ ತಮ್ಮ ಕೆಲಸಗಳನ್ನು ಮಾಡಿಕೊಳ್ಳುತ್ತ, ಪೋಷಕರಿಗೂ ನೆರವಾಗುತ್ತ ಬೆಳೆಯುವ ಮಕ್ಕಳು ಕೌಶಲಗಳಲ್ಲಿ ಪಳಗುತ್ತಾರಂತೆ; ಹಾಗೆಯೇ ಶೈಕ್ಷಣಿಕವಾಗಿಯೂ ಉತ್ತಮ ಬೆಳವಣಿಗೆ ತೋರಿಸುತ್ತಾರಂತೆ.



ಆದರೆ ಮಕ್ಕಳನ್ನು ಸ್ವಾವಲಂಬಿಯಾಗಿ ಬೆಳೆಸುವಲ್ಲಿ ಪೋಷಕರ ಪಾತ್ರವೇನು? ಮಕ್ಕಳಿಗೆ ಈ ರೀತಿಯ ಅಭ್ಯಾಸಗಳನ್ನು ಹೇಳಿಕೊಟ್ಟು, ರೂಢಿಸುವಾಗ ಸಹನೆ ಬಹಳ ಮುಖ್ಯ. ಕೇವಲ ಕೆಲಸ ಕೊಡುವ ಬದಲು ಮಾರ್ಗದರ್ಶನ ಮಾಡುವುದು ಸೂಕ್ತ.

ಬಹಳಷ್ಟು ಪೋಷಕರು ಮಾಡುವ ತಪ್ಪೆಂದರೆ ಮಕ್ಕಳ ಮೇಲೆ ಅವಶ್ಯಕತೆಗಿಂತ ಹೆಚ್ಚಿನ ಕಾಳಜಿ ತೋರಿಸಿ ಬೆಳೆಸುವುದು. ಮಕ್ಕಳಿಗೇನಾದರೂ ಸಮಸ್ಯೆ ಬಂದರೆ ತಾವೇ ಬಗೆಹರಿಸುತ್ತಾರೆಯೇ ಹೊರತು ಅದನ್ನು ಪರಿಹರಿಸಿಕೊಳ್ಳುವುದು ಹೇಗೆ ಎಂದು ಹೇಳಿಕೊಡುವುದಿಲ್ಲ. ತಮ್ಮ ಮಕ್ಕಳು ಯಾವುದರಲ್ಲೂ ವಿಫಲರಾಗಬಾರದು ಎಂಬ ಮನಸ್ಥಿತಿ ಬಹಳಷ್ಟು ಪೋಷಕರದ್ದು. ಇಂತಹ ಮಕ್ಕಳು ಮುಂದೆ ಬದುಕಿನಲ್ಲಿ ಹೆಚ್ಚು ಸಫಲರಾಗುವುದಿಲ್ಲ ಎಂಬುದು ತಜ್ಞರ ಅಂಬೋಣ. ಹೀಗಾಗಿ ಮಕ್ಕಳ ಎಲ್ಲಾ ಕೆಲಸಗಳನ್ನು ನೀವೇ ಮಾಡಿಕೊಡಲು ಹೋಗಬೇಡಿ. ಬದಲಾಗಿ ಹೇಗೆ ಮಾಡಬಹುದು ಎಂಬುದನ್ನು ಹೇಳಿಕೊಡಿ. ಇದರಿಂದ ಮಕ್ಕಳು ಆತ್ಮವಿಶ್ವಾಸ ಬೆಳೆಸಿಕೊಂಡು, ಸಾಧನೆಯ ಹಾದಿಯಲ್ಲಿ ಸಾಗುತ್ತಾರೆ.

ಹೆಚ್ಚು ಎಚ್ಚರಿಕೆ ತೆಗೆದುಕೊಳ್ಳಬೇಕಾದ ಕೆಲಸಗಳು, ಉದಾಹರಣೆಗೆ ಅಡುಗೆಮನೆಯಲ್ಲಿ ಚಾಕೂವಿನಿಂದ ತರಕಾರಿ ಹೆಚ್ಚುವಂತಹ, ಗ್ಯಾಸ್ ಸ್ಟವ್ ಮೇಲೆ ಬೇಯಿಸುವಂತಹ, ಚಹ ಮಾಡುವಂತಹ ಕೆಲಸಗಳಿದ್ದರೆ ನೀವು ಅಲ್ಲೇ ಇದ್ದರೆ ಉತ್ತಮ. ಮಕ್ಕಳು ಎಲ್ಲಾ ಎಚ್ಚರಿಕೆ ತೆಗೆದುಕೊಂಡು ಮಾಡುತ್ತಾರೆ ಎಂಬ ವಿಶ್ವಾಸ ನಿಮಗೆ ಬಂದ ಮೇಲೆ ನಿಧಾನವಾಗಿ ಅವರಷ್ಟಕ್ಕೇ ಮಾಡಲು ಬಿಡಿ.

ಮಕ್ಕಳು ತಮ್ಮ ಕೆಲಸವನ್ನು ತಾವೇ ಮಾಡಿಕೊಂಡಾಗ ಮೆಚ್ಚುಗೆಯ ಮಾತನಾಡಿ. ಆದರೆ ಸರಿಯಾಗಿ ಮಾಡಿಲ್ಲ.. ಇನ್ನೂ ಚೆನ್ನಾಗಿ ಮಾಡಬಹುದಿತ್ತು.. ಎಂಬಂತಹ ಮಾತುಗಳನ್ನು ಆಡಬೇಡಿ. ಮಕ್ಕಳು ತಮ್ಮಷ್ಟಕ್ಕೇ ಚೆನ್ನಾಗಿ ಕೆಲಸ ಮಾಡುವುದನ್ನು ಕಲಿತುಕೊಳ್ಳುತ್ತಾರೆ.

ಮಕ್ಕಳಿಗೆ ಇಂತಹ ಕೆಲಸ ನಿನ್ನದು ಎನ್ನುವುದಕ್ಕಿಂತ ಸರಳವಾದ ಕೆಲಸಗಳಲ್ಲಿ ತೊಡಗಿಸಿಕೊಳ್ಳಿ. ಅಡುಗೆಯಾದ ಮೇಲೆ ಟೇಬಲ್ ಮೇಲೆ ಪಾತ್ರೆಗಳನ್ನು ಜೋಡಿಸಿಡುವುದು, ತೊಳೆದ ಬಟ್ಟೆಗಳನ್ನು ಒಣಹಾಕುವುದು.. ಹೀಗೆ ಮಕ್ಕಳು ಹೊಣೆಗಾರಿಕೆಯಿಂದ ಕೆಲಸ ಮಾಡುವುದನ್ನು ಕಲಿಸಿ. ❖

ಕೋವಿಡ್ ಸಂಕಷ್ಟ ಸೀಮಂತವೂ ವಿಶಿಷ್ಟ



ಆಲಾಪ



ಜಗತ್ತಿನ ಎಲ್ಲ ಆಗು–ಹೋಗುಗಳಿಗೂ ಕೋವಿಡ್ ತಡೆಯೊಡ್ಡಿದೆ. ಮಗುವಿನ ಆಗಮನವನ್ನು ಸಂಭ್ರಮಿಸುವ ಸೀಮಂತಕ್ಕೂ ಕೋವಿಡ್ ಕರಿ ಮೋಡ ಕವಿದಿದೆ. ಈ ಅಸ್ಥಿರತೆಯ ಮಧ್ಯೆ ಸೀಮಂತವನ್ನ ಸಂಭ್ರಮಿಸುವ ಹಲವು ದಾರಿಗಳು ಹುಟ್ಟಿಕೊಂಡಿವೆ. ಅವು, ಯಾವುವು? ತಯಾರಿ ಹೇಗೆ?

ಮೊದಲ ಮಗು ಎಂದರೆ ಯಾರಿಗೆ ನಿರೀಕ್ಷೆ ಇರುವುದಿಲ್ಲ ಹೇಳಿ! ತಾನು ಗರ್ಭಿಣಿ ಎಂದು ಗೊತ್ತಾದಾಗಿನಿಂದ ಮಗು ಮಡಿಲು ಸೇರುವವರೆಗೂ ಆತಂಕದ ಜೊತೆ ನಿರೀಕ್ಷೆ, ನಿರೀಕ್ಷೆ ಜೊತೆ ಸಂತಸ.. ಹೀಗೆ ನಾನಾ ಭಾವಗಳು ಸುಳಿಯುತ್ತಿರುತ್ತವೆ. ಈ ಒಂಭತ್ತು ತಿಂಗಳ ಕಾಲಘಟ್ಟದಲ್ಲಿ ಸೀಮಂತ ಕೂಡ ಸಂಭ್ರಮದ ಭಾಗವೇ ಆಗಿದೆ.

ಕುಟುಂಬದವರನ್ನು, ನೆರೆಯವರನ್ನು ಕರೆದು ಭರ್ಜರಿ ಊಟ ಹಾಕಿಸಿ, ಹುಟ್ಟುವ ಮಗುವಿಗೆ ಅಮ್ಮನ ಮೂಲಕ ಹಿರಿಯರ ಹಾರೈಕೆ, ಆಶೀರ್ವಾದ ತಲುಪಿಸುವ ಸಂಭ್ರದ ಆಚರಣೆಯಿದು. ಆದರೆ, ಕೋವಿಡ್ ಈ ಸಂಭ್ರಮಕ್ಕೆ ಅಡ್ಡಿಯಾಗಿದೆ. ಹಾಗೆಂದು ಬೇಸರಿಸಬೇಕಾಗಿಲ್ಲ; ಕೋವಿಡ್ ಕಾರಣ ಒಡ್ಡಿ ಈ ಆಚರಣೆಯನ್ನು ಕೈಬಿಡಬೇಕಾಗಿಲ್ಲ. ಸೀಮಂತದ ಆಚರಣೆಗಾಗಿಯೇ ಹಲವರು ವೈವಿಧ್ಯಮಯ ಮಾರ್ಗಗಳನ್ನು ಕಂಡುಕೊಂಡಿದ್ದಾರೆ.

ಕೋವಿಡ್ ಕಾಲದಲ್ಲಿ ಹೆಚ್ಚು ಜನ ಸೇರುವುದು ನಿಯಮದ ವಿರುದ್ಧ. ಹಾಗೆಯೇ ಸುರಕ್ಷತೆಯ ದೃಷ್ಟಿಯಿಂದ ಒಳ್ಳೆಯ ನಿರ್ಧಾರವೂ ಅಲ್ಲ. ಆದರೆ ಬೇರೆ ರೀತಿಯಲ್ಲಿ ಸುರಕ್ಷಿತವಾಗಿ ನಾವು ಸಂಭ್ರಮ ಪಡಬಹುದು. ಹಾಗಾದರೆ, ಏನವು, ಬನ್ನಿ ನೋಡೋಣ...

1 ಪ್ರದೇಶದಿಂದ ಪ್ರದೇಶಕ್ಕೆ ಕೊರೊನಾ ಸೋಂಕಿನ ಪ್ರಮಾಣದಲ್ಲಿ ವ್ಯತ್ಯಾಸ ಇರುತ್ತದೆ. ನಾವು ಇರುವುದು ಇಂಥ ಯಾವ ಪ್ರದೇಶದಲ್ಲಿ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಸೀಮಂತ ಕಾರ್ಯಕ್ರಮವನ್ನು ಮಾಡಿಕೊಳ್ಳಬಹುದು. ಸರ್ಕಾರ ನೀಡಿರುವ ಎಲ್ಲಾ ಕೋವಿಡ್ ನಿಯಮಗಳನ್ನು ಪಾಲಿಸಿಕೊಂಡು, ಸುರಕ್ಷಿತ ಅಂತರ ಕಾಯ್ದುಕೊಂಡು ಆಚರಣೆ ಮಾಡಬಹುದು.

2 ಆನ್‌ಲೈನ್ ಮೂಲಕವೂ ಈ ಕಾರ್ಯಕ್ರಮವನ್ನು ಆಯೋಜಿಸಬಹುದು. ಮನೆಗೆ ಕರೆದು ದೊಡ್ಡ ಕಾರ್ಯಕ್ರಮ ಮಾಡಿದರೂ, ದೂರದ ಊರಿನಲ್ಲಿ ನೆಲೆಸಿರುವ ಆತ್ಮೀಯರನ್ನು ಕರೆಯಲು ಸಾಧ್ಯವಿಲ್ಲ. ಆದರೆ ಹೆಚ್ಚು ಜನರನ್ನು ಒಟ್ಟುಗೂಡಿಸುವ ಆನ್‌ಲೈನ್‌ನಲ್ಲಿ ಆಚರಣೆಯ ವಿಡಿಯೊಗಳನ್ನ ಹಂಚಿಕೊಳ್ಳಬಹುದು ಅಥವಾ ಲೈವ್‌ಗಳನ್ನು ಮಾಡಿ ದೂರದಲ್ಲಿದ್ದವರು ನೋಡುವಂತೆ ಮಾಡಬಹುದು. ಆನ್‌ಲೈನ್ ಮೂಲಕವೇ ಉಡುಗೊರೆಗಳನ್ನೂ ಕಳುಹಿಸಬಹುದು.

3 ಮನೆಗೆ ಹೆಚ್ಚು ಜನರನ್ನು ಆಹ್ವಾನಿಸುವಂತಿಲ್ಲ ಎನ್ನುವುದು ನಿಯಮ. ತೀರಾ ಹತ್ತಿರದವರನ್ನು ಕರೆದು ಕಾರ್ಯಕ್ರಮವನ್ನು ಮಾಡಬಹುದು. ಆದರೆ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಧರಿಸುವುದು ಕಡ್ಡಾಯವಾಗಿರಲಿ. ಜೊತೆಗೆ, ತುಂಬಾ ಸಣ್ಣ ಜಾಗದಲ್ಲಿ ಕಾರ್ಯಕ್ರಮ ಆಯೋಜಿಸುವ ಬದಲು, ವಿಸ್ತಾರವಾದ, ಗಾಳಿ ಬೆಳಕು ಹೆಚ್ಚಿರುವ ಜಾಗದಲ್ಲಿ ಕಾರ್ಯಕ್ರಮ ಮಾಡಿದರೆ ಹೆಚ್ಚು ಸೂಕ್ತ.

4 ತೀರಾ ಹತ್ತಿರದವರನ್ನು ಮನೆಗೆ ಕರೆದು ಕಾರ್ಯಕ್ರಮ ಮಾಡುವುದು, ಉಳಿದವರನ್ನು ಆನ್‌ಲೈನ್ ಮೂಲಕ ಸಂಪರ್ಕ ಮಾಡುವುದರಿಂದ ಒಂದೇ ಸಮಯದಲ್ಲಿ ಹೆಚ್ಚು ಜನರೊಂದಿಗೆ ಸಂಭ್ರಮ ಹಂಚಿಕೊಂಡಂತೆಯೂ ಆಗುತ್ತದೆ, ಹತ್ತಿರದವರು ಹತ್ತಿರ ಇದ್ದಂತೆಯೂ ಆಗುತ್ತದೆ.

ಸೀಮಂತ ಎನ್ನುವುದು ಸಂಭ್ರಮದ ಆಚರಣೆ; ಸಂತೋಷದ ಕ್ಷಣಗಳನ್ನು ಅನುಭವಿಸಲು ಇರುವ ಅವಕಾಶ. ಒಂದು ವೇಳೆ ಕೋವಿಡ್ ಕಾರಣ ಈ ಯಾವ ಮಾರ್ಗದಲ್ಲಿಯೂ ಕಾರ್ಯಕ್ರಮ ಆಯೋಜನೆ ಮಾಡಲಾಗಲಿಲ್ಲ ಎಂದಾದರೆ ಬೇಸರಿಸಬೇಡಿ. ತಾಯಿ–ಮಗುವಿನ ಆರೋಗ್ಯವೇ ಮುಖ್ಯ ಎಂಬುದನ್ನು ಗಮನದಲ್ಲಿ ಇಟ್ಟುಕೊಂಡರೆ ಸಾಕು. ❖

ಪಾದಕ್ಕೆ ತಂಪು ಕೊಲ್ಹಾಪುರಿ ಚಪ್ಪಲಿ

ರೇಷ್ಮಾ

ಬಣ್ಣದ ನೂಲಿನಲ್ಲಿ ಚೆಂದವಾಗಿ ಹೆಣೆದ ಚಿತ್ತಾರ, ಅಲ್ಲಲ್ಲಿ ರಂಗಿನ ಕುಚ್ಚು, ನೇಯ್ಗೆಯ ಮೇಲೆ ಸುಂದರವಾಗಿ ಅಂಟಿಸಿದ ಕನ್ನಡಿಗಳು, ಜರಿಯ ರಂಗು ಇವೆಲ್ಲಾ ಕೊಲ್ಹಾಪುರಿ ಚಪ್ಪಲಿಯ ಸದ್ಯದ ಟ್ರೆಂಡ್. ಸಾಂಪ್ರದಾಯಿಕವಾದ ಈ ಚಪ್ಪಲಿ ಕಳೆದ ಕೆಲವು ವರ್ಷಗಳಿಂದ ಹೊಸ ರೂಪು ಪಡೆದು ಫ್ಯಾಷನ್ ಮಾರುಕಟ್ಟೆಯಲ್ಲಿ ರಂಗು ಮೂಡಿಸಿದೆ. ಅದರಲ್ಲೂ ಮಿಲೇನಿಯಲ್ ಯುವಕ–ಯುವತಿಯರ ಆಕರ್ಷಣೆ ಕೊಲ್ಹಾಪುರಿ ಚಪ್ಪಲಿ. ಕರಕುಶಲ ಕೆಲಸಕ್ಕೆ ಖ್ಯಾತಿ ಪಡೆದಿರುವ ಈ ಚರ್ಮದ ಚಪ್ಪಲಿಗಳು ಬೇಸಿಗೆಯಲ್ಲಿ ಧರಿಸಲು ಹೆಚ್ಚು ಸೂಕ್ತ ಎನ್ನಿಸುವ ಜೊತೆಗೆ ದೇಹಕ್ಕೆ ತಂಪೂ ನೀಡುತ್ತವೆ.



ಬೇಸಿಗೆಯಲ್ಲಿ ಉತ್ತಮ

ಬೇಸಿಗೆ ಕಾಲದಲ್ಲಿ ಶೂ ಅಥವಾ ಮುಚ್ಚಿದಂತಿರುವ ಸ್ಯಾಂಡಲ್ ಅಥವಾ ಚಪ್ಪಲಿಗಳನ್ನು ಧರಿಸಲು ಹಲವರು ಇಷ್ಟಪಡುವುದಿಲ್ಲ. ಸದಾ ಗಾಳಿಯಾಡಲು ನೆರವಾಗುವ ಚಪ್ಪಲಿಗಳನ್ನು ಧರಿಸಲು ಇಷ್ಟಪಡುವುದಾದರೆ ಕೊಲ್ಹಾಪುರಿ ಚಪ್ಪಲಿಗಳು ಉತ್ತಮ. ಇವು ಬೇಸಿಗೆಗೆ ಹೆಚ್ಚು ಹೊಂದುತ್ತವೆ. ಇವನ್ನು ಪ್ರಾಣಿಗಳ ಚರ್ಮದಿಂದ ತಯಾರಿಸುವ ಕಾರಣ ಇವು ದೇಹಕ್ಕೆ ತಂಪು ನೀಡುತ್ತವೆ. ಅಲ್ಲದೇ ಕಾಲಿನ ಅಂದವನ್ನೂ ಹೆಚ್ಚಿಸುತ್ತವೆ.

ಪುರುಷರಿಗೂ ಮಹಿಳೆಯರಿಗೂ

ಈ ಚಪ್ಪಲಿಯ ಟ್ರೆಂಡ್ ಹೆಣ್ಣುಮಕ್ಕಳು ಹಾಗೂ ಪುರುಷರು ಇಬ್ಬರನ್ನೂ ಸೆಳೆದಿದೆ. ಅವರವರ ಇಚ್ಛೆಗೆ ತಕ್ಕಂತೆ ಇರುವ ಈ ಚಪ್ಪಲಿ ಟ್ರೆಂಡ್‌ಗಳು ಫ್ಯಾಷನ್ ಮಾರುಕಟ್ಟೆಯಲ್ಲಿ ಕಮಾಲ್ ಮಾಡಿರುವುದು ಸುಳ್ಳಲ್ಲ. ಹೆಣ್ಣುಮಕ್ಕಳಿಗೆ ಸೀರೆ, ಕುರ್ತಾ, ಚೂಡಿದಾರ್‌ನೊಂದಿಗೆ ಹೊಂದಿಕೆಯಾದರೆ ಗಂಡುಮಕ್ಕಳಿಗೂ ಕುರ್ತಾ ಪೈಜಾಮದೊಂದಿಗೆ ಹೆಚ್ಚು ಹೊಂದುತ್ತದೆ.

ಪಾಶ್ಚಾತ್ಯ ಉಡುಪಿನೊಂದಿಗೂ ಹೊಂದಿಕೆ

ಜೀನ್ಸ್ ಟಾಪ್, ಮಿನಿ ಫ್ರಾಕ್, ಮ್ಯಾಕ್ಸಿಯಂತಹ ಪಾಶ್ಚಾತ್ಯ ಉಡುಪಿಗೂ ಹೊಂದುವ ಈ ಚಪ್ಪಲಿ ಹೊಸ ಟ್ರೆಂಡ್‌ಗೂ ಸೈ ಎನ್ನುತ್ತಿದೆ. ಅಲ್ಲದೇ ಟ್ರೆಂಡ್‌ಗೆ ತಕ್ಕಂತೆ ಈ ಚಪ್ಪಲಿ ಸ್ವರೂಪವೂ ಬದಲಾಗುತ್ತಿದೆ. ಹಾಗಾಗಿ ಭಾರತೀಯ ಹಾಗೂ ಪಾಶ್ಚಾತ್ಯ ಎರಡೂ ಬಗೆಯ ಡ್ರೆಸ್‌ಗಳಿಗೆ ಇದು ಹೊಂದಿಕೆಯಾಗುತ್ತಿದೆ.

ಬಾಲಿವುಡ್ ಮಂದಿಗೂ ಅಚ್ಚುಮೆಚ್ಚು

ಬಾಲಿವುಡ್‌ನ ಮಂದಿ ಕಳೆದ ಐದಾರು ವರ್ಷಗಳಿಂದ ಕೊಲ್ಹಾಪುರಿ ಚಪ್ಪಲಿಯ ಟ್ರೆಂಡ್‌ಗೆ ಮಾರು ಹೋಗಿದ್ದಾರೆ. ಪದ್ಮಾವತ್ ಸಿನಿಮಾ ಪ್ರಚಾರದ ವೇಳೆ ದೀಪಿಕಾ ಚೂಡಿದಾರ್‌ದೊಂದಿಗೆ ಬೆಳ್ಳಿ ಬಣ್ಣದ ಕೊಲ್ಲಾಪುರಿ ಧರಿಸಿದ್ದರು. ಶ್ರದ್ಧಾ ಕಪೂರ್ ಸೆಲ್ವಾರ್, ಕುರ್ತಾ ಟಾಪ್‌ನೊಂದಿಗೆ ಹೆಚ್ಚಾಗಿ ಕೊಲ್ಹಾಪುರಿ ಚಪ್ಪಲಿಯನ್ನೇ ಧರಿಸುತ್ತಾರೆ. ಸೋನಾಕ್ಷಿ ಸಿನ್ಹಾ, ಆಲಿಯಾ ಭಟ್, ಕರೀನಾ ಕಪೂರ್ ಖಾನ್, ಸೋನಾಲಿ ಬೇಂದ್ರೆ ಮೊದಲಾದವರು ಸಾಂಪ್ರದಾಯಿಕ ಉಡುಪಿನೊಂದಿಗೆ ಕೊಲ್ಹಾಪುರಿ ಚಪ್ಪಲಿ ಧರಿಸಲು ಇಷ್ಟಪಡುತ್ತಾರೆ.

ವಿವಿಧ ಬಣ್ಣಗಳಲ್ಲಿ

ಮೊದಲೆಲ್ಲಾ ಒಂದೆರಡು ಬಣ್ಣಗಳಲ್ಲಿ ಸಿಗುತ್ತಿದ್ದ ಕೊಲ್ಹಾಪುರಿ ಚಪ್ಪಲಿಗಳು ಈಗ ಡ್ರೆಸ್‌ಗೆ ಹೊಂದುವ ಬಣ್ಣ ಹಾಗೂ ವಿನ್ಯಾಸದಲ್ಲಿ ಲಭ್ಯವಿದೆ. ನೇಯ್ಗೆಯ ಉಡುಪಿಗೆ ಹೊಂದುವಂತಹ ಚಪ್ಪಲಿಗಳು ಸಹ ಮಾರುಕಟ್ಟೆಯನ್ನು ಅಲಂಕರಿಸಿವೆ. ಸಿಲ್ವರ್, ಗೋಲ್ಡ್, ಬ್ರೌನ್ ಹೀಗೆ ವಿವಿಧ ಬಣ್ಣಗಳಲ್ಲಿ ಇವು ಲಭ್ಯವಿವೆ.

ಹಬ್ಬ ಹಾಗೂ ಮದುವೆ ಸೀಸನ್‌ಗೆ ಬೆಸ್ಟ್

ಹಬ್ಬ, ಮದುವೆಯಂತಹ ಕಾರ್ಯಕ್ರಮಗಳಲ್ಲಿ ಧರಿಸಲು ಈ ಚಪ್ಪಲಿಗಳು ಹೆಚ್ಚು ಸೂಕ್ತ ಎನ್ನಿಸುತ್ತವೆ. ವಿಭಿನ್ನ ವಿನ್ಯಾಸದಿಂದ ಕೂಡಿರುವ ಚಪ್ಪಲಿಗಳು ಕಾಲಿನ ಅಂದವನ್ನು ಹೆಚ್ಚಿಸುವುದು ಸುಳ್ಳಲ್ಲ. ಜೊತೆಗೆ ಸಾಂಪ್ರದಾಯಿಕ ಉಡುಗೆಗಳೊಂದಿಗೆ ಹೆಚ್ಚು ಹೊಂದಿಕೆಯಾಗುತ್ತವೆ. ಡ್ರೆಸ್‌ನ ಅಂದವನ್ನೂ ಹೆಚ್ಚಿಸುತ್ತವೆ.

ವಿದೇಶದಲ್ಲೂ ಸದ್ದು

ಹಿಂದೆಲ್ಲಾ ಸಾಧಾರಣ ವಿನ್ಯಾಸದ ಕೊಲ್ಹಾಪುರಿ ಚಪ್ಪಲಿಗಳನ್ನು ಮದುವೆ, ಮುಂಜಿಯಂತಹ ಕಾರ್ಯಕ್ರಮದಲ್ಲಿ ಹೆಚ್ಚು ಧರಿಸುತ್ತಿದ್ದರು. ಉತ್ತರ ಭಾರತದ ಕಡೆ ಹೆಚ್ಚು ಬೇಡಿಕೆಯಲ್ಲಿದ್ದ ಈ ಚಪ್ಪಲಿಗೆ ಈಗ ವಿದೇಶಗಳಲ್ಲೂ ಬೇಡಿಕೆ ಇದೆ. ವಿವಿಧ ವಿನ್ಯಾಸದ ಮೂಲಕ ಗಮನ ಸೆಳೆಯುತ್ತಿರುವ ಈ ಚಪ್ಪಲಿಗಳು ಫ್ಯಾಷನ್ ಪ್ರಿಯರಿಗೆ ಅಚ್ಚುಮೆಚ್ಚು ಎನ್ನಿಸಿವೆ. ಅಲ್ಲದೇ ವಿದೇಶಿಗರೂ ಇದರ ಅಂದಕ್ಕೆ ಮಾರು ಹೋಗಿರುವುದು ಸುಳ್ಳಲ್ಲ. ❖

ಸಿಹಿ ಸೇವನೆಗಿರಲಿ ಕಡಿವಾಣ

ಇತ್ತೀಚೆಗೆ ಹೆಚ್ಚುತ್ತಿರುವ ಮಧುಮೇಹದಂತಹ ಕಾಯಿಲೆಯ ಕಾರಣದಿಂದ ಜನರು ಸಿಹಿಯನ್ನು ದ್ವೇಷಿಸುತ್ತಿದ್ದಾರೆ. ಸಿಹಿ ತಿನ್ನುವುದು ಎಂದರೆ ಕಾಯಿಲೆಯನ್ನು ನಾವೇ ಆಹ್ವಾನಿಸಿಕೊಂಡಂತೆ ಎಂಬ ಭಾವವೂ ಜನರಲ್ಲಿದೆ. ಆದರೆ, ಸಕ್ಕರೆ ಅಂಶವನ್ನು ಸೇವಿಸದೇ ಇರುವುದು ಒಳ್ಳೆಯದಲ್ಲ. ಯಾವಾಗಲೂ ಅಜಾಗರೂಕತೆಯಿಂದ ಸಿಹಿ ಪದಾರ್ಥಗಳನ್ನು ಸೇವಿಸಬಾರದು. ಸಿಹಿ ಮಾತ್ರವಲ್ಲ ಯಾವುದೇ ಆಹಾರವಾಗಲಿ ನಮ್ಮ ದೇಹಕ್ಕೆ ಅದು ಒಳ್ಳೆಯದೋ ಕೆಟ್ಟದ್ದೋ ಎಂದು ತಿಳಿದುಕೊಂಡು ಸೇವಿಸಬೇಕು.



ಮನಸ್ವಿ

ಬಾಯಲ್ಲಿ ನೀರೂರಿಸುವ ಜಿಲೇಬಿ, ರಸಗುಲ್ಲಾದಂತಹ ಸಿಹಿ ತಿನಿಸುಗಳನ್ನು ಕಂಡರೆ ಯಾರು ತಾನೇ ಸುಮ್ಮನಿರಲು ಸಾಧ್ಯ! ಆದರೆ ಇತ್ತೀಚೆಗೆ ಬದಲಾದ ಜೀವನಶೈಲಿಯ ಕಾರಣದಿಂದ ಸಿಹಿ ತಿನ್ನಲು ಭಯ ಪಡುವಂತಾಗಿದೆ. ‘ಅತಿಯಾದ ಸಿಹಿ ಪದಾರ್ಥಗಳ ಸೇವನೆಯಿಂದ ಮಧುಮೇಹ, ಬೊಜ್ಜು ಹಾಗೂ ಹೃದಯ ಸಂಬಂಧಿ ಕಾಯಿಲೆಗಳೂ ಹೆಚ್ಚುತ್ತಿವೆ. ಅದರಲ್ಲೂ ಮಧುಮೇಹ ಎನ್ನುವುದು ಸಾರ್ವತ್ರಿಕ ಕಾಯಿಲೆ ಎನ್ನುವಷ್ಟರ ಮಟ್ಟಿಗೆ ಸಣ್ಣ ವಯಸ್ಸಿನವರನ್ನೂ ಕಾಡುತ್ತಿದೆ. ಆ ಕಾರಣಕ್ಕೆ ಸಿಹಿ ಸೇವನೆಗೆ ಕಡಿವಾಣ ಹಾಕುವುದು ಅಗತ್ಯ’ ಎನ್ನುತ್ತಾರೆ ವೈದ್ಯರಾದ ಡಾ. ಅನುರಾಧಾ ದಿನೇಶ್. ಹಾಗಂತ ಸಿಹಿ ಅಂಶ ಸೇವಿಸದೇ ಇರುವುದು ಸರಿಯಲ್ಲ. ಹಾಗಾಗಿ ಕೆಲವೊಂದು ಮಾರ್ಗಗಳನ್ನು ಅನುಸರಿಸುವ ಮೂಲಕ ಅತಿಯಾದ ಸಿಹಿ ಸೇವನೆಗೆ ಕಡಿವಾಣ ಹಾಕಬಹುದು. ಸಿಹಿ ಸೇವನೆ ನಿಯಂತ್ರಣಕ್ಕೆ ಇಲ್ಲಿವೆ ಕೆಲವು ಮಾರ್ಗಗಳು.

ನೈಸರ್ಗಿಕ, ನೈಸರ್ಗಿಕವಲ್ಲದ ಸಿಹಿ ತಿಂಡಿಗಳ ವ್ಯತ್ಯಾಸ ಅರಿಯಿರಿ

ತಜ್ಞರ ಪ್ರಕಾರ ಒಬ್ಬಳು ಮಹಿಳೆ ದಿನಕ್ಕೆ 25 ಗ್ರಾಂ ನೈಸರ್ಗಿಕವಲ್ಲದ ಸಿಹಿ ಪದಾರ್ಥವನ್ನು ಸೇವಿಸಬಹುದು ಹಾಗೂ ಪುರುಷ 36 ಗ್ರಾಂ ನೈಸರ್ಗಿಕ ಸಿಹಿಯಲ್ಲದ ಪದಾರ್ಥ ಸೇವಿಸಬಹುದು.

ದೈನಂದಿನ ಆಹಾರಕ್ರಮದಲ್ಲಿ ನಾವು ಬಳಸುವ ಹಣ್ಣು, ತರಕಾರಿ, ಮೊಸರು ಮುಂತಾದ ವಸ್ತುಗಳಲ್ಲಿ ನೈಸರ್ಗಿಕವಾದ ಸಿಹಿ ಅಂಶವಿದೆ. ಅವುಗಳನ್ನು ಹೆಚ್ಚು ಹೆಚ್ಚು ಬಳಸುವುದು ಸಂಪೂರ್ಣ ದೈಹಿಕ ಆರೋಗ್ಯಕ್ಕೆ ಉತ್ತಮ. ಉದಾಹರಣೆಗೆ ಕಿತ್ತಳೆ ಹಣ್ಣಿನಲ್ಲಿ ನೈಸರ್ಗಿಕ ಸಿಹಿ ಅಂಶದೊಂದಿಗೆ ನಾರಿನಾಂಶವೂ ಇದೆ. ಇದರ ಸೇವನೆಯಿಂದ ಹಸಿವು ನೀಗುವ ಜೊತೆಗೆ ದೇಹಕ್ಕೆ ಬೇಕಾಗುವ ಸಿಹಿ ಅಂಶವೂ ಲಭ್ಯವಾಗುತ್ತದೆ.

ಸಂಗ್ರಹಿತ, ಪ್ಯಾಕೆಟ್, ರೆಡಿ ಟು ಈಟ್ ಆಹಾರ ಹಾಗೂ ತಂಪು ಪಾನೀಯಗಳಲ್ಲಿ ನೈಸರ್ಗಿಕವಲ್ಲದ ಸಿಹಿ ಅಂಶವನ್ನು ಹೆಚ್ಚು ಸೇರಿಸುತ್ತಾರೆ. ಅವುಗಳನ್ನು ಸೇವಿಸುವಾಗ ಬಾಯಿಗೆ ಹಿತ ಎನ್ನಿಸಿದರೂ ಆರೋಗ್ಯದ ದೃಷ್ಟಿಯಿಂದ ಅಷ್ಟು ಒಳ್ಳೆಯದಲ್ಲ. ಇವು ನಮ್ಮ ಡಯೆಟ್ ಹಾಗೂ ಆರೋಗ್ಯಕ್ರಮದ ಮೇಲೆ ಯಾವೆಲ್ಲಾ ರೀತಿಯ ಪರಿಣಾಮಗಳನ್ನು ಬೀರುತ್ತವೆ ಎಂಬುದರ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಂಡಿಬೇಕು.

ಪೂರ್ಣ ಆಹಾರಕ್ಕೆ ಒತ್ತು ನೀಡಿ

ದೇಹಕ್ಕೆ ಸಕ್ಕರೆ ಅಂಶ ಸೇರುವುದನ್ನು ಕಡಿಮೆ ಮಾಡಲು ಪೂರ್ಣ ಪ್ರಮಾಣದ ಆಹಾರ ಸೇವಿಸುವುದು ಮುಖ್ಯ. ಸಾಮಾನ್ಯವಾಗಿ ಹಲವರು ಬೆಳಗಿನ ಉಪಾಹಾರ ಸೇವಿಸುವುದಿಲ್ಲ. ಹಸಿವಾದಾಗ ಬ್ರೆಡ್, ಬಿಸ್ಕತ್‌ನಂತಹ ತಿನಿಸುಗಳಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಇನ್ನೂ ಕೆಲವರು ಅರ್ಧಂಬರ್ಧ ಊಟ ಮಾಡುತ್ತಾರೆ. ಆ ಕಾರಣಕ್ಕೆ ಊಟ ಮಾಡಿದ ಸ್ವಲ್ಪ ಹೊತ್ತಿಗೆ ಹೊಟ್ಟೆ ಹಸಿಯಲು ಆರಂಭವಾಗುತ್ತದೆ. ಆಗಲೂ ಹೊಟ್ಟೆ ತುಂಬಿಸಿಕೊಳ್ಳುವ ಸಲುವಾಗಿ ತಂಪು ಪಾನೀಯ ಕುಡಿಯುವುದೋ, ಸಂಜೆ ಹೊತ್ತಿಗೆ ಫಾಸ್ಟ್‌ಫುಡ್ ತಿನ್ನುವುದೋ ಮಾಡುತ್ತೇವೆ. ಹಾಗಾಗಿ ಒಂದೇ ಹೊತ್ತು ಊಟ ಮಾಡಿದರೂ ಪರಿಪೂರ್ಣವಾಗಿ ಹೊಟ್ಟೆ ತುಂಬುವಷ್ಟು ಊಟ ಮಾಡಬೇಕು. ಜೊತೆಗೆ ಹಸಿವಾದಾಗ ತರಕಾರಿ ಸಲಾಡ್ ಅಥವಾ ಹಣ್ಣುಗಳ ಸೇವನೆಯನ್ನು ಅಭ್ಯಾಸ ಮಾಡಬೇಕು.

ನಿಮ್ಮ ದೇಹಕ್ಕೆ ಸೇರುವ ಸಕ್ಕರೆಯ ಮೂಲ ಗುರುತಿಸಿ

ಕೆಲವೊಮ್ಮೆ ನಮ್ಮ ದೇಹಕ್ಕೆ ಯಾವ ರೂಪದಲ್ಲಿ ಸಕ್ಕರೆ ಅಂಶ ಸೇರುತ್ತದೆ ಎಂಬುದು ನಮಗೇ ಅರಿವಿರುವುದಿಲ್ಲ. ಆ ಕಾರಣಕ್ಕೆ ಪ್ರತಿನಿತ್ಯ ಸೇವಿಸುವ ಆಹಾರದ ಮೌಲ್ಯಮಾಪನ ಮಾಡಿಕೊಳ್ಳಬೇಕು. ಕೇವಲ ಆಹಾರ ಮಾತ್ರವಲ್ಲ, ನಾವು ಸೇವಿಸುವ ಕಾಫಿ, ಟೀಯಂತಹ ಪಾನೀಯಗಳ ಮೇಲೂ ನಿಗಾ ಇರಿಸಬೇಕು. ಸಕ್ಕರೆ ರಹಿತ ಸಿಟ್ರಸ್ ಅಂಶ ಇರುವ ಪಾನೀಯಗಳು, ಹಣ್ಣಿನ ಜ್ಯೂಸ್‌ಗಳು, ಹಣ್ಣಿನ ತುಂಡುಗಳನ್ನು ಸೇವಿಸುವ ಮೂಲಕ ಬಾಯಾರಿಕೆ ಹಾಗೂ ಹಸಿವನ್ನು ತಡೆಯಬಹುದು. ಜೊತೆಗೆ ನೈಸರ್ಗಿಕ ಸಿಹಿ ಅಂಶ ದೇಹಕ್ಕೆ ಒದಗಿಸಲು ಸಾಧ್ಯವಾಗುತ್ತದೆ.

ಸಮತೋಲಿತ ಆಹಾರ ಸೇವನೆ

ಪ್ರತಿನಿತ್ಯ ಸರಿಯಾದ ಸಮಯಕ್ಕೆ ಸಮತೋಲಿತ ಆಹಾರ, ಸಮರ್ಪಕ ರೀತಿಯಲ್ಲಿ ಊಟ ಹಾಗೂ ತಿಂಡಿ ಸೇವಿಸುವುದು ಅಗತ್ಯ. ಇದರಿಂದ ಸಿಹಿ ತಿನ್ನುವ ಚಪಲಕ್ಕೆ ಕಡಿವಾಣ ಹಾಕಬಹುದು. ❖

ಮೋಟರ್‌ಬೈಕ್ ರೇಸಿಂಗ್‌ನಲ್ಲಿ ಬತ್ತದ ‘ಉಲ್ಲಾಸ’



ರೇಸ್‌ವೊಂದರಲ್ಲಿ ಉಲ್ಲಾಸ್ ಸಂತೃಪ್ತ್ ನಂದ

ಬಸವರಾಜ ದಳವಾಯಿ

ಸ್ಪರ್ಧೆಯೊಂದರಲ್ಲಿ ಅಪಘಾತಕ್ಕೀಡಾಗಿ ವೃತ್ತಿಜೀವನ ಮುಗಿದುಹೋಗುವ ಆತಂಕದ ಕಾರ್ಮೋಡ ಕವಿದಾಗ ಛಲ ಕಳೆದುಕೊಳ್ಳಲಿಲ್ಲ. ಆರು ತಿಂಗಳ ಸುದೀರ್ಘ ಬಿಡುವು ಅವರ ಆಸಕ್ತಿ, ಆತ್ಮವಿಶ್ವಾಸವನ್ನು ಕುಗ್ಗಿಸಲಿಲ್ಲ. ಇಂತಹ ಸಕಾರಾತ್ಮಕ ಚಿಂತನೆಗಳೊಂದಿಗೆ ಮೋಟರ್‌ಬೈಕ್ ರೇಸಿಂಗ್‌ನಲ್ಲಿ ಮುನ್ನುಗ್ಗುತ್ತಿರುವ ಯುವ ಪ್ರತಿಭೆ, ಬೆಂಗಳೂರಿನ ಉಲ್ಲಾಸ್ ಸಂತೃಪ್ತ್ ನಂದ. ಪದಾರ್ಪಣೆ ಮಾಡಿದ ಎರಡು ವರ್ಷಗಳಲ್ಲಿ ನಾಲ್ಕು ಬಾರಿ ‘ಪೋಡಿಯಂ ಫಿನಿಶ್’ ಮಾಡಿರುವ ಅವರು ಅದರಲ್ಲಿ ಮೂರರಲ್ಲಿ ಅಗ್ರಸ್ಥಾನ ಗಳಿಸಿದರೆ ಒಂದರಲ್ಲಿ ರನ್ನರ್‌ಅಪ್ ಆಗಿದ್ದಾರೆ.

ಸಾರ್ವಕಾಲಿಕ ಶ್ರೇಷ್ಠ ಬೈಕ್ ರೇಸರ್‌ಗಳಲ್ಲಿ ಒಬ್ಬರಾದ ವ್ಯಾಲೆಂಟಿನೊ ರೊಸ್ಸಿ ಅವರನ್ನು ಆದರ್ಶವಾಗಿಟ್ಟುಕೊಂಡ ಉಲ್ಲಾಸ್‌ಗೆ ಬೈಕ್ ಚಾಲನೆಯೆಂದರೆ ವಿಶೇಷ ಒಲವು. ಎಸ್ಸೆಸ್ಸೆಲ್ಸಿ ಮುಗಿಸಿದ ಬಳಿಕ ಮಗನ ಆಸಕ್ತಿಯನ್ನು ಗುರುತಿಸಿದ ಅಪ್ಪ ಅರುಣ್, ಹೊಂಡಾ ಸಿಬಿಆರ್ 100 ಬೈಕ್ ತಂದುಕೊಟ್ಟರು. ಇದರೊಂದಿಗೆ ಅಭ್ಯಾಸ ನಡೆಸಿದ ಉಲ್ಲಾಸ್, ಹಲವು ಬಾರಿ ಬಿದ್ದು ಗಾಯ ಮಾಡಿಕೊಂಡಿದ್ದುಂಟು. ಆದರೆ ಅದೇ ವೇಳೆಗೆ ಅವರ ಚಾಲನಾ ಕೌಶಲಗಳು ವೃದ್ಧಿಸತೊಡಗಿದವು.

ಪ್ರತಿ ಭಾನುವಾರ ಬೆಳಗಿನ ಜಾವ 200 ಕಿ.ಮೀ. ಬೈಕ್ ಚಾಲನೆ ಮೂಲಕ ತಾಲೀಮು ನಡೆಸತೊಡಗಿದ ಉಲ್ಲಾಸ್ ಹಂತಹಂತವಾಗಿ ಪ್ರಗತಿ ಸಾಧಿಸತೊಡಗಿದರು. ಉಲ್ಲಾಸ್‌ಗೆ ಪರಿಣತ ಕೋಚ್ ಅವರಿಂದ ತರಬೇತಿ ಕೊಡಿಸುವಂತೆ ಹಲವರ ಸಲಹೆಯನ್ನು ಪರಿಗಣಿಸಿದ ತಂದೆ, 2018ರಲ್ಲಿ ಕೊಯಮತ್ತೂರಿನಲ್ಲಿ ನಡೆದ ಸ್ಪರ್ಧೆಯೊಂದಕ್ಕೆ ಕರೆದೊಯ್ದರು. ಇಲ್ಲಿ ಪರಿಚಯವಾದವರೇ ಅನುಭವಿ ರೇಸರ್ ರಜನಿ ಕೃಷ್ಣ. ಹಲವು ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಪ್ರಶಸ್ತಿ ಜಯಿಸಿರುವ ರಜನಿ ಅವರು, ‘ರಜನಿ ಅಕಾಡೆಮಿ ಆಫ್ ಕಾಂಪಿಟೇಟಿವ್ ರೇಸಿಂಗ್’ (ಆರ್‌ಎಸಿಆರ್) ಅಕಾಡೆಮಿಯನ್ನು ಸ್ಥಾಪಿಸಿದ್ದಾರೆ. ಉಲ್ಲಾಸ್ ಅವರನ್ನು ತಮ್ಮ ಶಿಷ್ಯರನ್ನಾಗಿಸಿಕೊಂಡ ರಜನಿ, ಚಾಲನಾ ಕೌಶಲಗಳ ಬಗ್ಗೆ ಹೆಚ್ಚು ಅರಿತುಕೊಳ್ಳಲು 300 ಸಿಸಿ ವಿಭಾಗದಲ್ಲಿ ತಾಲೀಮು ನಡೆಸುವಂತೆ ಸೂಚಿಸಿದರು. ಅವರನ್ನು ಮಲೇಷ್ಯಾಕ್ಕೂ ಕರೆದೊಯ್ದು ಪ್ರತಿಭೆಗೆ ನೀರೆರೆದರು.



ಉಲ್ಲಾಸ್ ಸಂತೃಪ್ತ್ ನಂದ

ಕ್ರೀಡೆ


ಬೈಕ್ ರೇಸ್ ಮೇಲಿನ ತೀವ್ರ ವ್ಯಾಮೋಹವು 22 ವರ್ಷದ ಉಲ್ಲಾಸ್ ಅವರನ್ನು ಡಿಪ್ಲೊಮಾ ಪದವಿ ತೊರೆಯುವಂತೆ ಮಾಡಿತು.

ಅಪಘಾತ: 2018ರಲ್ಲಿ ಚೆನ್ನೈನಲ್ಲಿ ನಡೆದ ಒನ್ ಮೇಕ್ ಯಮಹಾ ರೇಸ್‌ನಲ್ಲಿ ಬೈಕ್ ಅಪಘಾತಕ್ಕೀಡಾದಾಗ ತೀವ್ರ ಗಾಯಗೊಂಡ ಉಲ್ಲಾಸ್ ಆರು ತಿಂಗಳು ವಿಶ್ರಾಂತಿಗೆ ಮೊರೆಹೋಗಬೇಕಾಯಿತು. ಫಿಜಿಯೊಥೆರಪಿಯ ಬಳಿಕ ದೇಹದ ತೂಕ ವಿಪರೀತ ಹೆಚ್ಚಾಗಿತ್ತು. ಈ ಹಂತದಲ್ಲಿ ತೂಕ ಕಡಿಮೆಗೊಳಿಸಲೇಬೇಕಿತ್ತು. 88 ಕೆಜಿ ತೂಕವನ್ನು 56 ಕೆಜಿಗೆ ಇಳಿಸಿದ ಅವರು ಅದರಲ್ಲಿ ಯಶಸ್ಸೂ ಸಾಧಿಸಿದರು.

2019ರಲ್ಲಿ ಟಿವಿಎಸ್ ಒನ್ ಮೇಕ್ ಚಾಂಪಿಯನ್‌ಷಿಪ್‌ನಲ್ಲಿ ಉಲ್ಲಾಸ್ 200 ಸಿಸಿ ವಿಭಾಗದಲ್ಲಿ ಕಣಕ್ಕಿಳಿದರು. 2020ರಲ್ಲಿ ಮದ್ರಾಸ್ ಮೋಟಾರ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ (ಎಂಎಂಎಸ್‌ಸಿ) ನಡೆದ ರಾಷ್ಟ್ರಮಟ್ಟದ ಚಾಂಪಿಯನ್‌ಷಿಪ್‌ನ ಐದು ರೇಸ್‌ಗಳಲ್ಲಿ ವಿಜಯ ಪತಾಕೆ ಹಾರಿಸಿದರು.

‘ಇದುವರೆಗೆ ನನ್ನ ಪೋಷಕರೇ ನಾನು ಸ್ಪರ್ಧಿಸಿದ ರೇಸ್‌ಗಳ ಖರ್ಚು–ವೆಚ್ಚ ನೋಡಿಕೊಂಡಿದ್ದಾರೆ. ಸೀನಿಯರ್ ಸರ್ಕೀಟ್‌ನಲ್ಲಿ ಉತ್ತಮ ಸಾಧನೆ ತೋರುವ ಗುರಿಯಿಟ್ಟುಕೊಂಡಿದ್ದು, ಪ್ರಾಯೋಜಕರ ನಿರೀಕ್ಷೆಯಲ್ಲಿದ್ದೇನೆ. ಪ್ರಾಯೋಜಕತ್ವ ಸಿಕ್ಕರೆ ನನ್ನ ಜವಾಬ್ದಾರಿಯೂ ಹೆಚ್ಚುತ್ತದೆ. ಇನ್ನಷ್ಟು ಉತ್ತಮ ಸಾಮರ್ಥ್ಯ ತೋರಲು ಅನುಕೂಲವಾಗುತ್ತದೆ’ ಎನ್ನುತ್ತಾರೆ ಉಲ್ಲಾಸ್. ❖

ಎಸ್‌ಪಿಎಂಎಫ್:ಸಂಧಿವಾತಕ್ಕೆ ಶಸ್ತ್ರ ಚಿಕಿತ್ಸೆ ರಹಿತ ಚಿಕಿತ್ಸೆ



ಯಂತ್ರದೊಂದಿಗೆ ಡಾಕ್ಟರ್

ಸಂಧಿವಾತ ಆನುವಂಶೀಯತೆ ಹಾಗೂ ಗಾಯದ ಸಮಸ್ಯೆಯಿಂದ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಈ ಸಮಸ್ಯೆಗೆ ಶಸ್ತ್ರಚಿಕಿತ್ಸೆ ಇಲ್ಲದೇ ಚಿಕಿತ್ಸೆ ನೀಡುವ ಎಸ್‌ಪಿಎಂಎಫ್ ಥೆರಪಿ ಎಂಬ ಹೊಸ ವಿಧಾನವನ್ನು ಕಂಡುಹಿಡಿದಿದೆ ಎಸ್‌ಬಿಎಫ್ ಹೆಲ್ತ್‌ಕೇರ್ ಅಂಡ್ ರೀಸರ್ಚ್ ಸೆಂಟರ್ ಪ್ರೈವೇಟ್ ಲಿಮಿಟೆಡ್.

ಎಸ್‌ಪಿಎಂಎಫ್ ಥೆರಪಿಯು ಸಂಧಿವಾತಕ್ಕೆ ಒಳಗಾದ ಕೀಲುಗಳಲ್ಲಿ ಚಲನಶೀಲತೆ ಮರಳುವಂತೆ ಮಾಡಿ, ಕಾರ್ಟಿಲೇಜ್ ಅನ್ನು ಪುನಃ ಉತ್ಪಾದಿಸುವಂತೆ ಮಾಡುವ ಜಗತ್ತಿನ ಮೊದಲ ಶಸ್ತ್ರಚಿಕಿತ್ಸೆ ರಹಿತ ಥೆರಪಿಯಾಗಿದೆ.

ಎಸ್‌ಪಿಎಂಎಫ್ ಥೆರಪಿ: ಹಿಂದೆ ಸಂಧಿವಾತ ಸಮಸ್ಯೆಗೆ ಕೀಲು ಜೋಡಣೆ ಶಸ್ತ್ರಚಿಕಿತ್ಸೆ ಮಾತ್ರ ಮಾಡಲಾಗುತ್ತಿತ್ತು. ಆದರೆ ಈ ಚಿಕಿತ್ಸೆಯು ನೋವಿನಿಂದ ಕೂಡಿರುತ್ತಿತ್ತು ಹಾಗೂ ಹಲವು ಬಾರಿ ಚಿಕಿತ್ಸೆ ವಿಫಲವಾಗುತ್ತಿತ್ತು. ಆ ಕಾರಣಕ್ಕಾಗಿ ರೋಗಿಗಳು ಶಸ್ತ್ರಚಿಕಿತ್ಸೆಗೆ ಒಳಗಾಗಲು ಹಿಂಜರಿಯುತ್ತಿದ್ದರು. ಹಾಗಾಗಿ ರೋಗಿಗಳ ಬಾಳಿಗೆ ಬೆಳಕಾಗಿ ವಿಂಗ್ ಕಮಾಂಡರ್ ಡಾ. ವಿ.ಜಿ. ವಸಿಷ್ಠ ಅವರು ಎಸ್‌ಪಿಎಂಎಫ್ ಥೆರಪಿಯನ್ನು ಪರಿಚಯಿಸಿದ್ದರು. ಈ ಚಿಕಿತ್ಸೆಯು ಜಗತ್ತಿನಲ್ಲೇ ಮೊದಲ ಬಾರಿ ವೈಜ್ಞಾನಿಕವಾಗಿ ಸಾಬೀತಾದ ಥೆರಪಿ ಆಗಿದೆ. ಯಾವುದೇ ಅಡ್ಡ ಪರಿಣಾಮಗಳಿಲ್ಲದೇ ಕಾರ್ಟಿಲೇಜ್ ಅನ್ನು ಪುನಃ ಉತ್ಪತ್ತಿಯಾಗುವಂತೆ ಮಾಡಿ, ಮೊದಲಿನಂತೆ ನಡೆದಾಡಲು ಈ ಚಿಕಿತ್ಸಾ ವಿಧಾನ ನೆರವಾಗುತ್ತದೆ.

ತಂತ್ರಜ್ಞಾನ: ಎಸ್‌ಪಿಎಂಎಫ್ ಥೆರಪಿಯು ಹೆಚ್ಚು ಸಂಕೀರ್ಣವಾದ ಅನುಕ್ರಮವಾಗಿ ಯೋಜಿಸಲಾದ ಆಯಸ್ಕಾಂತೀಯ ಕ್ಷೇತ್ರವನ್ನು ಉತ್ಪಾದಿಸುವ ತಂತ್ರಜ್ಞಾನವಾಗಿದೆ. ಇದು ಕಂಪ್ಯೂಟರ್ ನಿಯಂತ್ರಿತವಾಗಿದೆ ಮತ್ತು ಲೇಸರ್ ಗೈಡ್‌ಗಳ ಸಹಾಯದಿಂದ ಅಂಗಾಂಶಗಳ ಮೇಲೆ ನಿಖರವಾಗಿ ಗುರಿ ಕೇಂದ್ರಿಕರಿಸಲು ಇದರಿಂದ ಸಾಧ್ಯವಾಗುತ್ತದೆ. ಇದು ಉಷ್ಣರಹಿತ ಮತ್ತು ಯಾವುದೇ ಅಡ್ಡಪರಿಣಾಮಗಳನ್ನು ಹೊಂದಿರುವುದಿಲ್ಲ.

ಅಸ್ಥಿಸಂಧಿವಾತ: ಅಸ್ಥಿಸಂಧಿವಾತವು ಶೇ 22 ರಿಂದ 39 ರಷ್ಟು ಜನರಲ್ಲಿ ಕಾಣಿಸಿಕೊಳ್ಳುವ ಎರಡನೇ ಅತೀ ಸಾಮಾನ್ಯ ಸಂಧಿವಾತ ಸಮಸ್ಯೆಯಾಗಿದೆ. ಒಂದು ಬಿಲಿಯನ್‌ಗೂ ಅಧಿಕ ಜನರನ್ನು ಪರಿಗಣನೆಗೆ ತೆಗೆದುಕೊಂಡರೆ ಈ ಚಿಕಿತ್ಸೆಯ ಸಾಮರ್ಥ್ಯ ಅಪಾರವಾಗಿದೆ.

ಥೆರಪಿಯ ಪರಿಣಾಮ

- ಎಸ್‌ಪಿಎಂಎಫ್ ಚಿಕಿತ್ಸೆಯು ಅಸ್ಥಿಸಂಧಿವಾತದ ಚಿಕಿತ್ಸೆಗೆ ವಿಶಿಷ್ಟ, ಪರಿಣಾಮಕಾರಿ ಮತ್ತು ಆಕ್ರಮಣಶೀಲವಲ್ಲದ ವಿಧಾನವಾಗಿದೆ.
- ಈ ಚಿಕಿತ್ಸೆಯು ಅಸ್ಥಿಸಂಧಿವಾತದ ನೋವನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ.
- ಯಾವುದೇ ಅಡ್ಡ ಪರಿಣಾಮಗಳಿಲ್ಲ.
- ಮೊಣಕಾಲು ಬದಲಿಗೆ ಇದು ಅಗ್ಗದ ಪರ್ಯಾಯವಾಗಿದೆ.
- ಒಂದೇ ಬಾರಿಗೆ ಎರಡೂ ಮೊಣಕಾಲಿಗೆ ಚಿಕಿತ್ಸೆ ನೀಡಲಾಗುತ್ತದೆ.
- ಇದು ಚಲನಾಶಕ್ತಿಯನ್ನು ಹೆಚ್ಚಿಸಿ, ಮೊಣಕಾಲಿನ ಕೀಲುಗಳ ಶಕ್ತಿ ಮತ್ತು ಸ್ಥಿರತೆಯನ್ನು ಸುಧಾರಿಸುತ್ತದೆ.
- ಕಾಯಿಲೆಯ ಪರಿಣಾಮವನ್ನು ತಗ್ಗಿಸುತ್ತದೆ.
- ಚಿಕಿತ್ಸೆಯ ಸಂದರ್ಭದಲ್ಲಿ ರೋಗಿಗಳು ದೈನಂದಿನ ಸಾಮಾನ್ಯ ಚಟುವಟಿಕೆಯನ್ನು ಮುಂದುವರಿಸಬಹುದು.
- ಈ ಚಿಕಿತ್ಸೆ ಇತರ ಕಾಯಿಲೆಗಳ ಮೇಲೆ ಪರಿಣಾಮ ಬೀರುವುದಿಲ್ಲ.
- ನೋವು ನಿವಾರಕ ಔಷಧಿ ಸೇವನೆಗೆ ಬ್ರೇಕ್ ಹಾಕಬಹುದು.

ಅಸ್ಥಿಸಂಧಿವಾತದ ಅಸ್ತಿತ್ವ ಹಾಗೂ ಐಟಿ ಮೆಕ್ಯಾನಿಸಂ:
ಮೊಣಕಾಲಿನ ಕೀಲಿನಲ್ಲಿನ ಕಾರ್ಟಿಲೇಜ್‌ನ ಸವೆತದಿಂದಾಗಿ ಅಸ್ಥಿಸಂಧಿವಾತ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಎಲುಬಿನ ಕೀಲಿನ ತುದಿಯಲ್ಲಿ ಅಂಟಿಕೊಂಡಿರುವ ಅವಾಸ್ಕ್ಯುಲರ್ ಅನ್ಯುರಲ್ ರಚನೆಯನ್ನು ಆರ್ಟಿಕ್ಯುಲರ್ ಕಾರ್ಟಿಲೇಜ್ ಎನ್ನಲಾಗುತ್ತದೆ. ಕಾರ್ಟಿಲೇಜ್‌ನ ಆಂತರಿಕ ಮರುರೂಪಿಸುವಿಕೆಯು ಪೀಜೋಎಲೆಕ್ಟ್ರಿಕ್ ಪ್ರಚೋದನೆಯಿಂದ ಉಂಟಾಗುತ್ತದೆ. ಅಂದರೆ ಕಾರ್ಟಿಲೇಜ್‌ನ ಸಂಕೋಚನದ ಸಮಯದಲ್ಲಿ ದುರ್ಬಲ ಎಲೆಕ್ಟ್ರೋ-ಮ್ಯಾಗ್ನೆಟಿಕ್ ಕ್ಷೇತ್ರಗಳ ಉತ್ಪಾದನೆ ಇರುತ್ತದೆ. ಅದು ಕಾರ್ಟಿಲೇಜ್ ಅನ್ನು ಪುನರುತ್ಪಾದಿಸಲು ಸಹಾಯ ಮಾಡುತ್ತದೆ. ಎಸ್‌ಪಿಎಂಎಫ್ ಥೆರಪಿ ಸ್ಥಗಿತಗೊಂಡ ದೈಹಿಕ ಪ್ರಚೋದನೆಗೆ ಮರುಜೀವ ನೀಡುತ್ತದೆ. ಇದರಿಂದಾಗಿ ಕಾರ್ಟಿಲೇಜ್ ಪುನರುತ್ಪಾದನೆಗೆ ಕಾರಣವಾಗುತ್ತದೆ.

2006ರ ಡಿಸೆಂಬರ್‌ನಲ್ಲಿ ನನಗೆ ಮಂಡಿನೋವು ಕಾಣಿಸಿಕೊಂಡಿತ್ತು. ನೋವಿನ ತೀವ್ರತೆ ಎಷ್ಟಿತ್ತು ಎಂದರೆ ಕುರ್ಚಿಯಿಂದ ಏದ್ದೇಳಲೂ ಆಗುತ್ತಿರಲಿಲ್ಲ. ಈ ಸಮಸ್ಯೆ ನಿವಾರಣೆಗೆ ನೂತನ ತಂತ್ರಜ್ಞಾನ ಹಾಗೂ ಚಿಕಿತ್ಸೆ ಬಗ್ಗೆ ಪತ್ರಿಕೆಯಲ್ಲಿ ಲೇಖನ ಓದಿದೆ. ಡಾ. ವಸಿಷ್ಠ ಈ ಚಿಕಿತ್ಸೆ ಬಗ್ಗೆ ವಿವರಿಸಿ ಹಿಂದಿನ ಸ್ಥಿತಿಗೆ ಬರುವ ಬಗ್ಗೆ ಭರವಸೆ ನೀಡಿದ ಮೇಲೆ ತಕ್ಷಣ ಚಿಕಿತ್ಸೆ ಪಡೆದೆ. ಈಗ ಸದೃಢಳಾಗಿದ್ದೇನೆ. ನಿತ್ಯ ಸಂಜೆ ವಾಕಿಂಗ್‌ಗೆ ಹೋಗುತ್ತೇನೆ. ನಿತ್ಯ ನಾಲ್ಕು ಕಿಲೋಮೀಟರ್ ತನಕ ಯಾವುದೇ ನೋವಿಲ್ಲದೇ ನಡೆಯುತ್ತೇನೆ. ಈ ಚಿಕಿತ್ಸೆ ನೀಡಿದ ಡಾ. ವಸಿಷ್ಠ ಹಾಗೂ ಎಸ್‌ಬಿಎಫ್ ಹೆಲ್ತ್‌ಕೇರ್ ಅನ್ನು ಅಭಿನಂದಿಸುತ್ತೇನೆ.

ಉಷಾ ಗೋವಿಂದ ರಾಜ್

ಚಿಕಿತ್ಸಾ ವಿಧಾನ: ಈ ಚಿಕಿತ್ಸೆಯು 21 ದಿನಗಳ ವಿಧಾನವಾಗಿದೆ. ಅದಕ್ಕೆ ಒಟ್ಟು 60 ನಿಮಿಷಗಳ ಕಾಲಾವಧಿ ಬೇಕಾಗುತ್ತದೆ. ಇಲ್ಲಿಯವರೆಗೆ 10,000ಕ್ಕೂ ಅಧಿಕ ಪ್ರಕರಣಗಳಿಗೆ ಎಸ್‌ಪಿಎಂಎಫ್ ತಂತ್ರಜ್ಞಾನದ ಮೂಲಕ ಯಶಸ್ವಿ ಚಿಕಿತ್ಸೆ ನೀಡಲಾಗಿದೆ.

ಬೆಂಗಳೂರಿನಲ್ಲಿ ಎಸ್‌ಪಿಎಂಎಫ್: 2004ಲ್ಲಿ ಭಾರತೀಯ ವಿಮಾನ ದಳದ ವೈಮಾನಿಕ ಔಷಧೀಯ ಸಂಸ್ಥೆಯಲ್ಲಿ ವಿಂಗ್ ಕಮಾಂಡರ್ ಡಾ. ವಿ.ಜಿ. ವಸಿಷ್ಠ ಅವರ ನೇತೃತ್ವದಲ್ಲಿ ಕ್ಲಿನಿಕಲ್ ಟ್ರಯಲ್ ಆರಂಭ ಮಾಡಲಾಗಿತ್ತು. ಇದರ ಯಶಸ್ವಿ ಪರಿಣಾಮದಿಂದಾಗಿ ಈ ಕ್ಲಿನಿಕಲ್ ಟ್ರಯಲ್‌ಗಳನ್ನು ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್‌ನ ಏಜಿಸ್ ಅಡಿಯಲ್ಲಿ ಐಎಎಂನ ಎಥಿಕ್ಸ್ ಕಮಿಟಿ ಅಂಗೀಕರಿಸಿತ್ತು ಹಾಗೂ ಅಂತರರಾಷ್ಟ್ರೀಯ ಖ್ಯಾತ ಜರ್ನಲ್‌ಗಳಲ್ಲಿ ಇದು ಪ್ರಕಟವಾಗಿದೆ. ರೋಗಿಗಳ ಅನುಕೂಲ ಮತ್ತು ಮಾಹಿತಿಗಾಗಿ ಎಸ್‌ಬಿಎಫ್ ಸಹಾಯವಾಣಿ ತೆರೆದಿದೆ.

ವಿಳಾಸ: ಎಸ್‌ಬಿಎಫ್ ಹೆಲ್ತ್‌ಕೇರ್ ಅಂಡ್ ರೀಸರ್ಚ್ ಸೆಂಟರ್ ಪ್ರೈವೇಟ್ ಲಿಮಿಟೆಡ್

ಮಾರತಹಳ್ಳಿ ಶಾಖೆ: ದೂ: 9900548375

ಜೆಪಿ ನಗರ ಶಾಖೆ: ದೂ: 9980718624

www.sbfhealthcare.com

ಸುಗಮ ತಾಯ್ತನಕ್ಕೆ ಪೋಷಕಾಂಶ ಸೇವನೆ

ಡಾ. ವಿದ್ಯಾ ಭಟ್



ತಾಯ್ತನದ ಅನುಭವ ಹೊಂದಲು ಬಯಸುವ ಮಹಿಳೆಗೆ ಯಾವುದೇ ಅಡ್ಡಿ ಆತಂಕಗಳಿಲ್ಲದೇ 9 ತಿಂಗಳು ಕಳೆದರೆ ಸಾಕು ಎಂಬ ಬಯಕೆಯೂ ಮನಸ್ಸಿನಲ್ಲಿರುತ್ತದೆ. ಆರೋಗ್ಯಕರವಾದ ಮಗುವನ್ನು ಹೊಂದಲು ಗರ್ಭಧಾರಣೆಯ ಮೊದಲು ಕೆಲವು ವಿಷಯಗಳ ಮೇಲೆ ಗಮನ ಕೇಂದ್ರೀಕರಿಸಬೇಕಾಗುತ್ತದೆ. ಆದರೆ ಒಂದು ಮುಖ್ಯವಾದ ವಿಷಯವನ್ನು ನೆನಪಿನಲ್ಲಿಡಬೇಕು– ಪ್ರತಿಯೊಬ್ಬ ಮಹಿಳೆಯ ದೇಹವು ವಿಭಿನ್ನ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿರುತ್ತದೆ ಮತ್ತು ಮಗುವನ್ನು ಹೆರಲು ಸಿದ್ಧವಾಗುವ ಮುನ್ನ ಸಾಕಷ್ಟು ಸಮಯವನ್ನು ತೆಗೆದುಕೊಳ್ಳುತ್ತದೆ.

ನಿಮ್ಮ ವೈದ್ಯರನ್ನು ಸಂಪರ್ಕಿಸಿ

ಗರ್ಭವತಿಯಾಗುವ ಮುನ್ನ ಪೂರ್ವಭಾವಿ ಆರೋಗ್ಯ, ಆರೈಕೆ ಬಗ್ಗೆ ನಿಮ್ಮ ವೈದ್ಯರಲ್ಲಿ ಚರ್ಚಿಸಿ ಮತ್ತು ತಾಯಿಯಾಗಲು ಬಯಸುವ ಮಹಿಳೆ ತನಗಿರುವ ಹಾಲಿ ಆರೋಗ್ಯ ಸಮಸ್ಯೆಗಳ ಬಗ್ಗೆ ವೈದ್ಯರ ಬಳಿ ಯಾವುದೇ ಮುಚ್ಚುಮರೆಯಿಲ್ಲದೇ ಹೇಳಿಕೊಳ್ಳಬೇಕು. ಮೊದಲ ಮಗುವೆ ಅಥವಾ ಎರಡನೇ ಮಗುವೆ ಎಂಬುದನ್ನು ಕೂಡ ಇಲ್ಲಿ ಪರಿಗಣಿಸುತ್ತಾರೆ.

ಆರೋಗ್ಯ

ಆರೋಗ್ಯ ಸಮಸ್ಯೆ

ಲೈಂಗಿಕವಾಗಿ ಹರಡಿರುವ ರೋಗಗಳು (ಎಸ್‌ಟಿಡಿಗಳು), ಮಧುಮೇಹ, ಥೈರಾಯ್ಡ್, ಅಧಿಕ ರಕ್ತದೊತ್ತಡ ಅಥವಾ ಇನ್ನಿತರೆ ದೀರ್ಘಕಾಲೀನ ರೋಗಗಳು, ಅನಿಮಿಯಾ ಸೇರಿದಂತೆ ಅಸ್ವಸ್ಥತೆಗಳು ನಿಮಗಿದ್ದರೆ ಗರ್ಭ ಧರಿಸುವ ಮುನ್ನ ತಜ್ಞರು ಅವುಗಳಿಗೆ ಪರಿಹಾರ ನೀಡಬಲ್ಲರು.

ಪೋಷಕಾಂಶ

ಫಾಲಿಕ್ ಆಸಿಡ್ ಮತ್ತು ವಿಟಮಿನ್ ಬಿ12 ಕೊರತೆಯು ತಾಯಿಯಲ್ಲಿ ಅವಧಿಪೂರ್ವ ಪ್ರಸವ, ನ್ಯೂರಲ್ ಟ್ಯೂಬ್ ದೋಷಗಳು, ಗರ್ಭಪಾತ, ಅನಿಮಿಯಾಕ್ಕೆ ಕಾರಣವಾಗಬಲ್ಲವು. ಈ ಹಿನ್ನೆಲೆಯಲ್ಲಿ ಮಗುವನ್ನು ಪಡೆಯಲು ಬಯಸುವ ಮಹಿಳೆ ಫಾಲಿಕ್ ಆಸಿಡ್ ಅನ್ನು ಸೇವಿಸಲು ಪ್ರಾರಂಭಿಸಬೇಕು. ಯಾವುದೇ ಆರೋಗ್ಯ ಸಮಸ್ಯೆಗಳಿಲ್ಲದವರು ಪ್ರತಿದಿನ 0.4 ರಿಂದ 1.0 ಎಂ.ಜಿಯಷ್ಟು ಫಾಲಿಕ್ ಆಸಿಡ್ ಅಂಶಗಳಿರುವ ಸಪ್ಲಿಮೆಂಟ್‌ಗಳೊಂದಿಗೆ ಉತ್ತಮ ಆಹಾರ ಪದ್ಧತಿಯನ್ನು ಅನುಸರಿಸಬೇಕು. ಈ ಸಪ್ಲಿಮೆಂಟ್‌ಗಳನ್ನು ಸೇವಿಸುವುದನ್ನು 2 ರಿಂದ 3 ತಿಂಗಳ ಮೊದಲೇ ಆರಂಭಿಸಬೇಕು ಮತ್ತು ಪ್ರಸವವಾಗುವವರೆಗೆ ತೆಗೆದುಕೊಳ್ಳಬೇಕು. ಅಲ್ಲದೇ, ಸ್ತನ್ಯಪಾನವನ್ನು ಎಷ್ಟು ಸಾಧ್ಯವೋ ಅಷ್ಟು ಸುದೀರ್ಘ ಅವಧಿವರೆಗೆ ಮಾಡಬೇಕು.


ಡಾ. ವಿದ್ಯಾ ಭಟ್

ಆನುವಂಶೀಯವಾಗಿ ನ್ಯೂರಲ್ ಟ್ಯೂಬ್ ದೋಷಗಳಿದ್ದಲ್ಲಿ ಮತ್ತು ಎಥ್ನಿಕ್ ಗ್ರೂಪ್ ಅಪಾಯವಿದ್ದಲ್ಲಿ ಬ್ರಾಕೊಲಿ, ಮೊಳಕೆ ಭರಿಸಿದ ಕಾಳು, ಹಸಿರು ತರಕಾರಿಗಳಾದ ಕೋಸು, ಸೊಪ್ಪು, ಪಾಲಕ್, ಬಟಾಣಿ, ಚಿಕ್‌ಪೀಸ್ ಮತ್ತು ಕಿಡ್ನಿ ಬೀನ್ಸ್‌ನಂತಹ ಫಾಲೇಟ್ ಅಂಶ ಹೆಚ್ಚಿರುವ ಆಹಾರವನ್ನು ಸೇವಿಸಬೇಕು. ಅದೇ ರೀತಿ ಫಾಲಿಕ್ ಆಸಿಡ್ ಅಂಶವಿರುವ ಸಪ್ಲಿಮೆಂಟ್‌ಗಳನ್ನು ಪ್ರತಿದಿನ 5 ಎಂ.ಜಿವರೆಗೆ ಸೇವಿಸಬೇಕು. ಈ ಸಪ್ಲಿಮೆಂಟ್‌ಗಳನ್ನು ಗರ್ಭ ಧರಿಸುವ ಕನಿಷ್ಠ ಮೂರು ತಿಂಗಳ ಮುನ್ನವೇ ಆರಂಭಿಸಬೇಕು ಮತ್ತು ಗರ್ಭ ಧರಿಸಿದ ನಂತರದ 10 ರಿಂದ 12 ವಾರಗಳವರೆಗೆ ಇದನ್ನು ಮುಂದುವರಿಸಬೇಕು. ಏಕೆಂದರೆ, ಮಧುಮೇಹ ಮತ್ತು ಮೂರ್ಛೆರೋಗಕ್ಕೆ ತೆಗೆದುಕೊಳ್ಳುವ ಔಷಧಗಳಿಂದಾಗಿ ಫಾಲಿಕ್ ಆಸಿಡ್‌ನ ಕೊರತೆ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಸಪ್ಲಿಮೆಂಟ್‌ಗಳನ್ನು ಸೇವಿಸಿದರೆ ಜನನವಾಗುವ ಮಗುವಿನ ಮಿದುಳು ಮತ್ತು ಬೆನ್ನುಹುರಿಯಲ್ಲಿ ದೋಷ ಉಂಟಾಗುವುದನ್ನು ತಪ್ಪುತ್ತದೆ.

13 ಅತ್ಯಗತ್ಯ ವಿಟಮಿನ್‌ಗಳಲ್ಲಿ ಫೋಲೇಟ್ ಅಥವಾ ವಿಟಮಿನ್ ಬಿ9 ಅತ್ಯಂತ ಪ್ರಮುಖವಾದ ವಿಟಮಿನ್ ಆಗಿವೆ. ಇದನ್ನು ದೇಹ ಉತ್ಪಾದಿಸಲು ಸಾಧ್ಯವಿಲ್ಲ. ಇದನ್ನು ಆಹಾರ ಅಥವಾ ಸಪ್ಲಿಮೆಂಟ್‌ಗಳಿಂದ ಪಡೆಯಬೇಕು. ಭ್ರೂಣ ಬೆಳವಣಿಗೆಯಾಗಲು ಇದು ಅತ್ಯಗತ್ಯ.

(ಲೇಖಕರು: ಮೆಡಿಕಲ್ ಡೈರೆಕ್ಟರ್, ರಾಧಾಕೃಷ್ಣ ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್, ಬೆಂಗಳೂರು)

ಮಾಸ್ಕ್: ಕನ್ನಡಕ ಮಬ್ಬಾದರೆ ಏನು ಮಾಡಬೇಕು?



ಕೊರೊನಾ ಸೋಂಕಿನಿಂದ ಪಾರಾಗಲು ಮಾಸ್ಕ್ ಧರಿಸುವವರು ಕನ್ನಡಕ ಹಾಕಿದರೆ ಏನೇನು ಕಿರಿಕಿರಿ ಉಂಟಾಗುತ್ತದೆ ಎಂದು ಮತ್ತೆ ವಿವರಿಸುವ ಅಗತ್ಯವಿಲ್ಲ ಎನಿಸುತ್ತದೆ. ಮಾಸ್ಕ್ ಎಡೆಯಿಂದ ಮೂಗಿನ ಮೂಲಕ ಗಾಳಿ ಹೊರಹಾಕುವಾಗ ಬಿಸಿಯುಸಿರು ಕಣ್ಣಿನೆಡೆಗೆ ಸಾಗುತ್ತದೆ. ಇದರಿಂದ ಕನ್ನಡಕದ ಗಾಜಿನ ಮೇಲೆ ಮಬ್ಬು ಆವರಿಸಿ ಮುಂದಿರುವ ವಸ್ತುಗಳ ಕಾಣದೆ ಸಮಸ್ಯೆ ಉಂಟಾಗುವುದು ಸಹಜ. ಉಸಿರಿನ ಮೂಲಕ ಹೊರಹಾಕುವ ಗಾಳಿ ಹಾಗೂ ವಾತಾವರಣದ ಗಾಳಿಯ ಉಷ್ಣಾಂಶದಲ್ಲಿರುವ ವ್ಯತ್ಯಾಸ ಈ ಮಬ್ಬು ಆವರಿಸಲು ಕಾರಣ.

ಈ ಸಮಸ್ಯೆ ಪರಿಹಾರಕ್ಕೆ ಕೆಲವು ಸಲಹೆಗಳು ಇಲ್ಲಿವೆ.

- ಮೊದಲು ಸರಿಯಾದ ಅಳತೆಯ ಮಾಸ್ಕ್ ಧರಿಸುವುದು ಸೂಕ್ತ. ಹೊಂದಾಣಿಕೆ ಮಾಡುವಂತಹ ದಾರವಿರುವ ಮಾಸ್ಕ್ ಧರಿಸಿದರೆ ಕನ್ನಡಕದ ಗಾಜಿನತ್ತ ಹೋಗುವ ಗಾಳಿಯ ಪ್ರಮಾಣ ಕಡಿಮೆಯಾಗುತ್ತದೆ.
- ಮಾಸ್ಕ್ ಮೇಲ್ಭಾಗವನ್ನು ಸರ್ಜಿಕಲ್ ಟೇಪ್ ಬಳಸಿ ಮುಖಕ್ಕೆ ಅಂಟಿಸಿಕೊಳ್ಳುವುದರಿಂದಲೂ ಈ ಸಮಸ್ಯೆಯಿಂದ ಪಾರಾಗಬಹುದು. ಸಾಮಾನ್ಯವಾಗಿ ವೈದ್ಯರು ಸರ್ಜಿಕಲ್ ಮಾಸ್ಕ್ ಧರಿಸಿದಾಗ ಅದನ್ನು ಈ ರೀತಿ ಅಂಟಿಸಿಕೊಳ್ಳುವ ರೂಢಿ ಇಟ್ಟುಕೊಂಡಿರುತ್ತಾರೆ.
- ಕನ್ನಡಕದ ಗಾಜಿಗೆ ಬೇಬಿ ಶ್ಯಾಂಪೂ ಅಥವಾ ಕೈ ತೊಳೆಯುವ ಸೋಪ್ ದ್ರಾವಣವನ್ನು ಲೇಪಿಸಿದರೆ ಉಸಿರಿನಲ್ಲಿರುವ ತೇವಾಂಶ ಮಂಜಿಗೆ ತಿರುಗುವುದನ್ನು ತಪ್ಪಿಸಬಹುದು. ಒಂದು ಮೆತ್ತನೆಯ ಬಟ್ಟೆಗೆ ಈ ದ್ರಾವಣವನ್ನು ಹಾಕಿಕೊಂಡು ಗಾಜಿಗೆ ಸವರಬೇಕು.
- ಮಾರುಕಟ್ಟೆಯಲ್ಲಿ ಆ್ಯಂಟಿ- ಫಾಗ್ ಸ್ಪ್ರೇ ಕೂಡ ಲಭ್ಯ. ಆದರೆ ಆಲ್ಕೋಹಾಲ್ ಇರುವಂತಹ ಸ್ಪ್ರೇ ಬಳಸಬೇಡಿ. ಏಕೆಂದರೆ ಇದು ಗಾಜುಗಳ ಮೇಲಿನ ಕೋಟಿಂಗ್ ಅನ್ನು ಹಾಳುಗೆಡವುತ್ತದೆ.
- ಇಂತಹ ಮಾಸ್ಕ್‌ಗಳನ್ನು ಅಲರ್ಜಿ ತಡೆಗೂ ಬಳಸಬಹುದು.
- ಕೇವಲ ಕೋವಿಡ್ ವಿರುದ್ಧ ಮಾತ್ರವಲ್ಲ ಮಾಲಿನ್ಯವಿರುವ ಪ್ರದೇಶಗಳಲ್ಲಿ ವಾಹನದ ಹೊಗೆ, ದೂಳಿನಿಂದ ರಕ್ಷಣೆ ಪಡೆಯಲು ಇಂತಹ ಮಾಸ್ಕ್‌ಗಳನ್ನು ಧರಿಸುವವರು ಕನ್ನಡಕ ಮಬ್ಬಾಗದಿರದಂತೆ ನೋಡಿಕೊಳ್ಳಬೇಕಾಗುತ್ತದೆ.